ಗುರುವಾರ, ಜನವರಿ 6, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 6 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಪ್ರಬಂಧವನ್ನು ಆಕರ್ಷಕ ಪೀಠಿಕೆಯೊಂದಿಗೆ ಆರಂಭಿಸಿ, ಕುತೂಹಲ ಮೂಡಿಸುವ ಉಪಸಂಹಾರದೊಂದಿಗೆ ಪೂರ್ಣಗೊಳಿಸಿ



ಆಳ-ಅಗಲ

'ಬುಲ್ಲಿ ಬಾಯಿ' ಹರಾಜು

ಸೇನಾ ಹೆಲಿಕಾಪ್ಟರ್ ದುರಂತಕ್ಕೆ ದಟ್ಟ ಮೋಡ ಕಾರಣ 6

ಜಾಲತಾಣಗಳ ನಿರ್ಬಂಧ 5

ಸೆನ್ಸೆಕ್ಸ್	ನಿಫ್ಟಿ	₹/$
60,223	17,925	74.38

ಚುನಾವಣಾ ರ‍್ಯಾಲಿ, ಶಂಕುಸ್ಥಾಪನೆ ಕಾರ್ಯಕ್ರಮ ರದ್ದುಪಡಿಸಿ ವಾಪಸಾದ ಪ್ರಧಾನಿ

ಪಂಜಾಬ್: ಮೋದಿಗೆ ರಸ್ತೆತಡೆ ಬಿಸಿ

ಚಂಡೀಗಡ/ನವದೆಹಲಿ (ಪಿಟಿಐ): ಪಂಜಾಬ್‌ನ ಫಿರೋಜ್‌ಪುರದಲ್ಲಿ ನಡೆಯಬೇಕಿದ್ದ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ರಸ್ತೆ ಮಾರ್ಗದಲ್ಲಿ ಹೋಗುತ್ತಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ರಸ್ತೆತಡೆಯ ಕಾರಣ ಮೇಲ್ಸೇತುವೆಯಲ್ಲಿ 15–20 ನಿಮಿಷ ಸಿಲುಕಿದರು. ಮೋದಿ ಅವರು ಪಂಜಾಬ್‌ಗೆ ಭೇಟಿ ನೀಡುವುದನ್ನು ವಿರೋಧಿಸಿದ ರೈತ ಸಂಘಟನೆಯು ರಸ್ತೆತಡೆ ನಡೆಸಿತು. ಹೀಗಾಗಿ, ಮೋದಿ ತಮ್ಮ ಕಾರ್ಯಕ್ರಮವನ್ನು ರದ್ದುಪಡಿಸಿ ವಾಪಸಾದರು. ಇದು ರಾಜಕೀಯ ಜಟಾಪಟಿಗೆ ಕಾರಣವಾಗಿದೆ.

'ಇದು ಅತ್ಯಂತ ದೊಡ್ಡ ಭದ್ರತಾ ಲೋಪ' ಎಂದು ಕೇಂದ್ರ ಗೃಹ ಸಚಿವಾಲಯವು ಹೇಳಿದೆ. 'ಲೋಪಕ್ಕೆ ಕಾರಣವೇನು ಎಂಬುದರ ಬಗ್ಗೆ ತಕ್ಷಣವೇ ವರದಿ ನೀಡಿ. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಿ' ಎಂದು ಪಂಜಾಬ್ ಸರ್ಕಾರಕ್ಕೆ, ಗೃಹ ಸಚಿವಾಲಯವು ಸೂಚನೆ ನೀಡಿದೆ.

ಫಿರೋಜ್‌ಪುರದಲ್ಲಿನಡೆಯಬೇಕಿದ್ದ ರ‍್ಯಾಲಿಯ ವೇದಿಕೆಯಲ್ಲಿಯೇ ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ ಅವರು, 'ಪ್ರಧಾನಿ ಅವರು ಭಾಗಿಯಾಗಬೇಕಿದ್ದ ಈ ರ‍್ಯಾಲಿಯನ್ನು ಅನ್ಯ ಕಾರಣಗಳಿಂದ ಮುಂದೂಡಲಾಗಿದೆ' ಎಂದು ಘೋಷಿಸಿದರು.

'ಪಾಕಿಸ್ತಾನದೊಂದಿಗೆ ಗಡಿ ಹಂಚಿಕೊಂಡಿರುವ ಫಿರೋಜ್‌ಪುರ ಜಿಲ್ಲೆಯ ಹುಸ್ಸೈನಿವಾಲಾದಲ್ಲಿರುವ ಹುತಾತ್ಮರ ಸ್ಮಾರಕಕ್ಕೆ ಪ್ರಧಾನಿ ಭೇಟಿ ನೀಡಬೇಕಿತ್ತು. ಇದಕ್ಕಾಗಿ ಅವರು ಬಟಿಂಡಾ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದರು. ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಅವರು ಹುಸ್ಸೈನಿವಾಲಾಕ್ಕೆ ಹೋಗಬೇಕಿತ್ತು. ಪ್ರತಿಕೂಲ ಹವಾಮಾನದ ಕಾರಣ ಹೆಲಿಕಾಪ್ಟರ್‌ನಲ್ಲಿ ಹೋಗಲು ಸಾಧ್ಯವಾಗಲಿಲ್ಲ. ಪ್ರಧಾನಿ 20 ನಿಮಿಷ ಕಾದರು. ವಾತಾವರಣ ತಿಳಿಯಾಗದ ಕಾರಣ, ರಸ್ತೆ ಮಾರ್ಗದಲ್ಲಿ ಹೋಗಲು ನಿರ್ಧರಿಸಲಾಯಿತು' ಎಂದು ಗೃಹ ಸಚಿವಾಲಯವು ಹೇಳಿದೆ.



ಪ್ರಧಾನಿ ನರೇಂದ್ರ ಮೋದಿ ಅವರಿದ್ದ ವಾಹನ ಮತ್ತು ಬೆಂಗಾವಲು ವಾಹನಗಳು ಮೇಲ್ಸೇತುವೆ ಮೇಲೆ ನಿಂತಿದ್ದವು –ಪಿಟಿಐ ಚಿತ್ರ

> ಪಂಜಾಬ್‌ನಲ್ಲಿ ಕಾಂಗ್ರೆಸ್ ಸರ್ಕಾರದಿಂದ ಆದ ಈ ಲೋಪಕ್ಕಾಗಿ, ಕಾಂಗ್ರೆಸ್ ಇಡೀ ದೇಶದ ಕ್ಷಮೆಯಾಚಿಸಬೇಕು
> **ಅಮಿತ್ ಶಾ**, ಕೇಂದ್ರ ಗೃಹ ಸಚಿವ

> ದೇಶದ ಪ್ರಧಾನಿ ಭಾಗಿಯಾಗಲಿದ್ದ ಬಿಜೆಪಿ ಪ್ರಚಾರ ರ‍್ಯಾಲಿಗೆ ಸುಗಮ ಸಂಚಾರ ವ್ಯವಸ್ಥೆ ಮಾಡಿಕೊಡಬೇಕಿದ್ದದ್ದು ರಾಜ್ಯ ಸರ್ಕಾರದ ಜವಾಬ್ದಾರಿ, **ಸುನಿಲ್ ಜಾಖಡ್**, ಪಂಜಾಬ್ ಕಾಂಗ್ರೆಸ್ ನಾಯಕ

'ಈ ಬಗ್ಗೆ ಪಂಜಾಬ್ ಪೊಲೀಸ್ ಮಹಾನಿರ್ದೇಶಕರಿಗೆ ಮಾಹಿತಿ ನೀಡಲಾಗಿತ್ತು. ಅವರು ಒಪ್ಪಿಗೆ ನೀಡಿದ ನಂತರವಷ್ಟೇ ಪ್ರಯಾಣ ಆರಂಭಿಸಲಾಯಿತು. ರಸ್ತೆ ಮಾರ್ಗದ ಎರಡು ಗಂಟೆಯ ಪ್ರಯಾಣದಲ್ಲಿ ಇನ್ನು 30 ಕಿ.ಮೀ. ಅಷ್ಟೇ ಕ್ರಮಿಸಬೇಕಿತ್ತು. ಆಗ ಮೇಲ್ಸೇತುವೆ ಮೇಲೆ ಪ್ರಧಾನಿ ಅವರಿದ್ದ ವಾಹನ ಮತ್ತು ಬೆಂಗಾವಲು ವಾಹನಗಳು ಹೋದವು. ಆದರೆ ಕೆಲವು ಪ್ರತಿಭಟನಕಾರರು ರಸ್ತೆತಡೆ ನಡೆಸಿದರು. ಆಗ ಪ್ರಧಾನಿ ಇದ್ದ ವಾಹನ ಮತ್ತು ಬೆಂಗಾವಲು ವಾಹನಗಳು ಮೇಲ್ಸೇತುವೆ ಮೇಲೆಯೇ 15–20 ನಿಮಿಷ ಸಿಲುಕಿದ್ದವು. ಅದನ್ನು ದೊಡ್ಡ ಭದ್ರತಾ ಲೋಪ ಎಂದು ಪರಿಗಣಿಸಿ, ಪ್ರಧಾನಿ ಅವರು ವಾಪಸಾಗಲು ನಿರ್ಧರಿಸಿದರು' ಎಂದು ಗೃಹ ಸಚಿವಾಲಯವು ತನ್ನ ಪ್ರಕಟಣೆಯಲ್ಲಿ ವಿವರಿಸಿದೆ.

ಪಂಜಾಬ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಒಟ್ಟು ₹42,750 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಬೇಕಿತ್ತು.

ಬಟಿಂಡಾ ವಿಮಾನ ನಿಲ್ದಾಣಕ್ಕೆ ವಾಪಸಾದ ಮೋದಿ ಅವರು ಅಲ್ಲಿದ್ದ ಭದ್ರತಾ ಸಿಬ್ಬಂದಿಗೆ, 'ನಾನು ಜೀವಂತವಾಗಿ ವಿಮಾನ ನಿಲ್ದಾಣಕ್ಕೆ ವಾಪಸ್ಸಾಗಿದ್ದೇನೆ. ಇದಕ್ಕಾಗಿ ನಿಮ್ಮ ಮುಖ್ಯಮಂತ್ರಿಗೆ ಧನ್ಯವಾದ ಹೇಳಿ' ಎಂದು ಹೇಳಿದ್ದಾರೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಚಿತ್ರಗಳು ವೈರಲ್: ಪ್ರಧಾನಿ ನರೇಂದ್ರ ಮೋದಿ ಅವರಿದ್ದ ಟೊಯೊಟಾ ಫಾರ್ಚೂನರ್ ವಾಹನ ಮತ್ತು ಅವರ ಬೆಂಗಾವಲು ವಾಹನಗಳು ಮೇಲ್ಸೇತುವೆ ಮೇಲೆ ಸಿಲುಕಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಇನ್ನಷ್ಟು ಸುದ್ದಿಗಳು 5

ಭದ್ರತಾ ಲೋಪವಾಗಿಲ್ಲ: ಚನ್ನಿ

'ಪ್ರಧಾನಿ ನರೇಂದ್ರ ಮೋದಿ ಅವರ ಪ್ರಯಾಣಕ್ಕೆ ಅಡ್ಡಿಯಾಗಿದ್ದಕ್ಕೆ ವಿಷಾದವಿದೆ. ಆದರೆ, ಇಲ್ಲಿ ಯಾವುದೇ ಭದ್ರತಾ ಲೋಪವಾಗಿಲ್ಲ. ಪ್ರಧಾನಿ ಅವರು ಸುರಕ್ಷಿತವಾಗಿ ವಾಪಸ್ಸಾಗಿದ್ದಾರೆ' ಎಂದು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಪ್ರತಿಕ್ರಿಯೆ ನೀಡಿದ್ದಾರೆ.

'ಪ್ರಧಾನಿ ಅವರ ರ‍್ಯಾಲಿಗೆ ಭದ್ರತೆ ಕೇಳಲಾಗಿತ್ತು. ಅದಕ್ಕೆ ಅಗತ್ಯವಿದ್ದ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿತ್ತು. ಪ್ರಧಾನಿ ಅವರು ರಸ್ತೆ ಮಾರ್ಗದಲ್ಲಿ ಹುಸ್ಸೈನಿವಾಲಾಕ್ಕೆ ಹೋಗುವ ಕಾರ್ಯಕ್ರಮ ಮೂಲಪಟ್ಟಿಯಲ್ಲಿ ಇರಲಿಲ್ಲ. ಆದರೆ, ಕೊನೆಯ ಕ್ಷಣದಲ್ಲಿ ಪ್ರಧಾನಿ ರಸ್ತೆ ಮಾರ್ಗದಲ್ಲಿ ಹೊರಟರು. ಪ್ರತಿಭಟನೆಯ ಕಾರಣ ರಸ್ತೆ ಬಂದ್ ಆಗಿತ್ತು. ಪ್ರತಿಭಟನಾಕಾರರನ್ನು ತೆರವು ಮಾಡಲು 20 ನಿಮಿಷವಾದರೂ ಬೇಕಿತ್ತು. ಪ್ರಧಾನಿ ಅವರಿಗೆ ಬದಲಿ ಮಾರ್ಗವನ್ನೂ ಸೂಚಿಸಿದೆವು. ಆದರೆ ಅವರು ವಾಪಸ್ಸಾಗಲು ನಿರ್ಧರಿಸಿದರು' ಎಂದು ಚನ್ನಿ ಅವರು ವಿವರಣೆ ನೀಡಿದ್ದಾರೆ.

5ನೇ ಪುಟ ನೋಡಿ

'ಕಾಂಗ್ರೆಸ್‌ನಿಂದ ಸಂಚು'

'ಈ ಘಟನೆಯ ಹಿಂದೆ ಕಾಂಗ್ರೆಸ್‌ನ ಕೈವಾಡವಿದೆ. ಇದೊಂದು ಸಾಮಾನ್ಯವಾದ ಘಟನೆಯಲ್ಲ. ಕಾಂಗ್ರೆಸ್ ನಾಯಕರಿಗೆ ಪಾಕಿಸ್ತಾನದ ಜತೆಗೆ ಇರುವ ಸಂಬಂಧ ಎಲ್ಲರಿಗೂ ಗೊತ್ತೇ ಇದೆ. ನವಜೋತ್ ಸಿಂಗ್ ಸಿಧು, ಪಾಕಿಸ್ತಾನದ ನಾಯಕರ ಜತೆಗೆ ಚೆನ್ನಾಗಿದ್ದಾರೆ. ರಾಜ್ಯ ಸರ್ಕಾರಕ್ಕೆ ಅರಿವಿದ್ದೇ ಈ ಸಂಚು ರೂಪಿಸಲಾಗಿದೆ' ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದ್ದಾರೆ.

'ಪಂಜಾಬ್‌ನಲ್ಲಿ ಮೋದಿ ಅವರ ಕಾರ್ಯಕ್ರಮಗಳಿಗೆ ಅಡ್ಡಿಪಡಿಸುವ ಉದ್ದೇಶದಿಂದ ಸಾಧ್ಯವಿದ್ದ ಎಲ್ಲಾ ಕುತಂತ್ರಗಳನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಆರೋಪಿಸಿದ್ದಾರೆ. ಈ ಸಂಬಂಧ ಅವರು ಸರಣಿ ಟ್ವೀಟ್‌ಗಳ ಮೂಲಕ ತಮ್ಮ ಆಕ್ರೋಶ ಹೊರಹಾಕಿದ್ದಾರೆ.

5ನೇ ಪುಟ ನೋಡಿ

ಮಕ್ಕಳಿಗೆ ಖುಷಿ ಕೋವಿಡ್ ಕಾರಣದಿಂದಾಗಿ ಶಾಲೆಗಳು ಬಂದ್ ಆಗಿದ್ದರಿಂದ ಬೆಂಗಳೂರಿನ ವಸಂತನಗರದ ಶಾಲೆಯೊಂದರ ಮಕ್ಕಳು ಮನೆಗೆ ಹೋಗಲು ಖುಷಿಯಿಂದ ಸಜ್ಜಾಗಿರುವುದು ಪ್ರಜಾವಾಣಿ ಚಿತ್ರ

ಮೇಕೆದಾಟು: ಕೇಂದ್ರದಲ್ಲೇ ಉಳಿದ ಕಡತ

ಕಾವೇರಿ ಪ್ರಾಧಿಕಾರದ 5 ಸಭೆಯಲ್ಲಿ ವಿಷಯ ಮುಂದಕ್ಕೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಮೇಕೆದಾಟು ಬಳಿ ಸಮಾನಾಂತರ ಜಲಾಶಯ ನಿರ್ಮಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಸರ್ಕಾರದ ಉಸ್ತುವಾರಿಯಲ್ಲಿರುವ 'ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ' (ಸಿಡಬ್ಲ್ಯುಎಂಎ) ಒಪ್ಪಿಗೆ ನೀಡದಿರುವುದರಿಂದ ಆರು ವರ್ಷ ಕಳೆದರೂ ಯೋಜನೆ ಕಡತದಲ್ಲೇ ಉಳಿದಿದೆ.

ಪ್ರಸ್ತಾವಿತ ಯೋಜನೆಗೆ ಸಂಬಂಧಿಸಿದ ಕಾರ್ಯಸೂಚಿ 2019ರ ಏಪ್ರಿಲ್ 25ರಂದು ನಡೆದ ಪ್ರಾಧಿಕಾರದ ಮೂರನೇ ಸಭೆಯಲ್ಲಿ ಮಂಡನೆಯಾಗಿತ್ತು. ಆ ಬಳಿಕ, ಜೂನ್ 25ರಂದು, 2020ರ ಫೆ. 25, ಜೂನ್ 10 ಮತ್ತು ಜುಲೈ 30ರಂದು ನಡೆದ ಐದೂ ಸಭೆಗಳ ಕಾರ್ಯಸೂಚಿಯಲ್ಲಿಯೂ ಪ್ರಸ್ತಾವ ಇತ್ತು. ತಮಿಳುನಾಡು ವಿಧಾನಸಭೆಗೆ 2021 ಏಪ್ರಿಲ್ – ಮೇ ತಿಂಗಳಲ್ಲಿ ಚುನಾವಣೆ ನಡೆದಿತ್ತು. ಅಲ್ಲಿನ ಚುನಾವಣೆಯಲ್ಲಿ ಬೀಳಬಹುದಾದ ಮತಗಳ ಮೇಲೆ ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ದೃಷ್ಟಿ ನೆಟ್ಟಿತ್ತು. ಈ ರಾಜಕೀಯ ಕಾರಣವೂ ಪ್ರಾಧಿಕಾರದ ಸಭೆಯ ಮೇಲೆ ಪರಿಣಾಮ ಬೀರಿತು ಎಂದು ಹೆಸರು ಹೇಳಲು ಬಯಸದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರಾಧಿಕಾರವು ಡಿಪಿಆರ್‌ಗೆ ಒಪ್ಪಿಗೆ ನೀಡಿದ ಬಳಿಕ ಅದನ್ನು ಕೇಂದ್ರ ಜಲ ಆಯೋಗದ (ಸಿಡಬ್ಲ್ಯುಸಿ) ಅನುಮೋದನೆಗೆ ಕಳುಹಿಸಿಕೊಡಲಾಗುತ್ತದೆ. ಆದರೆ, ತಮಿಳುನಾಡು ಸರ್ಕಾರ ಈ ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿತು. ಜತೆಗೆ ರಾಜಕೀಯವೂ ಸೇರಿದ್ದರಿಂದಾಗಿ ಕರ್ನಾಟಕದ ಮಹತ್ವದ ಯೋಜನೆಗೆ ಹಿನ್ನಡೆಯಾಗುತ್ತಲೇ ಬಂದಿತು' ಎಂದು ಅವರು ಹೇಳಿದರು.

ಕರ್ನಾಟಕವು ನಿಯಮ ಉಲ್ಲಂಘಿಸಿ ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ ಎಂಬ ಪತ್ರಿಕಾ ವರದಿಯೊಂದನ್ನು ಆಧರಿಸಿ 2021ರ ಮೇ 21ರಂದು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದ ಎನ್‌ಜಿಟಿಯ ದಕ್ಷಿಣದ (ಚೆನ್ನೈ) ಪೀಠ, ಮೇಕೆದಾಟು ಸ್ಥಳ ಪರಿಶೀಲನೆಗಾಗಿ ಸಮಿತಿಯೊಂದನ್ನು ರಚಿಸಿ ಆದೇಶ ನೀಡಿತ್ತು. ಅದರ ವಿರುದ್ಧ ಜೂನ್ 9ರಂದು ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು.

6ನೇ ಪುಟ ನೋಡಿ

ಯೋಜನೆ ಏನು ಎತ್ತ?

ಯೋಜನೆಯ ಹೆಸರು
- ಮೇಕೆದಾಟು ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್ (ಸಮಾನಾಂತರ ಜಲಾಶಯ)

ಯೋಜನೆ ಉದ್ದೇಶ
- ಕುಡಿಯುವ ನೀರು, **400** ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ

ಭೂಮಿ ಮುಳುಗಡೆ
- ಅರಣ್ಯ– **4,716** ಹೆಕ್ಟೇರ್, ಕಂದಾಯ ಭೂಮಿ– **280** ಹೆಕ್ಟೇರ್

ಅಂಕಿ-ಅಂಶಗಳು

- ₹**5,912** ಕೋಟಿ ಆರಂಭಿಕ ಅಂದಾಜು ವೆಚ್ಚ
- ₹**9,000** ಕೋಟಿ ಪರಿಷ್ಕೃತ ಅಂದಾಜು ವೆಚ್ಚ
- **440** ಮೀ ಪೂರ್ಣ ಜಲಾಶಯದ ಮಟ್ಟ
- **370.48** ಮೀ ಡೆಡ್ ಸ್ಟೋರೇಜ್ ಮಟ್ಟ
- **660** ಮೀ ಜಲಾಶಯದ ಉದ್ದ
- **99** ಮೀ ಜಲಾಶಯದ ಎತ್ತರ
- **67.14** ಟಿಎಂಸಿ ಅಡಿ ನೀರು ಶೇಖರಣೆ ಸಾಮರ್ಥ್ಯ

ನಿರ್ಬಂಧ ವಿಧಿಸಿದರೆ ಇಬ್ಬರೇ ನಡೆಯುತ್ತೇವೆ: ಡಿಕೆಶಿ

ನೀರಿಗಾಗಿ ನಡಿಗೆ ನಿಲ್ಲದು– ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಜನಜಂಗುಳಿ ಸೇರುವ ಕಾರ್ಯಕ್ರಮಗಳಿಗೆ ಅವಕಾಶ ಇಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದರೂ, ಮೇಕೆದಾಟು ಯೋಜನೆ ಜಾರಿ ಆಗ್ರಹಿಸಿ ಇದೇ 9ರಿಂದ 10 ದಿನ ಹಮ್ಮಿಕೊಂಡಿರುವ ಪಾದಯಾತ್ರೆಯಿಂದ ಹಿಂದೆ ಸರಿಯದಿರಲು ರಾಜ್ಯ ಕಾಂಗ್ರೆಸ್ ನಿರ್ಧರಿಸಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಜೊತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಕೋವಿಡ್ ನಿಯಮ ಪಾಲಿಸಿ, ಕಾನೂನು ಚೌಕಟ್ಟಿನಲ್ಲಿ ನೀರಿಗಾಗಿ ನಡಿಗೆ ಮಾಡಿಯೇ ತೀರುತ್ತೇವೆ. ಸಾರ್ವಜನಿಕರಿಗೆ ಭಾಗವಹಿಸಲು ಸರ್ಕಾರ ಅವಕಾಶ ನೀಡದಿದ್ದರೆ, ನಾನು ಮತ್ತು ಸಿದ್ದರಾಮಯ್ಯ ಇಬ್ಬರೇ ನಡೆಯುತ್ತೇವೆ' ಎಂದರು.

'ಪಾದಯಾತ್ರೆಗೆ ಎಲ್ಲ ಸಿದ್ಧತೆ ಮಾಡಿಕೊಂಡಿದ್ದೇವೆ. ಪಕ್ಷಭೇದ ಮರೆತು, ಎಲ್ಲ ಪಕ್ಷಗಳ ನಾಯಕರು, ಸಂಘಟನೆಗಳಿಗೆ ಆಹ್ವಾನ ನೀಡಿದ್ದೇವೆ. ಪಕ್ಷಾತೀತವಾಗಿ ಜನರು ಬೆಂಬಲ ಸೂಚಿಸಿದ್ದಾರೆ. ಸರ್ಕಾರ ಮತ್ತು ಕೆಲವು ಪಕ್ಷಗಳಿಗೆ ಇದನ್ನು ಸಹಿಸಲು ಆಗುತ್ತಿಲ್ಲ' ಎಂದು ಹೇಳಿದರು.

6ನೇ ಪುಟ ನೋಡಿ

ಓಮೈಕ್ರಾನ್: ರಾಜಸ್ಥಾನದಲ್ಲಿ ಮೊದಲ ಸಾವು

ನವದೆಹಲಿ (ಪಿಟಿಐ): ಕೊರೊನಾ ವೈರಸ್‌ನ ರೂಪಾಂತರ ತಳಿ 'ಓಮೈಕ್ರಾನ್'ನಿಂದ ದೇಶದಲ್ಲಿ ಮೊದಲ ಸಾವು ಸಂಭವಿಸಿದೆ. ರಾಜಸ್ಥಾನದ ಉದಯಪುರದಲ್ಲಿ ಓಮೈಕ್ರಾನ್ ತಗುಲಿದ್ದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಓಮೈಕ್ರಾನ್ ಕಾಣಿಸಿಕೊಂಡಿದ್ದ 73 ವರ್ಷದ ವ್ಯಕ್ತಿ ಡಿ.31ರಂದು ಮೃತಪಟ್ಟಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಮೂಲಗಳು ತಿಳಿಸಿವೆ.

58,097 ಹೊಸ ಪ್ರಕರಣ ಪತ್ತೆ: ದೇಶದಲ್ಲಿ ಕೋವಿಡ್ ಪ್ರಕರಣಗಳು ಭಾರಿ ಸಂಖ್ಯೆಯಲ್ಲಿ ಏರಿಕೆಯಾಗಿವೆ. ಬುಧವಾರ ಬೆಳಿಗ್ಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ 58,097 ಹೊಸ ಪ್ರಕರಣಗಳು ವರದಿಯಾಗಿದ್ದು, 534 ಜನ ಮೃತಪಟ್ಟಿದ್ದಾರೆ. ಒಂದೇ ದಿನ 2,135 ಓಮೈಕ್ರಾನ್ ಪ್ರಕರಣ ವರದಿಯಾಗಿವೆ.

ರಾಜ್ಯದಲ್ಲಿ ಹೊಸ 4,246 ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದ್ದು, 4,246 ಮಂದಿಗೆ ಕೊರೊನಾ ಸೋಂಕು ತಗುಲಿರುವುದು ಬುಧವಾರ ದೃಢಪಟ್ಟಿದೆ. 4

ವಾರಾಂತ್ಯ ಕರ್ಫ್ಯೂ: ಕಠಿಣ ನಿರ್ಬಂಧ ಜಾರಿ

ತುರ್ತು ಇದ್ದರಷ್ಟೇ ಪ್ರಯಾಣಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ವಾರಾಂತ್ಯದ ಎರಡು ದಿನ ಕರ್ಫ್ಯೂ ಘೋಷಿಸಿದ್ದರೂ, ಅನಿವಾರ್ಯ ಮತ್ತು ತುರ್ತು ಸಂದರ್ಭಗಳಲ್ಲಿ ಮಾತ್ರ ಕಾರು, ಮತ್ತಿತರ ಖಾಸಗಿ ವಾಹನಗಳಲ್ಲಿ ಅಂತರ್ ಜಿಲ್ಲಾ ಪ್ರಯಾಣ ಮಾಡಬಹುದಾಗಿದೆ.

ಬಸ್, ರೈಲು ಪ್ರಯಾಣಕ್ಕೆ ಯಾವುದೇ ನಿರ್ಬಂಧ ಇರುವುದಿಲ್ಲ. ಬಸ್, ರೈಲು, ವಿಮಾನಗಳಲ್ಲಿ ಓಡಾಡುವವರು ಆಯಾ ನಗರಗಳಲ್ಲಿ ತಮ್ಮ ಪ್ರಯಾಣದ ಟಿಕೆಟ್‌ಗಳನ್ನು ತೋರಿಸಿ ನಿಗದಿತ ಸ್ಥಳಕ್ಕೆ ಹೋಗಬಹುದು. ಕಾರು ಮತ್ತು ಇತರ ಖಾಸಗಿ ವಾಹನಗಳಲ್ಲಿ ಹೋಗುವವರು ಪ್ರಯಾಣದ ಉದ್ದೇಶಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ತೋರಿಸಬೇಕು ಹಾಗೂ ಕಾರಣಗಳನ್ನು ಗಡಿ ಭಾಗದಲ್ಲಿ ಪೊಲೀಸರಿಗೆ ವಿವರಿಸಬೇಕಾಗುತ್ತದೆ ಎಂದು ಮೂಲಗಳು ಹೇಳಿವೆ.

ಬೆಂಗಳೂರಿನಲ್ಲಿ ಅತಿ ಹೆಚ್ಚು ಕೋವಿಡ್ ಪ್ರಕರಣಗಳು ದಾಖಲಾಗುತ್ತಿದ್ದು, ವಾರಾಂತ್ಯಕ್ಕೆ ಇತರ ಜಿಲ್ಲೆಗಳು ಮತ್ತು ಪ್ರವಾಸಿ ಸ್ಥಳಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಹೋಗಲು ಅವಕಾಶ ನೀಡಿದರೆ, ಎಲ್ಲೆಡೆ ಕೋವಿಡ್ ಹರಡುವ ಅಪಾಯವಿದೆ. ಇದನ್ನು ತಡೆಯಲು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದರೆ, ಅನಿವಾರ್ಯ ಕಾರಣಗಳಿಗೆ ಪ್ರಯಾಣಿಸುವವರಿಗೆ ಅಡ್ಡಿ ಇಲ್ಲ ಎಂದು ಮೂಲಗಳು ತಿಳಿಸಿವೆ. ಖಾಸಗಿ ವಾಹನಗಳಲ್ಲಿ ಪ್ರಯಾಣಿಸುವವರು ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಇದಕ್ಕಾಗಿ ಪ್ರತ್ಯೇಕ ಮಾರ್ಗಸೂಚಿ ಹೊರಡಿಸಲಾಗುವುದು ಎಂದು ಮೂಲಗಳು ಹೇಳಿವೆ.

ಬೆಂಗಳೂರಿನಲ್ಲಿ ರೈಲು ಮತ್ತು ವಿಮಾನ ಸಂಚಾರಕ್ಕೆ ಅವಕಾಶ ಇದ್ದು, ಸಾರ್ವಜನಿಕ ಸಾರಿಗೆ, ಖಾಸಗಿ ವಾಹನಗಳು, ಟ್ಯಾಕ್ಸಿಗಳ ಮೂಲಕ ಮನೆಗಳಿಂದ ವಿಮಾನ ನಿಲ್ದಾಣ ಮತ್ತು ರೈಲು ನಿಲ್ದಾಣಗಳಿಗೆ ತೆರಳಬಹುದು. ಪ್ರಯಾಣ ಮಾಡುವವರು ಅಗತ್ಯ ದಾಖಲೆಗಳು ಅಥವಾ ಟಿಕೆಟ್ ತೋರಿಸಬೇಕು.

ಇನ್ನಷ್ಟು ಸುದ್ದಿಗಳು 3, 3B

ಯಾವುದಕ್ಕೆಲ್ಲ ಅವಕಾಶ?

- ಎಲ್ಲ ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಚೇರಿಗಳು, ಸರ್ಕಾರದ ಅಧೀನ ಸ್ವಾಯತ್ತ ಸಂಸ್ಥೆಗಳು, ನಿಗಮಗಳು, ಕೋವಿಡ್–19 ಮತ್ತು ಅಗತ್ಯ ಸೇವೆಗಳನ್ನು ನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿ ಓಡಾಟಕ್ಕೆ ಯಾವುದೇ ಅಡ್ಡಿ ಇಲ್ಲ.
- ಎಲ್ಲ ಸಾರ್ವಜನಿಕ ಉದ್ಯಾನಗಳ ಬಾಗಿಲು ಬಂದ್
- ಎಲ್ಲ ರೀತಿಯ ಉದ್ಯಮಗಳು ಮತ್ತು ಐಟಿ ಉದ್ಯಮಗಳಿಗೆ ಕರ್ಫ್ಯೂವಿನಿಂದ ವಿನಾಯ್ತಿ. ಎಲ್ಲ ಉದ್ಯೋಗಿಗಳ ಓಡಾಟಕ್ಕೆ ಅವಕಾಶವಿದೆ. ಸಿಬ್ಬಂದಿ ಕೆಲಸ ಮಾಡುವ ಸಂಸ್ಥೆಗಳ ಗುರುತಿನ ಚೀಟಿ ಹೊಂದಿರಬೇಕು.
- ರೋಗಿಗಳು ಮತ್ತು ಅವರನ್ನು ನೋಡಿಕೊಳ್ಳುವವರು ತುರ್ತುಸಂದರ್ಭದಲ್ಲಿ ಓಡಾಟಕ್ಕೆ ಅವಕಾಶವಿದೆ. ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಹೋಗುವವರಿಗೆ ಅಡ್ಡಿ ಇಲ್ಲ.
- ಆಹಾರ, ದಿನಸಿ, ಹಣ್ಣು–ತರಕಾರಿ, ಮೀನು, ಮಾಂಸ, ಡೇರಿ, ಹಾಲಿನ ಬೂತ್ ಮತ್ತು ಪ್ರಾಣಿಗಳ ಆಹಾರಗಳ ಮಾರಾಟ ಮಳಿಗೆಗಳು ತೆರೆಯಲು ಅವಕಾಶವಿದೆ. ನ್ಯಾಯಬೆಲೆ ಅಂಗಡಿ, ಬೀದಿ ವ್ಯಾಪಾರಿಗಳಿಗೂ ಅವಕಾಶವಿದೆ. ಮನೆಗಳಿಗೆ ವಿವಿಧ ಪದಾರ್ಥ ಮತ್ತು ವಸ್ತುಗಳನ್ನು ತಂದುಕೊಡುವುದಕ್ಕೆ ಅವಕಾಶವಿದೆ.
- ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಂದ ಆಹಾರವನ್ನು ಒಯ್ಯಬಹುದು. ಕುಳಿತು ತಿನ್ನಲು ಅವಕಾಶ ಇರುವುದಿಲ್ಲ

ಬಸ್ ಸಂಚಾರಕ್ಕೆ ತೊಂದರೆ ಇಲ್ಲ

ಬೆಂಗಳೂರು: 'ಕೆಎಸ್‌ಆರ್‌ಟಿಸಿ ಬಸ್‌ಗಳ ಸೇವೆ ಎಂದಿನಂತೆ ಇರಲಿದ್ದು, ವಾರಾಂತ್ಯದ ಕರ್ಫ್ಯೂ ಸಂದರ್ಭದಲ್ಲಿ ಜನದಟ್ಟಣೆ ನೋಡಿಕೊಂಡು ಬಸ್‌ಗಳ ಕಾರ್ಯಾಚರಣೆ ಮಾಡಿಸಲಾಗುವುದು' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ತಿಳಿಸಿದ್ದಾರೆ.

'ರಾತ್ರಿ ಸಾರಿಗೆ ಸೇವೆಗೆ ಆನ್‌ಲೈನ್ ಬುಕಿಂಗ್ ವ್ಯವಸ್ಥೆ ಅಳವಡಿಸಿಕೊಂಡು ಮುಂಗಡ ಕಾಯ್ದಿರಿಸಿದ ಪ್ರಯಾಣಿಕರ ಸಂಖ್ಯೆ ಪರಿಶೀಲಿಸಿ ಅಗತ್ಯವಿದ್ದಲ್ಲಿ ಮಾತ್ರ ಬಸ್‌ಗಳನ್ನು ರಸ್ತೆಗೆ ಇಳಿಸಲಾಗುವುದು. ಕೇರಳ, ಮಹಾರಾಷ್ಟ್ರ ಮತ್ತು ಗೋವಾದಿಂದ ರಾಜ್ಯಕ್ಕೆ ಪ್ರಯಾಣಿಸುವವರು 72 ಗಂಟೆಗಳ ಒಳಗೆ ಆರ್‌ಟಿಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಪಡೆಯುವುದು ಕಡ್ಡಾಯ' ಎಂದು ಸ್ಪಷ್ಟಪಡಿಸಿದ್ದಾರೆ.

ರಜೆ ಇದ್ದವರಿಗೆ ಆನ್‌ಲೈನ್ ತರಗತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಬೆಂಗಳೂರು ಉತ್ತರ ಮತ್ತು ದಕ್ಷಿಣ ಶೈಕ್ಷಣಿಕ ಜಿಲ್ಲೆಗಳಲ್ಲಿ ಎಲ್ಲ ಸರ್ಕಾರಿ, ಅನುದಾನಿತ, ಅನುದಾನ ರಹಿತ ಶಾಲೆಗಳ ಪೂರ್ವ ಪ್ರಾಥಮಿಕ, ಎಲ್‌ಕೆಜಿ, ಯುಕೆಜಿ ಮತ್ತು 1 ರಿಂದ 9 ನೇ ತರಗತಿಗಳವರೆಗೆ ಇದೇ 6 ರಿಂದ 19 ರವರೆಗೆ ತಾತ್ಕಾಲಿಕವಾಗಿ ಸ್ಥಗಿತವಾಗಲಿದೆ.

ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಈ ಹಿಂದಿನಂತೆ ಆನ್‌ಲೈನ್ ಮತ್ತು ಇತರೆ ವಿಧಾನಗಳ ಮೂಲಕ ಕಲಿಕಾ ಮತ್ತು ಬೋಧನಾ ಚಟುವಟಿಕೆ ನಡೆಸಬೇಕು. 10 ನೇ ತರಗತಿಗಳನ್ನು ಕೋವಿಡ್ ಮುಂಜಾಗ್ರತಾ ಮತ್ತು ಸುರಕ್ಷತಾ ವಿಧಾನಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ಭೌತಿಕ ತರಗತಿಗಳನ್ನು ನಡೆಸಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಕೋವಿಡ್ 19 ಎಲ್ಲ ಮುಂಜಾಗ್ರತಾ, ಸಾಕ್ಷರತಾ ಕ್ರಮಗಳನ್ನು ಅನುಸರಿಸಿ ಈಗ ನಡೆಸುತ್ತಿರುವಂತೆ ತರಗತಿಗಳನ್ನು ನಡೆಸಬೇಕು ಎಂದು ಸೂಚಿಸಿದ್ದಾರೆ.

ಬೆಂಗಳೂರು ನಗರದಲ್ಲಿ ಶಿಕ್ಷಕರು ಮತ್ತು ಇತರ ಸಿಬ್ಬಂದಿಗೆ ಶಾಲಾ ಹಾಜರಾತಿಯಿಂದ ವಿನಾಯಿತಿ ಇಲ್ಲ.

ವಾರಾಂತ್ಯವೂ ಇರಲಿದೆ ಮೆಟ್ರೊ

ವಾರಾಂತ್ಯದ ಕರ್ಫ್ಯೂ ಜಾರಿಯಲ್ಲಿರುವಾಗಲೂ 'ನಮ್ಮ ಮೆಟ್ರೊ' ಸೇವೆ ಮುಂದುವರಿಸಲು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ನಿರ್ಧರಿಸಿದೆ.

'ರೈಲು ಸಂಚಾರದ ಸಮಯವನ್ನು ಪರಿಷ್ಕರಿಸಲಾಗಿದೆ. ನಾಗಸಂದ್ರ, ರೇಷ್ಮೆ ಸಂಸ್ಥೆ, ಕೆಂಗೇರಿ ಮತ್ತು ಬೈಯಪ್ಪನಹಳ್ಳಿ ಟರ್ಮಿನಲ್ ನಿಲ್ದಾಣಗಳಿಂದ ಶನಿವಾರ ಮತ್ತು ಭಾನುವಾರ ಬೆಳಿಗ್ಗೆ 8ರಿಂದ ರಾತ್ರಿ 9 ಗಂಟೆಯವರೆಗೆ ಮೆಟ್ರೊ ರೈಲು ಸೇವೆ ಇರಲಿದೆ. ಟರ್ಮಿನಲ್ ನಿಲ್ದಾಣಗಳಿಂದ ಪ್ರತಿ 20 ನಿಮಿಷಗಳಿಗೆ ಒಂದು ರೈಲು ಹೊರಡಲಿದೆ. ಟರ್ಮಿನಲ್ ನಿಲ್ದಾಣದಿಂದ ದಿನದ ಕೊನೆಯ ರೈಲು ರಾತ್ರಿ 9ಕ್ಕೆ ಹೊರಡಲಿದೆ' ಎಂದು ನಿಗಮದ ಪ್ರಕಟಣೆ ತಿಳಿಸಿದೆ.

'ಸೋಮವಾರದಿಂದ ಗುರುವಾರದವರೆಗೆ ಮೆಟ್ರೊ ಸೇವೆ ಈಗಿನಂತೆಯೇ ಮುಂದುವರಿಯಲಿದೆ. ಈ ದಿನಗಳಲ್ಲಿ ಬೆಳಿಗ್ಗೆ 5 ಗಂಟೆಗೆ ರೈಲು ಸಂಚಾರ ಆರಂಭವಾಗಲಿದೆ. ಟರ್ಮಿನಲ್ ನಿಲ್ದಾಣಗಳಿಂದ ರಾತ್ರಿ 11 ಗಂಟೆಗೆ ದಿನದ ಕೊನೆಯ ರೈಲುಗಳು ಹೊರಡಲಿವೆ. ರಾತ್ರಿ 10 ಗಂಟೆಯ ನಂತರ ರೈಲುಗಳ ಸಂಖ್ಯೆ ಕಡಿಮೆ ಇರಲಿದೆ. ಟರ್ಮಿನಲ್ ನಿಲ್ದಾಣಗಳಿಂದ ಶುಕ್ರವಾರದ ಕೊನೆಯ ರೈಲು ರಾತ್ರಿ 11ರ ಬದಲು ರಾತ್ರಿ 10 ಗಂಟೆಗೆ ಹೊರಡಲಿದೆ' ಎಂದು ನಿಗಮವು ತಿಳಿಸಿದೆ.

'ಹೋಟೆಲ್: ವಾರಾಂತ್ಯದಲ್ಲೂ ಸೇವೆ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ಜಾರಿ ಮಾಡಿರುವ ವಾರಾಂತ್ಯ ಕರ್ಫ್ಯೂಗೆ ಹೋಟೆಲ್ ಮಾಲೀಕರ ಸಂಪೂರ್ಣ ವಿರೋಧವಿದೆ. ವಾರಾಂತ್ಯ ಕರ್ಫ್ಯೂ ಸಮಯದಲ್ಲಿ ಪಾರ್ಸೆಲ್ ಸೇವೆ ಬದಲಿಗೆ ಶೇ 50ರಷ್ಟು ಪ್ರಮಾಣದಲ್ಲಿ ಸೇವೆ ನೀಡಲು ಅವಕಾಶ ಕಲ್ಪಿಸಬೇಕು' ಎಂದು ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ಮನವಿ ಮಾಡಿದ್ದಾರೆ.

'ಹೋಟೆಲ್‌ಗಳಲ್ಲಿ ವಾರಾಂತ್ಯದ ದಿನಗಳಲ್ಲೇ ವ್ಯಾಪಾರ ಹೆಚ್ಚು. ಕೋವಿಡ್ ತೀವ್ರಗೊಂಡಿರುವ ಕಾರಣಕ್ಕೆ ಸೋಮವಾರದಿಂದ ಶುಕ್ರವಾರದವರೆಗೆ ಹೋಟೆಲ್‌ಗಳಲ್ಲಿ ಶೇ 50ರಷ್ಟು ಆಸನ ಸಾಮರ್ಥ್ಯದಲ್ಲಿ ಸೇವೆ ನೀಡಲಾಗುತ್ತಿದೆ. ಇದರಿಂದ ಹೋಟೆಲ್‌ಗಳಿಗೆ ಯಾವುದೇ ಲಾಭವಿಲ್ಲ. ಗ್ರಾಹಕರ ಹಿತದೃಷ್ಟಿಯಿಂದ ಸೇವೆ ಒದಗಿಸುತ್ತಿದ್ದೇವೆ' ಎಂದು ಅವರು ಹೇಳಿದ್ದಾರೆ.

ಚಿತ್ರರಂಗಕ್ಕೆ ಹೊಡೆತ ನೀಡಲಿದೆ ವಾರಾಂತ್ಯ ಕರ್ಫ್ಯೂ

ನಿರ್ಬಂಧ: 'ಚಂದನವನ' ಹೈರಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಸಂಖ್ಯೆಯನ್ನು ಶೇ 50ಕ್ಕೆ ನಿರ್ಬಂಧಿಸಿರುವುದು ಹಾಗೂ ವಾರಾಂತ್ಯದ ಕರ್ಫ್ಯೂ ಚಿತ್ರರಂಗವನ್ನು ಮತ್ತೆ ಮತ್ತಷ್ಟು ಸಂಕಷ್ಟಕ್ಕೆ ದೂಡಿದೆ. ಸತತ ಎರಡು ಲಾಕ್‌ಡೌನ್‌ನಿಂದ ಕಂಗೆಟ್ಟು, ನಾಡಹಬ್ಬದ ಬಳಿಕ ಗರಿಗೆದರಿ ಚೇತರಿಸಿಕೊಳ್ಳುತ್ತಿದ್ದ ಚಿತ್ರರಂಗದ ಮೇಲೆ ಮತ್ತೆ ಕಾರ್ಮೋಡ ಆವರಿಸಿದೆ.

ಜನವರಿಯಲ್ಲಿ 'ಏಕ್ ಲವ್ ಯಾ' ಸಿನಿಮಾವನ್ನು ಬಿಟ್ಟರೆ ದೊಡ್ಡ ಬಜೆಟ್ ಸಿನಿಮಾಗಳಿಲ್ಲ. ಸರ್ಕಾರದ ಹೊಸ ಮಾರ್ಗಸೂಚಿ ಹೊರಬೀಳುತ್ತಿದ್ದಂತೆಯೇ 'ಏಕ್ ಲವ್ ಯಾ' ಸಿನಿಮಾದ ಬಿಡುಗಡೆಯನ್ನು ನಿರ್ದೇಶಕ ಪ್ರೇಮ್ ಮುಂದೂಡಿದ್ದಾರೆ. ಜ.7ಕ್ಕೆ ಬಿಡುಗಡೆಯಾಗಬೇಕಿದ್ದ ಪ್ರಕಾಶ್ ರಾಜ್ ಮೇಹು ನಿರ್ದೇಶನದ, ಅಚ್ಯುತ್ ಕುಮಾರ್ ನಟನೆಯ 'ಡಿಎನ್‌ಎ' ಚಿತ್ರವನ್ನೂ ಮುಂದೂಡಲಾಗಿದೆ.

ಜ.7ಕ್ಕೆ ಬಿಡುಗಡೆಯಾಗಬೇಕಿದ್ದ ಎಸ್.ಎಸ್. ರಾಜಮೌಳಿ ಅವರ ಪ್ಯಾನ್ ಇಂಡಿಯಾ ಸಿನಿಮಾ 'ಆರ್‌ಆರ್‌ಆರ್' ಹಾಗೂ ಜ.14ಕ್ಕೆ ಬಿಡುಗಡೆಯಾಬೇಕಿದ್ದ ಪ್ರಭಾಸ್ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ 'ರಾಧೆ ಶ್ಯಾಮ್' ಚಿತ್ರಗಳ ಬಿಡುಗಡೆಯನ್ನೂ ಮುಂದೂಡಲಾಗಿದೆ. 'ಲೂಸ್ ಮಾದ' ಯೋಗೇಶ್ ನಟನೆಯ 'ಒಂಬತ್ತನೇ ದಿಕ್ಕು' ಸಿನಿಮಾವನ್ನು ಜ.14ಕ್ಕೆ ಬಿಡುಗಡೆ ಮಾಡಲು ನಿರ್ದೇಶಕ ದಯಾಳ್ ಪದ್ಮನಾಭನ್ ನಿರ್ಧರಿಸಿದ್ದರು. ಆದರೆ ವಾರಾಂತ್ಯದ ಕರ್ಫ್ಯೂ, ದಯಾಳ್ ನಿರ್ಧಾರವನ್ನು ತಲೆಕೆಳಗಾಗಿಸಿದೆ.

'ವಾರಾಂತ್ಯದ ಕರ್ಫ್ಯೂ ತರ್ಕರಹಿತ. ಚಲನಚಿತ್ರ ವಾಣಿಜ್ಯ ಮಂಡಳಿ ಪ್ರತಿನಿಧಿಗಳ ಜೊತೆಗೂಡಿ ಶೀಘ್ರದಲ್ಲೇ ಮುಖ್ಯಮಂತ್ರಿಯವರನ್ನು ಭೇಟಿಯಾಗುತ್ತೇವೆ. ವಾರಾಂತ್ಯದಲ್ಲಿ ಚಿತ್ರಪ್ರದರ್ಶನಕ್ಕೆ ವಿನಾಯಿತಿ ನೀಡುವಂತೆ ಕೋರುತ್ತೇವೆ. ಮುಖ್ಯಮಂತ್ರಿಯವರ ನಿರ್ಧಾರವನ್ನು ಆಧರಿಸಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ' ಎಂದಿದ್ದಾರೆ ದಯಾಳ್.

ಜ.21ಕ್ಕೆ ಬಿಡುಗಡೆಯಾಗಬೇಕಿದ್ದ ಅಚ್ಯುತ್ ಕುಮಾರ್ ನಟನೆಯ 'ಫೋರ್ ವಾಲ್ಸ್' ಹಾಗೂ ಜ.28 ರಂದು ಆಗಬೇಕಿದ್ದ ನಟ ಶಿವರಾಜ್ ಕೆ.ಆರ್.ಪೇಟೆ ನಟನೆಯ 'ಧಮಾಕ' ಚಿತ್ರದ ಬಿಡುಗಡೆಯನ್ನೂ ಮುಂದೂಡಲಾಗಿದೆ. ಓಮೈಕ್ರಾನ್ ಸೋಂಕು ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದ್ದ ಕಾರಣ ಡಿ.10ರಂದು ಬಿಡುಗಡೆಯಾಗಬೇಕಿದ್ದ ನಟ ಶರಣ್ ನಟನೆಯ, ಸಿಂಪಲ್ ಸುನಿ ನಿರ್ದೇಶನದ 'ಅವತಾರ ಪುರುಷ' ಸಿನಿಮಾವನ್ನು ಮುಂದೂಡಲಾಗಿತ್ತು. ಜನವರಿ ಅಂತ್ಯದಲ್ಲಿ ತೆರೆಕಾಣಬೇಕಿದ್ದ ಈ ಸಿನಿಮಾವನ್ನೂ ಮುಂದೂಡಲಾಗಿದೆ. ಡಿ.31ರಂದು ಬಿಡುಗಡೆಯಾಗಬೇಕಿದ್ದ ನಟ ರಕ್ಷಿತ್ ಶೆಟ್ಟಿ ನಟನೆಯ 'ಚಾರ್ಲಿ 777' ಸಿನಿಮಾದ ಭವಿಷ್ಯವೇನು ಎನ್ನುವುದು ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ.

ಏಕ್ ಲವ್ ಯಾ ಸಿನಿಮಾದಲ್ಲಿ ರಾಣಾ ಹಾಗೂ ರೀಷ್ಮಾ ನಾಣಯ್ಯ

5ನೇ ಪುಟ ನೋಡಿ

ಒಳ ಪುಟಗಳು

ಕಾಂಗ್ರೆಸ್, ಬಿಜೆಪಿ ಚುನಾವಣಾ ರ‍್ಯಾಲಿ ರದ್ದು 5

'ಬುಲ್ಲಿ ಬಾಯಿ' ಪ್ರಕರಣ ಮತ್ತೊಬ್ಬ ವಿದ್ಯಾರ್ಥಿ ಬಂಧನ 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಗರದ ವಿವಿಧೆಡೆ ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಕೆ ಮತ್ತು ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಜ.6ರಂದು ನಗರದ ವಿವಿಧೆಡೆ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಸಚ್ಚಿದಾನಂದ ನಗರ, ಬಿಇಎಂಎಲ್ 3ನೇ, 4ನೇ ಮತ್ತು 5ನೇ ಹಂತ, ಬೆಂಗಳೂರು ಯೂನಿವರ್ಸಿಟಿ ಲೇಔಟ್, ಗಟ್ಟಿಗೆರೆ, ಪಂಚಶೀಲನಗರ, ಗಿರಿಧಾಮ ಬಡಾವಣೆ, ಪಟ್ಟಣಗೆರೆ, ಐಡಿಯಲ್ ಹೋಮ್ ಟೌನ್‌ಶಿಪ್, ಎಚ್.ವಿ. ಹಳ್ಳಿ, ಮಾರುತಿ ಲೇಔಟ್, ಆದಿತ್ಯ ಲೇಔಟ್, ...ನಗರ, ದ್ವಾರಕ ನಗರ, ...ಕಾಲೇಜ್, ಪಂತರಪಾಳ್ಯ, ಮುತ್ತುರಾಯನಗರ, ಮೈಲಸಂದ್ರ, ಉತ್ತರಹಳ್ಳಿ, ವಡ್ಡಪಾಳ್ಯ, ಗಾಣಕಲ್ಲು, ಗ್ಲೋಬಲ್ ವಿಲೇಜ್, ಬಂಗಾರಪ್ಪ ನಗರ, ವೀರಭದ್ರ ನಗರ, ದರ್ಶನ್ ಫಾರಂ, ಮುನೇಶ್ವರ ನಗರ, ಬಿಎಂಟಿಸಿ ಡಿಪೋ, ಸಾಯಿ ನಿಸರ್ಗ ಲೇಔಟ್, ಕಾರೇಪಾಳ್ಯ ಹಾಗೂ ಎಂ.ಪಿ. ಲೇಔಟ್, ವಿನಾಯಕ ಲೇಔಟ್, ...ಚಿತ್ರಮಂದಿರ, ಶಂಕರಪ್ಪ ಎಸ್ಟೇಟ್, ಲಕ್ಷ್ಮೀದೇವಿ ಬಡಾವಣೆ, ರಂಗನಾಥಪುರ, ಬಂಗಾರಪ್ಪ ನಗರ, ಕೃಷ್ಣ ಗಾರ್ಡನ್, ಅನ್ನಪೂರ್ಣೇಶ್ವರಿ ಬಡಾವಣೆ, ಟಿ.ಜಿ. ಪಾಳ್ಯ, ತುಂಗಾನಗರ, ವಿಶ್ವೇಶ್ವರ ನಗರ, ಅನುಪಮ ಸ್ಕೂಲ್ ರೋಡ್, ಬಿ.ಡಿ. ಕಾಲೋನಿ, ಗಾಂಧಿ ನಗರ, ಉಲ್ಲಾಳ ನಗರ, ಮಾರುತಿ ನಗರ, ಭವಾನಿ ನಗರ ಸುತ್ತಮುತ್ತ ಪ್ರದೇಶಗಳು.

ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ಮುಂದೂಡಿಕೆ

ಬೆಂಗಳೂರು: ಕೋವಿಡ್ ಹೆಚ್ಚುತ್ತಿರುವ ಕಾರಣ ರಾಜ್ಯದಾದ್ಯಂತ ಜ. 8ರಂದು ವಾರಾಂತ್ಯದ ಕರ್ಫ್ಯೂ ವಿಧಿಸಿದ್ದರಿಂದ, ಅಂದು ನಡೆಯಬೇಕಿದ್ದ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಜ.10ಕ್ಕೆ ಮುಂದೂಡಲಾಗಿದೆ.

2020-21ನೇ ಸಾಲಿನ ಅಂತರ ಘಟಕ ವಿಭಾಗ ಹೊರಗಿನ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರನ್ನು ಒಳಗೊಂಡಂತೆ ಪ್ರಾಥಮಿಕ ಶಾಲಾ ಶಿಕ್ಷಕರ ಕೋರಿಕೆ ಅಥವಾ ಪರಸ್ಪರ ಸಾಮಾನ್ಯ ವರ್ಗಾವಣೆಯನ್ನು ಕಂಪ್ಯೂಟರೀಕೃತ ಕೌನ್ಸೆಲಿಂಗ್ ಮೂಲಕ ಹಮ್ಮಿಕೊಳ್ಳಲು ವೇಳಾಪಟ್ಟಿ ಪ್ರಕಟಿಸಲಾಗಿತ್ತು. ಆದರೆ, ವಾರಾಂತ್ಯದ ಕರ್ಫ್ಯೂ ಜಾರಿಯಾಗಿದ್ದರಿಂದ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಮುಂದೂಡಿ (ಆದ್ಯತಾಪಟ್ಟಿಯ ಕ್ರಮ ಸಂಖ್ಯೆ: 2,901ರಿಂದ 3,228 ರವರೆಗಿನ ಶಿಕ್ಷಕರಿಗೆ) ಇದೇ 10ರಂದು ಬೆಳಿಗ್ಗೆ 10 ಗಂಟೆಗೆ ನಡೆಸಲು ನಿರ್ಧರಿಸಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ತಿಳಿಸಿದೆ.

PUBLIC NOTICE

This is to inform the general Public that my client is intending to purchase the agricultural land bearing Sy.No.135/1 measuring 16 Acres 12 Guntas including 33 Guntas of kharab land Sy.No.135/2 measuring 03 Guntas, Sy.No.135/3 measuring 05 Acres, Sy.No.134/1 measuring 20 Acres 13 Guntas including 10 Guntas of kharab land Sy.No.134/2 measuring 05 Acres, all the lands situated at Hasaruhalli Village, Thyamagondlu Hobli, Nelamangala Taluk, Bengaluru Rural District which is more fully described in the schedule hereunder and hereinafter called as the Schedule Property from its owner **Smt. HajiMehraunnisa Begum** and her family members. The owner of the above said land has handed over the Xerox copies of the documents in respect of the above said land to my client. Any person/s having any claim, right, title, interest, share in the Schedule Property may file their objections to the undersigned with documentary proof, within **15 days** from the date of publication of this Notice and if no valid objections are received within stipulated time, my client will proceed with assumptions that, there are no objections or claims of whatsoever nature from any person/s for purchasing the schedule property from my client. Any objection received after 15 days will not be entertained and my client will proceed to purchase the land in accordance with law.

SCHEDULE PROPERTY

All the piece and parcel of land bearing Sy.No.135/1 measuring 16 Acres 12 Guntas including 33 Guntas of kharab land, Sy.No.135/2 measuring 03 Guntas, Sy.No.135/3 measuring 05 Acres, Sy.No.134/1 measuring 20 Acres 13 Guntas including 10 Guntas of kharablandff, Sy.No.134/2 measuring 05 Acres in all measuring 46 Acres 28 Guntas, all the lands situated at Hasaruhalli Village, Thyamagondlu Hobli, Nelamangala Taluk, Bengaluru Rural District and commonly bounded on the : **East by** : Sy.No.133, **West by** : Sy.No.136 and Sy.No.137, **North by**: Road, **South by** : Baradi village boundary

J. S. DINESH, Advocate
No.74, "Marthurshree", 76th Cross,
12th "E" Main Road, 6thBlock, Rajajinagara,
Bengaluru-560 010. Ph: 9448020528,
Office Ph. No.080-23300528

PUBLIC NOTICE

Public are hereby inform you that my client **M/s DS-Max Properties Pvt. Ltd.**, rep; by its Authorized Signatory, **Mr. Shivashankar Chikkeri**, having its office at # 1797, 14th Main, Brindavan Nagar, HBR Layout, 1st stage, 5th Block, Bangalore - 560 043, intend to enter into a ***Absolute Sale Deed*** with **Smt. R. Girijamma** w/o. late A. Rajashekaraiah, **Sri. J.R. Basavaraj** s/o. late A. Rajashekaraiah, **Sri. J.R. Devaraj** s/o. late. A. Rajashekaraiah, **Sri. J.R. Lingaraj** s/o. late. A. Rajashekaraiah and families are the absolute owner/s of immovable land property bearing Sy. No. **85/2**, measuring **5 acres 01 guntas**, situated at **Bandenallasandra Village**, Jigani Hobli, Anekal Taluk, Bangalore Urban District of **Item No. I** and bounded on: **East by:** Land of Sy. No. 85/3, **West by:** Land of Sy. No. 85/1, **North by:** Private Property, **South by:** Road. Whereas immovable land property bearing Sy. No. **85/3**, measuring **3 acres 23 guntas**, situated at **Bandenallasandra Village**, Jigani Hobli, Anekal Taluk, Bangalore Urban District of **Item No. II** and bounded on: **East by:** Land of Sy. No. 85/4, **West by:** Land of Sy. No. 85/2, **North by:** Private Property, **South by:** Road.

Whereas **Sri. H. Vishwanth** s/o. late Honnappa is the absolute owner of immovable land property bearing Sy. No. **85/4**, measuring **1 acre 20 guntas**, situated at **Bandenallasandra Village**, Jigani Hobli, Anekal Taluk, Bangalore Urban District of **Item No. III** and bounded on: **East by:** Sy. No. 85/5, **West by:** Sy. No. 85/3, **North by:** Private Property, **South by:** Road.

Whereas **Sri. H. Shivananda Sangamesh** s/o. Sri. Shivananda. H. is the absolute owner of immovable land property bearing Sy. No. **85/5**, measuring **2 acres 10 guntas**, situated at **Bandenallasandra Village**, Jigani Hobli, Anekal Taluk, Bangalore Urban District of **Item No. IV** and bounded on: **East by:** Land of Sy. No. 85/6, **West by:** Sy. No. 85/4, **North by:** Private Property, **South by:** Road.

Whereas **Sri. H. Shivananda** s/o. late Honnappa is the absolute owner of immovable land property bearing Sy. No. **85/6**, measuring **20 guntas**, situated at **Bandenallasandra Village**, Jigani Hobli, Anekal Taluk, Bangalore Urban District of **Item No. V** and bounded on: **East by:** Land of Sy. No. 85/7, **West by:** Sy. No. 85/5, **North by:** Private Property, **South by:** Road.

Whereas **Sri. J.R. Basavaraj** s/o. late A. Rajashekaraiah is the absolute owner of immovable land property bearing Sy. No. **85/7**, measuring **20 guntas**, situated at **Bandenallasandra Village**, Jigani Hobli, Anekal Taluk, Bangalore Urban District of **Item No. VI** and bounded on: **East by:** Private Property, **West by:** Land of Sy. No. 85/6, **North by:** Private Property, **South by:** Road.

which is subject matter of property of **Item No. I to VI**, which total measures **13 Acres 14 Guntas** and referred to as **"composite schedule property"** and commonly bounded as: **East by:** Private Property, **West by:** Sy. No. 85/1, **North by:** Private Property, **South by:** Road.

Any person or Any Acquisition Authority or Any Agreement Holder having any asserting right, title, interest and claims to oppose for Absolute Sale Deed of the composite schedule property and further having any manner of right, title, claims etc., and may lodge their objections, claims over the property along with relevant papers in support of their claims to the below address within **10** days from the date of this notice, if any objections fails to comply for claims, my client shall take further steps and shall be entering into Absolute Sale Deed.

LINGARAJ. S. NADA GOUDA., ADVOCATE
No.1794, 14th Main, BrindavanNagar, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ನಗರಸಭಾ ಕಾರ್ಯಾಲಯ, ಹೆಬ್ಬಗೋಡಿ

ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560099,
ದೂರವಾಣಿ: 080–27833730 E-Mail: itstaff_ulb_hebbagodi@yahoo.com, www.hebbagodicity.mrc.gov.in

ಸಂಖ್ಯೆ:ಹೆ.ನ.ಸ/ತಾ.ಶಾ/ಟೆ.ನೋ/ಸಿ.ಆರ್/33/2021–22 ದಿನಾಂಕ: 04.01.2022

ಇ– ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ 2021–22 ನೇ ಸಾಲಿನ 15ನೇ ಹಣಕಾಸು, 24.10% ಅನುದಾನ ಮತ್ತು 2021–22 ನೇ ಸಾಲಿನ ನಗರಸಭಾ ನಿಧಿ ಅಡಿಯಲ್ಲಿ ಕೆಳಕಂಡ 22 ಕಾಮಗಾರಿ / ಸೇವೆಯ ಒಟ್ಟು ಮೊತ್ತ **ರೂ.290.31** ಲಕ್ಷಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ಹಾಗೂ ಆರ್ಥಿಕ ಇಲಾಖೆಯ ಕೆ.ಡಬ್ಲ್ಯೂ–1, 2 ಮತ್ತು ಕೆ ಸಿ–2ರ ನಿಯಮಾವಳಿಗಳಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಅಥವಾ ಅರ್ಹ ಸಂಸ್ಥೆಗಳು/ ಸೇವಾದಾರರಿಂದ ಐಟಂವಾರು/Lumpsum ಟೆಂಡರ್ ಅಥವಾ ಮರುಟೆಂಡರ್ ಆಹ್ವಾನಿಸಲಾಗಿದೆ. **ದಿನಾಂಕ:06.01.2022** ರಿಂದ **ದಿನಾಂಕ: 24.01.2022 ಸಂಜೆ 4.00 ಗಂಟೆಯವರೆಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ತೆರೆಯುವ **ದಿನಾಂಕ: 25.01.2022** ರಂದು **ಸಂಜೆ 4.00 ಗಂಟೆಗೆ,** ಹೆಚ್ಚಿನ ಮಾಹಿತಿಗಾಗಿ **www.hebbagodicity.mrc.gov.in Or https://eproc.karnataka.gov.in** ನಲ್ಲಿ ವೀಕ್ಷಿಸಬಹುದು ಹಾಗೂ ಯಾವುದೇ ರೀತಿ ಬದಲಾವಣೆಯಿದ್ದಲ್ಲಿ ಅಥವಾ ತಿದ್ದುಪಡಿಯಿದ್ದಲ್ಲಿ (ಕೋರಿಜಂಡಮ್) ಇ–ಪ್ರೊಕ್ಯೂರ್‌ಮೆಂಟೆ ಪೋರ್ಟಲ್‌ನಲ್ಲಿ ನೋಡಬಹುದಾಗಿದೆ.

ಸಹಿ/– ಆಡಳಿತಾಧಿಕಾರಿಗಳು, ನಗರಸಭೆ, ಹೆಬ್ಬಗೋಡಿ | ವಾಸಸಂಇ/ಬೆಂ.ನಗರ/ಶಿರಡಿ ಸಾಯಿ/2695/2021–22 | ಸಹಿ/– ಪೌರಾಯುಕ್ತರು, ನಗರಸಭೆ, ಹೆಬ್ಬಗೋಡಿ

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ವಿಭೂಸ್ವಾಅ–1/ಡಾ॥ ಎಸ್.ಕೆ.ಎಲ್/24/2021–22 ದಿನಾಂಕ: 04.01.2022

ಸಾರ್ವಜನಿಕ ಪ್ರಕಟಣೆ

[illegible]

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ Civil Appeal No. 7661-63/2018 (Arising out of S.L.P(C) No. 10216-10218/2018) Dated: 03/08/2018 ...

[illegible]

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಡಾ॥ ಶಿವರಾಮಕಾರಂತ ಬಡಾವಣೆ, ಬೆಂ.ಅ.ಪ್ರಾ., ಬೆಂಗಳೂರು.

SBI ಭಾರತೀಯ ಸ್ಟೇಟ್ ಬ್ಯಾಂಕ್

ಸ್ಟ್ರೆಸ್ಡ್ ಅಸೆಟ್ ರಿಕವರಿ ಬ್ರಾಂಚ್–2, ಹೈದರಾಬಾದ್

ಇ-ಹರಾಜು ದಿನಾಂಕ: 25.01.2022

[illegible]

ದಿನಾಂಕ: 05.01.2022, ಸ್ಥಳ: ಹೈದರಾಬಾದ್ | ಸಹಿ/– ಅಧಿಕೃತ ಅಧಿಕಾರಿ, ಎಸ್‌ಬಿಐ, ಎಸ್‌ಎಆರ್‌ಬಿ–2, ಹೈದರಾಬಾದ್.

ರಾಜ್ಯದಲ್ಲಿ ಸರ್ಕಾರಿ ನೌಕರಿ ಪಡೆದ ಮೊದಲ ಲೈಂಗಿಕ ಅಲ್ಪಸಂಖ್ಯಾತೆ

ನೋವು ಮೆಟ್ಟಿ ಬದುಕು ಕಟ್ಟಿಕೊಂಡ ಮೋನಿಷಾ

• ಮಂಜುಶ್ರೀ ಎಂ. ಕಡಕೋಳ

ಮೋನಿಷಾ

ಬೆಂಗಳೂರು: ಲೈಂಗಿಕ ಅಲ್ಪಸಂಖ್ಯಾತರೆಂದರೆ ಮೂಗು ಮುರಿಯುವವರೇ ಹೆಚ್ಚು. ಆದರೆ ಇದಕ್ಕೆ ಅಪವಾದ ಎನ್ನುವಂತಿದ್ದಾರೆ ಮೋನಿಷಾ.

ಕರ್ನಾಟಕದಲ್ಲಿ ಸರ್ಕಾರಿ ನೌಕರಿ ಪಡೆದ ಮೊದಲ ಲೈಂಗಿಕ ಅಲ್ಪಸಂಖ್ಯಾತೆಯಾಗಿರುವ ಅವರ ಬದುಕು ಅನೇಕರಿಗೆ ಸ್ಫೂರ್ತಿಯಾಗುವಂಥದ್ದು.

ಹುಟ್ಟಿದ್ದು ಗಂಡಾಗಿ, ಬೆಳೆದದ್ದು ಹೆಣ್ಣಾಗಿ. ಹೆಣ್ಣಾಗುವ ಆಸೆಯನ್ನು ಅದುಮಿಡಲಾಗದೇ ಶಾಲೆಯ ನಾಟಕಗಳಲ್ಲಿ ಸ್ತ್ರೀಪಾತ್ರ ಮಾಡಿದಾಗ ಮನೆಯವರ ತಿರಸ್ಕಾರಕ್ಕೊಳಗಾದರು.

ಇಂದಲ್ಲ ನಾಳೆ ಮಗ ರಾಮು (ಮೂಲಹೆಸರು) ಸರಿಹೋದಾನು ಎಂಬ ಕುಟುಂಬದ ಭರವಸೆ ನಿಜವಾಗಲಿಲ್ಲ. ಎಸ್‌ಎಸ್‌ಎಲ್‌ಸಿಯಲ್ಲಿ ಫೇಲಾದಾಗ ಅಪ್ಪನಿಂದ ಬೆತ್ತದೇಟಿನ ರುಚಿ ಕಂಡು ಮನೆ ಬಿಟ್ಟು ಹೊರಟ ಮೋನಿಷಾ ಸೇರಿದ್ದು ತಮ್ಮದೇ ಸಮುದಾಯದವರಿದ್ದ ಮುಂಬೈಗೆ. ಅಲ್ಲಿ ದುಡಿದು ಲಿಂಗ ಪರಿವರ್ತನೆ ಶಸ್ತ್ರಚಿಕಿತ್ಸೆ ಬಳಿಕ ಬೆಂಗಳೂರಿಗೆ ಹಿಂತಿರುಗಿದಾಗ ಕುಟುಂಬದರಿಂದ ಮತ್ತೆ ತಿರಸ್ಕಾರ.

ಮಗನ ಕೊರಗಿನಲ್ಲೇ ಅಪ್ಪ ಕೊನೆಯುಸಿರೆಳೆದ ಬಳಿಕ ಕುಟುಂಬಕ್ಕೆ ಹಿಂತಿರುಗಿದಾಗ ಮತ್ತೆ ಬದುಕಿನ ತಿರುವು ಕಂಡಿದ್ದು ವ್ಯಕ್ತಿಯೊಬ್ಬರನ್ನು ಪ್ರೀತಿಸಿದಾಗ. ಸಂಗಾತಿ ಮತ್ತು ಅವರ ಕುಟುಂಬದವರ ಮರ್ಯಾದೆಗೆ ಅಂಜಿ, ಒಲಿದ ಪ್ರೀತಿ ಉಳಿಸಿಕೊಳ್ಳಲು ಮೋನಿಷಾ ಸಾಗಿದ್ದು ಸ್ವಾಭಿಮಾನದ ದುಡಿಮೆಯತ್ತ.

ಉದ್ಯೋಗಕ್ಕಾಗಿ ಜಿಲ್ಲಾಧಿಕಾರಿ ಕಚೇರಿಯಿಂದ ವಿವಿಧೆಡೆ ಅಲೆದಾಟ. ಅಂದಿನ ಜಿಲ್ಲಾಧಿಕಾರಿ ಶಂಕರ್ ಅವರ ಸಹಾಯದಿಂದ ಕೆನರಾ ಬ್ಯಾಂಕಿನಲ್ಲಿ ಸಾಲ ಪಡೆದ ಮೋನಿಷಾ, ತಾವು ಹುಟ್ಟಿಬೆಳೆದ ಇಂದಿರಾನಗರದ ಸಮೀಪದಲ್ಲಿನ ಕೊಳೆಗೇರಿಯಲ್ಲಿ ಬಟ್ಟೆ ವ್ಯಾಪಾರ ಶುರು ಮಾಡಿದರು. ಜತೆಗೆ ಚೀಟಿ ವ್ಯವಹಾರ ನಡೆಸುತ್ತಲೇ ಕೊಳೆಗೇರಿ ಜನರ ಪ್ರೀತಿ ಗಳಿಸಿದ ಮೋನಿಷಾ ಅಲ್ಲಿನ ನಾಯಕಿಯಾಗಿ ರೂಪುಗೊಂಡರು. ಕೊಳೆಗೇರಿ ಜನರ ಅಭಿವೃದ್ಧಿಗಾಗಿ ಹೋರಾಡುತ್ತಿದ್ದ ಮೋನಿಷಾ ಕಾಂಗ್ರೆಸ್ ಮುಖಂಡ ರಮೇಶ್ ಅವರ ಪ್ರೋತ್ಸಾಹದಿಂದ ಇಂದಿರಾ ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆಯಾಗಿ ನೇಮಕಗೊಂಡರು.

ಹೊಸ ಬೆಳಕು

ರಾಜಕೀಯದ ನಂಟಿನ ಜೊತೆಗೆ ಮತ್ತೆ ಉದ್ಯೋಗಕ್ಕಾಗಿ ಅರ್ಜಿ ಹಾಕಿದರೂ ಎಲ್ಲೆಡೆಯೂ ಗೊಂದಲಕ್ಕೆ ಕಾರಣವಾಗಿದ್ದು 'ರಾಮು' ಎನ್ನುವ ಹಿಂದಿನ ಹೆಸರು.

ಲಿಂಗ ಪರಿವರ್ತನೆಯಾಗಿದ್ದರೂ ಶೈಕ್ಷಣಿಕ ದಾಖಲಾತಿಗಳಲ್ಲಿ 'ರಾಮು' ಆಗಿದ್ದ ಮೋನಿಷಾ, ದಾಖಲಾತಿಗಳನ್ನು ಸರಿಪಡಿಸಿಕೊಂಡು ವಿಧಾನ ಪರಿಷತ್‌ನ ಸಚಿವಾಲಯದಲ್ಲಿ 'ಡಿ'ಗ್ರೂಪ್ ಹುದ್ದೆಗೆ ಹಾಕಿದ ಅರ್ಜಿಯು ಫಲ ನೀಡಲಿಲ್ಲ. ಅರ್ಹತೆ ಇದ್ದರೂ ಸಂದರ್ಶನಕ್ಕೆ ಕರೆ ಬಾರದಿದ್ದಾಗ ಹೈಕೋರ್ಟ್ ಮುಂದೆ ಕಣ್ಣೀರು ಹಾಕುತ್ತಾ ನಿಂತಿದ್ದ ಅವರಿಗೆ ಬಂದದ್ದು ಅದೇ ಕೋರ್ಟಿನ 'ಡಿ'ಗ್ರೂಪ್ ಮಹಿಳಾ ನೌಕರರೊಬ್ಬರು ನೆರವು ನೀಡಿದರು. ವಕೀಲರೊಬ್ಬರ ಪರಿಚಯದಿಂದ ಕಾನೂನಾತ್ಮಕವಾಗಿ ತಮ್ಮ ಹಕ್ಕು ಪ್ರತಿಪಾದಿಸಬೇಕೆಂಬ ಅರಿವು ಮೂಡಿದ್ದೇ ತಡ, ಲೈಂಗಿಕ ಅಲ್ಪಸಂಖ್ಯಾತರಿಗೂ ಸರ್ಕಾರಿ ನೌಕರಿಯಲ್ಲಿ ಮೀಸಲು ನೀಡಿ ಪರಿಗಣಿಸಬೇಕು ಎಂದು 2014ರಲ್ಲಿ ಸುಪ್ರೀಂ ಕೋರ್ಟ್ ಆದೇಶ ನೀಡಿದ್ದು ಬಂತು. ಅದೇ ಸಮಯಕ್ಕೆ ವಿಧಾನಸಭೆಯಲ್ಲಿ ನಟಿ ತಾರಾ ಅನೂರಾಧಾ ಅವರು ಲೈಂಗಿಕ ಅಲ್ಪಸಂಖ್ಯಾತರಿಗೆ ಉದ್ಯೋಗ ನೀಡಬೇಕೆಂಬ ವಾದವೂ ಮೋನಿಷಾ ಅವರಿಗೆ ಬೆಂಬಲ ನೀಡಿತು. ವಕೀಲರಾದ ಎಚ್.ಆರ್. ಅನಿತಾ ಅವರ ನೆರವಿನಿಂದ ಕಾನೂನಿನಲ್ಲಿ ಜಯ ಪಡೆದ ಮೋನಿಷಾ ಅವರಿಗೆ ನೌಕರಿ ಮತ್ತೆ ಗಗನಕುಸುಮವಾಗಿತ್ತು. ಕೆಎಟಿ ನೀಡಿದ್ದ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದಾಗ ಅಂದಿನ ನ್ಯಾಯಮೂರ್ತಿ ಎಲ್. ನಾರಾಯಣ ಸ್ವಾಮಿ ಅವರ ಆದೇಶವೂ ಮೋನಿಷಾ ಅವರಿಗೆ ಸರ್ಕಾರಿ ನೌಕರಿ ದೊರೆಯುವಲ್ಲಿ ಮಹತ್ವ ಪಾತ್ರ ವಹಿಸಿತು.

ಹೈಕೋರ್ಟ್ ಆದೇಶಕ್ಕೆ ಮಣಿದ ರಾಜ್ಯ ಸರ್ಕಾರ ಮೋನಿಷಾ ಅವರಿಗೆ ಗುತ್ತಿಗೆ ಆಧಾರದಲ್ಲಿ ನೌಕರಿ ನೀಡಿತು. ಲೈಂಗಿಕ ಅಲ್ಪಸಂಖ್ಯಾತರ ಬಗ್ಗೆ ಅದುವರೆಗೆ ಇದ್ದ ಪೂರ್ವಗ್ರಹಗಳನ್ನು ತಮ್ಮ ನಡತೆ ಮತ್ತು ಕೆಲಸದ ಮೂಲಕ ಕಿತ್ತೊಗೆದ ಮೋನಿಷಾ, ಕಚೇರಿಯಲ್ಲಿ ಎಲ್ಲರ ಮೆಚ್ಚುಗೆ ಗಳಿಸುವಲ್ಲಿ ಯಶಸ್ವಿಯಾದರು. ಆದರೂ, ಗುತ್ತಿಗೆ ನೌಕರಿ ಎಂಬ ಚಿಂತೆ ಅವರನ್ನು ಬಿಟ್ಟಿರಲಿಲ್ಲ. ಬಸವರಾಜ ಹೊರಟ್ಟಿ ಅವರು ವಿಧಾನಪರಿಷತ್‌ನ ಹಂಗಾಮಿ ಸಭಾಪತಿ ಆಗಿದ್ದ ಸಮಯದಲ್ಲಿ ನೌಕರಿಯನ್ನು ಕಾಯಂಗೊಳಿಸಿಕೊಂಡ ಮೋನಿಷಾ ತಮ್ಮಂತಿರುವ ಇತರ ಲೈಂಗಿಕ ಅಲ್ಪಸಂಖ್ಯಾತರಿಗೆ ಮಾದರಿಯಾಗಿದ್ದಾರೆ.

ಭಿಕ್ಷಾಟನೆ, ಸೆಕ್ಸ್ ವರ್ಕ್ ಇವುಗಳನ್ನು ಬಿಟ್ಟು ಉತ್ತಮ ಬದುಕು ರೂಪಿಸಿಕೊಳ್ಳಲು ಪ್ರಯತ್ನಬಿಟ್ಟಿದ್ದೇವೆಯೇ ಎಂಬುದು ಮುಖ್ಯ. ಆ ನಿಟ್ಟಿನಲ್ಲಿ ಕಾರ್ಯತತ್ಪರರಾದರೆ ಯಶಸ್ಸು ಕಷ್ಟವೇನಲ್ಲ ಎಂಬುದು ಮೋನಿಷಾ ಅವರ ಅನುಭವದ ನುಡಿ. ಇಷ್ಟಪಟ್ಟಿದ್ದ ಪ್ರೀತಿ ಕೈಹಿಡಿಯಲಿಲ್ಲವಾದರೂ ವಿದ್ಯೆ ಕೈಹಿಡಿಯಿತು ಎಂಬ ನಂಬಿಕೆ ಅವರದ್ದು. 'ಡಾ.ಬಿ.ಆರ್. ಅಂಬೇಡ್ಕರ್, ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಎಲ್. ನಾರಾಯಣ ಸ್ವಾಮಿ ಹಾಗೂ ತಮ್ಮ ಬದುಕಿಗೆ ನೆರವಿಗೆ ನಿಂತ ಧನಲಕ್ಷ್ಮೀ ಅವರು ತಮ್ಮ ಪಾಲಿನ ನಡೆದಾಡುವ ದೇವರು' ಎನ್ನುತ್ತಾರೆ ಮೋನಿಷಾ.

ಇತ್ತೀಚೆಗಷ್ಟೇ ಪದವಿ ಕೋರ್ಸ್‌ಗೆ ಸೇರಿರುವ ಅವರು ಉನ್ನತ ಪದವಿ ಗಳಿಸಿ ವೃತ್ತಿಯಲ್ಲಿ ಬಡ್ತಿ ಪಡೆಯುವ ಹುಮ್ಮಸ್ಸಿನಲ್ಲಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ (ಪಶ್ಚಿಮ) ವಿಭಾಗ,
ಜಂಟಿ ಆಯುಕ್ತರು (ಪಶ್ಚಿಮ) ಕಚೇರಿ ಆವರಣ,
2ನೇ ಮಹಡಿ, ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020.

ಸಂಖ್ಯೆ: ಕಾಪಾಅ(ಯೋ–ಪ)/ಪಿಆರ್/148/2021–22 ದಿನಾಂಕ: 04.01.2022

ತಿದ್ದುಪಡಿ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಉಲ್ಲೇಖ: 1) ಕಾಪಾಅ(ಯೋ–ಪ)/ಟೆಂಡರ್/18/2021–22, ದಿನಾಂಕ: 17.12.2021

ಪ್ರಕಟಣೆ ಸಂಖ್ಯೆ: **ಕಾಪಾಅ(ಯೋ–ಪ)/ಟೆಂಡರ್/18/2021–22 ದಿನಾಂಕ 17.12.2021**ರಂತೆ ಕಾಮಗಾರಿ **ವಾರ್ಡ್ ಸಂಖ್ಯೆ–101, ಕಾಮಾಕ್ಷಿಪಾಳ್ಯದಲ್ಲಿ ಸರ್ ಎಂ ವಿಶ್ವೇಶ್ವರಯ್ಯ ಪಾರ್ಕ್ (ಆಲದಮರ ಪಾರ್ಕ್) ನಲ್ಲಿ ಬಾಕಿ ಉಳಿಕೆ ಮತ್ತು ಇತರೆ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಲಾಗಿತ್ತು.** ತಾಂತ್ರಿಕ ಕಾರಣಗಳಿಂದಾಗಿ ಸದರಿ ಟೆಂಡರನ್ನು ಈ ಕೆಳಕಂಡಂತೆ ಮುಂದೂಡಲಾಗಿದೆ.

ಟೆಂಡರ್ ವೇಳಾಪಟ್ಟಿಯಲ್ಲಿನ ಬದಲಾವಣೆಗಳು ಈ ಕೆಳಕಂಡಂತಿವೆ: (1) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **12.01.2022**ರ ಸಂಜೆ **4:00** ಗಂಟೆಯವರೆಗೆ. (2) ಬಿಡ್‌ಗಳನ್ನು ತೆರೆಯುವ ದಿನಾಂಕ: **13.01.2022**ರ ಸಂಜೆ **4:30** ಗಂಟೆಗೆ ಸಾಧ್ಯವಾದಲ್ಲಿ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಉಳಿದಂತೆ ಮೂಲ ಟೆಂಡರ್ ಪ್ರಕಟಣೆಯಲ್ಲಿನ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ (ಪಶ್ಚಿಮ) ವಿಭಾಗ

ಕೋವಿಡ್–19 : ಗಾಬರಿಪಡುವ ಅಗತ್ಯವಿಲ್ಲ... ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಇ–ಪ್ರೊ) ಸಂಖ್ಯೆ: 32/2021–22
ದಿನಾಂಕ: 30.12.2021

[illegible]

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಕರ್ನಾಟಕ ಸರ್ಕಾರ

[illegible]

ಕಾರ್ಯನಿರ್ವಾಹಕ ಇಂಜಿನಿಯರ್, ... ಚಿಕ್ಕಬಳ್ಳಾಪುರ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ದೂರವಾಣಿ ಸಂಖ್ಯೆ: 080 22282507 website-https://ksfc.karnataka.gov.in

ಟೆಂಡರ್ ಪ್ರಕಟಣೆ

[illegible]

₹ 30 ಕೋಟಿ ಮೌಲ್ಯದ ಸ್ವತ್ತನ್ನು ಸ್ವಾಧೀನಕ್ಕೆ ಪಡೆದ ಬಿಡಿಎ

32 ಗುಂಟೆ ಜಾಗದ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ರಾಜಮಹಲ್ ವಿಲಾಸದ (ಆರ್‌ಎಂವಿ) ಎರಡನೇ ಹಂತದಲ್ಲಿ ಹೊಂದಿರುವ ಜಾಗದಲ್ಲಿ ಅಕ್ರಮವಾಗಿ ನಿರ್ಮಾಣ ಮಾಡಲಾದ ಶೆಡ್‌ಗಳನ್ನು ತೆರವುಗೊಳಿಸಿ ಜಾಗವನ್ನು ಅಧಿಕಾರಿಗಳು ಮತ್ತೆ ಸ್ವಾಧೀನಕ್ಕೆ ಪಡೆದಿದ್ದಾರೆ. ಈ ಜಾಗದ ಮೌಲ್ಯ ₹ 30 ಕೋಟಿ ಎಂದು ಬಿಡಿಎ ಅಂದಾಜು ಮಾಡಿದೆ.

'ನಾಗಶೆಟ್ಟಿಹಳ್ಳಿಯ ಆರ್‌ಎಂವಿ ಎರಡನೇ ಹಂತದಲ್ಲಿ ಸರ್ವೆ ನಂಬರ್ 71/3 ರಲ್ಲಿ 32 ಗುಂಟೆ ಜಾಗವನ್ನು ಬಿಡಿಎ ಹೊಂದಿದೆ. ಎನ್‌ಟಿಐ ಸೊಸೈಟಿಯವರು ಈ ಜಾಗದಲ್ಲಿ ಅನಧಿಕೃತವಾಗಿ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಿದ್ದರು. ಇದನ್ನು ತೆರವುಗೊಳಿಸುವಂತೆ ಹಲವು ಬಾರಿ ಸೂಚನೆ ನೀಡಿದ್ದರೂ ಅವರು ಸ್ಪಂದಿಸಿರಲಿಲ್ಲ.'

ಆರ್‌ಎಂವಿ ಎರಡನೇ ಹಂತದಲ್ಲಿ ನಿರ್ಮಿಸಲಾಗಿದ್ದ ಶೆಡ್‌ಗಳನ್ನು ಬಿಡಿಎ ಅಧಿಕಾರಿಗಳು ತೆರವುಗೊಳಿಸಿದರು

'ಕಾರ್ಯಪಾಲಕ ಎಂಜಿನಿಯರ್ ಕುಮಾರ್, ಪೊಲೀಸ್ ಅಧಿಕಾರಿಗಳಾದ ಭಾಸ್ಕರ್ ಮತ್ತು ರವಿಕುಮಾರ್ ನೇತೃತ್ವದಲ್ಲಿ ಪ್ರಾಧಿಕಾರದ ಸಿಬ್ಬಂದಿ ಶೆಡ್‌ಗಳನ್ನು ಬುಧವಾರ ಬೆಳಿಗ್ಗೆ ನೆಲಸಮ ಮಾಡಿ ಜಾಗವನ್ನು ವಶಪಡಿಸಿಕೊಂಡರು. ಸ್ವಾಧೀನಪಡಿಸಿಕೊಂಡ ಜಾಗದಲ್ಲಿ ಆವರಣ ಗೋಡೆ ನಿರ್ಮಿಸಿ, ಸೂಚನಾ ಫಲಕವನ್ನು ಅಳವಡಿಸಲಾಗುತ್ತದೆ' ಎಂದು ಬಿಡಿಎ ಪ್ರಕಟಣೆಯಲ್ಲಿ ತಿಳಿಸಿದೆ.

ಮಜೂರಿ ಹೆಚ್ಚಳ: ಮೂಡದ ಒಮ್ಮತ

15 ದಿನಗಳಿಂದ 2,500 ಮಗ್ಗಗಳು ಸ್ತಬ್ಧ

• ವೆಂಕಟೇಶ ಜಿ.ಎಚ್

ನೇಕಾರಿಕೆ ಸ್ತಬ್ಧಗೊಂಡಿರುವ ಕಾರಣ ರಬಕವಿ ಪಟ್ಟಣದ ಮಗ್ಗವೊಂದರಲ್ಲಿ ನೂಲಿನ ಬಂಡಲ್‌ಗಳನ್ನು ರಾಶಿ ಹಾಕಲಾಗಿದೆ ಪ್ರಜಾವಾಣಿ ಚಿತ್ರ/ ವಿಶ್ವಜ ಕಾಡದೇವರ

ಬಾಗಲಕೋಟೆ: ಮಜೂರಿ (ಕೂಲಿ) ಮೊತ್ತ ಹೆಚ್ಚಳಕ್ಕೆ ಆಗ್ರಹಿಸಿ ನೇಕಾರರು ಮುಷ್ಕರ ಕೈಗೊಂಡಿದ್ದಾರೆ. ಹೀಗಾಗಿ ಜಿಲ್ಲೆಯ ನೇಕಾರಿಕೆ ಪಟ್ಟಣಗಳಾದ ರಬಕವಿ, ರಾಂಪುರ ಹಾಗೂ ತೇರದಾಳದಲ್ಲಿನ 2,500ಕ್ಕೂ ಹೆಚ್ಚು ವಿದ್ಯುತ್ ಮಗ್ಗಗಳು ಡಿ.22ರಿಂದ ಸ್ತಬ್ಧಗೊಂಡಿವೆ.

ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳ ಬೆಲೆ ಹೆಚ್ಚಿದೆ. ನಿತ್ಯದ ಬದುಕು ಕಷ್ಟವಾಗಿದೆ. ಈಗಿರುವ ಕೂಲಿ ದರ ಶೇ 30ರಷ್ಟು ಹೆಚ್ಚಳಗೊಳಿಸಿ ಎಂಬುದು ಮುಷ್ಕರ ನಿರತರ ಆಗ್ರಹ. 'ಕೋವಿಡ್‌ನಿಂದ ವ್ಯಾಪಾರ ಕಡಿಮೆ ಆಗಿದೆ. ಕಚ್ಚಾ ವಸ್ತುಗಳ ಬೆಲೆ ಏರಿಕೆಯಾಗಿ ನಾವೂ ಸಂಕಷ್ಟದಲ್ಲಿದ್ದೇವೆ. ಶೇ 5ರಷ್ಟು ಮಾತ್ರ ಹೆಚ್ಚಿಸುತ್ತೇವೆ' ಎನ್ನುವುದು ಮಗ್ಗಗಳ ಮಾಲೀಕರ ವಾದ. ಇದು ಸಮಸ್ಯೆಯನ್ನು ಕಗ್ಗಂಟಾಗಿಸಿದೆ.

'ಮಗ್ಗಗಳಲ್ಲಿ ಇಡೀ ದಿನ ಕೆಲಸ ಮಾಡಿದರೂ ಈಗ ₹200 ಕೂಲಿ ಸಿಗುತ್ತದೆ. ಹೋಟೆಲ್‌ಗಳಲ್ಲಿ ಕ್ಲೀನರ್‌ಗೆ ದಿನಕ್ಕೆ ₹300 ಕೂಲಿ ಕೊಟ್ಟು ಊಟ, ತಿಂಡಿ ಕೊಡುತ್ತಾರೆ' ಎಂದು ಜಮಖಂಡಿ ತಾಲ್ಲೂಕು ವಿದ್ಯುತ್ ಮಗ್ಗಗಳ ನೇಕಾರರ ಸಂಘದ ಅಧ್ಯಕ್ಷ ಸಂಗಪ್ಪ ಕುಂದಗೋಳ ಆಕ್ರೋಶ ವ್ಯಕ್ತಪಡಿಸುತ್ತಾರೆ.

'ಕೂಲಿ ನಿಗದಿಗೆ ಸಂಬಂಧಿಸಿದಂತೆ ನೇಕಾರರು ಹಾಗೂ ಮಗ್ಗಗಳ ಮಾಲೀಕರ ನಡುವೆ ಪ್ರತಿ ಮೂರು ವರ್ಷಕ್ಕೊಮ್ಮೆ ಒಪ್ಪಂದ ಆಗುತ್ತದೆ. ಕಳೆದ ಬಾರಿಯ ಒಪ್ಪಂದ 2020ರ ಮೇ 21ಕ್ಕೆ ಮುಗಿದಿದೆ. ಕೋವಿಡ್ ಕಾರಣ ನಾವೇ ಕೂಲಿ ಹೆಚ್ಚಳದ ಪ್ರಸ್ತಾಪ ಮಾಡಿರಲಿಲ್ಲ. ಈಗ ನಾವು ಬದುಕುವುದೇ ಕಠಿಣವಾಗಿರುವುದರಿಂದ ಬೇಡಿಕೆ ಇಟ್ಟಿದ್ದೇವೆ' ಎನ್ನುತ್ತಾರೆ.

'ಕೋವಿಡ್ ಸಂಕಷ್ಟದ ನಂತರ ನೇಯ್ಗೆಗೆ ಬಳಸುವ ನೂಲಿನ ದರ ಪ್ರತಿ ಬೇಲ್‌ಗೆ (100 ಕೆ.ಜಿ) ₹2ರಿಂದ 4 ಸಾವಿರ ಹೆಚ್ಚಳಗೊಂಡಿದೆ. ಬಣ್ಣ ಪ್ರತಿ ಕೆ.ಜಿಗೆ ₹2,000 ಹೆಚ್ಚಿದೆ. ಈಗ ಜನರ ಬಳಿ ಹಣವಿಲ್ಲ. ಇದ್ದರೂ ಖರ್ಚು ಮಾಡಲು ಹಿಂದೇಟು ಹಾಕುತ್ತಾರೆ. ಇದರಿಂದ ಸೀರೆ ವ್ಯಾಪಾರ ಶೇ 50ರಷ್ಟು ಕುಸಿದಿದೆ. ಇಂತಹ ಸಂಕಷ್ಟದಲ್ಲಿ ಶೇ 30ರಷ್ಟು ಮಜೂರಿ ಹೆಚ್ಚಿಸಲು ಕೇಳಿದರೆ ಹೇಗೆ' ಎಂದು ವಿದ್ಯುತ್ ಮಗ್ಗಗಳ ಮಾಲೀಕರ ಸಂಘದ ಅಧ್ಯಕ್ಷ ನೀಲಕಂಠ ಮುತ್ತೂರ ಪ್ರಶ್ನಿಸುತ್ತಾರೆ.

'ಮಗ್ಗಗಳ ಆಶ್ರಯಿಸಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ 4,500 ಮಂದಿ ಕೆಲಸ ಮಾಡುತ್ತಿದ್ದೇವೆ. ಹಲವು ಬಾರಿ ಸಂಧಾನ ಸಭೆ ನಡೆದರೂ ಒಮ್ಮತ ಮೂಡಿಲ್ಲ. ಈ ನೀ ಕೊಡೆ, ನಾ ಬಿಡೆ ಆಟದಲ್ಲಿ 15 ದಿನಗಳಿಂದ ಕೆಲಸವಿಲ್ಲದೇ ದಿನದೂಡುತ್ತಿದ್ದೇವೆ' ಎಂದು ನೇಕಾರ, ತೇರದಾಳದ ಹಣಮಪ್ಪ ಸೂರೇಬಾನ ಅಳಲು ತೋಡಿಕೊಳ್ಳುತ್ತಾರೆ.

> **ಮಗ್ಗಗಳಲ್ಲಿ ಕೆಲಸ ಮಾಡುವ ನಮಗೆ ಸಿಗುವ ಕೂಲಿ, ಹೋಟೆಲ್‌ಗಳಲ್ಲಿ ಕ್ಲೀನರ್‌ಗೆ ಸಿಗುವ ಕೂಲಿಗಿಂತ ಕಡಿಮೆ. ಹೀಗಾಗಿ ಮಜೂರಿ ಹೆಚ್ಚಿಸಲೇಬೇಕು**
> **ಸಂಗಪ್ಪ ಕುಂದಗೋಳ,** ಜಮಖಂಡಿ, ವಿದ್ಯುತ್ ಮಗ್ಗಗಳ ನೇಕಾರರ ಸಂಘದ ಅಧ್ಯಕ್ಷ

> **ಮಜೂರಿ ಶೇ 30ರಷ್ಟು ಹೆಚ್ಚಿಸಬೇಕೆಂದರೆ ಹೇಗೆ? ಶೇ 5ರಷ್ಟು ಹೆಚ್ಚಿಸುತ್ತೇವೆ. ನಾವೂ ಬದುಕುತ್ತೇವೆ. ಅವರೂ ಬದುಕಲಿ**
> **ನೀಲಕಂಠ ಮುತ್ತೂರ**
> ವಿದ್ಯುತ್ ಮಗ್ಗಗಳ ಮಾಲೀಕರ ಸಂಘದ ಅಧ್ಯಕ್ಷ

ನಗರದಲ್ಲಿ ಇಂದು

ಮಹಿಳಾ ಅಧ್ಯಯನ ಕೇಂದ್ರದ ಉದ್ಘಾಟನೆ ಮತ್ತು ಸಾವಿತ್ರಿಬಾಯಿ ಫುಲೆ ಅವರ ಜನ್ಮದಿನಾಚರಣೆ: ಉದ್ಘಾಟನೆ: ಸಬಿಹಾ ಭೂಮಿಗೌಡ, ಅಧ್ಯಕ್ಷತೆ: ಎ.ಎಚ್. ರಾಮರಾವ್, ಮುಖ್ಯ ಅತಿಥಿಗಳು: ಪ್ರೊ. ಎಸ್.ಎನ್. ನಾಗರಾಜರೆಡ್ಡಿ, ಸದಾನಂದ ಪಿ. ಮಯ್ಯ, ಆಯೋಜನೆ ಹಾಗೂ ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

ಪ್ರೊ.ಸಬಿಹಾ

ಪ್ರೊ.ಜಿ.ಶರಣಪ್ಪ ಅವರ ಪುಸ್ತಕಗಳ ಲೋಕಾರ್ಪಣೆ: ಎಚ್.ಡಿ. ದೇವೇಗೌಡ, ಪುಸ್ತಕಗಳ ಪರಿಚಯ: ಪ್ರೊ.ಎಸ್. ಜಿ. ಸಿದ್ಧರಾಮಯ್ಯ, ರಾಜೇಂದ್ರ ಚೆನ್ನಿ, ಪ್ರೊ.ಎಚ್.ಎ. ಭಿಕ್ಷಾವರ್ತಿ ಮಠ, ಮುಖ್ಯ ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಸಿ.ಎಸ್. ದ್ವಾರಕನಾಥ್, ಡಾ.ಕೆ.ಎಸ್. ದ್ವಾರಕನಾಥ್, ಅಧ್ಯಕ್ಷತೆ: ಎಚ್.ಸಿ. ನೀರಾವರಿ, ಆಯೋಜನೆ: ಸೃಷ್ಟಿ ಪಬ್ಲಿಕೇಷನ್ಸ್, ಸ್ಥಳ: ಡಿ.ಚೆನ್ನಯ್ಯ ಸಭಾಂಗಣ, ಜಯದೇವ ಹೃದ್ರೋಗ ಆಸ್ಪತ್ರೆ, ಜಯನಗರ 9ನೇ ಬ್ಲಾಕ್, ಬೆಳಿಗ್ಗೆ 11

ವಿ.ಎಸ್. ಕೃಷ್ಣ ಅಯ್ಯರ್

ಶತಮಾನೋತ್ಸವ: ಉದ್ಘಾಟನೆ: ಬಿ.ಎಲ್. ಶಂಕರ್, ಮುಖ್ಯ ಅತಿಥಿಗಳು: ಎಂ.ಸಿ. ನಾಡಗೌಡ, ಮಹೇಶ್ ಜೋಶಿ, ಬಸವರಾಜು, ಜಗದೀಶ್ ರೆಡ್ಡಿ, ಪದ್ಮಾವತಿ, ಕೆ.ಎಸ್. ನಾಗರಾಜ್, ಕೆ.ವಿ. ನಾಗರಾಜಮೂರ್ತಿ, ನರೇಂದ್ರ, ಆಯೋಜನೆ: ಗಣೇಶ ಮಂದಿರ ಹಿರಿಯ ನಾಗರೀಕರ ವೇದಿಕೆ, ಸ್ಥಳ: ಸುಚಿತ್ರ ಫಿಲ್ಮ್ ಸೊಸೈಟಿ ಆವರಣ, ಬನಶಂಕರಿ 2ನೇ ಹಂತ, ಬೆಳಿಗ್ಗೆ 11.30


ಬಿ. ಎಲ್. ಶಂಕರ್

ಸಂಸ್ಥಾಪನಾ ದಿನ: 'ರೇವಾ ಜೀವಮಾನ ಸಾಧನೆ ಪ್ರಶಸ್ತಿ': ಚಂದ್ರಶೇಖರ ಕಂಬಾರ, ಟೆಸ್ಸಿ ಥಾಮಸ್, ವಿ. ರವಿಚಂದ್ರನ್, ಅಧ್ಯಕ್ಷತೆ: ಪಿ. ಶ್ಯಾಮ ರಾಜು, ಆಯೋಜನೆ ಹಾಗೂ ಸ್ಥಳ: ಕುವೆಂಪು ಸಭಾಂಗಣ, ರೇವಾ ವಿಶ್ವವಿದ್ಯಾಲಯ, ರುಕ್ಮಿಣಿ ನಾಲೆಜ್ ಪಾರ್ಕ್, ಯಲಹಂಕ, ಸಂಜೆ 5


ಚಂದ್ರಶೇಖರ ಕಂಬಾರ

ವಾರ್ಡ್ ಹಂತದಲ್ಲೇ ಟ್ರಯಾಜ್: ಬಿಬಿಎಂಪಿ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ದೃಢಪಟ್ಟವರಿಗೆ ಯಾವ ತರಹದ ಚಿಕಿತ್ಸೆಯ ಆಗತ್ಯವಿದೆ, ಅವರನ್ನು ಆಸ್ಪತ್ರೆಗೆ ದಾಖಲಿಸುವ ಅಗತ್ಯ ಇದೆಯೇ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ವೈದ್ಯಕೀಯ ತಪಾಸಣೆ (ಟ್ರಯಾಜ್) ನಡೆಸುವುದಕ್ಕೆ ವಾರ್ಡ್ ಹಂತದಲ್ಲೇ ವ್ಯವಸ್ಥೆ ಕಲ್ಪಿಸಲು ಬಿಬಿಎಂಪಿ ಸಿದ್ಧತೆ ನಡೆಸಿದೆ.

'ಈಗಾಗಲೇ ಚಾಲ್ತಿಯಲ್ಲಿರುವ ಸಂಚಾರ ಟ್ರಯಾಜಿಂಗ್ ವ್ಯವಸ್ಥೆ ಮುಂದುವರಿಯಲಿದೆ. ಅದರ ಜೊತೆಗೆ ಸೋಂಕಿತರನ್ನು ಆಸ್ಪತ್ರೆಗೆ ದಾಖಲಿಸುವ ಅಗತ್ಯದ ಬಗ್ಗೆ ತಿಳಿದುಕೊಳ್ಳಲು ಆಯಾ ವಾರ್ಡ್‌ನಲ್ಲೇ ವೈದ್ಯಕೀಯ ತಪಾಸಣೆ ನಡೆಸಲು ಕ್ರಮಕೈಗೊಳ್ಳಲಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ಸೋಂಕಿತರಲ್ಲಿ ಶೇ 95ರಷ್ಟು ಮಂದಿ ಆಸ್ಪತ್ರೆ ಸೇರುವ ಪ್ರಮೇಯವೇ ಎದುರಾಗದು. ಅವರು ಮನೆಯಲ್ಲೇ ಚಿಕಿತ್ಸೆ ಪಡೆಯಬಹುದು. ಎರಡನೇ ಅಲೆಯ ಸಂದರ್ಭದಲ್ಲೂ ವಾರ್ಡ್ ಮಟ್ಟದಲ್ಲಿ ವೈದ್ಯಕೀಯ ಟ್ರಯಾಜಿಂಗ್ ವ್ಯವಸ್ಥೆ ಪ್ರಾರಂಭಿಸಿದ್ದೆವು. ಈ ಸಲ ಅದರ ಪ್ರಯೋಜನ ಪೂರ್ಣಪ್ರಮಾಣದಲ್ಲಿ ಸಿಗಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

'ಕೋವಿಡ್ ಪ್ರಕರಣಗಳು ದಿನದಿಂದ ದಿನಕ್ಕೆ ಭಾರಿ ಪ್ರಮಾಣದಲ್ಲಿ ಹೆಚ್ಚುತ್ತಿವೆ. ದಿನಕ್ಕೆ ಒಂದು ಸಾವಿರದಷ್ಟಿದ್ದ ಪ್ರಕರಣಗಳ ಸಂಖ್ಯೆ ಮರುದಿನ 2 ಸಾವಿರಕ್ಕೆ, ಅದರ ಮೂರನೇ ದಿನ ಮೂರು ಸಾವಿರಕ್ಕೆ ಹೆಚ್ಚಳ ಆಗುತ್ತಿದೆ. ಇದನ್ನು ನಿಯಂತ್ರಿಸದಿದ್ದರೆ ಜನರ ಜೀವನ ಅಸ್ತವ್ಯಸ್ತ ಆಗಲಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಈಗಲೇ ನಿರ್ಬಂಧ ವಿಧಿಸಿದರೆ ಸೋಂಕು ಹರಡುವಿಕೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬಹುದು' ಎಂದು ತಿಳಿಸಿದರು.

'ಜನ ಪರಸ್ಪರ ಬೆರೆತಾಗ ಮಾತ್ರ ಸೋಂಕು ಹರಡುತ್ತದೆ. ಹಾಗಾಗಿ ಹೆಚ್ಚು ಜನ ಸೇರುವ ಕಡೆ ಹೋಗುವುದನ್ನು ತಪ್ಪಿಸಬೇಕಿದೆ. ಈ ಕಾರಣದಿಂದಾಗಿ ಸಭೆ ಸಮಾರಂಭಗಳಲ್ಲಿ ಭಾಗವಹಿಸುವವರ ಸಂಖ್ಯೆಗೆ ಮಿತಿ ನಿಗದಿಪಡಿಸಿದ್ದೇವೆ. ಕಾರ್ಯಕ್ರಮಗಳಲ್ಲಿ ಜನ ಸೇರುವುದನ್ನು ಆದಷ್ಟು ಕಡಿಮೆ ಮಾಡಬೇಕು ಎಂಬುದೇ ಇದರ ಹಿಂದಿನ ಉದ್ದೇಶ. ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸುವುದೇ ಜನರ ಪಾಲಿನ ರಕ್ಷಾ ಕವಚ. ಲಸಿಕೆ ಹಾಕಿಸಿಕೊಂಡವರಿಗೆ ಸೊಂಕು ತಗುಲಿದರೂ, ಅವರು ಗಂಭೀರ ಅನಾರೋಗ್ಯಕ್ಕೆ ಒಳಗಾಗುವ ಸ್ಥಿತಿ ಎದುರಾಗದು' ಎಂದರು. 'ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ ವ್ಯವಸ್ಥೆ ಇಲ್ಲದವರು ಕೋವಿಡ್ ಆರೈಕೆ ಕೇಂದ್ರಕ್ಕೆ ತೆರಳಬಹುದು. ಪ್ರತಿ ವಿಧಾನಸಭಾ ಕ್ಷೇತ್ರಕ್ಕೊಂದು ಇಂತಹ ಕೇಂದ್ರದ ಸ್ಥಾಪನೆಗೆ ಕ್ರಮ ಕೈಗೊಂಡಿದ್ದೇವೆ' ಎಂದರು.

'ಸೋಂಕಿನ ಸಂಖ್ಯೆ ಹೆಚ್ಚಾಗುತ್ತಿದ್ದರೂ ಸಾರ್ವಜನಿಕರು ಆತಂಕಕ್ಕೆ ಒಳಗಾಗಬೇಕಿಲ್ಲ. ಒಮೈಕ್ರಾನ್‌ನಲ್ಲಿರುವ ತೀವ್ರತೆ ಕಡಿಮೆ ಇದೆ. ಸೋಂಕಿತರು ಆಸ್ಪತ್ರೆಗೆ ಸೇರುವ ಪ್ರಮೇಯ ಕಡಿಮೆ. ದಾಖಲಾದರೂ ಐದೇ ದಿನಗಳಲ್ಲಿ ಗುಣಮುಖರಾಗಿ ಮರಳಬಹುದು' ಎಂದರು

'ಆಮ್ಲಜನಕ ಪೂರೈಕೆ, ಹಾಸಿಗೆ ಕೊರತೆ ಇಲ್ಲ'

'ನಗರದಲ್ಲಿ ಕೋವಿಡ್ ಚಿಕಿತ್ಸೆಗೆ ಹಾಸಿಗೆಗಳ ಕೊರತೆ ಇಲ್ಲ. ಖಾಸಗಿ ಆಸ್ಪತ್ರೆಯಲ್ಲಿ 300 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಸ್ಪತ್ರೆಯಲ್ಲಿರುವವರಲ್ಲಿ ಶೇ 90ರಷ್ಟು ಮಂದಿ ಸಾಮಾನ್ಯ ಹಾಸಿಗೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಮ್ಲಜನಕ ಪೂರಣ ವ್ಯವಸ್ಥೆ ಅಗತ್ಯ ಇಲ್ಲ. ಆಮ್ಲಜನಕದ ಕೊರತೆಯೂ ಇಲ್ಲ. ಈ ಬಗ್ಗೆ ಆತಂಕ ಬೇಡ' ಎಂದು ಗೌರವ್ ಗುಪ್ತ ತಿಳಿಸಿದರು.

'ಆಮ್ಲಜನಕ ಪೂರೈಕೆ/ವೆಂಟಿಲೇಟರ್ ವ್ಯವಸ್ಥೆ ಇರುವ 7 ಸಾವಿರ ಹಾಸಿಗೆಗಳು ಹಾಗೂ 12 ಸಾವಿರದಷ್ಟು ಸಾಮಾನ್ಯ ಹಾಸಿಗೆಗಳು ಕೋವಿಡ್ ಚಿಕಿತ್ಸೆಗೆ ಲಭ್ಯ ಇವೆ' ಎಂದು ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ.ತ್ರಿಲೋಕಚಂದ್ರ ತಿಳಿಸಿದರು.

ಅತಿ ಹೆಚ್ಚು ಪ್ರಕರಣ ಪತ್ತೆಯಾದ ವಾರ್ಡ್‌ಗಳು (10 ದಿನಗಳಿಂದ ಈಚೆಗೆ)

ವಾರ್ಡ್ ಸಂಖ್ಯೆ	ವಾರ್ಡ್	ನಿತ್ಯ ಪತ್ತೆಯಾಗುವ ಪ್ರಕರಣಗಳ ಸರಾಸರಿ
150	ಬೆಳ್ಳಂದೂರು	41
85	ದೊಡ್ಡ ನೆಕ್ಕುಂದಿ	17
84	ಹಗದೂರು	17
174	ಎಚ್‌ಎಸ್‌ಆರ್ ಬಡಾವಣೆ	13
149	ವರ್ತೂರು	12
151	ಕೋರಮಂಗಲ	12
58	ಹೊಸ ತಿಪ್ಪಸಂದ್ರ	11
25	ಹೊರಮಾವು	10
111	ಶಾಂತಲಾ ನಗರ	10
192	ಬೇಗೂರು	10



'ಲಸಿಕೆಯ ಎರಡೂ ಡೋಸ್ ಪಡೆದವರಿಗಷ್ಟೇ ಪ್ರವೇಶ'

'ಬಾರ್ ಮತ್ತು ರೆಸ್ಟೋರಂಟ್‌ಗಳಿಗೆ ಲಸಿಕೆಯ ಎರಡು ಡೋಸ್ ಹಾಕಿಸಿಕೊಂಡವರಿಗೆ ಮಾತ್ರ ಪ್ರವೇಶ. ಶೇ 50ರಷ್ಟು ಸಾಮರ್ಥ್ಯದಲ್ಲಿ ಮಾತ್ರ ಕಾರ್ಯಾಚರಣೆ ನಡೆಸಲು ನಿರ್ಬಂಧ ವಿಧಿಸಲಾಗಿದೆ' ಎಂದು ಗೌರವ್ ಗುಪ್ತ ತಿಳಿಸಿದರು.

'ಸಾರ್ವಜನಿಕ ವಾಹನ ಬಳಕೆಗೂ ಲಸಿಕೆಯ ಎರಡೂ ಡೋಸ್ ಪಡೆದಿರುವುದನ್ನು ಕಡ್ಡಾಯಗೊಳಿಸಬೇಕು ಎಂಬ ಷರತ್ತು ವಿಧಿಸುವಂತೆ ಬಿಬಿಎಂಪಿ ಕೋರಿತ್ತು. ಆದರೆ, ಸರ್ಕಾರ ಈ ಕುರಿತು ಇನ್ನೂ ಆದೇಶ ಹೊರಡಿಸಿಲ್ಲ' ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

ಸಿಇಟಿ: ದಾಖಲಾತಿ ಪರಿಶೀಲನೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಸಂಬಂಧ ಅರ್ಹ ಸಿಇಟಿ ರ‍್ಯಾಂಕ್ ಪಡೆದ ಅಭ್ಯರ್ಥಿಗಳಿಗೆ 8ರಂದು ನಿಗದಿಪಡಿಸಲಾಗಿದ್ದ ದಾಖಲಾತಿ ಪರಿಶೀಲನೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇದೇ 10 ಮತ್ತು 14ಕ್ಕೆ ಮುಂದೂಡಿದೆ.

8ರಂದು ನಡೆಯಬೇಕಿದ್ದ ಎಂಬಿಎ, ಎಂಸಿಎ, ಎಂಇ, ಎಂ.ಟೆಕ್ ಕೋರ್ಸ್‌ಗಳ ಪಿಜಿಸಿಇಟಿ- 2021ರ ದಾಖಲಾತಿ ಪರಿಶೀಲನೆಯನ್ನು 10ಕ್ಕೆ ಮರು ನಿಗದಿಪಡಿಸಲಾಗಿದೆ. ಜ.8ರಂದು ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕಿದ್ದ ಪಿಜಿಸಿಇಟಿ ಅಭ್ಯರ್ಥಿಗಳು, ಈಗಾಗಲೇ ಪ್ರಕಟಿಸಿರುವ ಕೇಂದ್ರಗಳಲ್ಲಿ ಹಾಜರಾಗಲು ಸೂಚಿಸಲಾಗಿದೆ.

ವೈದ್ಯಕೀಯ, ದಂತ ವೈದ್ಯಕೀಯ ಹಾಗೂ ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹ ಯು.ಜಿ ನೀಟ್ ಅಭ್ಯರ್ಥಿಗಳಿಗೆ ಇದೇ 8ಕ್ಕೆ ನಿಗದಿಯಾಗಿದ್ದ ದಾಖಲೆ ಪರಿಶೀಲನಾ ಪ್ರಕ್ರಿಯೆ 14ಕ್ಕೆ ಮುಂದೂಡಲಾಗಿದೆ. ಅಭ್ಯರ್ಥಿಗಳು ಬೆಂಗಳೂರಿನ ಪ್ರಾಧಿಕಾರದ ಕೇಂದ್ರ ಕಚೇರಿಯಲ್ಲಿ ಪರಿಶೀಲನೆಗೆ ಹಾಜರಾಗಬಹುದು ಎಂದು ಕೆಇಎ ತಿಳಿಸಿದೆ.

ಮಹದೇವಪುರ ವಲಯದಲ್ಲಿ ಸೋಂಕು ಗರಿಷ್ಠ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 10ಕ್ಕೂ ಹೆಚ್ಚು ವಾರ್ಡ್‌ಗಳಲ್ಲಿ ನಿತ್ಯ ಸರಾಸರಿ 10ಕ್ಕೂ ಅಧಿಕ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿವೆ. ಇಂತಹ ವಾರ್ಡ್‌ಗಳ ಸಂಖ್ಯೆ ಮಹದೇವಪುರ ವಲಯದಲ್ಲೇ ಹೆಚ್ಚು.

ಗರಿಷ್ಠ ಪ್ರಮಾಣದಲ್ಲಿ ಕೋವಿಡ್ ಸೋಂಕು ಪತ್ತೆಯಾಗುತ್ತಿರುವ ಅಗ್ರ 10 ವಾರ್ಡ್‌ಗಳಲ್ಲಿ ಐದು ವಾರ್ಡ್‌ಗಳು ಮಹದೇವಪುರ ವಲಯದವು. ಇಲ್ಲಿನ ಬೆಳ್ಳಂದೂರು ವಾರ್ಡ್‌ನಲ್ಲಿ 10 ದಿನಗಳಿಂದೀಚೆಗೆ ನಿತ್ಯ ಸರಾಸರಿ 41ರಷ್ಟು ಪ್ರಕರಣಗಳು ಪತ್ತೆಯಾಗಿವೆ. ಕೋವಿಡ್ ಸೋಂಕಿನ ಪ್ರಮಾಣ ಹೆಚ್ಚುತ್ತಿದ್ದಂತೆಯೇ ಕೋವಿಡ್ ಪರೀಕ್ಷೆಗಳ ಪ್ರಮಾಣವನ್ನೂ ಬಿಬಿಎಂಪಿ ಗಣನೀಯವಾಗಿ ಹೆಚ್ಚಿಸಿದೆ.

'ಕಳೆದ ವಾರ ನಿತ್ಯ 40 ಸಾವಿರದಿಂದ 45 ಸಾವಿರದಷ್ಟು ಮಂದಿಗೆ ಕೋವಿಡ್ ಪರೀಕ್ಷೆ ನಡೆಸುತ್ತಿದ್ದೆವು. ಈಗ ನಿತ್ಯ 75 ಸಾವಿರಕ್ಕೂ ಅಧಿಕ ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಬುಧವಾರ 80 ಸಾವಿರಕ್ಕೂ ಅಧಿಕ ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ.ತ್ರಿಲೋಕಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

ಸೋಮವಾರ 44,202 ಮಂದಿಯನ್ನು, ಮಂಗಳವಾರ 72,121 ಮಂದಿಯನ್ನು ಹಾಗೂ ಬುಧವಾರ 78,933 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ.

ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ಪ್ರಕ್ರಿಯೆ ಆರಂಭವಾದ ಬಳಿಕ ನಿತ್ಯ ಲಸಿಕೆ ನೀಡುವಿಕೆಯ ಪ್ರಮಾಣವೂ ಹೆಚ್ಚಿದೆ. ಕಳೆದ ವಾರ ನಿತ್ಯ 15 ಸಾವಿರದಿಂದ 25 ಸಾವಿರ ಮಂದಿಗೆ ಲಸಿಕೆ ನೀಡಲಾಗುತ್ತಿತ್ತು. ನಗರದಲ್ಲಿ ಸೋಮವಾರ 55,381 ಮಂದಿಗೆ ಹಾಗೂ ಮಂಗಳವಾರ 64,518 ಮಂದಿಗೆ ಲಸಿಕೆ ನೀಡಲಾಗಿದೆ.



ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,72,050 ▲ ಒಟ್ಟು ಸೋಂಕಿತರು (12,69,432 ನಿನ್ನೆಯ ವಿವರ)

14,762 ▲	12,40,874 ▲	16,413 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	3,605	▲
ಗುಣಮುಖ	264	▲
ಸಾವು	02	▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಸಾರ್ವಜನಿಕರ ಪ್ರವೇಶ ನಿರ್ಬಂಧ

ಬೆಂಗಳೂರು: ಕೋವಿಡ್ ರೂಪಾಂತರಿ ವೈರಾಣು ಓಮೈಕ್ರಾನ್ ಹರಡುವಿಕೆ ತಡೆಗೆ ವಿಧಾನಸೌಧ, ವಿಕಾಸಸೌಧ ಮತ್ತು ಬಹುಮಹಡಿ ಕಟ್ಟಡಗಳಿಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಸರ್ಕಾರದ ಮುಖ್ಯಕಾರ್ಯದರ್ಶಿ ಪಿ.ರವಿಕುಮಾರ್ ಅವರು ಬುಧವಾರ ಈ ಸಂಬಂಧ ಸುತ್ತೋಲೆ ಹೊರಡಿಸಿದ್ದು, ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿ ಆರೋಗ್ಯ ಮತ್ತು ಆಡಳಿತದ ದೃಷ್ಟಿಯಿಂದ ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡಗಳಿಗೆ ಸಾರ್ವಜನಿಕರ ಪ್ರವೇಶ ನಿಯಂತ್ರಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಮುಖ್ಯಮಂತ್ರಿಯವರ ಸಚಿವಾಲಯ, ಸಚಿವರು ಹಾಗೂ ಸಚಿವಾಲಯ ಇಲಾಖೆಗಳಿಂದ ಪೂರ್ವ ನಿಗದಿತ ಭೇಟಿಗಷ್ಟೇ ಬರುವ ಇಲಾಖಾ ಮುಖ್ಯಸ್ಥರು, ಸಿಬ್ಬಂದಿ ಎರಡು ಡೋಸ್ ಲಸಿಕೆ ಪ್ರಮಾಣ ಪತ್ರ ಹೊಂದಿರಬೇಕು ಎಂದು ಹೇಳಿದ್ದಾರೆ.

FOR SALE

Prime Corporate Land, Mysore Road, Bengaluru.

- Land parcel measuring 1,41,207 square feet or 3.24 Acres available for sale wholly or in portions
- Located on Dodda Aladamara Main Road, Kengeri Hobli, Near Mysore Road, Kumabalagodu Industrial Area
- Corporate ownership
- Excellent frontage on Dodda Aladamara Main Road on one side
- Abutting a 40 feet road on the other side
- 2.5 kms from Challaghatta Metro Station

For further details kindly contact us between 10 am – 5 pm:
+91-9591599824
+91-9108987261

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	29.65 ಕೋಟಿ ▲	3.50 ಕೋಟಿ ▲
ಸಕ್ರಿಯ ಪ್ರಕರಣ	3.41ಕೋಟಿ ▲	2.14 ಲಕ್ಷ ▲
ಗುಣಮುಖ	25.64 ಕೋಟಿ ▲	3.43 ಕೋಟಿ
ಸಾವು	54.78 ಲಕ್ಷ ▲	4.82 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	21.94 ಲಕ್ಷ ▲	58,097 ▲
ಗುಣಮುಖ	7.47ಲಕ್ಷ ▲	15,389 ▲
ಸಾವು	7,244 ▲	534 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

5.67 ಲಕ್ಷ ▲ ಅಮೆರಿಕ
2.71 ಲಕ್ಷ ▲ ಫ್ರಾನ್ಸ್
2.18 ▲ ಬ್ರಿಟನ್

ಎಲ್ಲಿ ಹೆಚ್ಚು ಸಾವು (ಒಟ್ಟು)

1.41 ಲಕ್ಷ ಮಹಾರಾಷ್ಟ್ರ
48,637 ▲ ಕೇರಳ
36,805 ▲ ತಮಿಳುನಾಡು

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

1.52 ಕೋಟಿ ಅಮೆರಿಕ ▲
29.81 ಲಕ್ಷ ಬ್ರಿಟನ್ ▲
21.89 ಲಕ್ಷ ಸ್ಪೇನ್ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

67.30 ಮಹಾರಾಷ್ಟ್ರ ▲
52.58 ಕೇರಳ ▲
27.55 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಪೊಲೀಸ್ ಆಯುಕ್ತ ಕಮಲ್ ಪಂತ್

ವಾರಾಂತ್ಯ ಕರ್ಫ್ಯೂ:ಸೂಕ್ತ ದಾಖಲೆ ಇದ್ದರೆ ಅನುವು

ಪ್ರಜಾವಾಣಿ ವಾರ್ತೆ

ಕಮಲ್ ಪಂತ್

ಬೆಂಗಳೂರು: 'ವಾರಾಂತ್ಯ ಕರ್ಫ್ಯೂ ವೇಳೆ ಪ್ರಯಾಣಿಸುವವರಿಗೆ ಪೊಲೀಸ್ ಇಲಾಖೆ ಯಾವುದೇ ಪಾಸ್‌ಗಳನ್ನು ವಿತರಿಸುವುದಿಲ್ಲ. ಗುರುತಿನ ಚೀಟಿ ಅಥವಾ ಸೂಕ್ತ ದಾಖಲೆಗಳಿದ್ದರೆ ಮಾತ್ರ ಜನರ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು,'ಕರ್ಫ್ಯೂ ಸಮಯದಲ್ಲಿ ಬೇರೆ ಸ್ಥಳಗಳಿಗೆ ಪ್ರಯಾಣಿಸುವವರು ಪ್ರಯಾಣಕ್ಕೆ ಸಂಬಂಧಿಸಿದ ಟಿಕೆಟ್‌ಗಳನ್ನು ತೋರಿಸಬೇಕು. ಆಸ್ಪತ್ರೆಗಳಿಗೆ ತೆರಳುವವರೂ ಸೂಕ್ತ ದಾಖಲೆಗಳನ್ನು ಹೊಂದಿರಬೇಕು. ಯಾವುದೇ ದಾಖಲೆಗಳಿಲ್ಲದೆ, ಸುಖಾಸುಮ್ಮನೆ ರಸ್ತೆಗಳಲ್ಲಿ ಸಂಚರಿಸಿದರೆ ಅವರ ವಿರುದ್ಧ ಪ್ರಕರಣ ದಾಖಲಿಸಲಿದ್ದೇವೆ' ಎಂದು ಎಚ್ಚರಿಸಿದರು.

'ಸರ್ಕಾರದ ನಿಯಮಗಳನ್ನು ನಗರದಾದ್ಯಂತ ಕಟ್ಟುನಿಟ್ಟಾಗಿ ಜಾರಿ ಮಾಡಲಾಗುವುದು. ಇದಕ್ಕಾಗಿ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಪೊಲೀಸರ ಜೊತೆ ಸಭೆ ನಡೆಸಲಾಗಿದೆ. ಕರ್ಫ್ಯೂ ಅವಧಿಯಲ್ಲಿ ರಸ್ತೆಗಳಲ್ಲಿ ಚೆಕ್‌ಪೋಸ್ಟ್ ಹಾಕಲಾಗುವುದು. ಈ ಬಗ್ಗೆ ಡಿಸಿಪಿಗಳಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಅವರು ಠಾಣಾಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮ ತೆಗೆದುಕೊಳ್ಳುತ್ತಾರೆ' ಎಂದರು.

'ಸರ್ಕಾರ ಆದೇಶದಂತೆ ಪಬ್, ರೆಸ್ಟೋರೆಂಟ್ ಸ್ಥಳಗಳಿಗೆ ಶೇ 50ರಷ್ಟು ಮಂದಿಗೆ ಮಾತ್ರ ಪ್ರವೇಶ ನೀಡಲಾಗುವುದು ಎಂದರು.

ವಿದೇಶದಿಂದ ಬಂದ 25 ಮಂದಿಗೆ ಸೋಂಕು

ದೇವನಹಳ್ಳಿ: ವಿದೇಶದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬುಧವಾರ ಮುಂಜಾನೆ ಬಂದಿಳಿದ ಪ್ರಯಾಣಿಕರ ಪೈಕಿ 25 ಮಂದಿಗೆ ಕೋವಿಡ್ ಸೋಂಕು ದೃಢಪಟ್ಟಿದೆ. ಮಹಾರಾಷ್ಟ್ರ, ಗೋವಾ, ಕೇರಳದಿಂದ ಬರುವ ಪ್ರಯಾಣಿಕರ ಮೇಲೂ ತೀವ್ರ ನಿಗಾ ಇಡಲು 50 ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

ಒಕ್ಕಲಿಗರ ಸಂಘಕ್ಕೆ ಬಾಲಕೃಷ್ಣ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ನೂತನ ಅಧ್ಯಕ್ಷರಾಗಿ ಶ್ರವಣಬೆಳಗೊಳ ಕ್ಷೇತ್ರದ ಜೆಡಿಎಸ್ ಶಾಸಕ ಸಿ.ಎನ್. ಬಾಲಕೃಷ್ಣ ಆಯ್ಕೆಯಾಗಿದ್ದಾರೆ.

ಬಾಲಕೃಷ್ಣ

ಕಾರ್ಯಕಾರಿ ಸಮಿತಿಗೆ ಡಿ.12ರಂದು ನಡೆದ ಚುನಾವಣೆಯಲ್ಲಿ ಒಟ್ಟು 35 ನಿರ್ದೇಶಕರು ಆಯ್ಕೆಯಾಗಿದ್ದರು. ಪದಾಧಿಕಾರಿಗಳ ಹುದ್ದೆ ಆಯ್ಕೆಗೆ ಬುಧವಾರ ನಡೆದ ಚುನಾವಣೆಯಲ್ಲಿ 34 ನಿರ್ದೇಶಕರು ಭಾಗವಹಿಸಿದ್ದರು.

ತೀವ್ರ ಪೈಪೋಟಿ ನಡೆದಿದ್ದ ಅಧ್ಯಕ್ಷ ಸ್ಥಾನಕ್ಕೆ ಬಾಲಕೃಷ್ಣ ಅವರ ವಿರುದ್ಧ ಬಿ. ಕೆಂಚಪ್ಪಗೌಡ ಅವರು ಸ್ಪರ್ಧಿಸಿದ್ದರು. ಬಾಲಕೃಷ್ಣ ಅವರು 20 ಮತಗಳು ಹಾಗೂ ಕೆಂಚಪ್ಪಗೌಡ ಅವರು 14 ಮತಗಳನ್ನು ಪಡೆದರು.

ಉಪಾಧ್ಯಕ್ಷರ ಎರಡು ಹುದ್ದೆಗಳಿಗೆ ಡಾ.ಕೆ.ವಿ. ರೇಣುಕಾ ಪ್ರಸಾದ್ ಮತ್ತು ಡಿ. ಹನುಮಂತಯ್ಯ ಆಯ್ಕೆಯಾಗಿದ್ದಾರೆ. ಇಬ್ಬರು ತಲಾ 20 ಮತಗಳನ್ನು ಪಡೆದರು. ಈ ಹುದ್ದೆಗಳಿಗೆ ಸ್ಪರ್ಧಿಸಿದ್ದ ಸಿ.ಜಿ. ಗಂಗಾಧರ್ 14 ಮತ್ತು ಎಲ್. ಶ್ರೀನಿವಾಸ್ 13 ಮತಗಳನ್ನು ಪಡೆದರು.

ಟಿ. ಕೋನಪ್ಪ ರೆಡ್ಡಿ ಪ್ರಧಾನ ಕಾರ್ಯದರ್ಶಿಯಾಗಿ, ಸಹಾಯಕ ಕಾರ್ಯದರ್ಶಿಯಾಗಿ ರಾಘವೇಂದ್ರ, ಖಜಾಂಚಿಯಾಗಿ ಆರ್. ಪ್ರಕಾಶ್ ತಲಾ 20 ಮತಗಳನ್ನು ಪಡೆದು ಆಯ್ಕೆಯಾದರು. ಇವರ ವಿರುದ್ಧ ಕ್ರಮವಾಗಿ ಸ್ಪರ್ಧಿಸಿದ್ದ ಎಚ್.ಎನ್. ಅಶೋಕ್, ಎಂ.ಬಿ. ಮಂಜೇಗೌಡ, ಅಶೋಕ್ ಎಸ್.ಡಿ. ಜಯರಾಮ್ ತಲಾ 14 ಮತಗಳನ್ನು ಪಡೆಯಲಷ್ಟೇ ಸಾಧ್ಯವಾಯಿತು. ತುಮಕೂರಿನಿಂದ ನಿರ್ದೇಶಕರಾಗಿ ಆಯ್ಕೆಯಾಗಿರುವ ಲೋಕೇಶ್ ಅವರು, ಅನಾರೋಗ್ಯ ಕಾರಣ ಚುನಾವಣೆಯಲ್ಲಿ ಭಾಗವಹಿಸಿರಲಿಲ್ಲ. 30 ತಿಂಗಳ ಅವಧಿಗೆ ಈ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ನಿವೃತ್ತರಾದ ಸದಸ್ಯರಿಗೆ ಬೀಳ್ಕೊಡುಗೆ–ಮುಖ್ಯಮಂತ್ರಿ ಬೊಮ್ಮಾಯಿ ಕಳಕಳಿ

ಪರಿಷತ್ ಮೌಲ್ಯ ಕುಸಿಯದಂತೆ ತಡೆಯಬೇಕಿದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಅಗತ್ಯವಿದೆಯೆ ಎಂಬ ಪ್ರಶ್ನೆ ಆಗಾಗ ಕೇಳಿ ಬರುತ್ತಿದೆ. ಈ ಬಗ್ಗೆ ಆತ್ಮಾವಲೋಕನ ಮಾಡಿಕೊಂಡು ಪರಿಷತ್‌ನ ಮೌಲ್ಯ ಕುಸಿಯದಂತೆ ತಡೆಯುವ ಕೆಲಸ ಮಾಡಬೇಕಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬುಧವಾರ ನಿವೃತ್ತರಾದ ವಿಧಾನ ಪರಿಷತ್ ಸದಸ್ಯರ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, 'ವಿಧಾನ ಪರಿಷತ್‌ನ ಇತಿಹಾಸ, ಪರಂಪರೆ ಮತ್ತು ಮಹತ್ವವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ, ಇತ್ತೀಚಿನ ಪರಿಸ್ಥಿತಿ ಮತ್ತು ಸಂದರ್ಭಗಳನ್ನು ಆಧರಿಸಿ ಪರಿಷತ್‌ನ ಅಗತ್ಯದ ಕುರಿತು ಪ್ರಶ್ನೆ ಎದ್ದಿದೆ' ಎಂದರು.

'ನಾನು ಕೂಡ ವಿಧಾನ ಪರಿಷತ್ ಸದಸ್ಯನಾಗಿಯೇ ರಾಜಕೀಯ ಜೀವನ ಆರಂಭಿಸಿದವನು. ಪರಿಷತ್‌ನ ಇತಿಹಾಸ ಮತ್ತು ಪರಂಪರೆಯನ್ನು ಉಳಿಸಿಕೊಳ್ಳುವ ದಿಸೆಯಲ್ಲಿ ಗಂಭೀರವಾದ ಚಿಂತನೆ ಅಗತ್ಯ. ಎಲ್ಲರೂ ಈ ಕುರಿತು ಆತ್ಮಾವಲೋಕನ ಮಾಡಿಕೊಂಡು ಕೆಲಸ ಮಾಡಬೇಕಿದೆ. ವಿಧಾನ ಪರಿಷತ್‌ನ ಮೌಲ್ಯ ಹೆಚ್ಚಿಸುವುದಕ್ಕೆ ಪೂರಕವಾಗಿ ಯೋಚಿಸಬೇಕಿದೆ' ಎಂದು ಹೇಳಿದರು.


ಬುಧವಾರ ನಿವೃತ್ತರಾದ ವಿಧಾನ ಪರಿಷತ್ ಸದಸ್ಯರ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಪರಿಷತ್‌ನ ಮಾಜಿ ಸಭಾಪತಿಗಳಾದ ಬಿ.ಎಲ್. ಶಂಕರ್, ಡಿ.ಎಚ್. ಶಂಕರಮೂರ್ತಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಭಾಪತಿ ಬಸವರಾಜ ಹೊರಟ್ಟಿ ಮತ್ತು ಸಚಿವ ಕೋಟ ಶ್ರೀನಿವಾಸ ಪೂಜಾರಿ ಮಾತುಕತೆಯಲ್ಲಿ ನಿರತರಾಗಿದ್ದರು –ಪ್ರಜಾವಾಣಿ ಚಿತ್ರ

ರಾಜಕಾರಣಿಗಳಿಗೆ ನಿವೃತ್ತಿ ಇಲ್ಲ: ರಾಜಕಾರಣದಲ್ಲಿ ಇರುವವರಿಗೆ ಯಾವತ್ತೂ ನಿವೃತ್ತಿಯ ಪ್ರಶ್ನೆ ಎದುರಾಗುವುದಿಲ್ಲ. ರಾಜಕಾರಣ ಅರ್ಹತೆ ಮತ್ತು ನಿವೃತ್ತಿ ಇಲ್ಲದ ಕ್ಷೇತ್ರ. ಪ್ರಸ್ತುತತೆ ಕಳೆದುಕೊಂಡರೆ ರಾಜಕಾರಣದಲ್ಲಿ ಉಳಿಯುವುದು ಅಸಾಧ್ಯ. ಕ್ರಿಯಾಶೀಲವಾಗಿ ಇರುವವರು ಮಾತ್ರ ಪ್ರಸ್ತುತತೆ ಉಳಿಸಿಕೊಳ್ಳಲು ಸಾಧ್ಯ ಎಂದರು.

ಚಿಕಿತ್ಸೆ ಅಗತ್ಯ: ವಿಧಾನ ಪರಿಷತ್‌ನ ಸಭಾ ನಾಯಕರೂ ಆಗಿರುವ ಸಚಿವ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, 'ವ್ಯವಸ್ಥೆಯನ್ನು ವಿಮರ್ಶೆ ಮಾಡುವ ವಿಷಯದಲ್ಲಿ ವಿಧಾನ ಪರಿಷತ್ ಎತ್ತರದ ಸ್ಥಾನದಲ್ಲಿದೆ. ಅದು ಶಕ್ತಿ ಕಳೆದುಕೊಂಡಿಲ್ಲ. ಈ ಬಾರಿಯ ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಹಣದ ವೆಚ್ಚದ ವಿಚಾರದಲ್ಲಿ ಚಿಕಿತ್ಸೆಯ ಅಗತ್ಯವಿದೆ' ಎಂದು ಹೇಳಿದರು.

ವಿಧಾನ ಪರಿಷತ್ ಮಾಜಿ ಸಭಾಪತಿ ಡಾ.ಬಿ.ಎಲ್. ಶಂಕರ್ ಮಾತನಾಡಿ, 'ಉತ್ತರ ಪ್ರದೇಶ, ಬಿಹಾರ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ವಿಧಾನ ಪರಿಷತ್ ಸದಸ್ಯರೇ ಮುಖ್ಯಮಂತ್ರಿಗಳಾಗಿದ್ದಾರೆ. ರಾಜ್ಯದಲ್ಲಿ ವಿಧಾನ ಪರಿಷತ್ ಬೇಡ ಎಂದು ವಾದಿಸುವವರು ಇದನ್ನು ಅರಿಯಬೇಕು. ವಿಧಾನ ಪರಿಷತ್ ಅಗತ್ಯವಿದೆಯೇ ಎಂಬ ಪ್ರಶ್ನೆಯನ್ನು ವಿಧಾನಸಭೆಯ ವಿವೇಚನೆಗೆ ಬಿಡುವುದು ಸರಿಯಲ್ಲ' ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಸಭಾಪತಿ ಡಿ.ಎಚ್. ಶಂಕರಮೂರ್ತಿ ಉಪಸ್ಥಿತರಿದ್ದರು

18 ಸದಸ್ಯರ ನಿವೃತ್ತಿ

ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಆಯ್ಕೆಯಾಗಿದ್ದ ವಿಧಾನ ಪರಿಷತ್‌ನ 25 ಸದಸ್ಯರ ಅವಧಿ ಬುಧವಾರಕ್ಕೆ ಕೊನೆಗೊಂಡಿತು. ಅವರಲ್ಲಿ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಸೇರಿದಂತೆ ಆರು ಸದಸ್ಯರು ಪುನರಾಯ್ಕೆಯಾಗಿದ್ದಾರೆ.

ಪರಿಷತ್ ಸದಸ್ಯರಾಗಿದ್ದ ಶ್ರೀನಿವಾಸ ಮಾನೆ ಹಾನಗಲ್ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ಮಾಜಿ ಸಭಾಪತಿ ಕೆ. ಪ್ರತಾಪಚಂದ್ರ ಶೆಟ್ಟಿ ಸೇರಿದಂತೆ 18 ಮಂದಿ ಬುಧವಾರ ನಿವೃತ್ತರಾದರು.

ಸುದ್ದಿ 2 ನಿಮಿಷ

ಸಿಎಪಿಎಫ್ ಸಹಾಯಕ ಕಮಾಂಡಂಟ್ ಹುದ್ದೆಗೆ ರೋಹಿತ್ ಆಯ್ಕೆ

ಬೆಂಗಳೂರು: ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯ (ಸಿಎಪಿಎಫ್) ಸಹಾಯಕ ಕಮಾಂಡೆಂಟ್ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ಆಯ್ಕೆಗಾಗಿ ಕೇಂದ್ರ ಲೋಕ ಸೇವಾ ಆಯೋಗವು 2020ನೇ ಸಾಲಿನಲ್ಲಿ ನಡೆಸಿದ ಪರೀಕ್ಷೆಯಲ್ಲಿ ಯಲಹಂಕದ ರೋಹಿತ್ ಜಿ. ತೇರ್ಗಡೆಯಾಗಿದ್ದಾರೆ.

ನಿವೃತ್ತ ಶಿಕ್ಷಕ ಗೋವಿಂದರಾಜಪ್ಪ ಮತ್ತು ಶಾರದಮ್ಮ ದಂಪತಿಯ ಮಗನಾಗಿರುವ ರೋಹಿತ್ ಈ ಪರೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 119ನೇ ರ‍್ಯಾಂಕ್ ಪಡೆದಿದ್ದಾರೆ. ಗೆಜೆಟೆಡ್ ಗ್ರೂಪ್ 'ಎ' ವೃಂದದ ಈ ಹುದ್ದೆಯ ಆಯ್ಕೆಗಾಗಿ ನಡೆದ ಪರೀಕ್ಷೆಗೆ 4 ಲಕ್ಷಕ್ಕೂ ಹೆಚ್ಚು ಮಂದಿ ಹಾಜರಾಗಿದ್ದು, ಅವರಲ್ಲಿ ಒಟ್ಟು 187 ಮಂದಿ ಮಾತ್ರ ಆಯ್ಕೆಯಾಗಿದ್ದಾರೆ.

ರಾಜ್ಯದಿಂದ 30 ಮಂದಿ ಈ ಪರೀಕ್ಷೆಯ ಎರಡನೇ ಹಂತವಾದ ದೈಹಿಕ ಆರೋಗ್ಯ ಸಂದರ್ಶನಕ್ಕೆ ಆಯ್ಕೆಯಾಗಿದ್ದರು. ಅವರಲ್ಲಿ ಒಂಬತ್ತು ಅಭ್ಯರ್ಥಿಗಳು ಅಂತಿಮ ಸುತ್ತಿನ ಸಂದರ್ಶನಕ್ಕೆ ಆಯ್ಕೆಯಾಗಿದ್ದರು.

ರೋಹಿತ್ ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಪಡೆದಿದ್ದಾರೆ. ಕುವೆಂಪು ವಿಶ್ವ ವಿದ್ಯಾಲಯದಲ್ಲಿ ಎಂ.ಎಸ್ಸಿ ವ್ಯಾಸಂಗ ಮಾಡಿದ್ದಾರೆ. 'ನಾಗರಿಕ ಸೇವೆ ನನ್ನ ಗುರಿ. ಅದಕ್ಕಾಗಿಯೇ ಮೂರು ವರ್ಷಗಳಿಂದ ತಯಾರಿ ನಡೆಸುತ್ತಿದ್ದೇನೆ. ಐಎಎಸ್ ಪರೀಕ್ಷೆಯ ಪೂರ್ವತಯಾರಿಗಳು ಸಿಎಪಿಎಫ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಲು ಸಹಕಾರಿಯಾಯಿತು' ಎಂದು ರೋಹಿತ್ ತಿಳಿಸಿದ್ದಾರೆ.

'ಪಂಚಮಸಾಲಿ ಲಿಂಗಾಯತರಿಗೆ ಮೀಸಲಾತಿ ಅವೈಜ್ಞಾನಿಕ'

ಬೆಂಗಳೂರು: 'ರಾಜ್ಯ ಸರ್ಕಾರವು ಮಠಾಧೀಶರಿಗೆ ಹೆದರಿ ಪಂಚಮಸಾಲಿ ಲಿಂಗಾಯತರಿಗೆ '2ಎ' ಮೀಸಲಾತಿ ನೀಡಲು ಹೊರಟಿರುವುದು ಕಾನೂನು ದುರ್ಬಳಕೆಗೆ ಉತ್ತಮ ಉದಾಹರಣೆ' ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವಕೀಲರ ಸಂಘದ ಅಧ್ಯಕ್ಷ ಸುರೇಶ್ ಎಂ. ಲಾತೂರು ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಾಮಾಜಿಕ ನ್ಯಾಯ ಹಾಗೂ ಸಮಾನತೆಗೋಸ್ಕರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ. ಮೇಲ್ವರ್ಗದವರ ಕೈಯಲ್ಲಿ ರಾಜಕೀಯ ಅಧಿಕಾರ ಇರುವುದರಿಂದ ಮೀಸಲಾತಿಯ ಕಾನೂನು ನಿಷ್ಪ್ರಯೋಜಕವಾಗಿದೆ. ಅದನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ' ಎಂದು ಆರೋಪಿಸಿದರು.

'ಹಿಂದುಳಿದ ವರ್ಗಗಳಿಗೆ ಎಲ್ಲ ಕ್ಷೇತ್ರಗಳಲ್ಲಿಯೂ ಆಗುತ್ತಿರುವ ಅನ್ಯಾಯವನ್ನು ಮನಗಂಡು, ಸಂಘವನ್ನು ನೂತನವಾಗಿ ನೋಂದಣಿ ಮಾಡಲಾಗಿದೆ. ಈ ಸಂಘವು ಯಾವುದೇ ಮೇಲ್ವರ್ಗದ ಜಾತಿಗಳ ವಿರೋಧವಾಗಿ ಹುಟ್ಟಿಲ್ಲ. ಜಾತಿ ವ್ಯವಸ್ಥೆ ಮತ್ತು ಅಸಮಾನತೆಯ ಪರಿಣಾಮಗಳಿಂದ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡುವುದೇ ಸಂಘದ ಮುಖ್ಯ ಉದ್ದೇಶ' ಎಂದು ವಿವರಿಸಿದರು.

ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸೇವೆಯನ್ನು ಕಾಯಂಗೊಳಿಸುವ ಮೂಲಕ ರಾಜ್ಯ ಸರ್ಕಾರ ಅವರ ಬೇಡಿಕೆಯನ್ನು ತಕ್ಷಣ ಈಡೇರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡ ಮತ್ತು ಎಸ್.ಎಲ್. ಭೋಜೇಗೌಡ ಆಗ್ರಹಿಸಿದರು.

ಜೆಡಿಎಸ್ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ಬುಧವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸೇವಾ ಭದ್ರತೆಗೆ ಒತ್ತಾಯಿಸಿ ಧರಣಿ ನಡೆಸುತ್ತಿರುವ ಉಪನ್ಯಾಸಕರ ಬೇಡಿಕೆ ನ್ಯಾಯಯುತವಾಗಿದೆ. ಅವರಿಗೆ ಅನ್ಯಾಯ ಆಗದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಕರ್ತವ್ಯಕ್ಕೆ ಸೇರಿದ ದಿನದಿಂದಲೇ ಅವರ ಸೇವೆಯನ್ನು ಕಾಯಂಗೊಳಿಸಬೇಕು. ಸೇವಾ ಭದ್ರತೆ ಆದೇಶ ಹೊರಡಿಸುವ ಮುನ್ನವೇ ಈ ಕುರಿತು ಸ್ಪಷ್ಟ ಆದೇಶ ಪ್ರಕಟಿಸಬೇಕು' ಎಂದು ಶ್ರೀಕಂಠೇಗೌಡ ಹೇಳಿದರು.

'ಶಾಲೆಗಳ ಮಾನ್ಯತೆ ನವೀಕರಣ, ಉಪನ್ಯಾಸಕರ ಸೇವೆ ಕಾಯಂ ಸೇರಿದಂತೆ ಶಿಕ್ಷಣ ಕ್ಷೇತ್ರದ ಎಲ್ಲ ಸಮಸ್ಯೆಗಳಿಗೂ ಸರ್ಕಾರ ಸ್ಪಂದಿಸಬೇಕು. ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳಿಗೆ ನೋಟಿಸ್ ಜಾರಿಗೊಳಿಸಿ, ಕಿರುಕುಳ ನೀಡುತ್ತಿರುವುದನ್ನು ನಿಲ್ಲಿಸಬೇಕು' ಎಂದು ಭೋಜೇಗೌಡ ಒತ್ತಾಯಿಸಿದರು.

ಕೈಗಾರಿಕೆಗಳ ಬೇಡಿಕೆ ಈಡೇರಿಕೆಗೆ ಭರವಸೆ

ಬೆಂಗಳೂರು: 'ರಾಜ್ಯವನ್ನು ಕೈಗಾರಿಕೆ ಮತ್ತು ಹೂಡಿಕೆದಾರ ಸ್ನೇಹಿಯಾಗಿ ರೂಪಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಕೈಗಾರಿಕೆಗಳ ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ನಡೆಸಲಾಗುವುದು' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ಉದ್ಯಮಿಗಳಿಗೆ ಭರವಸೆ ನೀಡಿದರು.

ನಿರಾಣಿ

ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆ ಕುರಿತು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೋವಿಡ್‌ನ ಮೊದಲ ಮತ್ತು ಎರಡನೇ ಅಲೆಯಿಂದಾಗಿ ಹಲವು ಕೈಗಾರಿಕೆಗಳು ಸಂಕಷ್ಟಕ್ಕೆ ಒಳಗಾಗಿವೆ. ಇಂತಹ ಕೈಗಾರಿಕೆಗಳ ಸಾಲದ ಖಾತೆಗಳು ಎನ್‌ಪಿಎ ಎಂದು ವರ್ಗೀಕರಣ ಆಗದಂತೆ ನೋಡಿಕೊಳ್ಳಲು, ದೀರ್ಘಾವಧಿಯ ಸಾಲ ಮರು ಹೊಂದಾಣಿಕೆ ವ್ಯವಸ್ಥೆ ರೂಪಿಸಬೇಕು ಮತ್ತು ಬಡ್ಡಿದರ ಕಡಿಮೆ ಮಾಡಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಲಾಗಿದೆ' ಎಂದರು.

ಕೈಗಾರಿಕೆಗಳ ಸ್ಥಾಪನೆಗಾಗಿ ಎಸ್‌ಸಿ, ಎಸ್‌ಟಿ ಅವರಿಗೆ ನೀಡುತ್ತಿರುವ ಸೌಲಭ್ಯಗಳನ್ನು ಆರ್ಥಿಕವಾಗಿ ದುರ್ಬಲವಾಗಿರುವ ಇತರ ಸಮುದಾಯಗಳಿಗೂ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to notify the General Public that, my client Mr. PRADEEP KUMAR KATARIA entered into an agreement of purchase of below mentioned schedule property with its owner Mrs. S. PRABHAVATHI D/o A. P. Srinivas, R/at No. 584/B, 17th 'A' Main, 6th 'G' Cross, 6th Block, Koramangala, Bengaluru-560095.

Any person/s, firms, banks, financial Sectors, companies, individual etc., having any claim/s, right, share or interest over the schedule property, shall file his/her/their/its objections in writing along with original documents with the under signed within SEVEN DAYS from the date of this publication.

Any objections on and after Seven days, shall not be entertained and my client will proceed with the sale transaction with Mrs. S. PRABHAVATHI presuming that there are no claim/s of anyone over the property.

SCHEDULE

Site No. 93, Old No. 9 & 10, old BBMP Katha No.93/66/9 & 66/10/529, present B-Katha No.93/66/9/66/10/93/9, CMC Katha No.529, Old CMC No.66/9 and 66/10, situated at SINGASANDRA VILLAGE, Begur Hobli, Bengaluru South Taluk presently under limits of BBMP, measuring East to West: 50 feet and North to South: 81.4 feet and bounded on:

East by: Private Property, West by: New Site No.94 (old No.8), North by : Road, South by : Private Property.

(A. N. Krishna), Advocate,
No.7, 2nd Floor, B. R. Ramu Building, Diagonal Road,
V.V. Puram, Bengaluru-560004.

PUBLIC NOTICE

My client entered into Sale Agreement to purchase the Schedule Property from Sri B. Shivakumar S/o Y. B. Banashankarappa and his legal heirs residing at No. 37, Mohiddin Sab Lane Narayanashettypet, Bangalore -560 002. This notice is hereby given for the information of General Public that any persons or Banks or Financial Institutions or any statutory authorities having any right the interest or claim against the Schedule Property may contact with documentary proof in support of his/her/their claim. If no claim is so lodged with us within the said period of 15 days from the date of publication, it shall be presumed by my client that no one has any claim against the Sechedule Property.

SCHEDULE PROPERTY:

All that piece and parcel of immovable property bearing Old No. 5, re-numbered as No. 7 Presently assigned as New Corporation No. 37, portion of Provisional (Chalta No.) CTS No. 319, P.T. Sheet No. 265, City Survey No. 818 situated at Mohiddin Sab Lane Narayanashettypet, Bruhat Bangalore Mahanagara Palike Old Ward No. 28, New Ward No. 109, Bangalore-560 002 consisting of 800 Sft., of ground floor, 800 Sft., of First floor, 800 Sft., of second floor residential house. Site measuring East to West: 58 feet, North to South 22 feet total area 1276 Sft. Bounded on East by: House belongs to Y. B. Banappa West By: Road, North by: House belongs to B. Rajashekar, South by: House belongs to P. C. Rajappa.

Sd/-
P. NARASIMHAIAH, Advocate
No.1, 18th Cross,
Malleswaram,
Bangalore-560 055
E-mail: p.narasimhaiah@yahoo.co.in
Phone: 080-23343461, 080-23343467
Place: Bangalore
Date: 05-01-2022

OTHERS

Auction Sale

Menzies Aviation
Menzies Aviation Bobba (Bangalore) Pvt. Ltd.

Customs unclaimed / Uncleared Air Cargo e-auction at MABBPL

Proposed to conduct e-auction through MSTC web portal on
13th Jan 2022, Thursday,
Timing 11.00 to 15.30 hrs

Display Place, Date & Time
Menzies Aviation Bobba (Bangalore) Pvt. Ltd.
Air Cargo Terminal, Plot No. C-04L, Kempegowda International Airport Ltd, BIAL Devanahalli, Bengaluru–560 300, Karnataka, India.
10th & 11th Jan 2022, 10.00 to 15.00 hrs (Mon & Tue)

SHIPMENT ITEMS & YEAR
Automobile Parts, Computer Software, Electrical, Electronics, Mechanical Goods, Medical Equipment's, Miscellaneous Items, Leather Goods, RMG & Textiles and Stationeries.
2020 -21 (I)

For Terms & conditions and further details visit www.mstcecommerce.com

BUSINESS

Business to Business

Financial Services

NRI'S INVESTMENT
And Finance Available
On Low Interest
Against Properties,
Land & Building, Sites,
Flats, Converted &
Agriculture Lands Call:
7411265189

'AISHWARYA GROUP'
Invest 1L- 10L in Trading, Multiple Businesses. Monthly 7% Secured Fixed Returns. Investors welcome.
Contact:-7892818780.

CAUTION NOTICE

Readers are advised to make appropriate thorough enquiries before acting upon any advertisement.
This newspaper does not vouch or subscribe to the claims and representations made by advertisers.

GM-Advertisement

JOB OPPORTUNITIES

General

MOBILE PHONE retail sales executive- prefer candidate with relevant 2+year experience. Whatsapp: +919433422115

WANTED PRIVATE banking jobs Male/ Female Education PUC, Degree. Salary 15000 to 32000 contact 8904879948/ 8904879491

OPPORTUNITY WORK from Home, Banking, Kalyani Motors, Accounts, Salary 16000/-, 24000/- SSLC, PUC, Degree. 7022920578.

Marketing & Sales

REQUIRED FOR ADDRESS VERIFICATION COMPANY
FIELD VERIFICATION EXECUTIVES REQUIRED FOR ALL OVER KARNATAKA
SALARY + ATTRACTIVE INCENTIVE
Full Time & Part Time Jobs available
ANDROID MOBILE MUST
DIGINITY ENTERPRISES PVT LTD
No.26, Oakland Apartment, Flat No.102, 1st Cross, Ulsoor Road, Near HDFC Bank, Bangalore - 42.
85508 88899
95382 70707

Part-Time Jobs

THOSE WHO Are Residing Malleswaram, 30 to 35k MNC Provide Work From Home: 7019215243/ 9886641282

REAL ESTATE BUYING

General

General

REQUIRED BANGALORE properties for purchase. (A). Under SR Value (B). Site/ Land & Building (C). Clear Title (D). A-Katha (E) Settlement. (F) 1Cr- 5Cr. CONTACT:- 6360721992.

PERSONAL

Change of Name

RAM DEV BAINDA, JC675345A, NB SUB Vill-Kagtonkidhani (Jakhera), Jakhera, Degena, Nagour, Rajasthan, changed Son's name from MOHINDER SINGH to MOHINDRA SINGH, 03/01/2022, Notary K.V. Mani, Bangalore

INDU RANA W/o 14825530X– Hav/MT– DINESH KUMAR, R/a New Indra Colony, Ambala, Haryana changed name from INDU RANA to INDU NEGI notary KV Mani Bangalore.

14825530X– HAV/MT– DINESH KUMAR at ASC Records (South) Bangalore changed my minor son's name DEVESH NEGI to ISHMIT NEGI notary KV Mani Bangalore.

I, SALINI V NAIR alias Salini S Mohan alias Salini Sobha Mohan, D/o Thulasi Bai Krishnan Nair Mohanan, aged 40 years, R/a. ND Passion Apartments, A Block 808, Haralur Main Road, Bengaluru- 560068. All the above names pertaining to one & same person only. vide Affidavit dated 30.10.2021, before Notary KAZHAKKUTTOM K.S. Narayanan Nair, Thiruvananthapuram, henceforth I shall be called as 'SALINI V NAIR' only

RAM DEV BAINDA, JC675345A, NB SUB Vill-Kagtonkidhani (Jakhera), Jakhera, Degena, Nagour, Rajasthan, changed Son's name from PREM SUKH to PREMSUKH BAINDA, 04/01/2022, Notary K.V. Mani, Bangalore

I, JEROOPARAM Residing at Flat No.103, 2nd Floor, No. 35, Sai Mitra Woods Apartment, Avalahalli Industrial Layout, New Timber Yard Layout, Mysore Road, Bangalore South, Bangalore- 560026, have changed my name to JEROOPARAM CHOUDHARY vide affidavit dated 05.01.2022, before notary, L. Shankaranarayana, Bangalore.

I, PARVATHAMMA CHICKBALLAPUR VENKATACHALAPATHY, R/at Nandi Rasthe, Soppinabeedi, Chickballapur 562101, have changed my name to PARVATHY CHICKBALLAPUR VENKATACHALAPATHY, vide affidavit dated 04-01-2022 sworn to before notary K.H. Venkatappa, Chickballapur.

I, HARISHA S/o Shivalimngaiah R/a. Makli, Malur Hobli, Channapatna, Ramanagar (D)-562108. Harisha and Harisha Shivalingaiah both name belongs to me and same person only. Vide affidavit Dated: 03/01/2022. Sworn before notary Gangambike H.S

I, MEENAKSHI Ningaraj W/O, Chethan Hiralahalli Doddegowda R/o Sheelanere Hobli, K R Pet Taluk, Hiralahalli, Mandya, Karnataka- 571426 have changed my name to Meenakshi Ningaraj Chikkegowda for all purposes.

I, VIJAYLAXMI VERMA Wife Of Service No. JC 304665M Rank: NB/SUB name Sandeep Kumar Verma, presently posted in Selection Centre South Bengaluruu- 560042, declare that my DOB has been wrongly metnioned in my husband's service records as 12.01.1979 instead of 12.01.1978, vide affidavit dated 04.01.2022, before notary A.R. Muneer Ahmed, Bangalore.

DH DECCAN HERALD ಪ್ರಜಾವಾಣಿ

BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಬಿಬಿಎಂಪಿಗೆ ಉಪ ಲೋಕಾಯುಕ್ತರ ಎಚ್ಚರಿಕೆ

ಕೋವಿಡ್ ಭೀತಿ: ವಿಲೇವಾರಿಯಾಗದ ಕಸ ● ಅಧಿಕಾರಿಗಳೇ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿನ ಸಾರ್ವಜನಿಕ ಸ್ಥಳ ಮತ್ತು ರಸ್ತೆಗಳ ಬದಿಯಲ್ಲಿ ಬೇಕಾಬಿಟ್ಟಿ ಕಸ ಸುರಿದರೆ ಸ್ಥಳೀಯ ಬಿಬಿಎಂಪಿ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ' ಎಂದು ಲೋಕಾಯುಕ್ತ ಖಡಕ್ ಎಚ್ಚರಿಕೆ ನೀಡಿದೆ.

ಬಿ.ಎಸ್.ಪಾಟೀಲ

ನಾಗವಾರ ಹಾಗೂ ರೇವಾ ಕಾಲೇಜು ಮಧ್ಯದ ರಸ್ತೆಯಲ್ಲಿ ವ್ಯಾಪಕವಾಗಿ ಚೆಲ್ಲಿದ ಕಸ ವಿಲೇವಾರಿಗೆ ಸಂಬಂಧಿಸಿದ ಪ್ರಕರಣದಲ್ಲಿ ಯಲಹಂಕ ಬಿಬಿಎಂಪಿ ವಲಯದ ಅಧಿಕಾರಿಗಳ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿರುವ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು, ಈ ಕುರಿತಂತೆ ಬೆಂಗಳೂರು ನಗರ ವಿಭಾಗದ ಲೋಕಾಯುಕ್ತ ಪೊಲೀಸರು ಸಮಗ್ರ ವರದಿ ಸಲ್ಲಿಸುವಂತೆ ಆದೇಶಿಸಿದ್ದಾರೆ.

ಕೆಲವು ಸ್ಥಳಗಳ ಖುದ್ದು ಪರಿಶೀಲನೆ ನಡೆಸಿರುವ ನ್ಯಾಯಮೂರ್ತಿ ಬಿ.ಎಸ್.ಪಾಟೀಲರು, 'ಲೋಕಾಯುಕ್ತ ಮಧ್ಯ ಪ್ರವೇಶದಿಂದ ಕಸ ವಿಲೇವಾರಿಯಾಗಬೇಕಿರುವುದು ವಿಷಾದದ ಸಂಗತಿ. ಕೋವಿಡ್–19 ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಈ ರೀತಿಯ ದೂರುಗಳು ಮರುಕಳಿಸಬಾರದು' ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಎಚ್ಚರಿಸಿದ್ದಾರೆ.

'ಹೆಗಡೆ ನಗರದ ಬಳಿ ನಿತ್ಯವೂ ಕಸ ಸುರಿಯಲಾಗುತ್ತಿದೆ. ಅಂತೆಯೇ ಈ ಭಾಗದ ಇಂದಿರಾ ಕ್ಯಾಂಟೀನ್, ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ, ಚಿಕ್ಕಜಾಲ ಸಂಚಾರ ನಿಯಂತ್ರಣ ಪೊಲೀಸ್ ಕಚೇರಿ, ಸಾರಾಯಿಪಾಳ್ಯ ಬಸ್ ನಿಲ್ದಾಣ, ಜಕ್ಕೂರು ಥಣಿಸಂದ್ರ ರಸ್ತೆ, ರೈಲ್ವೆ ಸೇತುವೆ, ಅಶೋಕ ನಗರ ಬಸ್ ನಿಲ್ದಾಣ ಮತ್ತು ಎಲಿಮೆಂಟ್ಸ್ ಮಾಲ್ ಬಳಿ ನಿತ್ಯವೂ ಕಸ ಸುರಿಯಲಾಗುತ್ತಿರುವುದಕ್ಕೆ ಸಂಬಂಧಿಸಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳ ನಿರ್ಲಕ್ಷ್ಯತನವೇ ಕಾರಣ' ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

'ಆರೋಗ್ಯದ ಮೇಲೆ ದುಷ್ಪರಿಣಾಮ'

'ಕಳೆದ ಎರಡು ತಿಂಗಳ ಹಿಂದೆ ಸುರಿದ ನಿರಂತರ ಮಳೆಯಿಂದಾಗಿ ನಗರದ ವಿವಿಧೆಡೆ ಸಂಗ್ರಹಗೊಂಡಿದ್ದ ಕಸದ ಗುಡ್ಡೆಗಳು ಈಗ ಸಣ್ಣ ಸಣ್ಣ ತಿಪ್ಪೆಗಳಾಗಿ ಪರಿವರ್ತನೆಯಾಗಿವೆ. ಇದು ಸುತ್ತಮುತ್ತಲ ಪರಿಸರವನ್ನು ಗಬ್ಬು ನಾರುವಂತೆ ಮಾಡಿದ್ದು, ಸ್ಥಳೀಯ ನಿವಾಸಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟು ಮಾಡಬಲ್ಲದು' ಎಂದು ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಆತಂಕ ವ್ಯಕ್ತಪಡಿಸಿದ್ದಾರೆ.

'ನಗರದ ವಿವಿಧೆಡೆ ಕಸ ವಿಲೇವಾರಿ ಸಮರ್ಪಕವಾಗಿ ನಡೆಯುತ್ತಿಲ್ಲ. ಇಂತಹ ಪ್ರಕಣಗಳಲ್ಲಿ ಮೇಲ್ನೋಟಕ್ಕೆ ಬಿಬಿಎಂಪಿ ಅಧಿಕಾರಿಗಳ ದುರ್ನಡತೆ ಎದ್ದು ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಹಲವೆಡೆ ಸ್ವತಃ ಸ್ಥಳ ಪರಿಶೀಲನೆ ನಡೆಸಿದ್ದೇನೆ. ಈ ರೀತಿಯ ಪ್ರಕರಣಗಳನ್ನು ನಿಯಂತ್ರಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಅವರು, 'ಪ್ರಜಾವಾಣಿ'ಗೆ ತಿಳಿಸಿದರು.

ಮೇಕೆದಾಟು ಯೋಜನೆ ವಿರುದ್ಧ ಹೋರಾಟ ನಿಶ್ಚಿತ: ತಮಿಳುನಾಡು

ಪ್ರಜಾವಾಣಿ ವಾರ್ತೆ

ಚೆನ್ನೈ: ಕರ್ನಾಟಕ ಮತ್ತು ಕೇರಳ ದೊಂದಿಗಿನ ಅಂತರರಾಜ್ಯ ನೀರು ಹಂಚಿಕೆ ವಿವಾದದ ಬಗ್ಗೆ ತಮಿಳುನಾಡು ಸರ್ಕಾರ ಮತ್ತೊಮ್ಮೆ ತನ್ನ ನಿಲುವನ್ನು ಪ್ರತಿಪಾದಿಸಿದೆ.

ಕರ್ನಾಟಕ ಸರ್ಕಾರದ ಮೇಕೆದಾಟು ಯೋಜನೆಯನ್ನು ವಿರೋಧಿಸುವ ಮೂಲಕ ಹಾಗೂ ಕೇರಳದಲ್ಲಿರುವ ಮುಲ್ಲಪೆರಿಯಾರ್ ಅಣೆಕಟ್ಟಿನ 152 ಅಡಿಗಳ ಪೂರ್ಣ ಜಲಾಶಯದ ಮಟ್ಟವನ್ನು (ಎಫ್‌ಆರ್‌ಎಲ್) ಪುನಃ ಸ್ಥಾಪಿಸಲು ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ತಮಿಳುನಾಡು ಸರ್ಕಾರ ಘೋಷಿಸಿದೆ.

ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ವಿಧಾನಸಭೆಯಲ್ಲಿ ಮಾಡಿದ ಭಾಷಣದಲ್ಲಿ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದರು.

ಯಲಹಂಕದಲ್ಲಿ ಅಂಬೇಡ್ಕರ್ ಸ್ಮಾರಕ ಭವನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜೀವನ, ಸಾಧನೆ ಮತ್ತು ಕೊಡುಗೆಗಳ ಕುರಿತು ಸಮಗ್ರ ಮಾಹಿತಿ ನೀಡುವ ಸ್ಮಾರಕ ಭವನವೊಂದನ್ನು ಯಲಹಂಕದಲ್ಲಿ ನಿರ್ಮಿಸಲಾಗುವುದು ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ತಿಳಿಸಿದರು.

ನಾರಾಯಣಸ್ವಾಮಿ

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಈ ಯೋಜನೆ ಜಾರಿಗೆ ಬರಲಿದೆ. ಪ್ರಧಾನಿ ನರೇಂದ್ರ ಮೋದಿಯವರು ಪಂಚಕ್ಷೇತ್ರದಲ್ಲಿ ನಿರ್ಮಿಸಿರುವ ಸ್ಮಾರಕದ ರೀತಿಯಲ್ಲೇ ನಗರದಲ್ಲೂ ಸ್ಮಾರಕ ನಿರ್ಮಿಸಲಾಗುವುದು. ಇದಕ್ಕಾಗಿ ಯಲಹಂಕ ಬಳಿ ಏಳು ಎಕರೆ ಜಮೀನು ಗುರುತಿಸಲಾಗಿದೆ' ಎಂದು ಅವರು ವಿವರಿಸಿದರು.

ಅಂಬೇಡ್ಕರ್ ಅವರ ಜೀವನ ಚರಿತ್ರೆ, ಹೋರಾಟಗಳು, ಸಂವಿಧಾನ ರಚನೆಯ ಪ್ರಕ್ರಿಯೆ, ಆ ಸಂದರ್ಭದಲ್ಲಿ ಸಹಕಾರ ನೀಡಿದ ಮಹನೀಯರ ವಿವರ ಮತ್ತು ಸಾಧನೆಗಳ ಕುರಿತು ಸ್ಮಾರಕ ಭವನದಲ್ಲಿ ಸಮಗ್ರ ಮಾಹಿತಿ ಒದಗಿಸಲಾಗುವುದು. ವಸಂತ ನಗರದಲ್ಲಿರುವ ಅಂಬೇಡ್ಕರ್ ಭವನದಲ್ಲೂ ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ವಸ್ತು ಸಂಗ್ರಹಾಲಯವೊಂದನ್ನು ಆರಂಭಿಸಲಾಗುವುದು ಎಂದು ಅವರು ವಿವರಿಸಿದರು.

ಸ್ಮಾರಕ ಭವನದ ಕಟ್ಟಡ ನಿರ್ಮಾಣಕ್ಕೆ ತಜ್ಞರ ತಂಡವೊಂದು ಅಧ್ಯಯನ ನಡೆಸುತ್ತಿದೆ. ಅಂಬೇಡ್ಕರ್ ಅವರಿಗೆ ಸಂಬಂಧಿಸಿದಂತೆ ದಕ್ಷಿಣ ಭಾರತದಲ್ಲೇ ಅತ್ಯುತ್ತಮವಾದ ಸ್ಮಾರಕ ನಿರ್ಮಿಸುವ ಗುರಿ ಇದೆ ಎಂದರು.

ಸುಮನಹಳ್ಳಿಯ ನಿರಾಶ್ರಿತರ ಪುನರ್ವಸತಿ ಕೇಂದ್ರದ ಆವರಣದಲ್ಲಿ ₹ 130 ಕೋಟಿ ವೆಚ್ಚದಲ್ಲಿ ಬಾಬು ಜಗಜೀವನ್ ರಾಂ ಭವನ ನಿರ್ಮಿಸಲಾಗುತ್ತಿದೆ. ಅಲ್ಲಿ ಕೂಡ ಜಗಜೀವನ್ ರಾಂ ಅವರಿಗೆ ಸಂಬಂಧಿಸಿದ ವಸ್ತು ಸಂಗ್ರಹಾಲಯ ನಿರ್ಮಿಸಲಾಗುವುದು. ಅವರ ಜೀವನ, ಸಾಧನೆ ಮತ್ತು ಕೊಡುಗೆಗಳನ್ನು ಪರಿಚಯಿಸಲಾಗುವುದು ಎಂದು ತಿಳಿಸಿದರು.

ವಿಕಾಸಸೌಧದ ಪಕ್ಕದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಚಟುವಟಿಕೆಗಳಿಗಾಗಿ 'ಸ್ಫೂರ್ತಿ ಭವನ' ನಿರ್ಮಿಸುವ ಪ್ರಸ್ತಾವವಿದೆ ಎಂದು ಹೇಳಿದರು.

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಎನ್. ನಾಗಾಂಬಿಕಾ ದೇವಿ, ಸಲಹೆಗಾರ ಇ. ವೆಂಕಟಯ್ಯ ಇದ್ದರು.

ಎಂ.ಎಸ್. ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದ 13ನೇ ಘಟಿಕೋತ್ಸವ

'ಲಸಿಕೆ ಹಿಂದೆ ಎಂಜಿನಿಯರ್‌ಗಳ ಶ್ರಮವೂ ಇದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಲಸಿಕೆ ಕಂಡು ಹಿಡಿದಿದ್ದು ವಿಜ್ಞಾನಿಗಳಾದರೂ, ಅಲ್ಪಾವಧಿಯಲ್ಲಿ ಅದನ್ನು ಭಾರಿ ಪ್ರಮಾಣದಲ್ಲಿ ಉತ್ಪಾದಿಸುವುದರ ಹಿಂದೆ ಎಂಜಿನಿಯರ್‌ಗಳ ಶ್ರಮ ಇರುವುದನ್ನು ಮರೆಯಬಾರದು' ಎಂದು ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್‌ಬಿಎ) ಅಧ್ಯಕ್ಷ ಪ್ರೊ. ಕೆ.ಕೆ. ಅಗರ್ವಾಲ್ ಹೇಳಿದರು.

ಎಂ.ಎಸ್.ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬುಧವಾರ ಏರ್ಪಡಿಸಿದ್ದ 13ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, 'ಕೋವಿಡ್ ಬಂದಾಗಿನಿಂದ ಮನುಷ್ಯನ ಜೀವನ ಶೈಲಿಯಲ್ಲಿ ಹಲವು ಬದಲಾವಣೆಗಳಾಗಿವೆ. ಇದು ಜನರ ಆರೋಗ್ಯದ ಮೇಲೆ ಪರಿಣಾಮ ಬೀರುವುದರ ಜೊತೆಗೆ ಸಾರಿಗೆ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗೂ ಕಾರಣವಾಯಿತು. ಕೋವಿಡ್‌ಗೆ ಶೀಘ್ರ ಲಸಿಕೆ ಕಂಡು ಹಿಡಿಯಲು ವಿಜ್ಞಾನಿಗಳು, ವೈದ್ಯರು ಶ್ರಮಿಸಿದ್ದಾರೆ. ಅವರಿಗೆ ಬೆನ್ನೆಲುಬಾಗಿ ನಿಂತವರು ಎಂಜಿನಿಯರ್‌ಗಳು' ಎಂದರು.

ಪದಕ ಪಡೆದ ವಿದ್ಯಾರ್ಥಿಗಳ ಸಂಭ್ರಮದ ಕ್ಷಣ –ಪ್ರಜಾವಾಣಿ ಚಿತ್ರ

'ಲಸಿಕೆ ಕಂಡು ಹಿಡಿಯಲು ಸಾಮಾನ್ಯವಾಗಿ ಕನಿಷ್ಠ 5ರಿಂದ 10 ವರ್ಷಗಳೇ ಬೇಕಾಗುತ್ತವೆ. ಆದರೆ, ಕಡಿಮೆ ಅವಧಿಯಲ್ಲಿ ಲಸಿಕೆ ಕಂಡು ಹಿಡಿಯಬೇಕಾದ ಅನಿವಾರ್ಯ ಸಂಶೋಧಕರಿಗೆ ಸೃಷ್ಟಿಯಾಗಿತ್ತು. ಅದನ್ನು ಎಲ್ಲರೂ ಸೇರಿ ನಿಭಾಯಿಸಿದರು' ಎಂದರು.

'ಜ್ಞಾನ ಮಾನವೀಯ ಮೌಲ್ಯಗಳನ್ನು ಹೆಚ್ಚಿಸುತ್ತದೆ. ಮಕ್ಕಳನ್ನು ಜ್ಞಾನವಂತರನ್ನಾಗಿ ಮಾಡುವುದೇ ನಮ್ಮ ಸಂಸ್ಥೆಯ ಉದ್ದೇಶ' ಎಂದು ಗೋಕುಲ ಎಜುಕೇಷನ್ ಫೌಂಡೇಷನ್‌ನ ಉಪಾಧ್ಯಕ್ಷ ಎಂ.ಆರ್.ಸೀತಾರಾಂ ಹೇಳಿದರು.

ಫೌಂಡೇಷನ್‌ನ ಅಧ್ಯಕ್ಷ ಡಾ.ಎಂ.ಆರ್. ಜಯರಾಮ್, ಮುಖ್ಯ ಕಾರ್ಯನಿರ್ವಾಹಕ ಬಿ.ಎಸ್.ರಾಮ್ ಪ್ರಸಾದ್, ಕಾರ್ಯದರ್ಶಿ ಎಂ.ಆರ್.ರಾಮಯ್ಯ, ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ತಲ್ಲಂ ವೆಂಕಟೇಶ್, ಪ್ರಾಂಶುಪಾಲ ಡಾ.ಎನ್.ವಿ.ಆರ್. ನಾಯ್ಡು ಇದ್ದರು.

ಪದಕ ವಿಜೇತರು: ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ದೀಕ್ಷಾ ಎಂ.ಪಿ, ಪೂರ್ಣಶ್ರೀ ಎಸ್., ಪ್ರವೀಣ್ ಕುಮಾರ್ ಎಸ್.ಡಿ., ಔಬೈದ್ ಮನ್ಸೂರ್ ಕುಚಯ್, ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ತೇಜಸ್ ಸಂದೀಪ್ ದೇಶಪಾಂಡೆ, ಪೂರ್ವ ವಿವೇಕ್ ಸಡೇಕರ್, ಎನ್. ವಿನಯ್ ಸೇರಿ ಹಲವರಿಗೆ ಚಿನ್ನದ ಮತ್ತು ಬೆಳ್ಳಿ ಪದಕ ನೀಡಿ ಗೌರವಿಸಲಾಯಿತು.

ಸರ್ಕಾರ ವಿಶೇಷ ಅನುದಾನ; ಮುಖ್ಯಮಂತ್ರಿ ಬೊಮ್ಮಾಯಿ ಹೇಳಿಕೆ

‘ನವ ಬೆಂಗಳೂರಿಗೆ ನೀಲನಕ್ಷೆ’

ಪ್ರಜಾವಾಣಿ ವಾರ್ತೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಿ.ಎಂ ಹಾಗೂ ಅದ್ವಿತೀಯ ಗ್ರೂಪ್‌ನ ಐಟಿ ಪಾರ್ಕ್ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭ ಶಾಸಕ ಬಿ.ಎಸ್‌ಯಡಿಯೂರಪ್ಪ, ಸಂಸದ ಜಿ.ಎಂ.ಸಿದ್ದೇಶ್ ಮತ್ತು ಸಚಿವ ಬೈರತಿ ಬಸವರಾಜ ಇದ್ದರು.

ಬೆಂಗಳೂರು: ಸಕಲ ಸೌಲಭ್ಯಗಳಿರುವ ‘ನವ ಬೆಂಗಳೂರು’ ನಿರ್ಮಿಸಲು ನೀಲನಕ್ಷೆ ಸಿದ್ಧಪಡಿಸಲಾಗುತ್ತಿದ್ದು, ಇದಕ್ಕೆ ಸರ್ಕಾರ ವಿಶೇಷ ಅನುದಾನ ಒದಗಿಸಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ನಗರದಲ್ಲಿ ಬುಧವಾರ ಜಿ.ಎಂ ಹಾಗೂ ಅದ್ವಿತೀಯ ಗ್ರೂಪ್‌ನ ಐಟಿ ಪಾರ್ಕ್ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಬೆಂಗಳೂರು ಬೃಹತ್ತಾಗಿ ಬೆಳೆಯುತ್ತಿದ್ದು ಯೋಜನಾಬದ್ಧವಾಗಿ ಮತ್ತು ಸಮಗ್ರವಾಗಿ ಅಭಿವೃದ್ಧಿಗೊಳಿಸಬೇಕಿದೆ. ಎಲ್ಲ ವರ್ಗದ ಜನರಿಗೂ ಸೌಲಭ್ಯಗಳನ್ನು ತಲುಪಿಸುವ ವಿಶೇಷ ಯೋಜನೆಗಳನ್ನು ಒಟ್ಟಾಗಿ ರೂಪಿಸುತ್ತಿದ್ದೇವೆ. ಬಿ.ಎಸ್.ಯಡಿಯೂರಪ್ಪ ಅವರ ಕಾಲದಲ್ಲಿ ರೂಪಿಸಲಾದ ‘ಬೆಂಗಳೂರು ವಿಷನ್ 2022’ ಯೋಜನೆಯಡಿ 4 ರಿಂದ 5 ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅವುಗಳಿಗೆ ವೇಗವನ್ನು ನೀಡಲು ಈಗಾಗಲೇ ಹಲವಾರು ಕ್ರಮ ತೆಗೆದುಕೊಳ್ಳಲಾಗಿದೆ ಎಂದರು.

‘ದಾವಣಗೆರೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಬೆಂಗಳೂರಿನಲ್ಲಿ ಐಟಿ ಹಬ್ ನಿರ್ಮಿಸಿ 10 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಲಿದ್ದಾರೆ. ರಾಜ್ಯದಲ್ಲಿ ಬೆಂಗಳೂರು ಪ್ರಸಿದ್ಧವಾಗಿದ್ದೇ ಐಟಿಯಿಂದ. ನಾಲ್ಕೂ ದಿಕ್ಕಿನಲ್ಲಿ ಈ ಉದ್ಯಮ ವಿಸ್ತರಣೆಯಾಗಿದೆ. ಐಟಿ ಉದ್ಯಮಕ್ಕೆ ಹಿಂದಿನ ಸರ್ಕಾರಗಳೂ ಸೇರಿದಂತೆ ನಮ್ಮ ಸರ್ಕಾರವೂ ಪ್ರೋತ್ಸಾಹ ನೀಡುತ್ತಾ ಬಂದಿದೆ’ ಎಂದು ಅವರು ಹೇಳಿದರು.

ಜನರ ಕೈಯಲ್ಲಿ ಉದ್ಯೋಗ ಇದ್ದಾಗ ಮಾತ್ರ ದೇಶವೃದ್ಧಿಯಾಗಿ, ಆರ್ಥಿಕತೆ ಬೆಳೆಯುತ್ತದೆ. ಆ ನಿಟ್ಟಿನಲ್ಲಿ ಐ.ಟಿ ಸೇವೆಗಳು ದೇಶದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಅತಿ ಹೆಚ್ಚು ರಫ್ತು ಆಗುತ್ತಿರುವುದು ಐ.ಟಿ ವಲಯದಲ್ಲಿ. ದೇಶದ ಒಟ್ಟು ರಫ್ತಿನ ಪ್ರಮಾಣದಲ್ಲಿ ಶೇ 40 ರಷ್ಟು ರಫ್ತು ಬೆಂಗಳೂರಿನಿಂದ ಆಗುತ್ತಿದೆ. ಹೀಗಾಗಿ ಬೆಂಗಳೂರು ದೇಶದ ಆರ್ಥಿಕತೆ ಪ್ರಮುಖ ಕೇಂದ್ರವಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಸಮಾರಂಭದಲ್ಲಿ ಸಚಿವರಾದ ಆರ್. ಅಶೋಕ, ಮುರುಗೇಶ್ ನಿರಾಣಿ, ಬೈರತಿ ಬಸವರಾಜ, ಶಾಸಕ ಬಿ.ಎಸ್. ಯಡಿಯೂರಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ.ರವೀಂದ್ರನಾಥ ಮುಂತಾದವರು ಇದ್ದರು.

ಕಾಯ್ದೆ ಬಗ್ಗೆ ತಿಳಿವಳಿಕೆ ಇಲ್ಲದ ಅಧಿಕಾರಿಗಳಿಗೆ ತರಾಟೆ

ಗೋಹತ್ಯೆ ನಿಷೇಧ ಕಾಯ್ದೆ ಬಗ್ಗೆ ಪಶು ವೈದ್ಯರಿಗೆ ಸಚಿವ ಚವ್ಹಾಣ ಅವರಿಂದ ಪಾಠ

ಪ್ರಜಾವಾಣಿ ವಾರ್ತೆ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಪ್ರಭು ಚವ್ಹಾಣ ಮಾತನಾಡಿದರು. ನಿರ್ದೇಶಕ ಡಾ. ಮಂಜುನಾಥ್ ಪಾಳೇಗಾರ ಹಾಗೂ ಕರ್ನಾಟಕ ಪಶು ವೈದ್ಯಕೀಯ ಮಂಡಳಿ (ಕೆವಿಸಿ) ಹೆಚ್ಚುವರಿ ನಿರ್ದೇಶಕ ಡಾ. ಪಿ.ಟಿ. ಶ್ರೀನಿವಾಸ್ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ನಾನು ಸಚಿವನಾದ ಬಳಿಕ ಮಾಡಿರುವ ಸಾಧನೆ ಏನು, ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ಬಂದಿದ್ದು ಯಾವಾಗ, ಇಲಾಖೆಯ ಸಹಾಯವಾಣಿ ಸಂಖ್ಯೆ ಎಷ್ಟು’ ಎಂಬ ಪ್ರಶ್ನೆಗಳಿಗೆ ಉತ್ತರಿಸಲು ತಡವರಿಸಿದ ಪಶು ವೈದ್ಯರು ಮತ್ತು ಅಧಿಕಾರಿಗಳನ್ನು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ ತರಾಟೆಗೆ ತೆಗೆದುಕೊಂಡರು.

ಹೆಬ್ಬಾಳದ ಪಶು ವೈದ್ಯಕೀಯ ಪರಿಷತ್ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ಸನ್ಮಾನ ಸ್ವೀಕರಿಸಿದ ಸಚಿವರು, ‘ಗೋಹತ್ಯೆ ನಿಷೇಧ ಕಾಯ್ದೆಯನ್ನು ಒಂದು ವರ್ಷದ ಹಿಂದೆಯೇ ಜಾರಿಗೆ ತರಲಾಗಿದೆ. ಅದಕ್ಕೂ ಮುನ್ನವೇ ಗೋಹತ್ಯೆ ನಿಷೇಧ ಕಾಯ್ದೆ ಇತ್ತು. ಅದನ್ನು ಯಾವ ವರ್ಷದಲ್ಲಿ ಜಾರಿಗೆ ತರಲಾಗಿದೆ, ಎರಡೂ ಕಾಯ್ದೆಗಳಿಗೆ ಇರುವ ವ್ಯತ್ಯಾಸ ಏನು, ಶಿಕ್ಷೆ ಮತ್ತು ದಂಡದ ಪ್ರಮಾಣ ಎಷ್ಟು’ ಎಂದು ಪ್ರಶ್ನೆ ಮಾಡಿದರು.

ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕರು, ಉಪನಿರ್ದೇಶಕರು ಸೇರಿ ಯಾರೊಬ್ಬರೂ ಸಮರ್ಪಕವಾಗಿ ಉತ್ತರ ನೀಡಲಿಲ್ಲ. ‘ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕಾಯ್ದೆಗಳ ಬಗ್ಗೆ ಮಾಹಿತಿಯೇ ಇಲ್ಲದಿದ್ದರೆ ಇಲಾಖೆ ನಡೆಸುವುದು ಹೇಗೆ, ಈ ರೀತಿಯ ಬೇಜವಾಬ್ದಾರಿ ಸಹಿಸುವುದಿಲ್ಲ’ ಎಂದರು.

‘ಬೆಂಗಳೂರಿನಲ್ಲೇ ಹೆಚ್ಚು ಅನಧಿಕೃತ ಕಸಾಯಿಖಾನೆಗಳಿವೆ. ಗೋಹತ್ಯೆ ನಿಷೇಧ ಕಾಯ್ದೆಯ ಬಗ್ಗೆ ನಿಮಗೇ ತಿಳಿವಳಿಕೆ ಇಲ್ಲದಿದ್ದರೆ, ನಿಮ್ಮಂತವರನ್ನು ಕಟ್ಟಿಕೊಂಡು ಗೋಮಾತೆಯನ್ನು ಉಳಿಸುವುದು ಹೇಗೆ? ಗುರುವಾರ ದಿನವಿಡೀ ತರಬೇತಿ ಕಾರ್ಯಾಗಾರ ಆಯೋಜಿಸಬೇಕು. ಕಾರ್ಯಾಗಾರದಲ್ಲಿ ಪಾಲ್ಗೊಂಡವರಿಗೆ ಊಟವನ್ನು ನಾನೇ ಕಳಿಸಿಕೊಡುತ್ತೇನೆ. ಕಾರ್ಯಕ್ರಮ ನಡೆಸಿರುವ ಚಿತ್ರಗಳನ್ನು ನನ್ನ ವಾಟ್ಸ್‌ಆ್ಯಪ್ ನಂಬರ್‌ಗೆ ಕಳುಹಿಸಬೇಕು’ ಎಂದು ಉಪ ನಿರ್ದೇಶಕ ಡಾ. ಉಮಾಪತಿ ಅವರಿಗೆ ಸೂಚನೆ ನೀಡಿದರು.

‘ಇಲಾಖೆಯ ಸಹಾಯವಾಣಿ ಸಂಖ್ಯೆ ಬಗ್ಗೆಯೂ ಕೆಲವರಿಗೆ ಗೊತ್ತಿಲ್ಲ. ಕೇಂದ್ರ ಸ್ಥಾನದಲ್ಲಿ ಯಾರೊಬ್ಬರೂ ವಾಸವಿಲ್ಲ. ರಾಜಧಾನಿಯಲ್ಲಿ ಕುಳಿತು ಸರ್ಕಾರದ ಸಂಬಳ ಪಡೆದು ಕಾಲಹರಣ ಮಾಡುತ್ತಿದ್ದೀರಿ. ಇದು ಮೊದಲ ಸಭೆ ಎನ್ನುವ ಕಾರಣಕ್ಕೆ ವಿನಾಯಿತಿ ನೀಡುತ್ತಿದ್ದೇನೆ. ಮುಂದಿನ ಸಭೆಯಲ್ಲಿ ಇಲಾಖೆ ಬಗ್ಗೆ ತಿಳಿದುಕೊಳ್ಳದೆ ಸಭೆಗೆ ಬಂದು ನಿಂತರೆ ಮುಲಾಜಿಲ್ಲದೆ ಅಮಾನತು ಮಾಡುತ್ತೇನೆ. ಎಷ್ಟು ವರ್ಷದಿಂದ ಬೆಂಗಳೂರಿನಲ್ಲೇ ಇದ್ದೀರಿ ಎಂಬ ವಿವರ ಪಡೆದು ದೂರದ ಜಿಲ್ಲೆಗಳಿಗೆ ವರ್ಗಾವಣೆ ಮಾಡುತ್ತೇನೆ’ ಎಂದು ಎಚ್ಚರಿಸಿದರು.

ವಿಮಾನದಲ್ಲಿ ಪತ್ತೆಯಾದ 2.8 ಕೆ.ಜಿ ಚಿನ್ನ ವಶಕ್ಕೆ

ಬೆಂಗಳೂರು: ದುಬೈನಿಂದ ಬಂದ ವಿಮಾನವೊಂದರಲ್ಲಿ ಪತ್ತೆಯಾದ 2.8 ಕೆ.ಜಿ ಚಿನ್ನವನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

‘ವಿಮಾನ ನಿಲ್ದಾಣಕ್ಕೆ ದುಬೈನಿಂದ ಮಂಗಳವಾರ ಬಂದಿದ್ದ ಇಂಡಿಗೊ ವಿಮಾನದಲ್ಲಿ ಅಧಿಕಾರಿಗಳು ತಪಾಸಣೆ ನಡೆಸಿದಾಗ ಬ್ಯಾಗ್‌ವೊಂದು ಪತ್ತೆಯಾಗಿತ್ತು. ಪ್ರಯಾಣಿಕರ ಸೀಟಿನ ಕೆಳಗೆ ಬ್ಯಾಗ್ ಅನ್ನು ವ್ಯವಸ್ಥಿತವಾಗಿ ಅಡಗಿಸಿ ಇಡಲಾಗಿತ್ತು. ಬ್ಯಾಗ್ ತೆರೆದಾಗ ಅದರಲ್ಲಿ ಬಿಸ್ಕತ್ತುಗಳ ರೂಪದಲ್ಲಿದ್ದ ಚಿನ್ನ ತುಂಬಿಸಿರುವುದು ಪತ್ತೆಯಾಯಿತು. ಇದರ ಮೌಲ್ಯ ಸುಮಾರು ₹1.37 ಕೋಟಿ ಇರಬಹುದು’ ಎಂದು ಮೂಲಗಳು ತಿಳಿಸಿವೆ.

‘ವಿಮಾನ ನಿಲ್ದಾಣದಲ್ಲಿರುವ ಬಿಗಿ ಭದ್ರತೆಗೆ ಹೆದರಿ, ಬ್ಯಾಗ್ ಅನ್ನು ವಿಮಾನದಲ್ಲೇ ಬಿಟ್ಟು ಹೋಗಿರುವ ಸಾಧ್ಯತೆ ಇದೆ. ಕಳ್ಳಸಾಗಣೆ ಗುಂಪಿನವರು ಬಂದು ತೆಗೆದುಕೊಂಡು ಹೋಗುವ ಉದ್ದೇಶದಿಂದಲೂ ಸೀಟಿನ ಕೆಳಗೆ ಬ್ಯಾಗ್ ಇಟ್ಟಿರಬಹುದು. ವಿದೇಶದಿಂದ ಬರುವ ವಿಮಾನಗಳಲ್ಲಿ ಚಿನ್ನದ ಕಳ್ಳಸಾಗಣೆ ಮಾಡುತ್ತಿರುವ ಅನುಮಾನ ವ್ಯಕ್ತವಾಗಿದ್ದು, ಈ ವಿಮಾನದಲ್ಲಿ ಪ್ರಯಾಣಿಸಿದವರ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದೂ ಹೇಳಿವೆ.

ಠೇವಣಿದಾರರಿಗೆ ವಂಚನೆ: 10ಕ್ಕೆ ಪ್ರತಿಭಟನೆ

ಅಪರಾಧ ಸುದ್ದಿ

ಬೆಂಗಳೂರು: ‘ಶ್ರೀ ಗುರು ರಾಘವೇಂದ್ರ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು. ಈ ಸಂಬಂಧ ಇದೇ 10ರಂದು ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸಲಾಗುವುದು’ ಎಂದು ಬ್ಯಾಂಕಿನ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆಯ ಮಹಾಪೋಷಕ ಡಾ. ಶಂಕರ್ ಗುಹಾ ದ್ವಾರಕನಾಥ್ ಬೆಳ್ಳೂರು ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬ್ಯಾಂಕಿನ ಠೇವಣಿದಾರರು ಅನುಭವಿಸಿರುವ ಸಂಕಷ್ಟವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ಗಮನಕ್ಕೆ ತರುವಲ್ಲಿ ಸ್ಥಳೀಯ ಶಾಸಕರು ಹಾಗೂ ಸಂಸದರು ವಿಫಲರಾಗಿದ್ದಾರೆ. ಇದೀಗ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಠೇವಣಿದಾರರು ಪತ್ರ ಬರೆಯುವ ಮೂಲಕ ಪತ್ರ ಚಳವಳಿ ಆರಂಭಿಸಲಿದ್ದಾರೆ’ ಎಂದರು.

‘ಠೇವಣಿದಾರರಲ್ಲಿ ಈಗಾಗಲೇ 100ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಸಾವಿರಾರು ಮಂದಿ ದೈನಂದಿನ ಜೀವನ ನಡೆಸಲಾಗದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. 46 ಸಾವಿರ ನೇರ ಠೇವಣಿದಾರರು ಹಾಗೂ 120 ಸಹಕಾರಿ ಸಂಸ್ಥೆಗಳಲ್ಲಿ ಠೇವಣಿಯಿಟ್ಟಿದ್ದ ಸುಮಾರು 60ರಿಂದ 80 ಸಾವಿರ ಜನ ಗುರು ರಾಘವೇಂದ್ರ ಬ್ಯಾಂಕ್ ವಂಚನೆಯಿಂದ ಸಂಕಷ್ಟಕ್ಕೀಡಾಗಿದ್ದಾರೆ’ ಎಂದರು.

‘ಸ್ಥಳೀಯ ಸಂಸದ ತೇಜಸ್ವಿ ಸೂರ್ಯ ಮತ್ತು ಶಾಸಕ ಎಲ್.ಎ. ರವಿಸುಬ್ರಮಣ್ಯ ಅವರು ಠೇವಣಿದಾರರ ನೆರವಿಗೆ ಧಾವಿಸಬೇಕಿತ್ತು. ಆದರೆ, ಅವರು ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮದ (ಡಿಐಸಿಜಿಸಿ) ವಿಮೆ ಹಣವನ್ನು ತಾವೇ ಕೊಡಿಸಿದ್ದು ಎಂದು ಸನ್ಮಾನ ಮಾಡಿಸಿಕೊಳ್ಳುತ್ತಿದ್ದಾರೆ’ ಎಂದರು.

‘ನೆಟ್ಟಕಲ್ಲಪ್ಪ ವೃತ್ತದಲ್ಲಿರುವ ಮೈದಾನದಲ್ಲಿ ಇದೇ 10ರಂದು ನಡೆಸಲು ನಿರ್ಧರಿಸಿದ್ದ ಪ್ರತಿಭಟನೆಗೆ ಅವಕಾಶ ದೊರೆತಿಲ್ಲ. ಹೀಗಾಗಿ, ಬ್ಯಾಂಕ್ ಮುಂದೆಯೇ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ’ ಎಂದು ಹೇಳಿದರು.

ಕಾರು ಅಪಘಾತ: 6 ಮಂದಿಗೆ ಗಾಯ

ಚಿಂತಾಮಣಿ: ತಾಲ್ಲೂಕಿನ ಐಮರೆಡ್ಡಿಹಳ್ಳಿಗೇಟ್ ಬಳಿ ಬುಧವಾರ ಸ್ಕಾರ್ಪಿಯೋ ಕಾರು ಚಾಲಕನ ನಿಯಂತ್ರಣ ತಪ್ಪಿ, ರಸ್ತೆ ಬದಿಯ ದೇವಾಲಯದ ಕಲ್ಲು ಚಪ್ಪಡಿಗಳಿಗೆ ಡಿಕ್ಕಿ ಹೊಡೆದು 6 ಮಂದಿ ಗಾಯಗೊಂಡಿದ್ದಾರೆ.

ಆಂಧ್ರ ಪ್ರದೇಶದ ಐವರು ಹಾಗೂ ಬೆಂಗಳೂರಿನ ಒಬ್ಬರಿಗೆ ಗಾಯಗಳಾಗಿವೆ. ಪ್ರಕಾಶಂ ಜಿಲ್ಲೆಯ ಕಂದಕೂರು ಪಟ್ಟಣದ ಚಾಲಕ ರವಿ, ಪಲ್ಮನೇರು ನಗರದ ಗಜೇಂದ್ರ, ಅನಂತಪುರ ಜಿಲ್ಲೆಯ ಗೊಲ್ಲಹಳ್ಳಿ ಗ್ರಾಮದ ಬಾಲಕೃಷ್ಣ, ಹಿಂದೂಪುರ ಜಿಲ್ಲೆಯ ಆಕಂಪಲ್ಲಿಯ ಆನಂದ್ ಕುಮಾರ್, ಹಿಂದೂಪುರ ಜಿಲ್ಲೆಯ ಮೋತಕಂಪಲ್ಲಿ ಗ್ರಾಮದ ಚಂದ್ರಶೇಖರ್, ಬಾಗೇಪಲ್ಲಿ ತಾಲ್ಲೂಕಿನ ಮದ್ದೇಪಲ್ಲಿಗ್ರಾಮದಮನೋಜ್‌ಗಾಯಗೊಂಡವರು. ಆಂಧ್ರಪ್ರದೇಶದ ಭದ್ರಾಚಲಂ, ವಿಜಯವಾಡ ಸೇರಿದಂತೆ ವಿವಿಧ ದೇವಾಲಯಗಳಿಗೆ ಭೇಟಿ ನೀಡಿ ಬೆಂಗಳೂರಿಗೆ ವಾಪಾಸ್ಸಾಗುತ್ತಿದ್ದರು. ಎಲ್ಲರೂ ಬೆಂಗಳೂರಿನನಲ್ಲಿ ಉದ್ಯೋಗದಲ್ಲಿದ್ದವರು.

ಆನೇಕಲ್ : ನಡುರಸ್ತೆಯಲ್ಲೇ ವ್ಯಕ್ತಿಯ ಹತ್ಯೆ

ಆನೇಕಲ್: ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದ ವ್ಯಕ್ತಿಯೊಬ್ಬರ ಕಾರನ್ನು ಅಡ್ಡಗಟ್ಟಿ ನಡುರಸ್ತೆಯಲ್ಲಿಯೇ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಆನೇಕಲ್‌ನ ವೆಂಕಟೇಶ್ವರ ಚಿತ್ರಮಂದಿರ ಸಮೀಪದ ಮೋರ್ ಮಾರುಕಟ್ಟೆ ಮುಂಭಾಗ ಬುಧವಾರ ರಾತ್ರಿ ನಡೆದಿದೆ.

ಕೊಲೆಯಾದ ವ್ಯಕ್ತಿಯನ್ನು ಬಿಟಿಎಂ ಲೇಔಟ್‌ನ ರಾಜಶೇಖರರೆಡ್ಡಿ ಎಂದು ಗುರುತಿಸಲಾಗಿದೆ. ಕಾರ್ಯನಿಮಿತ್ತ ಆನೇಕಲ್‌ಗೆ ಬಂದಿದ್ದ ರಾಜಶೇಖರರೆಡ್ಡಿ ಅವರನ್ನು ಆನೇಕಲ್-ಚಂದಾಪುರ ರಸ್ತೆಯ ಮೋರ್ ಮಾರುಕಟ್ಟೆ ಮುಂಭಾಗದ ರಸ್ತೆಯಲ್ಲಿ ಮೂರು ದ್ವಿಚಕ್ರ ವಾಹನಗಳಲ್ಲಿ ದಿಢೀರನೆ ಬಂದ ದುಷ್ಕರ್ಮಿಗಳು ಕಾರನ್ನು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ರಾಜಶೇಖರ್‌ರೆಡ್ಡಿಯ ಕುತ್ತಿಗೆಯನ್ನು ಕೊಚ್ಚಿ ಹತ್ಯೆ ಮಾಡಿ ಪರಾರಿಯಾಗಿರುವ ಘಟನೆ ನಡೆದಿದೆ.

ನಿಧನ ವಾರ್ತೆ

ಸಿಂಧೂತಾಯಿ ಸಪ್ಕಾಲ್

ಪುಣೆ: ಸಾವಿರ ಅನಾಥ ಮಕ್ಕಳ ತಾಯಿ ಎಂದು ಪ್ರಸಿದ್ಧಿ ಪಡೆದ ಸಿಂಧೂತಾಯಿ ಸಪ್ಕಾಲ್ (72) ಅವರು ಬುಧವಾರ ಇಲ್ಲಿ ನಿಧನರಾದರು.

ಕಡುಬಡತನದಲ್ಲೇ ಹುಟ್ಟಿ ಬೆಳೆದ ಅವರು ಮಹಾರಾಷ್ಟ್ರದ ಹಡಪ್ಸಾರ್ ಎಂಬ ಸ್ಥಳದಲ್ಲಿ 'ಸನ್ಮತಿ ಬಾಲನಿಕೇತನ್'ಎಂಬ ಮೊದಲ ಬೀದಿಯ ಮಕ್ಕಳ ಅನಾಥಾಶ್ರಮ ತೆರೆದು, 50 ವರ್ಷಗಳ ಕಾಲ ಅನಾಥಾಶ್ರಮ ನಡೆಸಿ 1,400 ಮಕ್ಕಳಿಗೆ ಆಶ್ರಯ ನೀಡಿದ್ದರು.

ಅವರಿಗೆ 273 ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳು ದೊರೆತಿವೆ. 2016ರಲ್ಲಿ ಗೌರವ ಡಾಕ್ಟರೇಟ್ ಲಭಿಸಿದೆ. ಭಾರತ ಸರ್ಕಾರವು ಅವರಿಗೆ 2017ರಲ್ಲಿ ಮಹೋನ್ನತ 'ನಾರಿ ಶಕ್ತಿ', ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರ ಬಸವ ಶ್ರೀ ಪ್ರಶಸ್ತಿ ನೀಡಿದೆ.

ಲಂಚ: ಬಿಬಿಎಂಪಿ ಕಂದಾಯ ನಿರೀಕ್ಷಕ ಬಂಧನ

ಬೆಂಗಳೂರು: ಪರಪ್ಪನ ಅಗ್ರಹಾರ ಗ್ರಾಮದ ನಿವಾಸಿಯೊಬ್ಬರು ಖರೀದಿಸಿದ್ದ ಫ್ಲ್ಯಾಟ್ ಒಂದಕ್ಕೆ ಖಾತಾ ಸಂಖ್ಯೆ ನೀಡಲು ₹ 4,000 ಲಂಚ ಪಡೆದ ಬಿಬಿಎಂಪಿ ಕೂಡ್ಲು ವಾರ್ಡ್ ಕಂದಾಯ ನಿರೀಕ್ಷಕ ಗಿರೀಶ್ ಎಂಬುವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬುಧವಾರ ಬಂಧಿಸಿದೆ.

ಫ್ಲ್ಯಾಟ್ ಖರೀದಿದಾರರು ಖಾತೆ ಸಂಖ್ಯೆ ನೀಡುವಂತೆ ಕೋರಿ ವಾರ್ಡ್ ಸಂಖ್ಯೆ 191ರ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಖಾತೆ ನೀಡಲು ₹ 4,000 ಲಂಚ ನೀಡುವಂತೆ ಕಂದಾಯ ನಿರೀಕ್ಷಕ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು.

ಬುಧವಾರ ಅರ್ಜಿದಾರರಿಂದ ಲಂಚ ಪಡೆಯುತ್ತಿದ್ದಾಗಲೇ ದಾಳಿ ಮಾಡಿದ ಎಸಿಬಿ ಅಧಿಕಾರಿಗಳು ಗಿರೀಶ್ ಅವರನ್ನು ಬಂಧಿಸಿದ್ದಾರೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.

ಜಾರ್ಖಂಡ್: ಬಸ್–ಟ್ರಕ್ ಮುಖಾಮುಖಿ ಡಿಕ್ಕಿ; 17 ಮಂದಿ ಸಾವು

ಪಾಕುರ್: ಜಾರ್ಖಂಡ್‌ನ ಪಾಕುರ್ ಜಿಲ್ಲೆಯಲ್ಲಿ ಗ್ಯಾಸ್ ಸಿಲಿಂಡರ್ ಸಾಗಣೆ ಮಾಡುತ್ತಿದ್ದ ಟ್ರಕ್ ಮತ್ತು ಬಸ್ ಮುಖಾಮುಖಿ ಡಿಕ್ಕಿಯಾಗಿದ್ದು, 17 ಮಂದಿ ಮೃತಪಟ್ಟಿದ್ದಾರೆ.

ಪಡೇರ್‌ಕೊಳ ಗ್ರಾಮದ ಸಾಹಿಬ್‌ಗಂಜ್ ಹೆದ್ದಾರಿಯಲ್ಲಿ ಬುಧವಾರ ಬೆಳಿಗ್ಗೆ 8.30ಕ್ಕೆ ಅಪಘಾತ ಸಂಭವಿಸಿದೆ. 40 ಪ್ರಯಾಣಿಕರನ್ನು ಹೊತ್ತ ಬಸ್, ಸಾಹಿಬ್‌ಗಂಜ್ ಜಿಲ್ಲೆಯ ಬರ್ಹರ್ವಾದಿಂದ ಡಿಯೊಘರ್ ಜಿಲ್ಲೆಯ ಜಸಿಡಿಯದತ್ತ ಹೊರಟಿತ್ತು. ಈ ವೇಳೆ ಟ್ರಕ್ ಮತ್ತು ಬಸ್ ಮುಖಾಮುಖಿ ಡಿಕ್ಕಿಯಾಗಿದೆ.

ಎಸ್‌ಸಿ, ಎಸ್‌ಟಿ ಅಲೆಮಾರಿಗೆ ನಿಗಮ: ಸಿದ್ದರಾಮಯ್ಯ ಭರವಸೆ

ಪ್ರಜಾವಾಣಿ ವಾರ್ತೆ

ಎಸ್‌ಸಿ, ಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾದ ನೇತೃತ್ವದ ನಿಯೋಗ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿತು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಶಿವಣ್ಣ, ಮಹಾಸಭಾದ ಅಧ್ಯಕ್ಷ ವೆಂಕಟರಮಣಯ್ಯ, ಪ್ರಧಾನ ಕಾರ್ಯದರ್ಶಿ ಕಿರಣ್‌ಕುಮಾರ್ ಕೊತ್ತಗೆರೆ, ಕಾರ್ಯಾಧ್ಯಕ್ಷ ಆದರ್ಶ ಯಲ್ಲಪ್ಪ, ಜಂಟಿ ಕಾರ್ಯದರ್ಶಿ ಮಂಜುನಾಥ ದಾಯತ್ಕರ್, ಖಜಾಂಚಿ ಕೆ.ಪಿ. ಸಿದ್ದಪ್ಪಾಜಿ ಇತರರು ಇದ್ದರು

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ವರ್ಗ (ಎಸ್‌ಟಿ) ಅಲೆಮಾರಿ, ಅರೆಅಲೆಮಾರಿ, ಆದಿವಾಸಿ, ಅರಣ್ಯ ಮೂಲನಿವಾಸಿ ಬುಡಕಟ್ಟಿಗೆ ಸೇರಿದ 74 ಸಮುದಾಯಗಳ ಅಭಿವೃದ್ಧಿಗೆ ರಚಿಸಿರುವ ‘ಅಭಿವೃದ್ಧಿ ಕೋಶ’ವನ್ನು ನಿಗಮ ಆಗಿ ಘೋಷಿಸುವಂತೆ ಸರ್ಕಾರವನ್ನು ಒತ್ತಡ ಹೇರುವಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಎಸ್‌ಸಿ, ಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾದ ನೇತೃತ್ವದ ನಿಯೋಗ ಮನವಿ ಸಲ್ಲಿಸಿದೆ.

ಮಹಾಸಭಾ ಮತ್ತು ಅಲೆಮಾರಿ ಆದಿವಾಸಿ ಬುಡಕಟ್ಟು ಸಮುದಾಯಗಳ ಸುಮಾರು 20 ಸಂಘ- ಸಂಸ್ಥೆಗಳ 50ಕ್ಕೂ ಹೆಚ್ಚು ಪದಾಧಿಕಾರಿಗಳು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಅಲೆಮಾರಿಗಳ ಅಭಿವೃದ್ಧಿಗೆ ಆರ್ಥಿಕ ಪ್ಯಾಕೇಜ್ ಘೋಷಿಸಲು ವಿಶೇಷ ಕಾಳಜಿ ವಹಿಸಬೇಕು ಎಂದೂ ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಸಿದ್ದರಾಮಯ್ಯ, ‘ನಮ್ಮ ಸರ್ಕಾರದ ಅವಧಿಯಲ್ಲಿ ಎಸ್‌ಸಿ, ಎಸ್‌ಟಿ ಅಲೆಮಾರಿಗಳಿಗೆ ವಿಶೇಷ ಆದ್ಯತೆ ನೀಡಿ ಅಭಿವೃದ್ಧಿ ಕೋಶ ರಚಿಸಿ ₹ 120 ಕೋಟಿ ಆರಂಭಿಕ ಅನುದಾನ ನಿಗದಿಪಡಿಸಲಾಗಿತ್ತು. ಆದರೆ, ಆಡಳಿರೂಢ ಬಿಜೆಪಿ ಸರ್ಕಾರ ಈ ಕೋಶವನ್ನು ನಿಗಮದ ಸ್ವರೂಪಕ್ಕೆ ಬದಲಾಯಿಸದೆ ಅಲೆಮಾರಿ ವಿರೋಧಿ ಧೋರಣೆ ಮಾಡುತ್ತಿದೆ’ ಎಂದು ದೂರಿದರು.

‘ವಿಧಾನಮಂಡಲ ಅಧಿವೇಶನದಲ್ಲಿ ಅನ್ಯಾಯದ ಬಗ್ಗೆ ಗಮನ ಸೆಳೆಯಲಾಗುವುದು. ರಾಜ್ಯದಲ್ಲಿ ಮುಂದೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ಅಲೆಮಾರಿಗಳ ಅಭಿವೃದ್ಧಿ ನಿಗಮ ಸ್ಥಾಪಿಸಿ ₹ 500 ಕೋಟಿ ಮೀಸಲಿಡಲಾಗುವುದು’ ಎಂದು ಭರವಸೆ ನೀಡಿದರು.

‘ಬಿಜೆಪಿ ವಿರೋಧ ಪಕ್ಷದಂತೆ ವರ್ತಿಸುತ್ತಿದೆ’

ಪ್ರೊ.ಬಿ.ಕೆ. ಚಂದ್ರಶೇಖರ್

ಬೆಂಗಳೂರು: ‘ಕಾಂಗ್ರೆಸ್ ಹಮ್ಮಿಕೊಂಡಿರುವ ಪಾದಯಾತ್ರೆ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರಕ್ಕೆ ಅತೀವ ಮುಜುಗರ ತಂದಿರುವುದು ಸೋಜಿಗದ ಸಂಗತಿ’ ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ.ಚಂದ್ರಶೇಖರ್ ಹೇಳಿದ್ದಾರೆ.

‘ಪಾದಯಾತ್ರೆ ಕಾರ್ಯಕ್ರಮ ಕುರಿತು ಬಹುತೇಕ ಸಚಿವರು ಖಾರವಾದ ಭಾಷೆಯಲ್ಲಿ ಟೀಕೆ ಹಾಗೂ ಅಪಹಾಸ್ಯ ಮಾಡುತ್ತಿದ್ದಾರೆ. ‘ಡಬಲ್ ಎಂಜಿನ್’ (ಕೇಂದ್ರ - ರಾಜ್ಯದಲ್ಲಿ ಬಿಜೆಪಿ) ಸರ್ಕಾರ ಇದ್ದರೂ ಅವರಿಗೆ ಏನೋ ಆಭಾಸವಾದಂತಿದೆ. ರಾಜ್ಯ ಸರ್ಕಾರ ತನ್ನ ಆಡಳಿತ, ಸಾಧನೆಗಳ ಬಗ್ಗೆ ಹೇಳಿಕೊಳ್ಳುವ ಬದಲು ವಿರೋಧ ಪಕ್ಷದಂತೆ ವರ್ತಿಸುತ್ತಿದೆ. ಬಹುಶಃ ಹಿಂದುತ್ವ ಕಾರ್ಯಸೂಚಿಯ ಇತಿಮಿತಿ ಅವರಿಗೆ ಅರಿವು ಆಗಿರಬಹುದೇ’ ಎಂದೂ ಪ್ರಶ್ನಿಸಿದ್ದಾರೆ.

ಕೋವಿಡ್ ನಿರ್ವಹಣೆ: ಕಾರ್ಯಕರ್ತರಿಗೆ ಸಿಎಂ ಸಲಹೆ

ಪ್ರಜಾವಾಣಿ ವಾರ್ತೆ

ಬಿಜೆಪಿ ಕಾರ್ಯಾಲಯದದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ, ಸಂಸದ ಡಿ.ವಿ.ಸದಾನಂದಗೌಡ ಇದ್ದರು.

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಪಕ್ಷದ ಜನಪ್ರತಿನಿಧಿಗಳು ಮತ್ತು ಕಾರ್ಯಕರ್ತರು ಕೋವಿಡ್ ನಿರ್ವಹಣೆಗೆ ಸಹಕರಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು.

ಬುಧವಾರ ಪಕ್ಷದ ಕಾರ್ಯಾಲಯ ‘ಜಗನ್ನಾಥಭವನ’ಕ್ಕೆ ಭೇಟಿ ನೀಡಿದ ಅವರು ಪಕ್ಷದ ಪದಾಧಿಕಾರಿಗಳು, ಸಂಸದರು, ಶಾಸಕರ ಜತೆ ಈ ಸಂಬಂಧ ಸಮಾಲೋಚನೆ ನಡೆಸಿದರು.

ನಗರ ಮತ್ತು ರಾಜ್ಯದಲ್ಲಿ ಮುಂದಿನ ಕೆಲವು ವಾರಗಳಲ್ಲಿ ಕೋವಿಡ್ ಪ್ರಮಾಣ ತೀವ್ರವಾಗಿ ಹೆಚ್ಚುವ ಸಾಧ್ಯತೆ ಇದೆ. ಇದರ ನಿಗ್ರಹಕ್ಕೆ ಜನ ಜಾಗೃತಿ, ವಾರ್ಡ್ ಮಟ್ಟದಲ್ಲಿ ವಾರ್‌ರೂಮ್, ಕಾಲ್‌ಸೆಂಟರ್ ಮಾಡಿ ಜನರ ಸೇವೆಯಲ್ಲಿ ಪಕ್ಷದ ಪ್ರಮುಖರು ಮತ್ತು ಕಾರ್ಯಕರ್ತರು ಸೇವೆ ಸಲ್ಲಿಸಬೇಕೆಂದು ಸೂಚಿಸಿದರು.

ಮೇಕೆದಾಟು ವಿಚಾರದಲ್ಲಿ ಕಾಂಗ್ರೆಸ್ ಪಾದಯಾತ್ರೆ ಅನಪೇಕ್ಷಿತ. ಈ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಬದ್ಧವಾಗಿದೆ. ಕಾಂಗ್ರೆಸ್ಸಿಗರು ತಪ್ಪು ಮಾಹಿತಿ ಹರಡುವ ಮೂಲಕ ಪ್ರಚಾರ ಗಿಟ್ಟಿಸಲು ಯತ್ನಿಸುತ್ತಿದ್ದಾರೆ. ಇದರ ಕುರಿತು ಜನರಿಗೆ ಸರಿಯಾದ ಮಾಹಿತಿ ನೀಡಬೇಕಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ, ಸಂಸದ ಡಿ.ವಿ. ಸದಾನಂದಗೌಡ ಇದ್ದರು.

ಶೇ 50ರಷ್ಟು ಸಿಬ್ಬಂದಿ ಹಾಜರಾತಿಗೆ ಸುತ್ತೋಲೆ

ಬೆಂಗಳೂರು: ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಅಗತ್ಯ ಸೇವೆಗಳನ್ನು ನಿರ್ವಹಿಸುತ್ತಿರುವ ಇಲಾಖೆಗಳನ್ನು ಹೊರತುಪಡಿಸಿ ಉಳಿದ ಎಲ್ಲ ಇಲಾಖೆಗಳಲ್ಲಿ ‘ಬಿ’, ‘ಸಿ’ ಮತ್ತು ‘ಡಿ’ ದರ್ಜೆಯ ಶೇಕಡ 50ರಷ್ಟು ಅಧಿಕಾರಿಗಳು ಹಾಗೂ ಸಿಬ್ಬಂದಿ ಮಾತ್ರ ಕರ್ತವ್ಯಕ್ಕೆ ಹಾಜರಾಗಬೇಕು ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಬುಧವಾರ ಸುತ್ತೋಲೆ ಹೊರಡಿಸಿದ್ದಾರೆ.

‘ಅಗತ್ಯ ಸೇವೆಗಳನ್ನು ನಿರ್ವಹಿಸುತ್ತಿರುವ ಇಲಾಖೆಗಳಲ್ಲಿ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಬೇಕು. ಉಳಿದ ಇಲಾಖೆಗಲಲ್ಲಿ ‘ಎ’ ದರ್ಜೆಯ ಎಲ್ಲ ಅಧಿಕಾರಿಗಳೂ ಕಚೇರಿಗೆ ಹಾಜರಾಗಬೇಕು. ‘ಬಿ’, ‘ಸಿ’ ಮತ್ತು ‘ಡಿ’ ದರ್ಜೆಯ ನೌಕರರಲ್ಲಿ ಅರ್ಧದಷ್ಟು ಮಂದಿ ಸರದಿಯ ಆಧಾರದಲ್ಲಿ ಕಚೇರಿಗೆ ಹಾಜರಾಗಬೇಕು’ ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಕಚೇರಿಗೆ ಹಾಜರಾಗುವುದಕ್ಕೆ ವಿನಾಯಿತಿ ನೀಡಿದ್ದರೂ, ಇಲಾಖೆಯ ಕಾರ್ಯದರ್ಶಿ ಅಥವಾ ಮುಖ್ಯಸ್ಥರು ಇಚ್ಛಿಸಿದಲ್ಲಿ ಅಂತಹ ಅಧಿಕಾರಿ ಅಥವಾ ನೌಕರರು ಯಾವುದೇ ಕಾರಣ ನೀಡದೇ ಹಾಜರಾಗಬೇಕು. ಕೋವಿಡ್‌ಗೆ ಸಂಬಂಧಿಸಿದ ಕರ್ತವ್ಯಕ್ಕೆ ನಿಯೋಜಿಸಿರುವ ಅಧಿಕಾರಿಗಳು ಮತ್ತು ನೌಕರರು ತಪ್ಪದೇ ಹಾಜರಾಗಬೇಕು ಎಂದು ಸೂಚಿಸಿದ್ದಾರೆ. ಅಂಧರು, ದೈಹಿಕ ಅಂಗವಿಕಲರು, ಗರ್ಭಿಣಿಯರಿಗೆ ಕಚೇರಿಗೆ ಹಾಜರಾಗುವುದರಿಂದ ವಿನಾಯ್ತಿ ನೀಡಲಾಗಿದೆ ಎಂದು ಮುಖ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ಆನೇಕಲ್: ಒಂದೇ ದಿನ 92 ಜನರಿಗೆ ಕೊರೊನಾ

ನಗರದ ಬ್ಯಾಟರಾಯನಪುರ ಪೊಲೀಸ್ ಠಾಣೆಯ ಎಲ್ಲ ಸಿಬ್ಬಂದಿಗೆ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಲಾಯಿತು.

ಆನೇಕಲ್ : ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಬುಧವಾರ ಒಂದೇ ದಿನ 92 ಕೊರೊನಾ ಸೋಂಕಿನ ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ತಾಲ್ಲೂಕಿನಲ್ಲಿ ಒಟ್ಟು 292 ಸಕ್ರಿಯ ಪ್ರಕರಣಗಳು ದಾಖಲಾಗಿವೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ವಿನಯ್ ತಿಳಿಸಿದರು.

10 ದಿನಗಳ ಅವಧಿಯಲ್ಲಿ ಒಟ್ಟು 292 ಪ್ರಕರಣಗಳು ದಾಖಲಾಗಿವೆ. ಈ ಪೈಕಿ 254 ಮಂದಿ ಹೋಂ ಐಸೋಲೇಷನ್‌ನಲ್ಲಿದ್ದಾರೆ. 38 ಮಂದಿ ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ. ಒಬ್ಬರು ಮೃತಪಟ್ಟಿದ್ದಾರೆ. ಹೆಬ್ಬಗೋಡಿ, ಚಂದಾಪುರ, ಜಿಗಣಿಗಳಲ್ಲಿ ಹೆಚ್ಚಿನ ಪ್ರಕರಣಗಳು ಪತ್ತೆಯಾಗುತ್ತಿವೆ. ಪ್ರತಿದಿನ 4,000-4,500 ಮಂದಿಯ ಕೊರೊನಾ ಪರೀಕ್ಷೆ ಮಾಡಲಾಗುತ್ತಿದೆ. ಮುಂಬರುದ ದಿನಗಳಲ್ಲಿ ದಿನಕ್ಕೆ 6 ಸಾವಿರ ಮಂದಿಯನ್ನು ಪರೀಕ್ಷಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಅಗತ್ಯ ಸೇವೆಗಷ್ಟೇ ಬಿಎಂಟಿಸಿ ಬಸ್

ಬೆಂಗಳೂರು: ವಾರಾಂತ್ಯದ ಕರ್ಫ್ಯೂ ಸಂದರ್ಭದಲ್ಲಿ ಅಗತ್ಯ ಸೇವೆಗಳಿಗೆ ಮಾತ್ರ ಬಸ್‌ಗಳ ಕಾರ್ಯಾಚರಣೆ ಇರಲಿದೆ ಎಂದು ಬಿಎಂಟಿಸಿ ಸ್ಪಷ್ಟಪಡಿಸಿದೆ.

ಕಂಟೈನ್ಮೆಂಟ್ ವಲಯ ಹೊರತುಪಡಿಸಿ ಉಳಿದೆಡೆ ಬೆಳಿಗ್ಗೆ 6ರಿಂದ ರಾತ್ರಿ 10ರ ತನಕ ಶೇ 10ರಷ್ಟು ಅಗತ್ಯ ಸಾರಿಗೆ ಕಾರ್ಯಾಚರಣೆ ಮಾಡಲಾಗುವುದು. ಸರ್ಕಾರಿ, ಅರೆ ಸರ್ಕಾರಿ ನೌಕರರು, ಪೊಲೀಸ್, ಗೃಹರಕ್ಷಕ ದಳ, ಅಗ್ನಿಶಾಮಕ ಸೇರಿ ತುರ್ತು ಸೇವೆಯ ಸಿಬ್ಬಂದಿ, ಆಸ್ಪತ್ರೆ, ಅರೆ ಸರ್ಕಾರಿ, ಆಶಾ ಕಾರ್ಯಕರ್ತೆಯರು, ಮಾಧ್ಯಮ ಪ್ರತಿನಿಧಿಗಳು, ಬ್ಯಾಂಕ್ ಸಿಬ್ಬಂದಿಗೆ ಬಸ್‌ನಲ್ಲಿ ಪ್ರಯಾಣಿಸಲು ಅನುಮತಿ ಇದೆ. ‘ರೈಲು, ವಿಮಾನ ಪ್ರಯಾಣಿಕರು ಮುಂಗಡ ಕಾಯ್ದಿರಿಸಿದ ಟಿಕೆಟ್ ತೋರಿಸಿ ಪ್ರಯಾಣ ಮಾಡಬಹುದು. ಪರೀಕ್ಷೆಗೆ ಹಾಜರಾಗಬೇಕಿರುವ ವಿದ್ಯಾರ್ಥಿಗಳು ಪ್ರವೇಶ ಪತ್ರ ತೋರಿಸಬೇಕು. ಸರ್ಕಾರ ಅನುಮತಿ ನೀಡಿರುವ ಕೈಗಾರಿಕೆಗಳು ಮತ್ತು ಇತರ ವಲಯದ ಸಿಬ್ಬಂದಿ ಗುರುತಿನ ಚೀಟಿ ತೋರಿಸಿ ಪ್ರಯಾಣ ಮಾಡಬಹುದು’ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ವಿವರಿಸಿದ್ದಾರೆ.

ಕೆ.ಆರ್‌ಪುರದ ಶ್ರೀವೆಂಕಟೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಬಿಬಿಎಂಪಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 15 ರಿಂದ 18 ವರ್ಷದ ಮಕ್ಕಳಿಗೆ ನೀಡುವ ಲಸಿಕಾ ಅಭಿಯಾನಕ್ಕೆ ಶ್ರೀವೆಂಕಟೇಶ್ವರ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಡಾ.ಕೆ.ವಿ.ಮುನಿಸ್ವಾಮಿ ಚಾಲನೆ ನೀಡಿದರು. ವ್ಯವಸ್ಥಾಪಕ ನಿರ್ದೇಶಕ ಪ್ರೊ ವಿ.ಎಂ. ರವಿ, ಪ್ರಾಂಶುಪಾಲ ಜಿ.ಇ.ಪ್ರಕಾಶ್, ಪ್ರಾಧ್ಯಾಪಕ ಮದನ್ ಕುಮಾರ್ ಇದ್ದರು. 530 ವಿದ್ಯಾರ್ಥಿಗಳು ಲಸಿಕೆ ಹಾಕಿಸಿಕೊಂಡರು.

ಗೋವಾದಿಂದ ಬರುವವರಿಗೆ ಪರೀಕ್ಷಾ ವರದಿ ಕಡ್ಡಾಯ

ಬೆಂಗಳೂರು: ಗೋವಾದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಅಲ್ಲಿಂದ ರಸ್ತೆ ಸೇರಿದಂತೆ ವಿವಿಧ ಮಾರ್ಗಗಳ ಮೂಲಕ ಇಲ್ಲಿಗೆ ಬರುವವರು ಕಡ್ಡಾಯವಾಗಿ ಆರ್‌ಟಿ–ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಹೊಂದಿರಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ವಿಮಾನ, ರೈಲು, ಬಸ್ ಹಾಗೂ ಖಾಸಗಿ ವಾಹನಗಳ ಮೂಲಕ ಗೋವಾದಿಂದ ಬರುವವರು ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿರಬೇಕು. ಪರೀಕ್ಷಾ ವರದಿಯು ಪ್ರಯಾಣಕ್ಕೂ ಮೊದಲಿನ 72 ಗಂಟೆಗಳ ಅವಧಿಯನ್ನು ಮೀರಿರಬಾರದು. ಸೋಂಕಿತರಾಗಿಲ್ಲ ಎನ್ನುವುದು ದೃಢಪಡಿಸಿಕೊಂಡ ಬಳಿಕ ಮಾತ್ರ ವಿಮಾನಯಾನ ಸಂಸ್ಥೆಗಳು ಬೋರ್ಡಿಂಗ್ ಪಾಸ್ ನೀಡಬೇಕು. ರೈಲುಗಳಲ್ಲಿ ಪ್ರಯಾಣಿಸುವವರಿಗೆ ರೈಲ್ವೆ ಪ್ರಾಧಿಕಾರ ಹಾಗೂ ಬಸ್‌ಗಳಲ್ಲಿ ಸಂಚರಿಸುವವರಿಗೆ ನಿರ್ವಾಹಕರು ಪರೀಕ್ಷಾ ವರದಿಯನ್ನು ಪರಿಶೀಲಿಸಬೇಕು. ಗಡಿ ಜಿಲ್ಲೆಗಳಾದ ಬೆಳಗಾವಿ ಹಾಗೂ ಉತ್ತರ ಕನ್ನಡದಲ್ಲಿ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಿ, ರಾಜ್ಯಕ್ಕೆ ಬರುವವರ ಮೇಲೆ ನಿಗಾ ಇರಿಸಬೇಕು ಎಂದು ತಿಳಿಸಲಾಗಿದೆ.

ಶಾಲಾ–ಕಾಲೇಜು, ಕಚೇರಿ ಕೆಲಸ, ವ್ಯಾಪಾರ–ವ್ಯವಹಾರ ಸೇರಿದಂತೆ ಇತರ ಕಾರಣಗಳಿಗೆ ಪ್ರತಿನಿತ್ಯ ಬರುವವರು 15 ದಿನಗಳಿಗೊಮ್ಮೆ ಆರ್‌ಟಿ–ಪಿಸಿಆರ್ ಪರೀಕ್ಷಾ ವರದಿಯನ್ನು ಹೊಂದಿರಬೇಕು. ವೈದ್ಯರು, ವೈದ್ಯಕೀಯ ಸಿಬ್ಬಂದಿ ಹಾಗೂ ಐದು ವರ್ಷದೊಳಗಿನ ಮಕ್ಕಳಿಗೆ ಪರೀಕ್ಷೆ ವರದಿಯ ವಿನಾಯಿತಿ ಇರುತ್ತದೆ. ಕುಟುಂಬದಲ್ಲಿ ಮರಣ, ವೈದ್ಯಕೀಯ ಚಿಕಿತ್ಸೆ ಸೇರಿದಂತೆ ವಿವಿಧ ತುರ್ತು ಸಂದರ್ಭದಲ್ಲಿ ಬಂದವರಿಗೆ ಕೋವಿಡ್ ಪರೀಕ್ಷೆ ನಡೆಸಲು ಮಾದರಿಗಳನ್ನು ಸಂಗ್ರಹಿಸಬೇಕು ಎಂದು ಸೂಚಿಸಲಾಗಿದೆ.

ಒಂದೂವರೆ ತಿಂಗಳಲ್ಲಿ 3ನೇ ಅಲೆ ಇಳಿಕೆ

ಡಾ.ಕೆ. ಸುಧಾಕರ್

ಚಿಕ್ಕಬಳ್ಳಾಪುರ: ‘ಕೋವಿಡ್ ಮೂರನೇ ಅಲೆ ಒಂದೂವರೆ ತಿಂಗಳಲ್ಲಿ ಕಡಿಮೆ ಆಗುತ್ತದೆ ಎಂಬುದಾಗಿ ತಾಂತ್ರಿಕ ಸಲಹಾ ಸಮಿತಿ ವರದಿ ಕೊಟ್ಟಿದೆ’ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಐದಾರು ವಾರ ಎಲ್ಲರೂ ಮುನ್ನೆಚ್ಚರಿಕೆ ವಹಿಸಬೇಕು. ಮೂರನೇ ಅಲೆಯೇ ಅಂತಿಮವಾದುದು ಎಂದು ನಿರೀಕ್ಷಿಸಲಾಗಿದೆ’ ಎಂದರು.

ಮುಂದಿನ ಒಂದು ವಾರದ ಒಳಗೆ ರಾಜ್ಯದ 15ರಿಂದ 18 ವರ್ಷದ ಒಳಗಿನ ಎಲ್ಲ ಮಕ್ಕಳಿಗೂ ಕೋವಿಡ್ ಲಸಿಕೆ ಹಾಕಲಾಗುವುದು. ರಾಜ್ಯದ ಗಡಿಭಾಗಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಹೊರರಾಜ್ಯ, ದೇಶದಿಂದ ಬಂದವರ ಬಗ್ಗೆ ನಿಗಾವಹಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಓಮೈಕ್ರಾನ್ ತಳಿ ಸೋಂಕು ತಡೆಗೆ ಯಾವ ರೀತಿಯ ಕ್ರಮವನ್ನು ಅನುಸರಿಸಲಾಗಿದೆ ಎನ್ನುವುದನ್ನು ತಜ್ಞರಿಂದ ತಿಳಿದು ಚರ್ಚಿಸಿದ ನಂತರ ಸರ್ಕಾರ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದರು.

IN THE COURT OF THE ADDITIONAL CITY CIVIL AND SESSIONS JUDGE AT BENGALURU (CCH 92)
MISC NO. 1106/2019

BETWEEN
The State of Karnataka
Represented by Competent Authority
Assistant Commissioner, Bengaluru North
Sub Division, 2nd Floor Kandaya Bhavana
K.G. Road, Bengaluru-560009 ...Petitioner

AND
M/S Muzaribah Trading LLP,
And another
Office at No. 19/5 Moque Road,
Frazer Town, Bengaluru-560005. & others ...Respondents

Notice to Respondents No. 1 to 5

Respondent No.1
M/S Muzaribah Bullion Trading LLP,
Office at No. 19/5 Moque Road,
Frazer Town, Bengaluru-560005.

Respondent No. 2
Mohammed Riyaz Ahmed,
S/O Mohammed Hussain,
No. 19/5 Moque Road,
Frazer Town, Bengaluru-560005.

Respondent No. 3
Ahmed Faizan
S/O Nissar Ahmed,
No. 19/5 Moque Road,
Frazer Town, Bengaluru-560005.

Respondent No. 4
Mohammed Mudassar Pasha
S/O Muqtiar Ahmed,
No. 19/5 Moque Road,
Frazer Town, Bengaluru-560005.

Respondent No.5
Syed Tabrez Ahmed
No.19/5 Moque Road,
Frazer Town, Bengaluru-560005.

Whereas the Petitioner has filed the Misc, Petition No. 1106/2019 under Section 5(2) of the Karnataka Protection of Interest of Depositors in Financial Establishments Act 2004 against respondents.

The Respondent No. 1 and 5 are hereby summoned to appear in the Court of the Additional City Civil & Sessions Judge at Bengaluru (CCH NO. 92), in person or by a pleader duly instructed and able to answer all material questions relating to Misc. Petition No.1106/2019 on 17-01-2022 at 11.00 ‘O’ Clock in the forenoon to answer the claim.

Take notice that in default of your appearance on the date above mentioned the Misc. Petition will be heard and determined in your absence.

Given under my hand and seal of the court this day on 03-01-2022.

Sd/-
Shantha B Mullur
Special Public Prosecutor,
City Civil Court Bangalore.

By order of the court
Assistant Registrar
City Civil Court
Bengaluru

DIPR/DDU/2675/AKAR/2021-22

ವಿಧಾನಪರಿಷತ್ ಸದಸ್ಯ ಪೂಜಾರಗೆ ಕೋವಿಡ್ ದೃಢ

ಬಾಗಲಕೋಟೆ: ವಿಧಾನಪರಿಷತ್ ನೂತನ ಸದಸ್ಯರಾಗಿ ಆಯ್ಕೆಯಾಗಿರುವ ಪಿ.ಎಚ್.ಪೂಜಾರ ಅವರಿಗೆ ಕೋವಿಡ್ ದೃಢಪಟ್ಟಿದೆ. ಅವರು ಗುರುವಾರ ಪ್ರಮಾಣ ವಚನ ಸ್ವೀಕರಿಸಲಿದ್ದರು. ಬೆಂಗಳೂರಿಗೆ ತೆರಳಲು ಆರ್‌ಟಿಪಿ ಸಿಆರ್ ತಪಾಸಣೆ ಮಾಡಿಸಿಕೊಂಡಾಗ ಕೋವಿಡ್ ಸೋಂಕು ದೃಢಪಟ್ಟಿದೆ. ಪೂಜಾರ ಅವರ ಕುಟುಂಬ ಸದಸ್ಯರೊಬ್ಬರಿಗೂ ಕೋವಿಡ್ ಖಚಿತವಾಗಿದೆ. ಇಬ್ಬರಲ್ಲೂ ಜ್ವರದ ಲಕ್ಷಣವಿಲ್ಲ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬೆಂಗಳೂರಿನಲ್ಲಿ ಸೋಂಕು ದೃಢ ಪ್ರಮಾಣ ಶೇ 6.45ಕ್ಕೆ ಏರಿಕೆ

ಕೋವಿಡ್: ರಾಜ್ಯದಲ್ಲಿ ಹೊಸ 4,246 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದ್ದು, 4,246 ಮಂದಿಗೆ ಕೊರೊನಾ ಸೋಂಕು ತಗುಲಿರುವುದು ಬುಧವಾರ ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 1.27 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 3.33ಕ್ಕೆ ತಲುಪಿದೆ. ರಾಜ್ಯದ 26 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗಿವೆ. 15 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 8 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೆಂಗಳೂರಿನಲ್ಲಿ 3,605 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕು ದೃಢ ಪ್ರಮಾಣವು ಶೇ 6.45ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ವರದಿಯಾದ ಹೊಸ ಪ್ರಕರಣಗಳಲ್ಲಿ ಶೇ 85 ರಷ್ಟು ಸೋಂಕಿತರು ರಾಜಧಾನಿಯಲ್ಲಿಯೇ ಪತ್ತೆಯಾಗಿದ್ದಾರೆ. ದಕ್ಷಿಣ ಕನ್ನಡದಲ್ಲಿ 111, ಉಡುಪಿಯಲ್ಲಿ 88, ಮೈಸೂರಿನಲ್ಲಿ 59, ತುಮಕೂರಿನಲ್ಲಿ 43, ಮಂಡ್ಯದಲ್ಲಿ 36, ಬಳ್ಳಾರಿಯಲ್ಲಿ 34 ಹಾಗೂ ಬೆಳಗಾವಿಯಲ್ಲಿ 31 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 30ಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.17 ಲಕ್ಷ ದಾಟಿದೆ.

ಸೋಂಕಿತರಲ್ಲಿ 362 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.61 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, 17,414 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಬೆಂಗಳೂರಿನಲ್ಲಿ 11,762 ಸಕ್ರಿಯ ಪ್ರಕರಣಗಳಿವೆ. ದಕ್ಷಿಣ ಕನ್ನಡದಲ್ಲಿ ಸೋಂಕಿತರ ಸಂಖ್ಯೆ 441ಕ್ಕೆ ಏರಿಕೆಯಾಗಿದೆ. ಉಡುಪಿ, ಮೈಸೂರು ಸೇರಿದಂತೆ 10 ಜಿಲ್ಲೆಗಳಲ್ಲಿ 100ಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.04 ರಷ್ಟು ಇದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,357ಕ್ಕೆ ಏರಿಕೆಯಾಗಿದೆ.

ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ಮೀಸಲಿಡಲು ಆದೇಶ

ಬೆಂಗಳೂರು: ರಾಜ್ಯದಲ್ಲಿ ಓಮೈಕ್ರಾನ್ ಮತ್ತು ಕೋವಿಡ್ ಪ್ರಕರಣ ಹೆಚ್ಚುತ್ತಿರುವುದರಿಂದ ಕೋವಿಡ್ ರೋಗಿಗಳ ತುರ್ತು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳು, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಹಾಸಿಗೆಗಳನ್ನು ಮೀಸಲಿಡಲು ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಖಾಸಗಿ ಆಸ್ಪತ್ರೆಗಳು ಮತ್ತು ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ತಕ್ಷಣದಿಂದಲೇ ಐಸಿಯು, ವೆಂಟಿಲೇಟರ್ ಒಳಗೊಂಡ ಐಸಿಯುಗಳು, ಆಮ್ಲಜನಕ ಒಳಗೊಂಡ ಸಾಮಾನ್ಯ ಹಾಸಿಗೆಗಳ ವಿಭಾಗದದಲ್ಲಿ ಶೇ 30 ರಷ್ಟು ಹಾಸಿಗೆಗಳನ್ನು ಮೀಸಲಿಡಬೇಕು. ಸಾರ್ವಜನಿಕ ಆರೋಗ್ಯ ಇಲಾಖೆ ಶಿಫಾರಸು ಮಾಡುವ ರೋಗಿಗಳಿಗೆ ಖಾಸಗಿ ಆಸ್ಪತ್ರೆಗಳು ಶೇ 50 ರಷ್ಟು ಹಾಸಿಗೆಗಳನ್ನು ಮೀಸಲಿಡಬೇಕು. ಇದು (7.01.22 ರಿಂದ) ಉಚಿತವಾಗಿದ್ದು, ಸರ್ಕಾರವೇ ಚಿಕಿತ್ಸಾ ವೆಚ್ಚ ಭರಿಸಲಿದೆ.

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಐಸಿಯು, ವೆಂಟಿಲೇಟರ್ ಒಳಗೊಂಡ ಐಸಿಯುಗಳು, ಆಮ್ಲಜನಕ ಒಳಗೊಂಡ ಸಾಮಾನ್ಯ ಹಾಸಿಗೆಗಳ ವಿಭಾಗದಲ್ಲಿ ಶೇ 50 ರಷ್ಟು (7.01.22 ರಿಂದ) ಮತ್ತು ಶೇ 75 ರಷ್ಟು (10.01.22 ರಿಂದ) ಹಾಸಿಗೆಗಳನ್ನು ಆರೋಗ್ಯ ಇಲಾಖೆ ಶಿಫಾರಸು ಮಾಡುವ ರೋಗಿಗಳಿಗಾಗಿ ಮೀಸಲಿಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸುಧಾಕರ್ ರಾಜೀನಾಮೆಗೆ ಆಗ್ರಹ

ಬೆಂಗಳೂರು: 'ಲಸಿಕೆ ಬಂದ ಬಳಿಕವೂ ಕೋವಿಡ್ ಸೋಂಕು ತಡೆಗೆ ಕರ್ಫ್ಯೂ ಮೊರೆ ಹೋಗಿರುವ ಆರೋಗ್ಯ ಸಚಿವ ಡಾ. ಸುಧಾಕರ್ ಅವರ ರಾಜೀನಾಮೆ ಪಡೆದು ಕರ್ಫ್ಯೂ ತೆರವುಗೊಳಿಸಬೇಕು' ಎಂದು ಕಾಂಗ್ರೆಸ್ ಮುಖಂಡ ಎಚ್‌.ಸಿ. ಮಹದೇವಪ್ಪ ಟ್ವೀಟ್‌ನಲ್ಲಿ ಆಗ್ರಹಿಸಿದ್ದಾರೆ.

ಲಾಕ್‌ಡೌನ್ ಮಾಡುವುದು ಅನಿವಾರ್ಯವಾದರೆ ಕಾರ್ಮಿಕರು, ರೈತರು ಸೇರಿದಂತೆ ಎಲ್ಲ ಬಗೆಯ ದುಡಿಯುವ ಜನತೆಗೆ ಪರಿಹಾರಪ್ಯಾಕೇಜ್ ಘೋಷಿಸಬೇಕು

ಮಲ್ಲಿಕಾರ್ಜುನ ಖರ್ಗೆ,
ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

ಓಮೈಕ್ರಾನ್ 226ಕ್ಕೆ ಏರಿಕೆ

ಕೊರೊನಾ ವೈರಾಣುವಿನ ರೂಪಾಂತರ ತಳಿ ಓಮೈಕ್ರಾನ್ ಪ್ರಕರಣಗಳೂ ಹೆಚ್ಚಳವಾಗಿವೆ. ಹೊಸ ತಳಿಯ ಸೋಂಕು 149 ಮಂದಿಯಲ್ಲಿ ಮಂಗಳವಾರ ರಾತ್ರಿ ದೃಢಪಟ್ಟಿದೆ.

ಈ ಮಾದರಿಯ ಪ್ರಕರಣಗಳ ಒಟ್ಟು ಸಂಖ್ಯೆ 226ಕ್ಕೆ ಏರಿಕೆಯಾಗಿದೆ. ರಾಜ್ಯದಲ್ಲಿ ಈವರೆಗೆ 2,937 ಡೆಲ್ಟಾ ಪ್ರಕರಣಗಳು ಹಾಗೂ ಡೆಲ್ಟಾ ಉಪ ತಳಿಯ 1,350 ಪ್ರಕರಣಗಳು ವರದಿಯಾಗಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

PUBLIC NOTICE

My client entered into Sale Agreement to purchase the Schedule Property from Sri B. Shivakumar S/o Y. B. Banashankarappa and his legal heirs residing at No. 37, Mohiddin Sab Lane Narayanashettypet, Bangalore -560 002. This notice is hereby given for the information of General Public that any persons or Banks or Financial Institutions or any statutory authorities having any right the interest or claim against the Schedule Property may contact with documentary proof in support of his/her/their claim. If no claim is so lodged with us within the said period of 15 days from the date of publication, it shall be presumed by my client that no one has any claim against the Sechedule Property.

SCHEDULE PROPERTY:
All that piece and parcel of immovable property bearing Old No. 5, re-numbered as No. 7 Presently assigned as New Corporation No. 37, portion of Provisional (Chalta No.) CTS No. 319, P.T. Sheet No. 265, City Survey No. 818 situated at Mohiddin Sab Lane Narayanashettypet, Bruhat Bangalore Mahanagara Palike Old Ward No. 28, New Ward No. 109, Bangalore-560 002 consisting of 800 Sft., of ground floor, 800 Sft., of First floor, 800 Sft., of second floor residential house. Site measuring East to West: 58 feet, North to South 22 feet total area 1276 Sft. Bounded on East by: House belongs to Y. B. Banappa West By: Road, North by: House belongs to B. Rajashekar, South by: House belongs to P. C. Rajappa.

Sd/-
P. NARASIMHAIAH, Advocate
No.1, 18th Cross,
Malleswaram,
Bangalore-560 055
E-mail: p.narasimhaiah@yahoo.co.in
Phone: 080-23343461, 080-23343467
Place: Bangalore
Date: 05-01-2022

ಉದ್ಯೋಗಾವಕಾಶ

Wanted

✓ ಕರ್ನಾಟಕದಾದ್ಯಂತ ಕಂಪನಿ /ಆಫೀಸ್ ಕೆಲಸಗಳಿಗೆ ಯುವಕ / ಯುವತಿಯರು ಬೇಕಾಗಿದ್ದಾರೆ.Any Education. ವಸತಿಯೂಟದೊಂದಿಗೆ Salary +OT. 17,800-48,000/- 9538811211, 9538811200

Part-Time Jobs

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

✓ ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸಗಳಿಗೆ ಯುವಕ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th, SSLC, PUC, ITI, Degree Pass/ Fail ಆದವರಿಗೆ (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/ PF ನೊಂದಿಗೆ ಸಂಬಳ:16,500/ ರಿಂದ 45,000/ ದವರೆಗೆ: 9742260055, 9538133533

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155 8139988588

✓ ಬೇಕಾಗಿದ್ದಾರೆ : ಟಾಟಾ ಮೋಟಾರ್ರ್ಸ, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC,PUC,Degree ಡಿಪ್ಲೋಮಾದವರು 18,000-62,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ 8197650569, 7204396011

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 8792252077, ಶಿವಮೊಗ್ಗ. 9008013895

CONNECT

ದಾವಣಗೆರೆಯ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್ ರೇಷ್ಮೆ ಸೀರೆ ವ್ಯಾಪಾರಿಗಳು
ಸಂಕ್ರಾಂತಿ ಹಬ್ಬದ ಮಾರಾಟ
ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಕಲ್ಯಾಣ ಮಂಟಪ ಸಮಿತಿ
ಎಸ್. ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್ ಸರ್ಕಲ್ ಹತ್ತಿರ, ದಾವಣಗೆರೆ–577004.
ಮೊ. : 6385697571
ದಿನಾಂಕ: 5,6,7,8 & 9 ನೇ ಜನವರಿ 2022
ಕೊನೆಯ ದಿನ ಸಂಜೆ 5.00 ಗಂಟೆಗೆ ಮುಕ್ತಾಯ
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ
ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ
ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ರ್ಸ, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

BANKING, TELLCALLERS, Work from Home, Field Executive, Accountants, Salary16000/- - 26000/-. SSLC, PUC, Degree. 8951939589.

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Tumkur

ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ (ರಿ), ಮಹಾಲಕ್ಷ್ಮಿಪುರಂ, ಬೆಂಗಳೂರು86. ಫೋನ್ 08023490073. ತುಮಕೂರು ಕ್ಯಾತ್ಸಂದ್ರ ಜಂಕ್ಷನ್ ನಿಂದ ಗುಬ್ಬಿ ಗೇಟ್ ರಸ್ತೆ, 31 ವಾರ್ಡಿನ 30x50 ಅಳತೆ ಉಳ್ಳ ಎರಡು ನಿವೇಶನಗಳು ಮಾರಾಟಕ್ಕೆ ಇದೆ. ಆಸಕ್ತಿ ಉಳ್ಳವರು ಈ ಕೆಳಗಿನ ಮೊಬೈಲ್ ನಂಬರಿಗೆ ಸಂಪರ್ಕಿಸಿ. ಮೊ: 9900959516, 9448153982.

ಭವಿಷ್ಯ

Astrology

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ ಎಲ್ಲಾ ರೀತಿಯ ದೈಹಿಕ ,ಮಾನಸಿಕ ಕಾಯಿಲೆಗಳು, ನಿಮ್ಮೆಲ್ಲಾ ರೀತಿಯ ಪರಿಹಾರವಾಗದ ಸಮಸ್ಯೆಗಳು, ಜನ್ಮಜನ್ಮಾಂತರ ದೋಷಗಳ ನಿವಾರಣೆಗೆ ಕೂಡಲೇ ಸಂಪರ್ಕಿಸಿ: 7676750280

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ವಶೀಕರಣ ಸ್ಪೆಷಲಿಸ್ಟ್ ಪ್ರೀತಿ, ಸ್ತ್ರೀ ವಶೀಕರಣ, ದಾಂಪತ್ಯ, ಕುಟುಂಬ ಕಲಹ, ಯಾವುದೇ ಗುಪ್ತ ಸಮಸ್ಯೆಗಳಿಗೆ ಖಚಿತಪರಿಹಾರ 9902157331, A.R.Ganachari

ಪ್ರವಾಸ

Travel

★ಶ್ರೇಯಸ್ ಟೂರ್ಸ್★ ದಿನಾಂಕ:28.01.2022 13ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ ಸರ್ದಾರ್ ಪ್ರತಿಮೆ,ಕಚ್‌ಬುಚ್ ಸಹಿತ.,22.01.2022 5ದಿನಗಳು ಶ್ರೀನಗರ,ಗುಲ್‌ಮಾರ್ಗ್,ಫೆಹಲ್ ಗಾಂ,ಸೊನುಮಾರ್ಗ್.,02.03.2022 11ದಿನಗಳು ಚಂಡೀಗಡ್,ಸಿಮ್ಲಾ, ಕುಲುಮನಾಲಿ,5ದೇವಿಯರು, ಡಾಲ್‌ಹೌಸಿ,ವೈಷ್ಣೋದೇವಿ, ಅಮೃತ್‌ಸರ್,ವಾಘಗಡಿ, ಕುರುಕ್ಷೇತ್ರ.,02.03.2022 10ದಿನಗಳು ಅಖಂಡ ನೇಪಾಳ ರಾಷ್ಟ್ರ ಪ್ರವಾಸ(ಮುಕ್ತಿನಾಥ ಸಹಿತ),(ಎಲ್ಲಾ ವಿಮಾನದಲ್ಲಿ). 9743351212, 9206979202, 9902050065, 7406112334

★ಶ್ರೇಯಸ್ ಟೂರ್ಸ್★ ದಿನಾಂಕ:08.02.2022 6ದಿನಗಳು ಮಾಘಮಾಸ ಪುಣ್ಯಸ್ನಾನ ಪ್ರವಾಸ ನೈಮಿಷ್ಯಾರಣ್ಯ,ತ್ರಿವೇಣಿಸಂಗಮ, ಸೀತಾಮಡು,ವಿಂಧ್ಯಾವಾಸಿನಿ, ಕಾಶಿ.,ದಿನಾಂಕ:16.02.2022 11ದಿನಗಳು ಕಾಶಿ,ಗಯಾ ಅಯೋಧ್ಯ,ನೈಮಿಷ್ಯಾರಣ್ಯ, ಚಿತ್ರಕೂಟ,ಪ್ರಯಾಗರಾಜ್, ಗಯಾ,ರಾಜ್‌ಗಿರ್,ದೇವಘರ್. ಕಾಶಿ.9743351212, 9206979202, 9902050065, 7406112334

21-1-2022 ಕಾಶಿ, ಗಯಾ, ಅಯೋಧ್ಯ 8ದಿನ. 2-2-2022 ಕಾಶಿ, ಆಗ್ರ, ದೆಹಲಿ 13ದಿನ. 25-3-2022 ಗ್ಯಾಂಗ್ಟಾಕ್, ಡಾರ್ಜಿಲಿಂಗ್, ಕಲ್ಕತ್ತಾ, ಭುವನೇಶ್ವರ 12ದಿನ. ನಂದಿನಿ ಟೂರಿಸ್ಟ್ 9916574089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA
CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

24ಗಂಟೆಗಳ ಅವಧಿಯಲ್ಲಿ 58,097 ಪ್ರಕರಣಗಳು ದಾಖಲು

ಎಂಟು ದಿನಗಳಲ್ಲಿ ಆರು ಪಟ್ಟು ಏರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳು ಭಾರಿ ಸಂಖ್ಯೆಯಲ್ಲಿ ಏರಿಕೆಯಾಗಿವೆ. ಬುಧವಾರ ಬೆಳಿಗ್ಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ 58,097 ಹೊಸ ಪ್ರಕರಣಗಳು ವರದಿಯಾಗಿವೆ. ಇದು 199 ದಿನಗಳಲ್ಲೇ ಅಧಿಕ. ಹೀಗಾಗಿ ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 2 ಲಕ್ಷವನ್ನು ದಾಟಿದೆ. ಒಂದೇ ದಿನ 534 ಜನರು ಮೃತಪಟ್ಟಿದ್ದಾರೆ.

ದೇಶದ 24 ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದೇ ದಿನ 2,135 ಓಮೈಕ್ರಾನ್ ಪ್ರಕರಣ ವರದಿಯಾಗಿವೆ. ಮಹಾರಾಷ್ಟ್ರದಲ್ಲಿ ಅತ್ಯಧಿಕ ಅಂದರೆ 653 ಪ್ರಕರಣ ಕಂಡುಬಂದಿವೆ. ದೆಹಲಿಯಲ್ಲಿ 464, ಕೇರಳದಲ್ಲಿ 185, ರಾಜಸ್ಥಾನದಲ್ಲಿ 174, ಗುಜರಾತ್‌ನಲ್ಲಿ 154 ಮತ್ತು ತಮಿಳುನಾಡಿನಲ್ಲಿ 121 ಸೋಂಕಿತರು ಪತ್ತೆಯಾಗಿದ್ದಾರೆ.

ದೇಶದಲ್ಲಿ ಕಳೆದ 8 ದಿನಗಳ ಅವಧಿಯಲ್ಲಿ ಕೋವಿಡ್ ಪ್ರಕರಣಗಳು 6.3 ಪಟ್ಟು ಹೆಚ್ಚಾಗಿವೆ. ಕೋವಿಡ್ ದೃಢಪಡುವ ಪ್ರಮಾಣವು ಶೇ 0.79ರಿಂದ ಶೇ 5.03ಕ್ಕೆ ಜಿಗಿತ ಕಂಡಿದೆ.

ದೇಶದ ಆರು ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶದಲ್ಲಿ ನಿತ್ಯವೂ 10,000ಕ್ಕೂ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ. ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ದೆಹಲಿ, ಕೇರಳ, ತಮಿಳುನಾಡು, ಜಾರ್ಖಂಡ್ ಹಾಗೂ ಗುಜರಾತ್ ರಾಜ್ಯಗಳು ಭಾರಿ ಸಂಖ್ಯೆಯ ಕೋವಿಡ್ ಪ್ರಕರಣಗಳನ್ನು ವರದಿ ಮಾಡುತ್ತಿವೆ.

ದೇಶದ 28 ಜಿಲ್ಲೆಗಳಲ್ಲಿ ವಾರದ ಕೋವಿಡ್ ದೃಢಪಡುವ ಪ್ರಮಾಣ ಶೇ 10ಕ್ಕಿಂತ ಹೆಚ್ಚಾಗಿದೆ. 43 ಜಿಲ್ಲೆಗಳಲ್ಲಿ ಇದರ ಪ್ರಮಾಣವು ಶೇ 5ರಿಂದ ಶೇ 10ರ ವ್ಯಾಪ್ತಿಯಲ್ಲಿದೆ. ಆದರೆ ಓಮೈಕ್ರಾನ್ ಹೆಚ್ಚಿರುವ ದೇಶಗಳಿಗೆ ಹೋಲಿಸಿದರೆ, ದೇಶದಲ್ಲಿ ಆಸ್ಪತ್ರೆ ಸೇರುವವರ ಪ್ರಮಾಣ ಕಡಿಮೆಯಿದೆ.

ಜಗತ್ತಿನಾದ್ಯಂತ ಮಂಗಳವಾರ ಒಂದೇ ದಿನ 25.2 ಲಕ್ಷ ಪ್ರಕರಣಗಳು ವರದಿಯಾಗಿದ್ದು, ಇದು ಸಾಂಕ್ರಾಮಿಕ ಆರಂಭವಾದ ಬಳಿಕದ ಅತ್ಯಧಿಕ ದಾಖಲೆ ಎನಿಸಿದೆ.

ಮನೆಯಲ್ಲಿ ಪ್ರತ್ಯೇಕವಾಸಕ್ಕೆ ಮಾರ್ಗಸೂಚಿ ಬಿಡುಗಡೆ

ದೇಶದಲ್ಲಿ ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಹಬ್ಬುತ್ತಿರುವ ಕಾರಣ, ಮನೆಯಲ್ಲಿ ಪ್ರತ್ಯೇಕವಾಸಕ್ಕೆ (ಹೋಮ್ ಐಸೋಲೇಷನ್) ಸಂಬಂಧಿಸಿದ ಪರಿಷ್ಕೃತ ಮಾರ್ಗಸೂಚಿಗಳನ್ನು ಕೇಂದ್ರ ಆರೋಗ್ಯ ಸಚಿವಾಲಯ ಬುಧವಾರ ಬಿಡುಗಡೆ ಮಾಡಿದೆ.

- ಸೌಮ್ಯ ರೋಗಲಕ್ಷಣಗಳನ್ನು ಹೊಂದಿರುವ ಅಥವಾ ರೋಗ ಲಕ್ಷಣಗಳು ಕಾಣಿಸದ ವ್ಯಕ್ತಿಗಳು ಮನೆಯಲ್ಲಿ ಪ್ರತ್ಯೇಕವಾಗಿ ಇರಬೇಕು
- ಸತತ ಮೂರು ದಿನಗಳವರೆಗೆ ಜ್ವರ ಕಾಣಿಸದಿದ್ದರೆ, 7 ದಿನಗಳಲ್ಲಿ ಅವರು ತಮ್ಮ ಪ್ರತ್ಯೇಕವಾಸ ಮುಗಿಸಬಹುದು. ಈ ಮೊದಲು 10 ದಿನಗಳ ಮನೆವಾಸಕ್ಕೆ ಶಿಫಾರಸು ಮಾಡಲಾಗಿತ್ತು. ಪರಿಷ್ಕೃತ ಮಾರ್ಗಸೂಚಿಯಲ್ಲಿ 3 ದಿನ ಕಡಿತ ಮಾಡಲಾಗಿದೆ.
- ಪ್ರತ್ಯೇಕವಾಸ ಮುಗಿಯುವ ಸಮಯದಲ್ಲಿ ಮತ್ತೆ ಸೋಂಕು ಪತ್ತೆ ಪರೀಕ್ಷೆ ನಡೆಸುವ ಅಗತ್ಯವಿಲ್ಲ. ಇದು ಪ್ರಯೋಗಾಲಯಗಳ ಮೇಲಿನ ಒತ್ತಡ ಕಡಿಮೆ ಮಾಡುತ್ತದೆ
- ಸೋಂಕು ದೃಢಪಟ್ಟ ವ್ಯಕ್ತಿಯ ಸಂಪರ್ಕಕ್ಕೆ ಬಂದವರು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವ ಅಗತ್ಯವಿಲ್ಲ. ಮನೆಯಲ್ಲಿಯೇ ತಮ್ಮ ಆರೋಗ್ಯದ ಮೇಲೆ ನಿಗಾ ವಹಿಸಬೇಕು
- ಸೋಂಕಿತ ವ್ಯಕ್ತಿಯಲ್ಲಿ ಮೂರು ದಿನಗಳಿಂದ ನಿರಂತರವಾಗಿ 100 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು ಜ್ವರ ಕಾಣಿಸಿಕೊಂಡರೆ, ಸತತ ಮೂರು ದಿನಗಳಿಂದ ಉಸಿರಾಟದ ಸಮಸ್ಯೆ ಇದ್ದರೆ ಅಥವಾ ಆಮ್ಲಜನಕದ ಪ್ರಮಾಣವು ಶೇ 93ಕ್ಕಿಂತ ಕಡಿಮೆ ಇದ್ದರೆ ಮಾತ್ರ ಆಸ್ಪತ್ರೆಗೆ ದಾಖಲಾಗಬೇಕು.
- ನಿರಂತರ ನೋವು ಅಥವಾ ಎದೆಯಲ್ಲಿ ಒತ್ತಡ, ಮಾನಸಿಕ ಗೊಂದಲ ಮತ್ತು ತೀವ್ರ ಆಯಾಸ ಮತ್ತು ಸ್ನಾಯು ನೋವು (ಮೈಯಾಲ್ಜಿಯಾ) ಕಾಣಿಸಿಕೊಂಡರೆ ಆಸ್ಪತ್ರೆಗೆ ದಾಖಲಾಗಬಹುದು
- ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ ಅಧಿಕೃತವಲ್ಲದ ಔಷಧ ಬಳಸುವುದು, ಸ್ವಯಂ ಚಿಕಿತ್ಸೆ ಪಡೆಯುವುದರಿಂದ ಜನರು ದೂರ ಇರುವಂತೆ ಸೂಚಿಸಲಾಗದೆ

ಎಲ್ಲೆಲ್ಲಿ ಕರ್ಫ್ಯೂ/ನಿರ್ಬಂಧ

- ಗುರುವಾರದಿಂದ ಅನ್ವಯವಾಗುವಂತೆ ರಾಜ್ಯದಾದ್ಯಂತ ರಾತ್ರಿ ಕರ್ಫ್ಯೂಗೆ ತಮಿಳುನಾಡು ಸರ್ಕಾರ ನಿರ್ಧರಿಸಿದೆ. ಬಸ್, ಉಪನಗರ ರೈಲು, ಮೆಟ್ರೊಗಳು ಶೇ 50ರಷ್ಟು ಪ್ರಯಾಣಿಕರ ಸಾಮರ್ಥ್ಯದೊಂದಿಗೆ ಓಡಾಡಬೇಕು
- ಹಿಮಾಚಲ ಪ್ರದೇಶದಾದ್ಯಂತ ರಾತ್ರಿ ಕರ್ಫ್ಯೂ ಜಾರಿಗೆ ಸರ್ಕಾರ ನಿರ್ಧರಿಸಿದೆ. ಸಿನಿಮಾಮಂದಿರ, ಒಳಾಂಗಣ ಕ್ರೀಡಾಂಗಣ, ಈಜುಕೊಳ, ಜಿಮ್ ಬಂದ್‌ಗೂ ತೀರ್ಮಾನ
- ಛತ್ತೀಸಗಡದ ರಾಯಪುರ ಜಿಲ್ಲೆಯಲ್ಲಿ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಜಿಲ್ಲೆಯ ಅಂಗನವಾಡಿ, ಗ್ರಂಥಾಲಯ, ಈಜುಕೊಳಗಳನ್ನೂ ಬಂದ್ ಮಾಡಲಾಗಿದೆ
- ನಿತ್ಯ 1000ಕ್ಕೂ ಹೆಚ್ಚು ಪ್ರಕರಣಗಳು ವರದಿಯಾದ ಜಿಲ್ಲೆಗಳಲ್ಲಿ ಕಠಿಣ ಕ್ರಮ ಜಾರಿಗೆ ಉತ್ತರ ಪ್ರದೇಶ ಸರ್ಕಾರ ಮುಂದಾಗಿದೆ. ನೋಯ್ಡಾ, ಮತ್ತು ಗ್ರೇಟರ್ ನೋಯ್ಡಾಗಳನ್ನು ಒಳಗೊಂಡ ಗೌತಮ್‌ಬುದ್ಧ ನಗರದಲ್ಲಿ ಒಂದು ಸಾವಿರ ಪ್ರಕರಣ ಕಂಡುಬಂದಿವೆ.
- ಮಧ್ಯಪ್ರದೇಶದ ಇಂದೋರ್‌ನಲ್ಲಿ ಕಳೆದ 10 ದಿನಗಳಲ್ಲಿ ಕೋವಿಡ್ ಪ್ರಕರಣಗಳಲ್ಲಿ ಶೇ 23ರಷ್ಟು ಏರಿಕೆ ದಾಖಲಾಗಿದೆ
- ಗುವಾಹಟಿಯ ಐಐಟಿಯಲ್ಲಿ ಕಳೆದ ಆರು ದಿನಗಳಲ್ಲಿ 50 ಜನರಿಗೆ ಕೋವಿಡ್ ದೃಢಪಟ್ಟಿದ್ದು, ಕ್ಯಾಂಪಸ್‌ನಲ್ಲಿ ಹಲವು ನಿರ್ಬಂಧ ಜಾರಿಗೆ ತರಲಾಗಿದೆ
- ಕೋವಿಡ್ ಪ್ರಕರಣ ಏರಿಕೆ ಹಿನ್ನೆಲೆಯಲ್ಲಿ, ಜ.7ರಿಂದ ಆರಂಭವಾಗಬೇಕಿದ್ದ 27ನೇ ಕೋಲ್ಕತ್ತ ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಸ್ಥಗಿತಗೊಳಿಸಲು ಪಶ್ಚಿಮ ಬಂಗಾಳ ಸರ್ಕಾರ ನಿರ್ಧರಿಸಿದೆ.
- 15ರಿಂದ 18 ವರ್ಷ ವಯೋಮಾನದ 1.06 ಕೋಟಿ ಮಕ್ಕಳಿಗೆ (ಶೇ 14.3) ಮೊದಲ ಡೋಸ್ ಕೋವಿಡ್ ಲಸಿಕೆ ನೀಡಲಾಗಿದೆ.
- ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕೋವಿಡ್ ಪ್ರಕರಣಗಳು ಕಬಂಧಬಾಹು ಚಾಚಿವೆ. ಬುಧವಾರ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ 10,665 ಪ್ರಕರಣಗಳು ವರದಿಯಾಗಿವೆ.

ವಿಮ್ಸ್‌ನ 35 ವೈದ್ಯ ವಿದ್ಯಾರ್ಥಿಗಳಿಗೆ ಕೋವಿಡ್

ಬಳ್ಳಾರಿ: ಇಲ್ಲಿನ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ವಿಮ್ಸ್) 21 ವೈದ್ಯ ವಿದ್ಯಾರ್ಥಿಗಳೂ ಸೇರಿದಂತೆ ಬುಧವಾರ ಒಂದೇ ದಿನ ಜಿಲ್ಲೆಯಲ್ಲಿ 34 ಮಂದಿಗೆ ಕೊರೊನಾ ಸೋಂಕು ತಗುಲಿದೆ. ಕಳೆದ ಮೂರು ದಿನಗಳಿಂದ ಕೋವಿಡ್ ಸೋಂಕಿತರ ಒಟ್ಟು ಸಂಖ್ಯೆ 82ಕ್ಕೆ ಏರಿದೆ. ಇದಲ್ಲದೆ ಸಂಡೂರು ತಾಲ್ಲೂಕಿನ ತೋರಣಗಲ್ಲು ಹೋಬಳಿಯಲ್ಲಿ 13 ಮಂದಿಗೆ ಕೋವಿಡ್ ದೃಢಪಟ್ಟಿದೆ.

'ಇದುವರೆಗೆ 35 ವಿಮ್ಸ್ ವಿದ್ಯಾರ್ಥಿಗಳನ್ನು ಜಿಲ್ಲಾ ಆಸ್ಪತ್ರೆಗೆ ಸೇರಿಸಲಾಗಿದೆ. ಇವರೆಲ್ಲರೂ ಹಾಸ್ಟೆಲ್ ವಿದ್ಯಾರ್ಥಿಗಳಾಗಿದ್ದರಿಂದ ಇನ್ನುಳಿದ 250 ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. . ಮಹಿಳಾ ಹಾಸ್ಟೆಲ್‌ನ 650 ವಿದ್ಯಾರ್ಥಿನಿಯರನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ' ಎಂದು ವಿಮ್ಸ್ ನಿರ್ದೇಶಕ ಡಾ. ಗಂಗಾಧರಗೌಡ ತಿಳಿಸಿದರು.

ಸಂಸದ ಡಿ.ಕೆ. ಸುರೇಶ್ ಆರೋಪ

ಪಾದಯಾತ್ರೆ ಹತ್ತಿಕ್ಕಲು ಕರ್ಫ್ಯೂ

ಪ್ರಜಾವಾಣಿ ವಾರ್ತೆ



ಡಿ.ಕೆ. ಸುರೇಶ್

ರಾಮನಗರ: 'ರಾಜ್ಯ ಬಿಜೆಪಿ ಸರ್ಕಾರ ಮೇಕೆದಾಟು ಪಾದಯಾತ್ರೆ ಹತ್ತಿಕ್ಕುವ ಕೆಲಸ ಮಾಡುತ್ತಿದ್ದು, ಯಾರು ಏನೇ ನಿರ್ಬಂಧ ಹೇರಿದರೂ ಪಾದಯಾತ್ರೆ ನಡೆದೇ ನಡೆಯುತ್ತದೆ' ಎಂದು ಸಂಸದ ಡಿ.ಕೆ. ಸುರೇಶ್ ಹೇಳಿದ್ದಾರೆ.

ಕನಕಪುರದಲ್ಲಿ ಬುಧವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು 'ರಾಜ್ಯ ಸರ್ಕಾರ ಸದ್ಯ ನೀಡುತ್ತಿರುವ ಕೋವಿಡ್ ಅಂಕಿ– ಅಂಶಗಳು ಅನುಮಾನ ಮೂಡಿಸುವಂತಿವೆ. ಅಧಿಕಾರಿಗಳ ಮೇಲೆ ಒತ್ತಡ ಹೇರಿ ಉದ್ದೇಶಪೂರ್ವಕವಾಗಿ ಹೆಚ್ಚು ಪ್ರಕರಣ ತೋರಿಸಲಾಗುತ್ತಿದೆ' ಎಂದು ಆರೋಪಿಸಿದರು.

'ಸದ್ಯ ಸರ್ಕಾರ ಹೇರಿರುವುದು ಕೊರೊನಾ ಕರ್ಫ್ಯೂ ಅಲ್ಲ, ಬಿಜೆಪಿ ಕರ್ಫ್ಯೂ. ಈ ದೇಶದಲ್ಲಿ, ರಾಜ್ಯದಲ್ಲಿ ನಾನಾ ಕಾರ್ಯಕ್ರಮಗಳು ನಡೆಯುತ್ತಿವೆ. ಆಗ ಕಾಣದ ಕೊರೊನಾ ನಮ್ಮ ಪಾದಯಾತ್ರೆ ಸಮಯದಲ್ಲಿ ಹೇಗೆ ಕಂಡಿತೋ ಗೊತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ನಾವು ನೀರಿಗಾಗಿ ನಡಿಗೆ ಹಮ್ಮಿಕೊಂಡಿದ್ದೇವೆ. ಇದು ಜನರಿಗಾಗಿ ಮಾಡುತ್ತಿರುವ ಹೋರಾಟ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನಿಜವಾಗಿ ಜನರ ಕಾಳಜಿ ಇದ್ದಲ್ಲಿ ಕೂಡಲೇ ಯೋಜನೆಗೆ ಚಾಲನೆ ನೀಡಲಿ'ಎಂದರು.

ಪಾದಯಾತ್ರೆ ಮಾರ್ಗ ಪರಿಷ್ಕರಣೆ ಕುರಿತು ಮಾತನಾಡಿ, 'ಈ ಬಗ್ಗೆ ನಮ್ಮ ಪಕ್ಷದ ನಾಯಕರು ತೀರ್ಮಾನಿಸುತ್ತಾರೆ. ರಾಮನಗರ ಜಿಲ್ಲೆಯಲ್ಲಿ ಸದ್ಯ ಕೊರೊನಾ ಕೇಸ್‌ಗಳು ಹೆಚ್ಚು ಇಲ್ಲ. ಮತ್ತೆಲ್ಲಿ ಜಾಸ್ತಿ ಇದೆಯೋ ಗೊತ್ತಿಲ್ಲ' ಎಂದರು.

ಪಾದಯಾತ್ರೆ ಮಾಡಿದರೆ ಪ್ರಕರಣ ದಾಖಲಿಸುವುದಾಗಿ ಎಚ್ಚರಿಕೆ ನೀಡಿರುವ ಬಗ್ಗೆ ಮಾತನಾಡಿ, 'ಕೇಸ್‌ಗಳಿಗೆಲ್ಲ ಹೆದರಿಕೊಂಡು ರಾಜಕಾರಣ ಮಾಡಲು ಆಗದು. ಹೋರಾಟ ಮಾಡಬೇಕಾದರೆ ಕೇಸು, ಜೈಲು ಎಲ್ಲ ಮಾಮೂಲಿ. ನಾವು ಎಲ್ಲದಕ್ಕೂ ಸಿದ್ಧರಾಗಿದ್ದೇವೆ. ಸರ್ಕಾರ ಮೇಕೆದಾಟು ಪಾದಯಾತ್ರೆ ತಡೆದರೆ ಜೈಲ್ ಭರೋ ಕಾರ್ಯಕ್ರಮ ಮಾಡುತ್ತೇವೆ' ಎಂದು ಎಚ್ಚರಿಸಿದರು.

ಪಾದಯಾತ್ರೆಗೆ ಎಚ್‌.ಡಿ. ಕುಮಾರಸ್ವಾಮಿ ವಿರೋಧ ಕುರಿತು ಪ್ರತಿಕ್ರಿಯಿಸಿದ ಅವರು, 'ಅವರೆಲ್ಲ ದೊಡ್ಡವರು. ಅವರು ಮಾಡಿದರೆ ಪಾದಯಾತ್ರೆ, ನಾವು ಮಾಡಿದರೆ ರಾಜಕಾರಣ. ಸಮಯವೇ ಎಲ್ಲವನ್ನೂ ತೀರ್ಮಾನ ಮಾಡುತ್ತದೆ' ಎಂದರು.

ರಾಮನಗರದಲ್ಲಿ ಮುಖ್ಯಮಂತ್ರಿ ಪಾಲ್ಗೊಂಡ ಕಾರ್ಯಕ್ರಮದಲ್ಲಿ ಪ್ರತಿಭಟನೆ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಿರುವ ಬಗ್ಗೆ ಮಾತನಾಡಿದ ಸುರೇಶ್ 'ಬಡವರ ಮೇಲೆ ಯಾಕೆ ಕೇಸ್ ಹಾಕುತ್ತಾರೆ. ನನ್ನ ಮೇಲೆ ಹಾಕಲು ಹೇಳಿ. ರಾಮನಗರದಲ್ಲಿ ಯಾರಿದ್ದೀರಿ ಗಂಡಸು ಅಂತ ಕರೆದ ಮೇಲೆ ಈ ಭಾಗದ ಜನಪ್ರತಿನಿಧಿಯಾಗಿ ಕೇಳಬೇಕು ಅಲ್ಲವಾ' ಎಂದರು.

'ಪಾದಯಾತ್ರೆ: ಸೂಕ್ತ ಸಮಯದಲ್ಲಿ ಕ್ರಮ'



ಬಸವರಾಜ ಬೊಮ್ಮಾಯಿ

ನಾಗಮಂಗಲ (ಮಂಡ್ಯ): 'ಕೋವಿಡ್ ಕಾನೂನು ಪಾಲಿಸುವುದು, ಬಿಡುವುದು ಕಾಂಗ್ರೆಸ್ ಮುಖಂಡರಿಗೆ ಬಿಟ್ಟ ವಿಚಾರ. ಆದರೆ, ಸರ್ಕಾರ ಸೂಕ್ತ ಸಮಯದಲ್ಲಿ ಸೂಕ್ತ ಕ್ರಮ ಜರುಗಿಸಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಪರೋಕ್ಷವಾಗಿ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೋವಿಡ್‌ಗೆ ಸಂಬಂಧಿಸಿ ಒಂದು ಕಾನೂನು ಇದೆ. ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಜವಾಬ್ದಾರಿಯುತವಾಗಿ ವರ್ತಿಸಬೇಕು. ಕಾನೂನು ಪಾಲಿಸಬೇಕು ಎಂಬುದು ನಮ್ಮ ಅಪೇಕ್ಷೆ. ನಾವು ತಿಳಿದದ್ದನ್ನೇ ಮಾಡುತ್ತೇವೆ ಎಂದರೆ ಜನ ಅದನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ' ಎಂದರು.

'ಕಾಂಗ್ರೆಸ್ ಮುಖಂಡರೂ ಸರ್ಕಾರ ನಡೆಸಿ ಹಲವು ಕಾನೂನುಗಳನ್ನು ಜಾರಿಗೊಳಿಸಿದ್ದಾರೆ. ಕಾನೂನು ಎಲ್ಲರಿಗೂ ಒಂದೇ. ಕೋವಿಡ್ ನಿಯಂತ್ರಣಕ್ಕೆ ಬಂದ ನಂತರ ಏನು ಬೇಕಾದರೂ ಮಾಡಬಹುದು. ಚಳವಳಿಯನ್ನೂ ಮಾಡಬಹುದು' ಎಂದರು.

ಓಂಶಕ್ತಿ ಯಾತ್ರೆ: ಮತ್ತೆ 40 ಮಂದಿಗೆ ಸೋಂಕು

ಶ್ರೀರಂಗಪಟ್ಟಣ (ಮಂಡ್ಯ): ಓಂ ಶಕ್ತಿ ಯಾತ್ರೆಯಿಂದ ಮಂಗಳವಾರ ವಾಪಸಾಗಿದ್ದ ತಾಲ್ಲೂಕಿನ ಚಂದಗಾಲು ಮತ್ತು ಅರಕೆರೆ ಗ್ರಾಮದ 40 ಮಂದಿಗೆ ಕೊರೊನಾ ಸೋಂಕು ತಗುಲಿದೆ.

ಚಂದಗಾಲು ಗ್ರಾಮದ 26 ಹಾಗೂ ಅರಕೆರೆ ಗ್ರಾಮದ 14 ಮಂದಿಯನ್ನು ಪಟ್ಟಣದ ಕೋವಿಡ್ ಆರೈಕೆ ಕೇಂದ್ರಕ್ಕೆ ಬುಧವಾರ ದಾಖಲಿಸಲಾಗಿದೆ.

'ಯಾತ್ರೆ ಮುಗಿಸಿ ಬಂದ ಚಂದಗಾಲು, ಅರಕೆರೆ ಮತ್ತು ಮೇಳಾಪುರದ 120 ಮಂದಿಯ ಗಂಟಲು ದ್ರವವನ್ನು ಮಂಗಳವಾರ ಸಂಜೆ ಪರೀಕ್ಷೆ ಮಾಡಲಾಗಿತ್ತು. ಉಳಿದವರಿಗೆ ಒಂದು ವಾರದ ಬಳಿಕ ಪರೀಕ್ಷೆ ಮಾಡಿಸಲಾಗುತ್ತದೆ. ಊರಲ್ಲೇ ಇದ್ದ ಮೂವರಲ್ಲಿ ಸೋಂಕು ಕಂಡು ಬಂದಿದ್ದು, ಒಂದೇ ದಿನ 43 ಮಂದಿಗೆ ಸೋಂಕು ದೃಢಪಟ್ಟಿದೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಎನ್. ಕೆ.ವೆಂಕಟೇಶ್ ತಿಳಿಸಿದ್ದಾರೆ.

'ಬುಧವಾರ ಮುಂಜಾನೆ ವಾಪಸಾಗಿರುವ ತಾಲ್ಲೂಕಿನ ಕೆ.ಶೆಟ್ಟಹಳ್ಳಿಯ 20 ಮಂದಿಯ ಗಂಟಲು ದ್ರವದ ಪರೀಕ್ಷೆ ಮಾಡಲಾಗಿದ್ದು, ಗುರುವಾರ ಫಲಿತಾಂಶ ಬರಲಿದೆ. ಮತ್ತಷ್ಟು ಮಂದಿ ವಾಪಸಾಗಬೇಕಿದ್ದು, ಎಲ್ಲರನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುವುದು' ಎಂದು ತಿಳಿಸಿದ್ದಾರೆ.

ಆರೈಕೆ ಕೇಂದ್ರ: 'ಪಟ್ಟಣದ ಗಂಜಾಂ ರಸ್ತೆಯಲ್ಲಿರುವ ಬಾಲಕರ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದಲ್ಲಿ ಕೋವಿಡ್ ಆರೈಕೆ ಕೇಂದ್ರ ತೆರೆಯಲಾಗಿ' ಎಂದು ಹೇಳಿದ್ದಾರೆ.

ಕೋವಿಡ್ ಪ್ರಕರಣ ಹೆಚ್ಚಳ ಹಿನ್ನೆಲೆಯಲ್ಲಿ ಕ್ರಮ • ವರ್ಚುವಲ್ ಪ್ರಚಾರಕ್ಕೆ ಪಕ್ಷಗಳ ಸಿದ್ಧತೆ

ಕಾಂಗ್ರೆಸ್, ಬಿಜೆಪಿ ಚುನಾವಣಾ ರ್‍ಯಾಲಿ ರದ್ದು

ಲಖನೌ (ಪಿಟಿಐ): ಕೊರೊನಾ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಉತ್ತರ ಪ್ರದೇಶ ಮತ್ತು ಇತರ ನಾಲ್ಕು ರಾಜ್ಯಗಳಲ್ಲಿ ಆಯೋಜನೆ ಆಗಿದ್ದ ಬೃಹತ್ ಚುನಾವಣಾ ರ್‍ಯಾಲಿಗಳನ್ನು ಕಾಂಗ್ರೆಸ್ ರದ್ದುಗೊಳಿಸಿದೆ. ಇದರ ಜೊತೆ, ಉತ್ತರ ಪ್ರದೇಶದ ಆಜಂಗಡ, ವಾರಾಣಸಿ, ಗಾಜಿಯಾಬಾದ್ ಮತ್ತು ಆಲಿಗಡಗಳಲ್ಲಿ ಆಯೋಜಿಸಲಾಗಿದ್ದ ಹೆಣ್ಣು ಮಕ್ಕಳ ಮ್ಯಾರಥಾನ್ ಓಟವನ್ನೂ ಕಾಂಗ್ರೆಸ್ ರದ್ದುಗೊಳಿಸಿದೆ.

'ಉತ್ತರ ಪ್ರದೇಶ, ಮಣಿಪುರ, ಪಂಜಾಬ್, ಉತ್ತರಾಖಂಡ ಮತ್ತು ಗೋವಾದಲ್ಲಿ ಆಯೋಜನೆ ಆಗಿದ್ದ ರ್‍ಯಾಲಿಗಳನ್ನು ಕೋವಿಡ್ ಕಾರಣಕ್ಕಾಗಿ ಮುಂದೂಡಲಾಗಿದೆ. ಕೋವಿಡ್ ಪರಿಸ್ಥಿತಿಯನ್ನು ಪರಿಶೀಲಿಸಿ ಚುನಾವಣಾ ರ್‍ಯಾಲಿ ಅಥವಾ ಕಾರ್ಯಕ್ರಮಗಳನ್ನು ಆಯೋಜಿಸುವ ನಿರ್ಧಾರ ತೆಗೆದುಕೊಳ್ಳುವಂತೆ ಆಯಾ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೆ ಸೂಚಿಸಲಾಗಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

ಬರೇಲಿಯಲ್ಲಿ ನಡೆಸಿದ್ದ ಮ್ಯಾರಥಾನ್ ರ್‍ಯಾಲಿಯಲ್ಲಿ ಕಾಲ್ತುಳಿತದಂಥ ಪ್ರಕರಣಗಳು ನಡೆದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮ್ಯಾರಥಾನ್ ರ್‍ಯಾಲಿಗಳನ್ನು ರದ್ದುಗೊಳಿಸುವ ನಿರ್ಧಾರ ತೆಗೆದುಕೊಂಡಿದೆ ಎಂದು ಕೂಡ ಮೂಲಗಳು ಹೇಳಿವೆ

ಮೋದಿ, ಯೋಗಿ ರ್‍ಯಾಲಿಯೂ ರದ್ದು: ಚುನಾವಣಾ ರ್‍ಯಾಲಿಗಳನ್ನು ರದ್ದುಗೊಳಿಸಿರುವ ಕುರಿತು ಕಾಂಗ್ರೆಸ್ ಘೋಷಿಸಿದ ಬಳಿಕ, ಬಿಜೆಪಿ ಕೂಡ ರ್‍ಯಾಲಿ ರದ್ದುಗೊಳಿಸಿರುವುದಾಗಿ ಘೋಷಿಸಿದೆ. ನೋಯಿಡಾದಲ್ಲಿ ಗುರುವಾರ ಆಯೋಜಿಸಲಾಗಿದ್ದ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ರ್‍ಯಾಲಿಯನ್ನು ರದ್ದುಗೊಳಿಸುವುದಾಗಿ ಬಿಜೆಪಿ ಹೇಳಿದೆ.

ಲಖನೌನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಬೃಹತ್ ರ್‍ಯಾಲಿಯನ್ನು ಭಾನುವಾರ ಆಯೋಜಿಲಾಗಿತ್ತು. ಈ ರ್‍ಯಾಲಿ ಬಳಿಕ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ದಿನಾಂಕವನ್ನು ಘೋಷಿಸಲಾಗುತ್ತದೆ ಎಂಬ ಊಹಾಪೋಹಗಳಿದ್ದವು. ಆದರೆ ಮೋದಿ ಅವರ ರ್‍ಯಾಲಿಯೂ ರದ್ದಾಗಿದೆ.

ಕೋವಿಡ್ ಪ್ರಕರಣಗಳಲ್ಲಿ ತೀವ್ರ ಏರಿಕೆ ಕಂಡುಬಂದ ಹಿನ್ನೆಲೆಯಲ್ಲಿ ಮೋದಿ ಮತ್ತು ಆದಿತ್ಯನಾಥ ಅವರ ರ್‍ಯಾಲಿಗಳನ್ನು ರದ್ದುಗೊಳಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಪತ್ರ ಬರೆದಿದೆ.

ಕೇಂದ್ರ ಮತ್ತು ಉತ್ತರ ಪ್ರದೇಶ ಸರ್ಕಾರಗಳ ಸಾಧನೆಗಳನ್ನು ಮನೆಮನೆಗೆ ತಲುಪಿಸುವ ಕಾರ್ಯಕ್ರಮವನ್ನು ಬಿಜೆಪಿ ಹಮ್ಮಿಕೊಂಡಿತ್ತು. ಇದನ್ನು ಕೂಡ ಬಿಜೆಪಿ ಮುಂದೂಡಿದೆ ಎಂದು ಹೇಳಲಾಗಿದೆ.

ವರ್ಚುವಲ್ ರ್‍ಯಾಲಿಗಳ ಮೂಲಕ ಜನರನ್ನು ತಲುಪಲು ಬಿಜೆಪಿ ತಯಾರಿ ನಡೆಸಿದೆ. 'ನಾವು ನುರಿತ ಕಾರ್ಯಕರ್ತರನ್ನು ಹೊಂದಿದ್ದೇವೆ. ವರ್ಚುವಲ್ ರ್‍ಯಾಲಿಗಳನ್ನು ನಡೆಸಲು ಸಿದ್ಧರಿದ್ದೇವೆ' ಎಂದು ಬಿಜೆಪಿ ಮುಖಂಡರೊಬ್ಬರು ತಿಳಿಸಿದ್ದಾರೆ.

ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರ ಜನ್ಮ ದಿನಾಚರಣೆಯಂದು ರಾಜ್ಯದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗೌರವ ಸಲ್ಲಿಸಿದರು.

ಪ್ರಜಾ ಮತ
ಜನತಂತ್ರದ ಹಬ್ಬ 2022

'ಕೋವಿಡ್ ಮೂರನೇ ಅಲೆಗೆ ಸರ್ಕಾರ ಕಾರಣ'

ಪಣಜಿ (ಪಿಟಿಐ): ಗೋವಾದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಳವಾಗಿರುವುದಕ್ಕೆ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಅವರ ಸಂಪುಟ ಸಹೋದ್ಯೋಗಿಗಳೇ ಕಾರಣ ಎಂದು ಆಮ್ ಆದ್ಮಿ ಪಕ್ಷ ಬುಧವಾರ ಆರೋಪಿಸಿದೆ.

ಕೋವಿಡ್ ಪ್ರಕರಣಗಳು ಕಡಿಮೆ ಇದ್ದಾಗಲೇ ಅದನ್ನು ಹತೋಟಿಯಲ್ಲಿ ಇಡಬಹುದಿತ್ತು. ಕೊರೊನಾ ಸೋಂಕು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ತ ಸಮಯದಲ್ಲಿ ಅಗತ್ಯ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಲಿಲ್ಲ. ಹಾಗಾಗಿ ರಾಜ್ಯದಲ್ಲಿ ಮೂರನೇ ಅಲೆ ಸಂಭವಿಸಿದೆ. ಎಂದು ಎಎಪಿ ಗೋವಾ ಘಟಕದ ಸಂಚಾಲಕ ರಾಹುಲ್ ಮ್ಹಾಂಬ್ರೆ ಹೇಳಿದ್ದಾರೆ.

ಗೋವಾದಲ್ಲಿ 'ತಿರಂಗಾ ಯಾತ್ರೆ' ನಡೆಸಲು ಎಎಪಿಗೆ ನೀಡಲಾಗಿದ್ದ ಅನುಮತಿಯನ್ನು ಕೋವಿಡ್ ಕಾರಣ ಹೇಳಿ, ಕಡೇ ಗಳಿಗೆಯಲ್ಲಿ ಸರ್ಕಾರ ರದ್ದುಪಡಿಸಿತು. ಆದರೆ, ಇತ್ತೀಚೆಗೆ ಮುಖ್ಯಮಂತ್ರಿಯೇ ಎರಡು ರ್‍ಯಾಲಿಗಳಲ್ಲಿ ಭಾಗವಹಿಸಿದ್ದಾರೆ. ಬಿಜೆಪಿ ರ್‍ಯಾಲಿಗಳ ಮೇಲೆ ಕೋವಿಡ್ ಯಾವುದೇ ಪರಿಣಾಮವನ್ನು ಬೀರುವುದಿಲ್ಲ ಎಂದು ಕಾಣುತ್ತದೆ ಎಂದರು.

ನಾವು ಪ್ರಚಾರ ಮಾಡುವುದನ್ನು ನಿಲ್ಲಿಸಬೇಕು ಎಂದು ನೀವು ಬಯಸುತ್ತಿದ್ದೀರೊ ಅಥವಾ ನಾವು ಚುನಾವಣೆ ಕಣದಿಂದಲೇ ಹಿಂದೆ ಸರಿಯಬೇಕು ಎಂದು ಬಯಸುತ್ತಿದ್ದೀರೋ?
ಸತ್ಯೇಂದ್ರ ಜೈನ್, ದೆಹಲಿ ಆರೋಗ್ಯ ಸಚಿವ

ಚುನಾವಣೆಯನ್ನು ಮುಂದೂಡಲಾಗುವುದಿಲ್ಲ. ಕೋವಿಡ್ ಪರಿಸ್ಥಿತಿಯ ಕಾರಣ ಚುನಾವಣಾ ಆಯೋಗ ಎಲ್ಲಾ ಪಕ್ಷಗಳ ರ್‍ಯಾಲಿಗಳನ್ನು ಕೂಡಲೇ ನಿಲ್ಲಿಸಬೇಕು.
ಅಶೋಕ್ ಗೆಹಲೋತ್, ರಾಜಸ್ಥಾನ ಮುಖ್ಯಮಂತ್ರಿ

ಮೋದಿ ಭೇಟಿ ವಿರುದ್ಧ ಪ್ರತಿಭಟನೆ

ಅಮೃತಸರ/ಚಂಡೀಗಡ (ಪಿಟಿಐ): ಪಂಜಾಬ್‌ನ ಫಿರೋಜ್‌ಪುರದಲ್ಲಿ ಬಿಜೆಪಿಯ ಚುನಾವಣಾ ರ್‍ಯಾಲಿಯಲ್ಲಿ ಭಾಗಿಯಾಗಬೇಕಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಪ್ರತಿಭಟನೆ ನಡೆಸಲು, ರಾಜ್ಯದ ಕಿಸನ್ ಮಜ್ದೂರ್ ಸಂಘರ್ಷ ಸಮಿತಿ ಮಂಗಳವಾರ ಕರೆ ನೀಡಿತ್ತು. ಈ ಭಾಗವಾಗಿ ಬುಧವಾರ ಬೆಳಿಗ್ಗೆ 8 ಗಂಟೆಗೆ ಟ್ವಿಟರ್ ಮತ್ತು ಫೇಸ್‌ಬುಕ್ 'ಮೋದಿಗೋಬ್ಯಾಕ್' ಅಭಿಯಾನ ನಡೆಸಲೂ ಕರೆ ನೀಡಿತ್ತು.

ಅಭಿಯಾನದ ಭಾಗವಾಗಿ ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ #GoBackModi ಹ್ಯಾಷ್‌ಟ್ಯಾಗ್‌ನಲ್ಲಿ ಪೋಸ್ಟ್‌ಗಳನ್ನು ಮಾಡಿದರು. ಟ್ವಿಟರ್‌ನಲ್ಲಿ ಸತತ ಹತ್ತು ತಾಸಿನವರೆಗೆ ಈ ಹ್ಯಾಷ್‌ಟ್ಯಾಗ್ ಟ್ರೆಂಡಿಂಗ್‌ನಲ್ಲಿ ಇತ್ತು. ಈ ಹ್ಯಾಷ್‌ಟ್ಯಾಗ್‌ನಲ್ಲಿ ಬುಧವಾರ ರಾತ್ರಿವರೆಗೆ 2.02 ಲಕ್ಷ ಟ್ವೀಟ್‌ಗಳನ್ನು ಮಾಡಲಾಗಿತ್ತು.

'ಲಖಿಂಪುರ ಖೇರಿಯಲ್ಲಿ ರೈತರ ಮೇಲೆ ಜೀಪುಹರಿಸಿ ಹತ್ಯೆ ಮಾಡಿದ ಪ್ರಕರಣದ ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಅವರ ತಂದೆ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು. ಜತೆಗೆ ಕೃಷಿ ಕಾಯ್ದೆಗಳ ವಿರುದ್ಧ ಹೋರಾಟದ ವೇಳೆ ಮೃತಪಟ್ಟ 700ಕ್ಕೂ ಹೆಚ್ಚು ರೈತರ ಕುಟುಂಬದವರಿಗೆ ಪರಿಹಾರ ಘೋಷಿಸಬೇಕು. ರೈತರು ತನಗಾಗಿ ಜೀವ ಬಿಟ್ಟಿದ್ದಾರೆಯೇ ಎಂದು ಕೇಳಿದ ಪ್ರಧಾನಿ ಮೋದಿ ಕ್ಷಮೆಯಾಚಿಸಬೇಕು' ಎಂದು ಸಮಿತಿಯು ಆಗ್ರಹಿಸಿತ್ತು.

ಈ ಪ್ರತಿಭಟನೆಯ ಭಾಗವಾಗಿ ಫಿರೋಜ್‌ಪುರ ರ್‍ಯಾಲಿಗೆ ಬರಲಿರುವ ಬಿಜೆಪಿ ಕಾರ್ಯಕರ್ತರ ಬಸ್‌ಗಳನ್ನು ಪ್ರತಿಭಟನಕಾರರು ತಡೆದು ನಿಲ್ಲಿಸಿದರು.

'ಜನ ಇಲ್ಲದ್ದಕ್ಕೆ ರ್‍ಯಾಲಿ ರದ್ದು'

'ಪ್ರಧಾನಿ ನರೇಂದ್ರ ಮೋದಿ ಅವರು ಭಾಗಿಯಾಗಬೇಕಿದ್ದ ಫಿರೋಜ್‌ಪುರ ರ್‍ಯಾಲಿಯಲ್ಲಿ ಜನರು ಸೇರಿರಲೇ ಇಲ್ಲ. 70,000 ಜನರು ಸೇರಲಿದ್ದಾರೆ ಎಂದು ಬಿಜೆಪಿ ಹೇಳಿತ್ತು. ಆದರೆ 700 ಜನರೂ ಅಲ್ಲಿರಲಿಲ್ಲ. ಈ ಕಾರಣಕ್ಕೆ ಮೋದಿ ಅವರ ರ್‍ಯಾಲಿಯನ್ನು ಬಿಜೆಪಿ ರದ್ದುಪಡಿಸಿದೆ. ಆದರೆ, ಇದಕ್ಕೆಲ್ಲಾ ರಸ್ತೆ ತಡೆಯೇ ಕಾರಣ ಎಂದು ನೆಪ ಹೇಳುತ್ತಿದೆ' ಎಂದು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಲೇವಡಿ ಮಾಡಿದ್ದಾರೆ.

'ರಾಜ್ಯದಾದ್ಯಂತ ಮೋದಿ ಮತ್ತು ಬಿಜೆಪಿ ವಿರೋಧಿ ಅಲೆ ಇದೆ. ಇದೇ ಕಾರಣಕ್ಕೆ ರಾಜ್ಯದ ಜನರು ರ್‍ಯಾಲಿಯಲ್ಲಿ ಭಾಗಿಯಾಗಿಲ್ಲ. ಇದಕ್ಕಾಗಿ ಬಿಜೆಪಿ ಹರಿಯಾಣ ಮತ್ತು ರಾಜಸ್ಥಾನದಿಂದ ಜನರನ್ನು ಕರೆಸಲು ಯೋಜಿಸಿತ್ತು. ಆದರೆ, ಅಲ್ಲಿಂದಲೂ ಜನರು ಬರಲಿಲ್ಲ. ಹೀಗಾಗಿಯೇ ಬಿಜೆಪಿಯು ಮೋದಿ ಅವರ ರ್‍ಯಾಲಿಯನ್ನು ರದ್ದುಪಡಿಸಿದೆ' ಎಂದು ಪಂಜಾಬ್ ಯುವ ಕಾಂಗ್ರೆಸ್ ಘಟಕವು ಹೇಳಿದೆ.

ರ್‍ಯಾಲಿಯಲ್ಲಿ ಭಾಗಿಯಾಗಲು ಬಿಜೆಪಿ ಕಾರ್ಯಕರ್ತರು ಬರುತ್ತಿದ್ದ ಬಸ್‌ಗಳನ್ನು ಪಂಜಾಬ್ ಪೊಲೀಸರು ತಡೆದಿದ್ದಾರೆ. ಹೀಗಾಗಿ ಜನ ಬಂದಿಲ್ಲ
ಅಶ್ವಿನಿ ಶರ್ಮಾ
ಪಂಜಾಬ್ ಬಿಜೆಪಿ ಅಧ್ಯಕ್ಷ

ರ್‍ಯಾಲಿಯಲ್ಲಿ ಜನ ಸೇರಿಲ್ಲ ಎಂಬುದು ಮೋದಿಗೆ ಗೊತ್ತಿತ್ತು. ರಸ್ತೆ ತಡೆ ತೆರವು ಮಾಡಲು ತಡವಾದದ್ದನ್ನೇ ನೆಪ ಮಾಡಿಕೊಂಡು ರ್‍ಯಾಲಿ ರದ್ದುಪಡಿಸಿದರು
ರಣದೀಪ್ ಸಿಂಗ್ ಸುರ್ಜೇವಾಲಾ
ಕಾಂಗ್ರೆಸ್ ಮುಖ್ಯ ವಕ್ತಾರ

ಬಂಧಿತರ ಸಂಖ್ಯೆ ಮೂರಕ್ಕೆ ಏರಿಕೆ • ಇನ್ನೂ ಹಲವರು ಭಾಗಿ ಶಂಕೆ

'ಬುಲ್ಲಿ ಬಾಯಿ' ಪ್ರಕರಣ: ಮತ್ತೊಬ್ಬ ವಿದ್ಯಾರ್ಥಿ ಬಂಧನ

ಮುಂಬೈ (ಪಿಟಿಐ): 100ಕ್ಕೂ ಹೆಚ್ಚು ಪ್ರಭಾವಿ ಮುಸ್ಲಿಂ ಮಹಿಳೆಯರ ಭಾವಚಿತ್ರಗಳನ್ನು 'ಬುಲ್ಲಿ ಬಾಯಿ' ಹೆಸರಿನ ಆ್ಯಪ್‌ಗೆ ಅಪ್‌ಲೋಡ್ ಮಾಡಿ ಇವರನ್ನು ಹರಾಜಿಗಿಡಲಾಗಿದೆ ಎಂಬ ಒಕ್ಕಣೆಯೊಂದಿಗೆ ಅವಹೇಳನ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿ ಮುಂಬೈ ಪೊಲೀಸರು ಉತ್ತರಾಖಂಡದಲ್ಲಿ ಮತ್ತೊಬ್ಬ ವಿದ್ಯಾರ್ಥಿಯನ್ನು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಮಯಂಕ್ ರಾವಲ್ (21) ಬಂಧಿತ ವಿದ್ಯಾರ್ಥಿ. ಇದರೊಂದಿಗೆ 'ಬುಲ್ಲಿ ಬಾಯಿ' ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿ ಬಂಧಿತರ ಸಂಖ್ಯೆ ಮೂರಕ್ಕೇರಿದಂತಾಗಿದೆ.

ಉತ್ತರಾಖಂಡದಲ್ಲಿ ಶ್ವೇತಾ ಸಿಂಗ್ (19) ಹಾಗೂ ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ ವಿಶಾಲ್ ಕುಮಾರ್ (21) ಎಂಬುವವರನ್ನು ಸೈಬರ್ ಪೊಲೀಸರು ಈಗಾಗಲೇ ಬಂಧಿಸಿದ್ದಾರೆ.

'ಈ ಪ್ರಕರಣದಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಸಾಧ್ಯತೆಗಳಿವೆ. ಅಲ್ಲದೇ, ಪಿತೂರಿ ಭಾಗವಾಗಿ ಈ ಆ್ಯಪ್ ಅನ್ನು ಬಳಕೆ ಮಾಡಲಾಗಿದೆ ಎಂಬ ಆಯಾಮದಲ್ಲಿಯೂ ತನಿಖೆ ನಡೆಸಲಾಗುತ್ತಿದೆ' ಎಂದು ಮುಂಬೈ ಪೊಲೀಸ್ ಕಮಿಷನರ್ ಹೇಮಂತ್ ನಾಗರಾಳೆ ಹೇಳಿದ್ದಾರೆ.

'ತನಿಖೆ ಸೂಕ್ಷ್ಮ ಸ್ವರೂಪದ್ದಾಗಿರುವ ಕಾರಣ, ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸುವುದಿಲ್ಲ. ತನಿಖೆಯು ಆನ್‌ಲೈನ್ ಮೂಲಕವೂ ನಡೆಯುತ್ತಿದೆ. ಹೀಗಾಗಿ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಿದರೆ ಅದು ತನಿಖೆಗೆ ಅಡ್ಡಿಯುಂಟು ಮಾಡುವ ಅಪಾಯವೂ ಇದೆ' ಎಂದು ಅವರು ಹೇಳಿದ್ದಾರೆ.

'ಪ್ರಕರಣ ಕುರಿತು ಮಹಾರಾಷ್ಟ್ರದ ಹೊರಗಡೆ ಕೆಲವರು ಬೇರೆಯದೇ ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, 'ಕೆಲವು ಅಧಿಕಾರಿಗಳು ನೀಡಿರುವ ಹೇಳಿಕೆಗಳು ಅನಗತ್ಯವಾಗಿದ್ದವು. ಅವರಿಗೆ ಪ್ರಕರಣದ ಕುರಿತು ಅರಿವಿಲ್ಲ' ಎಂದರು.

'ಬೇರೆ ರಾಜ್ಯಗಳಿಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ಸಾಮಾನ್ಯವಾಗಿ ನಾವು ಮಾತನಾಡುವುದಿಲ್ಲ. ತಮ್ಮ ಬಳಿ ಪ್ರಕರಣ ಕುರಿತು ಸಮರ್ಪಕ ಮಾಹಿತಿ ಇಲ್ಲದಿದ್ದರೆ, ಯಾವುದೇ ಹೇಳಿಕೆ ನೀಡಲು ಹೋಗಬಾರದು' ಎಂದೂ ಹೇಳಿದರು.

ದೂರು–ನಿರ್ಬಂಧ: ಪತ್ರಕರ್ತೆಯೊಬ್ಬರು ನೀಡಿರುವ ದೂರಿನ ಆಧಾರದಲ್ಲಿ ದೆಹಲಿ ಪೊಲೀಸರು ಈಚೆಗೆ ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಿಸಿಕೊಂಡಿದ್ದರು. ಮುಂಬೈನ ಸೈಬರ್ ಕ್ರೈಂ ಪೊಲೀಸರು ತನಿಖೆ ನಡೆಸುತ್ತಿದ್ದು, ಈ ಆ್ಯಪ್ ಅನ್ನು ನಿರ್ಬಂಧಿಸಲಾಗಿದೆ.

'ಬುಲ್ಲಿ ಬಾಯಿ' ಕೂಡ 'ಸುಲ್ಲಿ ಡೀಲ್ಸ್' ನಂತೆ ಗಿಟ್‌ಹಬ್ ವೇದಿಕೆಯ ಆ್ಯಪ್ ಆಗಿದ್ದು, ಇವುಗಳಲ್ಲಿ ಸಾಮ್ಯತೆ ಇದೆ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ. ದೆಹಲಿ ಪೊಲೀಸರ ಸೈಬರ್ ಕ್ರೈಂ ವಿಭಾಗವು ಟ್ವಿಟರ್ ಸಂಸ್ಥೆಯನ್ನು ಸಂಪರ್ಕಿಸಿದ್ದು, ಈ ಆ್ಯಪ್ ಬಗ್ಗೆ ಮೊದಲು ಪೋಸ್ಟ್ ಮಾಡಿದ ವ್ಯಕ್ತಿಯ ಟ್ವಿಟರ್ ಖಾತೆಯನ್ನು ನಿರ್ಬಂಧಿಸಲಾಗಿದೆ.

ಆರೋಪಿಗಳ ಬಂಧನಕ್ಕೆ ನೆರವಾದ ಕ್ಷಿಪ್ರ ಕಾರ್ಯಾಚರಣೆ

ದೇಶದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದ್ದ, ಅಷ್ಟೇ ಸೂಕ್ಷ್ಮವೂ ಆಗಿರುವ 'ಬುಲ್ಲಿ ಬಾಯಿ' ಆ್ಯಪ್ ಪ್ರಕರಣ ಕುರಿತು ಪೊಲೀಸರಿಗೆ ಅಲ್ಪ ಮಾಹಿತಿ ಇತ್ತು. ಆದರೆ, ಸಿಕ್ಕ ಸುಳಿವಿನ ಜಾಡು ಹಿಡಿದು, ಕ್ಷಿಪ್ರ ಕಾರ್ಯಾಚರಣೆ ಮಾಡಿದ ಪೊಲೀಸರು ಕೆಲವೇ ದಿನಗಳ ಅಂತರದಲ್ಲಿ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಆ್ಯಪ್ ಬಳಸಿ ತಮ್ಮ ಅವಹೇಳನವಾಗುತ್ತಿರುವ ಕುರಿತು ಸಂತ್ರಸ್ತ ಮಹಿಳೆಯರು ಹಾಗೂ ಶಿವಸೇನಾ ಸಂಸದೆ ಪ್ರಿಯಾಂಕಾ ಚತುರ್ವೇದಿ ಅವರು ಮುಂಬೈ ಪೊಲೀಸ್‌ನ ಕ್ರೈಂ ಘಟಕಕ್ಕೆ ದೂರು ನೀಡಿ, ದುಷ್ಕರ್ಮಿಗಳನ್ನು ಬಂಧಿಸುವಂತೆ ಒತ್ತಾಯಿಸಿದರು.

'ಸೈಬರ್ ಕ್ರೈಂ ಘಟಕದ ಡಿಸಿಪಿ ರಶ್ಮಿ ಕರಂಡೀಕರ್ ಅವರಿಗೆ ತನಿಖೆಯ ಜವಾಬ್ದಾರಿ ನೀಡಲಾಯಿತು. ಘಟಕದ ಪೂರ್ವ, ಕೇಂದ್ರ ಹಾಗೂ ಪಶ್ಚಿಮ ಠಾಣೆಗಳ ಪೊಲೀಸರನ್ನು ಒಳಗೊಂಡ ತಂಡಗಳನ್ನೂ ರಚಿಸಿದರು. ಮೈಕೊರೆವ ಚಳಿ, ಕೋವಿಡ್ ಪಿಡುಗಿನಿಂದಾಗಿ ಕಠಿಣ ನಿರ್ಬಂಧಗಳ ನಡುವೆಯೂ ಪೊಲೀಸರು ಕಾರ್ಯಾಚರಣೆ ನಡೆಸಿ, ದುಷ್ಕರ್ಮಿಗಳನ್ನು ಬಂಧಿಸಿದರು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೊಲೀಸರ ಒಂದು ತಂಡ ಉತ್ತರಾಖಂಡ, ಮತ್ತೊಂದು ತಂಡ ಬೆಂಗಳೂರಿಗೆ ತೆರಳಿತು. ಬೆಂಗಳೂರಿನಲ್ಲಿ ಒಬ್ಬ ಎಂಜಿನಿಯರಿಂಗ್ ವಿದ್ಯಾರ್ಥಿಯನ್ನು ಬಂಧಿಸಿದರೆ, ಉತ್ತರಾಖಂಡದಲ್ಲಿ ಯುವತಿ ಸೇರಿ ಇಬ್ಬರನ್ನು ಬಂಧಿಸಲಾಯಿತು.

ಈ ತನಿಖಾ ಕಾರ್ಯಕ್ಕೆ ಮಾಹಿತಿ ತಂತ್ರಜ್ಞಾನ ವಿಭಾಗದ ತಜ್ಞರ ನೆರವೂ ಇತ್ತು. ಆ್ಯಪ್ ಮೂಲಕ ಮಹಿಳೆಯರ ಚಿತ್ರಗಳನ್ನು ಅಪ್‌ಲೋಡ್ ಮಾಡಲಾದ ಕಂಪ್ಯೂಟರ್‌ಗಳ ಐಪಿ ವಿಳಾಸ ಹಾಗೂ ಅದರ ನೆರವಿನಿಂದ ದುಷ್ಕರ್ಮಿಗಳಿದ್ದ ಸ್ಥಳಗಳನ್ನು ಪತ್ತೆ ಹಚ್ಚಿದ ಪೊಲೀಸರು, ಕೊನೆಗೂ ಮೂವರನ್ನು ಬಂಧಿಸುವಲ್ಲಿ ಯಶಸ್ವಿಯಾದರು ಎಂದು ಅಧಿಕಾರಿ ಹೇಳಿದ್ದಾರೆ.

ಭದ್ರತಾ ಲೋಪವಾಗಿಲ್ಲ: ಚನ್ನಿ

ಒಂದನೇ ಪುಟದಿಂದ

ಈ ಬಗ್ಗೆ ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಸಹ ವಿವರಣೆ ನೀಡಿದ್ದಾರೆ. 'ಪ್ರಧಾನಿ ಅವರ ವಿಶೇಷ ಭದ್ರತಾ ಪಡೆ (ಎಸ್‌ಪಿಜಿ) ಕೇಳಿದ್ದ ರೀತಿಯಲ್ಲಿ ಫಿರೋಜ್‌ಪುರದಲ್ಲಿ ಭದ್ರತೆ ವ್ಯವಸ್ಥೆ ಮಾಡಲಾಗಿತ್ತು. ರ್‍ಯಾಲಿ ನಡೆಯಬೇಕಿದ್ದ ಸ್ಥಳದಲ್ಲೇ 10,000 ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿತ್ತು. ಪ್ರಧಾನಿ ಅವರ ರ್‍ಯಾಲಿಗೆ ರಾಜಸ್ಥಾನ ಮತ್ತು ಹರಿಯಾಣದಿಂದಲೂ ಸಾವಿರಾರು ಮಂದಿ ಬಸ್‌ನಲ್ಲಿ ಬರಬೇಕಿತ್ತು. ಆ ಬಸ್‌ಗಳ ಸುಗಮ ಸಂಚಾರಕ್ಕೂ ವ್ಯವಸ್ಥೆ ಮಾಡಲಾಗಿತ್ತು' ಎಂದು ಸುರ್ಜೇವಾಲಾ ಹೇಳಿದ್ದಾರೆ.

'ಪ್ರಧಾನಿ ಅವರು ಬಟಿಂಡಾದಿಂದ ಹುಸೈನಿವಾಲಾಕ್ಕೆ ಹೆಲಿಕಾಪ್ಟರ್‌ನಲ್ಲಿ ಹೋಗಬೇಕಿತ್ತು. ಕೊನೆಯ ಕ್ಷಣದಲ್ಲಿ ಅವರು ರಸ್ತೆ ಮಾರ್ಗದಲ್ಲಿ ಹೋಗಲು ನಿರ್ಧರಿಸಿದರು. ಪಂಜಾಬ್‌ನ ಕಿಸಾನ್ ಮಜ್ದೂರ್ ಸಂಘರ್ಷ ಸಮಿತಿಯು ಮೋದಿ ಅವರ ಭೇಟಿಯ ವಿರುದ್ಧ ಪ್ರತಿಭಟನೆ ನಡೆಸುತ್ತಿತ್ತು. ಅವರು ಈ ಮೊದಲೇ ಪ್ರತಿಭಟನೆಗೆ ಕರೆ ನೀಡಿದ್ದರು. ಈ ಸಂಬಂಧ ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರು ಸಂಘಟನೆಯ ಜತೆಗೆ ಎರಡು ಬಾರಿ ಮಾತುಕತೆ ನಡೆಸಿದ್ದರು. ಅದು ವಿಫಲವಾಗಿತ್ತು' ಎಂದು ಅವರು ಹೇಳಿದ್ದಾರೆ.

ಪ್ರಧಾನಿ ಮೋದಿ ಸಾವಿನ ದವಡೆಗೆ ಹೋಗಿದ್ದಕ್ಕೆ ಕಾಂಗ್ರೆಸ್ ನಾಯಕರಿಗೆ ಸಂತೋಷವಾಗಿರಬೇಕು. ಕಾಂಗ್ರೆಸ್‌ನ ಹತ್ಯೆಯ ಸಂಚು ವಿಫಲವಾಗಿದೆ
ಸ್ಮೃತಿ ಇರಾನಿ, ಕೇಂದ್ರ ಸಚಿವೆ

ಪಾಕಿಸ್ತಾನ ಗಡಿಯಿಂದ 10 ಕಿ.ಮೀ. ದೂರದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪ್ರಧಾನಿಗೆ ಭದ್ರತೆ ಒದಗಿಸಲಾಗದಿದ್ದರೆ, ನೀವು ಮತ್ತೇನು ಮಾಡುತ್ತೀರಿ? ಈ ವಿಫಲ ಸರ್ಕಾರವನ್ನು ಒಗೆದು, ರಾಷ್ಟ್ರಪತಿ ಆಳ್ವಿಕೆ ಹೇರಬೇಕು
ಕ್ಯಾಪ್ಟನ್ ಅಮರಿಂದರ್ ಸಿಂಗ್, ಪಂಜಾಬ್ ಲೋಕ ಕಾಂಗ್ರೆಸ್ ಮುಖ್ಯಸ್ಥ

ಭದ್ರತಾ ಲೋಪದ ಬಗ್ಗೆ ತನಿಖೆಯಾಗಬೇಕು. ತಪ್ಪಿತಸ್ಥರಿಗೆ ಉಗ್ರ ಶಿಕ್ಷೆಯಾಗಬೇಕು. ಪಂಜಾಬ್ ಸರ್ಕಾರಕ್ಕೆ ಆಡಳಿತ ನಡೆಸುವ ಯೋಗ್ಯತೆ ಇಲ್ಲ. ಆ ಸರ್ಕಾರವನ್ನು ಬರ್ಖಾಸ್ತ್ ಮಾಡಬೇಕು
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

'ಕಾಂಗ್ರೆಸ್‌ನಿಂದ ಸಂಚು'

ಒಂದನೇ ಪುಟದಿಂದ

'ಪ್ರತಿಭಟನಕಾರರು ರಸ್ತೆತಡೆ ನಡೆಸಿದ ಕಾರಣ ಮೋದಿ ಅವರ ಕಾರ್ಯಕ್ರಮಗಳು ರದ್ದಾಗಿವೆ. ರಾಜ್ಯ ಪೊಲೀಸ್ ಮಹಾನಿರ್ದೇಶಕರ ಸಮ್ಮತಿಯ ನಂತರ ರಸ್ತೆ ಮಾರ್ಗದಲ್ಲಿ ಪ್ರಧಾನಿ ಹೋಗುತ್ತಿದ್ದರು. ಆದರೆ ಪ್ರಧಾನಿ ಹೋಗುತ್ತಿದ್ದ ಮಾರ್ಗದಲ್ಲೇ ಪ್ರತಿಭಟನೆ ನಡೆಸಲು ಅವಕಾಶ ನೀಡಲಾಗಿದೆ. ಜತೆಗೆ ಆ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ಫೋನ್ ಕರೆಯನ್ನೂ ಸ್ವೀಕರಿಸಲಿಲ್ಲ. ಕಾಂಗ್ರೆಸ್ ಇಂತಹ ಕೀಳು ತಂತ್ರಗಳನ್ನೇ ಮಾಡುತ್ತದೆ' ಎಂದು ಅವರು ಆರೋಪಿಸಿದ್ದಾರೆ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಸಾಧ್ಯವಿಲ್ಲದ ಸರ್ಕಾರ ಅಧಿಕಾರದಲ್ಲಿ ಇರಬಾರದು ಎಂದು ಪಂಜಾಬ್ ಬಿಜೆಪಿ ಘಟಕ ಹೇಳಿದೆ.

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಸೆಂಟರ್, ಮುಂಬೈ
ದೂರವಾಣಿ: 022-22820427; ಫ್ಯಾಕ್ಸ್: 022-22820411

ಗುತ್ತಿಗೆ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಕ್ರ. ಸಂ.	ಹುದ್ದೆ	ಗ್ರೇಡ್	ಖಾಲಿ ಹುದ್ದೆ	ಜಾಹೀರಾತು ನಂ.
1.	ಮುಖ್ಯ ಮಾಹಿತಿ ಸೆಕ್ಯೂರಿಟಿ ಆಫೀಸರ್	ಗುತ್ತಿಗೆ ಆಧಾರ	1	CRPD/SCO-CISO/ 2021-22/23

ಅರ್ಹತಾ ಮಾನದಂಡ (ವಯಸ್ಸು, ಶಿಕ್ಷಣ, ಅನುಭವ ಇತ್ಯಾದಿ), ಅಗತ್ಯ ಶುಲ್ಕಗಳು ಮತ್ತು ಇತರ ವಿವರಗಳು ಬ್ಯಾಂಕ್ ವೆಬ್‌ಸೈಟ್‌ನಲ್ಲಿ ಮೇಲೆ ತಿಳಿಸಿದ ಸಂಖ್ಯೆಯ ಅಡಿಯಲ್ಲಿ ವಿವರವಾದ ಜಾಹೀರಾತು ಲಭ್ಯವಿವೆ https://bank.sbi/web/careers ಅಥವಾ https://www.sbi.co.in/web/careers ನಲ್ಲಿ ಮೇಲೆ ತಿಳಿಸಿದ ಸಂಖ್ಯೆಯ ಅಡಿಯಲ್ಲಿ ವಿವರವಾದ ಜಾಹೀರಾತು ಲಭ್ಯವಿದೆ. ಜೊತೆಗೆ ಅರ್ಜಿಯನ್ನು ಆನ್ ಲೈನಿನಲ್ಲಿ ಸಲ್ಲಿಸಲು ಹಾಗು ಅರ್ಜಿ ಶುಲ್ಕವನ್ನು ಪಾವತಿಸಲು ಒಂದು ಲಿಂಕ್ ಸಹ ನೀಡಲಾಗಿದೆ. ಅರ್ಜಿ ಸಲ್ಲಿಸುವ ಮತ್ತು ಶುಲ್ಕವನ್ನು ಪಾವತಿಸುವ ಮೊದಲು ಅಭ್ಯರ್ಥಿಗಳು ತಮ್ಮ ಅರ್ಹತೆ ಮತ್ತು ಇತರ ವಿವರಗಳನ್ನು ಖಾತ್ರಿಪಡಿಸುವ ವಿವರವಾದ ಜಾಹೀರಾತನ್ನು ಓದಿಕೊಳ್ಳಲು ಸೂಚಿಲಾಗಿದೆ.

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕ ಪಾವತಿಸುವ ದಿನಾಂಕ:** 19.12.2021 **ರಿಂದ** 08.01.2022

ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: **"CONTACT US" —> "Post Your Query"** ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಸ್ಥಳ: ಮುಂಬೈ
ದಿನಾಂಕ: 19.12.2021
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಮ್)

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮೇಕೆದಾಟು 'ರಾಜಕೀಯ'
ಸಂವಾದ
ಭಾಗವಹಿಸುವವರು:
ಎಂ.ಸತೀಶ್ ರೆಡ್ಡಿ, ಬಿಜೆಪಿ ಶಾಸಕ
ರಿಜ್ವಾನ್ ಅರ್ಷದ್, ಕಾಂಗ್ರೆಸ್ ಶಾಸಕ
ಕೆ.ಟಿ.ಶ್ರೀಕಂಠೇಗೌಡ, ಜೆಡಿಎಸ್ ಶಾಸಕ
ನಂದಿನಿ ಜಯರಾಂ, ರೈತ ನಾಯಕಿ, ಮಂಡ್ಯ
ಮಧ್ಯಾಹ್ನ 12 ರಿಂದ 1 ಗಂಟೆಯ ವರೆಗೆ
ಮಿಸಳ್ ಹಾಪ್ಚಾ
ಪದಗಳಲ್ಲಿ ಬದುಕಿನ ಹದ
ಪಾಡ್‌ಕಾಸ್ಟ್:
ಆಟ–ನೋಟ ಬೆಳಿಗ್ಗೆ 7.30, **ಪ್ರಚಲಿತ:** ಬೆಳಿಗ್ಗೆ 9, **ಸಂಪಾದಕೀಯ:** ಬೆಳಿಗ್ಗೆ 9.30, **ಪ್ರಜಾವಾಣಿ ವಾರ್ತೆ:** ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಕನ್ನಡ ಧ್ವನಿ

ಹಿಂದೂ ಮಹಿಳೆಯರ ಗುರಿ: ಜಾಲತಾಣಗಳ ನಿರ್ಬಂಧ

ನವದೆಹಲಿ: 'ಬುಲ್ಲಿ ಬಾಯಿ' ನಂತರ ಈಗ ಫೇಸ್‌ಬುಕ್ ಮತ್ತು ಟೆಲಿಗ್ರಾಂ ಸಾಮಾಜಿಕ ಜಾಲತಾಣಗಳ ಪುಟಗಳಲ್ಲಿ ಹಿಂದೂ ಮಹಿಳೆಯರನ್ನು ಗುರಿಯಾಗಿಸಿಕೊಂಡು ಪೋಸ್ಟ್‌ಗಳನ್ನು ಹಾಕಲಾಗುತ್ತಿದೆ ಎನ್ನುವ ಆರೋಪಗಳಿಗೆ ಸಂಬಂಧಿಸಿದಂತೆ ಸೂಕ್ತಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಬುಧವಾರ ಭರವಸೆ ನೀಡಿದ್ದಾರೆ.

ಟೆಲಿಗ್ರಾಂಗೆ ಸಂಬಂಧಿಸಿದಂತೆ ಟ್ವಿಟರ್‌ನಲ್ಲಿ ದೂರಿಗೆ ಪ್ರತಿಕ್ರಿಯಿಸಿದ ಸಚಿವರು, 'ಚಾನೆಲ್ ಅನ್ನು ನಿರ್ಬಂಧಿಸಲಾಗಿದೆ. ಭಾರತ ಸರ್ಕಾರವು ಕ್ರಮಕ್ಕಾಗಿ ರಾಜ್ಯಗಳ ಪೊಲೀಸ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುತ್ತಿದೆ' ಎಂದು ಹೇಳಿದ್ದಾರೆ. ಟೆಲಿಗ್ರಾಂನಲ್ಲಿ ಹಿಂದೂ ಮಹಿಳೆಯರನ್ನು ಗುರಿಯಾಗಿಸಿಕೊಂಡು ಫೋಟೋಗಳನ್ನು ಹಂಚಿಕೊಳ್ಳುವ ಮತ್ತು ನಿಂದಿಸುವ ಚಾನಲ್ ಇದೆ ಎಂದು ಟ್ವಿಟರ್ ಬಳಕೆದಾರರು ಟ್ವೀಟ್ ಮಾಡಿದ್ದರು. ದಯವಿಟ್ಟು ಈ ಚಾನಲ್‌ನ ಹಿಂದೆ ಇರುವ ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳಿ' ಎಂದೂ ಟ್ವಿಟರ್ ಬಳಕೆದಾರರು ಕೋರಿದ್ದರು.

ಮೇಲ್ಮನವಿ ವಜಾ

ಚೆನ್ನೈ: ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ ಪೋಯಸ್ ಗಾರ್ಡನ್ ಬಂಗಲೆಯ ಸ್ವಾಧೀನ ಪ್ರಕರಣದ ತೀರ್ಪಿನ ವಿರುದ್ಧ ಸಲ್ಲಿಸಿದ್ದ ಮೇಲ್ಮನವಿಯನ್ನು ಮದ್ರಾಸ್ ಹೈಕೋರ್ಟ್ ಬುಧವಾರ ವಜಾಗೊಳಿಸಿದೆ.

ಪಾಕ್ ಭಯೋತ್ಪಾದಕ ಸೇರಿ ಮೂವರು ಉಗ್ರರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯ ಚಂದಗಾಮ್‌ನಲ್ಲಿ ಬುಧವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಜೈಶ್-ಎ ಮೊಹಮ್ಮದ್ (ಜೆಇಎಂ) ಸಂಘಟನೆಯ ಮೂವರು ಉಗ್ರರು ಹತರಾಗಿದ್ದಾರೆ.

'ಹತ್ಯೆಯಾದ ಉಗ್ರರಲ್ಲಿ ಒಬ್ಬ ಪಾಕಿಸ್ತಾನದವನಾಗಿದ್ದು, ಮತ್ತಿಬ್ಬರು ಸ್ಥಳೀಯರು. ಈ ಮೂವರು ಜೆಇಎಂ ಉಗ್ರ ಸಂಘಟನೆಗೆ ಸೇರಿದವರಾಗಿದ್ದಾರೆ. ಜೆಇಎಂ ಉಗ್ರರ ಹತ್ಯೆಯು ಭದ್ರತಾ ಪಡೆಗಳಿಗೆ ಸಿಕ್ಕ ದೊಡ್ಡ ಯಶಸ್ಸು' ಎಂದು ಕಾಶ್ಮೀರ ವಲಯ ಐಜಿಪಿ ವಿಜಯಕುಮಾರ್ ತಿಳಿಸಿದರು.

'ಎನ್ ಕೌಂಟರ್ ನಡೆದ ಸ್ಥಳದಲ್ಲಿ 2ಎಂ-4 ಕಾರ್ಬೈನ್ ಹಾಗೂ ಎಕೆ ಮಾದರಿಯ ಒಂದು ರೈಫಲ್ ಸೇರಿದಂತೆ ಇತರೆ ಮದ್ದುಗುಂಡುಗಳು ದೊರೆತಿವೆ' ಎಂದು ಅವರು ಮಾಹಿತಿ ನೀಡಿದರು.

ಉಗ್ರರು ಅಡಗಿರುವ ಖಚಿತ ಮಾಹಿತಿ ಮೇರೆಗೆ ಸ್ಥಳೀಯ ಪೊಲೀಸ್, ಸೇನೆ ಹಾಗೂ ಸಿಆರ್‌ಪಿಎಫ್ ಜಂಟಿ ಶೋಧ ಕಾರ್ಯಾಚರಣೆ ನಡೆಸಿದ್ದವು. ಈ ವೇಳೆ ಅಡಗಿದ್ದ ಉಗ್ರರು ಭದ್ರತಾ ಪಡೆಗಳ ಮೇಲೆ ಗುಂಡಿನ ದಾಳಿ ನಡೆಸಿದರು. ಭದ್ರತಾ ಪಡೆಗಳ ಪ್ರತಿದಾಳಿಗೆ ಮೂವರು ಉಗ್ರರು ಹತರಾದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ನೀಟ್–ಪಿಜಿ: ಅನಿಶ್ಚಿತ ದೂರವಾಗಿಸಬೇಕಿದೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ನೀಟ್– ಪಿಜಿ ಪ್ರವೇಶಾತಿಗೆ ಸಂಬಂಧಿಸಿದಂತೆ ಎದುರಾಗಿರುವ ಅನಿಶ್ಚಿತತೆಯನ್ನು ದೂರವಾಗಿಸಬೇಕಾದ ಅಗತ್ಯವಿದೆ ಎಂದು ಸುಪ್ರೀಂಕೋರ್ಟ್ ಬುಧವಾರ ಹೇಳಿದೆ.

ಆರ್ಥಿಕ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ನಿಗದಿಪಡಿಸಿರುವ ವಾರ್ಷಿಕ ಎಂಟು ಲಕ್ಷ ರೂಪಾಯಿ ಆದಾಯ ಮಿತಿಗೆ ಸಂಬಂಧಿಸಿ ಎದುರಾಗಿರುವ ಆಕ್ಷೇಪಗಳಿಂದ ಸ್ಥಗಿತಗೊಂಡಿರುವ ನೀಟ್ ಪಿಜಿ ಕೌನ್ಸೆಲಿಂಗ್ ಆರಂಭಿಲು ಅನುಮತಿ ನೀಡಬೇಕು ಎಂದು ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಮನವಿ ಮಾಡಿತು. ಆಗ ಸುಪ್ರೀಂಕೋರ್ಟ್ ಮೇಲಿನಂತೆ ಅಭಿಪ್ರಾಯಪಟ್ಟಿತು.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎ.ಎಸ್. ಬೋಪಣ್ಣ ಅವರ ಪೀಠದ ಮುಂದೆ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಈಗ ಕೌನ್ಸೆಲಿಂಗ್ ಸ್ಥಗಿತಗೊಂಡಿದೆ. ಈ ಕಠಿಣ ಸಂದರ್ಭದಲ್ಲಿ ನಮಗೆ ವೈದ್ಯರು ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗಿದ್ದಾರೆ. ಹೀಗಿರುವಾಗ ಮೀಸಲಾತಿಗೆ ಸಂಬಂಧಿಸಿದಂತೆ ದೀರ್ಘ ವಾದ, ಪ್ರತಿವಾದಗಳು ಅಗತ್ಯವಿಲ್ಲ ಎಂದು ಕೋರಿದರು.

2019ರ ಜನವರಿಗೂ ಮೊದಲು ಇದ್ದ ಮೀಸಲು ಕೋಟಾ ವ್ಯವಸ್ಥೆಯನ್ನೇ ದೇಶದಾದ್ಯಂತ ಜಾರಿಗೊಳಿಸಲಾಗಿದೆ ಎಂದು ಅವರು ಹೇಳಿದರು.

ಕೌನ್ಸೆಲಿಂಗ್ ಪ್ರಾರಂಭಿಸಲು ಅವಕಾಶ ನೀಡುವಂತೆ ನ್ಯಾಯಪೀಠವನ್ನು ಕೋರಿದ ಮೆಹ್ತಾ ಅವರು, ಏತನ್ಮಧ್ಯೆ ಪೀಠವು ಈ ಕುರಿತ ಆಕ್ಷೇಪಣೆಗಳನ್ನು ಪರಿಗಣಿಸಬಹುದು ಎಂದರು.

ಕೌನ್ಸೆಲಿಂಗ್ ಆರಂಭಿಸುವ ಕುರಿತ ಮೆಹ್ತಾ ಕೋರಿಕೆಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಂತೆ ಪೀಠವು ಅರ್ಜಿದಾರರನ್ನು ಪ್ರತಿನಿಧಿಸುವ ಹಿರಿಯ ವಕೀಲರಾದ ಅರವಿಂದ್ ದಾತಾರ್ ಮತ್ತು ಶ್ಯಾಮ್ ದಿವಾನ್ ಅವರನ್ನು ಕೇಳಿತು.

ಈ ಕುರಿತ ವಿಚಾರಣೆಯನ್ನು ನ್ಯಾಯಪೀಠ ಗುರುವಾರವೂ ಮುಂದುವರಿಸಲಿದೆ.

ಮತ್ತೆ ನಿರ್ಬಂಧ: 'ಚಂದನವನ' ಹೈರಾಣ



ಚಿತ್ರಮಂದಿರಗಳಲ್ಲಿ ಶೇ 50 ಆಸನ ಭರ್ತಿಗೆ ವಿರೋಧವಿಲ್ಲ. ಆದರೆ, ಚಿತ್ರ ಬಿಡುಗಡೆಯಾಗುವುದೇ ಶುಕ್ರವಾರ. ವಾರಾಂತ್ಯದ ಕರ್ಫ್ಯೂನಿಂದ ಆ ಆದಾಯಕ್ಕೂ ಹೊಡೆತ ಬೀಳಲಿದೆ
ಡಿ.ಕೆ.ರಾಮಕೃಷ್ಣ,
ಅಧ್ಯಕ್ಷ, ನಿರ್ಮಾಪಕರ ಸಂಘ.



ಪ್ರೇಕ್ಷಕರ ಸಂಖ್ಯೆ ನಿರ್ಬಂಧ, ವಾರಾಂತ್ಯ ಕರ್ಫ್ಯೂ ಕಾರಣದಿಂದ ಸಿನಿಮಾ ಬಿಡುಗಡೆ ಮುಂದೂಡುತ್ತಿದ್ದೇವೆ. ಕೋವಿಡ್ ಇಳಿಕೆಯಾದ ಬಳಿಕ ಬಿಡುಗಡೆ ದಿನಾಂಕ ಘೋಷಿಸುತ್ತೇವೆ
ಪ್ರೇಮ್, 'ಏಕ್ ಲವ್ ಯಾ' ಸಿನಿಮಾ ನಿರ್ದೇಶಕ

ಒಂದನೇ ಪುಟದಿಂದ

ಸಿನಿಮಾ ಚಟುವಟಿಕೆಗಳಿಗೂ ಅಡ್ಡಿ: ಡಿ.24ಕ್ಕೆ ತೆರೆಕಂಡಿರುವ ಡಾಲಿ ಧನಂಜಯ ನಟನೆಯ 'ಬಡವ ರಾಸ್ಕಲ್' ಹಾಗೂ ನಿಖಿಲ್ ಕುಮಾರಸ್ವಾಮಿ ನಟನೆಯ 'ರೈಡರ್'ಗೂ ಸರ್ಕಾರದ ಹೊಸ ಆದೇಶ ಹೊಡೆತ ನೀಡಲಿದೆ. ರಾತ್ರಿ ಕರ್ಫ್ಯೂ ಹಾಗೂ ವಾರಾಂತ್ಯದ ಕರ್ಫ್ಯೂನಿಂದಾಗಿ ಸಿನಿಮಾ ಚಿತ್ರೀಕರಣಕ್ಕೂ ಅಡ್ಡಿಯಾಗಲಿದ್ದು, ಮತ್ತಷ್ಟು ನಿರ್ಬಂಧ ಹೇರಿಕೆಯಿಂದ ಚಿತ್ರೀಕರಣವೇ ಸ್ಥಗಿತವಾಗುವ ಭೀತಿಯಲ್ಲಿ ಚಿತ್ರರಂಗವಿದೆ.

ಫೆಬ್ರುವರಿಯಲ್ಲಿದ್ದವು ಸಾಲು ಸಾಲು ಸಿನಿಮಾಗಳು

ಫೆ.4ರಂದು ಬಿಡುಗಡೆಯಾಗಬೇಕಿದ್ದ ಶ್ರೀ ಮಹಾದೇವ್ ಹಾಗೂ ಅದಿತಿ ಪ್ರಭುದೇವ ನಟನೆಯ 'ಗಜಾನನ ಆ್ಯಂಡ್ ಗ್ಯಾಂಗ್' ಸಿನಿಮಾ ಬಿಡುಗಡೆಯನ್ನು ಚಿತ್ರತಂಡ ಮುಂದೂಡಿದೆ.

ಫೆ.11ರಂದು ಶ್ರೀನಿ ನಟಿಸಿ, ನಿರ್ದೇಶಿಸಿರುವ 'ಓಲ್ಡ್ ಮಾಂಕ್', ಡಾರ್ಲಿಂಗ್ ಕೃಷ್ಣ ನಟನೆಯ 'ಲವ್ ಮಾಕ್ಟೇಲ್–2' ಹಾಗೂ ಧನ್ವೀರ್ ಹಾಗೂ ಶ್ರೀಲೀಲಾ ನಟನೆಯ 'ಬೈ ಟು ಲವ್'–ಹೀಗೆ ಮೂರು ಸಿನಿಮಾಗಳು ಬಿಡುಗಡೆಗೆ ಸಜ್ಜಾಗಿದ್ದವು. ಈ ಪೈಕಿ 'ಬೈ ಟು ಲವ್' ಸಿನಿಮಾ ಬಿಡುಗಡೆಯನ್ನು ಮುಂದೂಡಲಾಗಿದೆ. ಇನ್ನುಳಿದ ಸಿನಿಮಾಗಳ ಬಗ್ಗೆ ಚಿತ್ರತಂಡವು ಅಧಿಕೃತ ಮಾಹಿತಿಯನ್ನು ಇನ್ನಷ್ಟೇ ನೀಡಬೇಕಿದೆ.

ನಟ ಕಿಚ್ಚ ಸುದೀಪ್ ನಟನೆಯ, ಅನೂಪ್ ಭಂಡಾರಿ ನಿರ್ದೇಶನದ ಪ್ಯಾನ್ ಇಂಡಿಯಾ ಸಿನಿಮಾ 'ವಿಕ್ರಾಂತ್ ರೋಣ' ಬಿಡುಗಡೆಗೆ ಫೆ.24ಕ್ಕೆ ದಿನಾಂಕ ನಿಗದಿಯಾಗಿದೆ. ಆದರೆ ಚಿತ್ರ ಬಿಡುಗಡೆ ಕುರಿತು ಚಿತ್ರತಂಡ ಇನ್ನೂ ಗೊಂದಲದಲ್ಲಿದೆ. ಕಳೆದ ವರ್ಷ ಆಗಸ್ಟ್ 19ರಂದೇ ತೆರೆಯ ಮೇಲೆ ಬರಬೇಕಿದ್ದ ಈ ಸಿನಿಮಾ, ಕೋವಿಡ್ ಲಾಕ್‌ಡೌನ್ ಕಾರಣದಿಂದ ಮುಂದೂಡಲ್ಪಟ್ಟಿತ್ತು. ಇದೀಗ ಮತ್ತೆ ಸಿನಿಮಾವನ್ನು ಮುಂದೂಡಬೇಕಾದ ಅನಿವಾರ್ಯ ಸ್ಥಿತಿಯಲ್ಲಿ ಚಿತ್ರತಂಡವಿದೆ.

‘ಸೇನಾ ಹೆಲಿಕಾಪ್ಟರ್ ದುರಂತಕ್ಕೆ ದಟ್ಟ ಮೋಡ ಕಾರಣ’

ನವದೆಹಲಿ: ಸೇನಾಪಡೆಗಳ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಮತ್ತು ಇತರ 13 ಮಂದಿ ಮೃತಪಟ್ಟ ಸೇನಾ ಹೆಲಿಕಾಪ್ಟರ್ ಅಪಘಾತಕ್ಕೆ, ದಟ್ಟ ಮೋಡ ಕಾರಣ ಎಂಬುದು ತನಿಖೆಯಿಂದ ಗೊತ್ತಾಗಿದೆ. ಹೆಲಿಕಾಪ್ಟರ್ ಪರ್ವತ ಪ್ರದೇಶದಿಂದ ಸುರಕ್ಷಿತ ಪ್ರದೇಶಕ್ಕೆ ಹೋಗುವಾಗ ಅಪಘಾತ ಸಂಭವಿಸಿದೆ ಎನ್ನಲಾಗಿದೆ.

ಪಾದಯಾತ್ರೆ ಮಾಡಿಯೇ ಸಿದ್ಧ: ಸಿದ್ದರಾಮಯ್ಯ

ಬೆಂಗಳೂರು: ‘ನಾವು ಪಾದಯಾತ್ರೆ ಮಾಡಿದರೆ ಜನರೆದುರು ಬಿಜೆಪಿ ಸರ್ಕಾರ ಬೆತ್ತಲಾಗಲಿದೆ. ಹೀಗಾಗಿ ಅದನ್ನು ತಡೆಯಲು ಸಂಚು ರೂಪಿಸಿದೆ. ಆದರೆ, ನಾವು ಕೋವಿಡ್ ನಿಯಮ ಪಾಲಿಸಿ ಪಾದಯಾತ್ರೆ ಮಾಡಿಯೇ ಮಾಡುತ್ತೇವೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ಮೇಕೆದಾಟು ಯೋಜನೆ ಜಾರಿ ಮಾಡಬಾರದೆಂದು ತಮಿಳುನಾಡಿನ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ ಧರಣಿ ಕುಳಿತಿದ್ದಾರೆ. ಅಣ್ಣಾಮಲೈ ಅವರ ಪ್ರತಿಭಟನೆಗೆ ರಾಜ್ಯ ಸರ್ಕಾರದ ಬೆಂಬಲವೂ ಇದೆ’ ಎಂದು ದೂರಿದ ಅವರು, ‘ನಾವು ಹೈಕಮಾಂಡ್ ಜೊತೆ ಚರ್ಚೆ ನಡೆಸಿಯೇ ಪಾದಯಾತ್ರೆ ಮಾಡುತ್ತಿದ್ದೇವೆ’ ಎಂದು ಸ್ಪಷ್ಟಪಡಿಸಿದರು.

‘ಕೋವಿಡ್ ಸ್ಫೋಟವಾದರೆ ಕಾಂಗ್ರೆಸ್ ಹೊಣೆ’ ಎಂಬ ಸಚಿವ ಸುಧಾಕರ್ ಹೇಳಿಕೆ ಪ್ರತಿಕ್ರಿಯಿಸಿದ ಅವರು, ‘ಚಾಮರಾಜನಗರದಲ್ಲಿ ಆಮ್ಲಜನಕ ಸಿಗದೆ 36 ಸತ್ತಾಗ, ಸತ್ತವರು ಮೂರೇ ಮೂರು ಜನ ಎಂದು ಇದೇ ಸುಧಾಕರ್ ಸುಳ್ಳು ಹೇಳಿದ್ದರು. ಕೋವಿಡ್ ಮೊದಲ ಮತ್ತು ಎರಡನೇ ಅಲೆ ಸಮಯದಲ್ಲಿ ನಾವು ಸರ್ಕಾರಕ್ಕೆ ಸಹಕಾರ ಕೊಟ್ಟಿದ್ದೇವೆ. ಆಗಲೂ ಲಕ್ಷಾಂತರ ಜನ ಸತ್ತಿಲ್ಲವೇ’ ಎಂದು ಪ್ರಶ್ನಿಸಿದರು.

‘ಸರ್ಕಾರದ ನಿರ್ಬಂಧಗಳನ್ನು ಮುಖ್ಯಮಂತ್ರಿ ಗೌರವಿಸದೆ, ಇತರರು ಪಾಲಿಸಿ ಎಂದು ಹೇಳುವುದರಲ್ಲಿ ಅರ್ಥ ಇಲ್ಲ. ಈ ನಿರ್ಬಂಧಗಳನ್ನು ಹೇರಿರುವುದು ಪಾದಯಾತ್ರೆ ತಡೆಯಬೇಕೆಂಬ ಕಾರಣಕ್ಕೆ. ಆದರೆ, ಪಾದಯಾತ್ರೆ ಮಾಡಿ ಬಿಜೆಪಿಯವರ ಷಡ್ಯಂತ್ರ ಬಯಲು ಮಾಡುತ್ತೇವೆ’ ಎಂದರು.

ನೀರಿಗಾಗಿ ನಡಿಗೆ ನಿಲ್ಲದು– ಕಾಂಗ್ರೆಸ್

ಒಂದನೇ ಪುಟದಿಂದ

‘ಅವರ ಅಸೂಯೆಗೆ ಮದ್ದಿಲ್ಲ. ಇದನ್ನು ತಡೆಯಲು ಪಿತೂರಿ ರೂಪಿಸಿ, ಕೋವಿಡ್ ನೆಪದಲ್ಲಿ ನಿರ್ಬಂಧ ಹಾಕಿದ್ದಾರೆ. ರಾಜ್ಯದ ಹಿತಕ್ಕಾಗಿ ಪಾದಯಾತ್ರೆ ಹೊರತು ರಾಜಕಾರಣಕ್ಕೆ ಅಲ್ಲ’ ಎಂದು ಹೇಳಿದರು.

‘9ರಂದು ಬೆಳಿಗ್ಗೆ ಪಾದಯಾತ್ರೆ ಆರಂಭಿಸಿ, 19ರಂದು ಬಹಿರಂಗ ಸಭೆಯ ಮೂಲಕ ಮುಕ್ತಾಯ ಮಾಡುತ್ತೇವೆ. ಹರಿಯುವ ನೀರು, ಬೀಸುವ ಗಾಳಿ, ಉದಯಿಸುವ ಸೂರ್ಯನನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಇದು ಪ್ರಕೃತಿ ನಿಯಮ ಎಂದು ಬಿಜೆಪಿ ನಾಯಕರು ಗಮನದಲ್ಲಿಟ್ಟುಕೊಳ್ಳಲಿ. ಹೀಗಾಗಿ, ನೀರಿಗಾಗಿ ನಡಿಗೆಗೆ ಬದ್ಧರಾಗಿದ್ದೇವೆ’ ಎಂದರು.

ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ಸಚಿವರ ಎಚ್ಚರಿಕೆಗೆ ಪ್ರತಿಕ್ರಿಯಿಸಿದ ಅವರು, ‘50ಕ್ಕೂ ಹೆಚ್ಚು ಜನ ಸೇರುವಂತಿಲ್ಲ ಎಂಬ ನಿರ್ಬಂಧ ಇದ್ದಾಗ ಮುಖ್ಯಮಂತ್ರಿ ಸೇರಿದಂತೆ ಬಿಜೆಪಿ ನಾಯಕರು ಸಾವಿರಾರು ಜನ ಸೇರಿದ್ದ ಮದುವೆ ಸಮಾರಂಭಗಳಲ್ಲಿ ಭಾಗವಹಿಸಿ ನಿಯಮ ಉಲ್ಲಂಘಿಸಿದ್ದರು. ಕೇಂದ್ರ ಸಚಿವರು ಜನಾಶೀರ್ವಾದ ಯಾತ್ರೆ ಮಾಡಿದಾಗ ನಿಯಮ ಉಲ್ಲಂಘನೆ ಆಗಲಿಲ್ಲವೇ’ ಎಂದು ಪ್ರಶ್ನಿಸಿದರು.

‘ಡಿ.ಕೆ. ಶಿವಕುಮಾರ್ ಅವರಿಗೂ ಮೇಕೆದಾಟು ಡಿಪಿಆರ್‌ಗೂ ಸಂಬಂಧವಿಲ್ಲ ಎಂಬ ಕುಮಾರಸ್ವಾಮಿ ಹೇಳಿಕೆಗೆ, ‘ನಾನು ನೀರಾವರಿ ಸಚಿವನಾಗಿ ಎಷ್ಟು ಬಾರಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ್ದೇನೆ, ತಮಿಳುನಾಡು ಮುಖ್ಯಮಂತ್ರಿ ಭೇಟಿಗೆ ಎಷ್ಟು ಪತ್ರ ಬರೆದಿದ್ದೇನೆ, ಕೇಂದ್ರ ಸಚಿವರು ಉಭಯ ರಾಜ್ಯಗಳ ಸಚಿವರ ಸಭೆ ನಡೆಸಲು ಪ್ರಯತ್ನಪಟ್ಟ ಬಗ್ಗೆ ನನ್ನಲ್ಲಿ ದಾಖಲೆಗಳಿವೆ. ಅವರು ಮೈಲೇಜ್ ಪಡೆಯಲು ಮಾತನಾಡುತ್ತಿದ್ದಾರೆ’ ಎಂದರು.

ಕೇಂದ್ರಕ್ಕೆ ರಾಜ್ಯದ ಪತ್ರ ಸರಣಿ

2015 ಏಪ್ರಿಲ್ 30
ಮೇಕೆದಾಟು ಯೋಜನೆ ಬಗ್ಗೆ ಪ್ರಧಾನಿಗೆ ಸಿದ್ದರಾಮಯ್ಯ ನಿವೇದನಾ ಪತ್ರ

2019ರ ನ. 11
ಕೇಂದ್ರ ಜಲಶಕ್ತಿ ಸಚಿವಗೆ ಬಿ.ಎಸ್. ಯಡಿಯೂರಪ್ಪ ಪತ್ರ

2019ರ ನ. 19
ಕೇಂದ್ರ ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ ಯು.ಪಿ. ಸಿಂಗ್‌ಗೆ ಮುಖ್ಯ ಕಾರ್ಯದರ್ಶಿಯಾಗಿದ್ದ ಟಿ.ಎಂ. ವಿಜಯಭಾಸ್ಕರ್ ಪತ್ರ

2019 ಜನವರಿ 18
₹ 9,000 ಕೋಟಿ ಮೊತ್ತದ ಪರಿಷ್ಕೃತ ಡಿಪಿಆರ್ ಅನ್ನು ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಾಜ್ಯ ಸರ್ಕಾರ ಸಲ್ಲಿಸಿತ್ತು.

2021 ಜುಲೈ 3
ಪ್ರಧಾನಿ, ಕೇಂದ್ರ ಜಲಶಕ್ತಿ, ಪರಿಸರ ಸಚಿವ ಮತ್ತು ತಮಿಳುನಾಡು ಮುಖ್ಯಮಂತ್ರಿಗೆ ಸ್ಟಾಲಿನ್‌ಗೆ ಬಿ.ಎಸ್. ಯಡಿಯೂರಪ್ಪ ಪತ್ರ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಮೇಕೆದಾಟು: ಕೇಂದ್ರದಲ್ಲೇ ಉಳಿದ ಕಡತ

ಒಂದನೇ ಪುಟದಿಂದ

ಮೇಕೆದಾಟು ಯೋಜನೆಯನ್ನು ಪ್ರಶ್ನಿಸಿ ತಮಿಳುನಾಡು ಸಲ್ಲಿಸಿರುವ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವಾಗ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ವಿಚಾರಣೆ ನಡೆಸುವ ಅಧಿಕಾರ ಎನ್‌ಜಿಟಿಯ ಚೆನ್ನೈ ಪೀಠಕ್ಕೆ ಇಲ್ಲ’ ಎಂದು 2021ರ ಜೂನ್ 17ರಂದು ಆದೇಶ ಹೊರಡಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ತಮಿಳುನಾಡು ಆಗಸ್ಟ್ 11ರಂದು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಯೋಜನೆ ಪೂರ್ವಾಪರ:

ಸಿದ್ದರಾಮಯ್ಯ ನೇತೃತ್ವದ ಸರ್ಕಾರ 2017 ಜೂನ್ 7ರಂದು ಬೆಂಗಳೂರಿನಲ್ಲಿರುವ ಕೇಂದ್ರದ ಜಲ ಆಯೋಗ (ಸಿಡಬ್ಲ್ಯೂಸಿ) ಪ್ರಾದೇಶಿಕ ಕಚೇರಿಗೆ ₹ 5,912 ಕೋಟಿ ಅಂದಾಜು ವೆಚ್ಚದ ಡಿಪಿಆರ್ ಅನ್ನು ಸಲ್ಲಿಸಿತ್ತು. ತಮಿಳುನಾಡು ಕೆಲವು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದರಿಂದ, ಅದಕ್ಕೆ ಸೂಕ್ತ ಸ್ಪಷ್ಟನೆಗಳನ್ನೂ ಸೇರಿಸಿ, ಮರು ಪ್ರಸ್ತಾವನೆಯನ್ನು ದೆಹಲಿಯಲ್ಲಿರುವ ಸಿಡಬ್ಲ್ಯೂಸಿ ಕೇಂದ್ರ ಕಚೇರಿಗೆ ಸಲ್ಲಿಸುವಂತೆ ಜುಲೈ 7ರಂದು ಪ್ರಾದೇಶಿಕ ಕಚೇರಿ ಸೂಚಿಸಿತ್ತು. ‘ಯೋಜನೆಯ ಮೂಲಕ ವಾರ್ಷಿಕ 16.1 ಟಿಎಂಸಿ ಅಡಿ ನೀರನ್ನು ಬೆಂಗಳೂರು ಹಾಗೂ ಸುತ್ತಮುತ್ತ ಕುಡಿಯುವ ಉದ್ದೇಶಕ್ಕೆ ಪೂರೈಸಲಾಗುತ್ತದೆ ಎಂದು ಡಿಪಿಆರ್‌ನಲ್ಲಿ ತಿಳಿಸಲಾಗಿದೆ. ಆದರೆ, ಕುಡಿಯುವ ನೀರು ಪಡೆಯಲಿರುವ ಪ್ರದೇಶವು ಕಾವೇರಿ ಕಣಿವೆ ವ್ಯಾಪ್ತಿಗೆ ಒಳಪಡಲಿದೆಯೇ, ಇಷ್ಟು ಪ್ರಮಾಣದ ನೀರನ್ನು ರಾಜ್ಯಕ್ಕೆ ಹಂಚಿಕೆಯಾಗಿರುವ ಪಾಲಿನಲ್ಲೇ ಬಳಸಲಾಗುತ್ತದೆಯೇ. ಯೋಜನೆಯಿಂದ ಕಾವೇರಿ ಜಲವಿವಾದ ನ್ಯಾಯಮಂಡಳಿ ನೀಡಿರುವ ಐತೀರ್ಪಿನ ಉಲ್ಲಂಘನೆ ಆಗಲಿದೆಯೇ’ ಎಂಬ ಬಗ್ಗೆ ವಿವರಣೆ ನೀಡುವಂತೆಯೂ ಪ್ರಾದೇಶಿಕ ಕಚೇರಿ ಸೂಚಿಸಿತ್ತು.‘ಯೋಜನೆಯಿಂದ ತಮಿಳುನಾಡಿಗೆ ಕಾವೇರಿ ನೀರು ಸರಾಗವಾಗಿ ಹರಿದುಹೋಗುವಲ್ಲಿ ಯಾವುದೇ ರೀತಿಯ ಅಡ್ಡಿ ಉಂಟಾಗದು’ ಎಂದು ಈ ಮೊದಲೇ ಸ್ಪಷ್ಟಪಡಿಸಿದ್ದ ಕರ್ನಾಟಕ, ಸಮಾನಾಂತರ ಜಲಾಶಯದ ಉದ್ದೇಶ ಸ್ಪಷ್ಟಪಡಿಸಿತ್ತು.

5 ವರ್ಷದ ಬಾಲಕಿ ಮೇಲೆ ಅತ್ಯಾಚಾರ: ಮಲತಂದೆ ಬಂಧನ

ಚಾಮರಾಜನಗರ: ಐದು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಮಾಡಿದ ಆರೋಪದಲ್ಲಿ ಮಲತಂದೆಯನ್ನು ಪಟ್ಟಣ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಬಾಲಕಿಯ ತಾಯಿ ನೀಡಿರುವ ದೂರಿನನ್ವಯ ಪೊಲೀಸರು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು 45 ವರ್ಷದ ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಆರೋಪಿಯು ಬಾಲಕಿಯ ತಾಯಿಯ ಎರಡನೇ ಪತಿ. ಮೊದಲ ಗಂಡನ ಕಿರುಕುಳ ತಾಳಲಾರದೆ ಅವರು ಎರಡು ವರ್ಷದ ಹಿಂದೆ ವಿಚ್ಛೇದನ ಪಡೆದಿದ್ದರು. ದಂಪತಿಗೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ.ಮೊದಲ ಪತಿಯಿಂದ ದೂರವಾದ ಬಳಿಕ ಬಾಲಕಿ ತಾಯಿಯು ಮೈಸೂರಿನ ಆರೋಪಿಯನ್ನು ಮದುವೆಯಾಗಿದ್ದರು. ಮದ್ಯವ್ಯಸನದಿಂದ ಜಗಳವಾಡುತ್ತಿದ್ದ ಕಾರಣಕ್ಕೆ 20 ದಿನದ ಹಿಂದೆ ನಗರದಲ್ಲಿರುವ ತಂದೆ ಮನೆಗೆ ಬಂದಿದ್ದರು. ಮಹಿಳಾ ಠಾಣೆಯಲ್ಲಿ ದೂರನ್ನೂ ನೀಡಿದ್ದರು.

ನೆಲಮಂಗಲ ದೇವಿಹಳ್ಳಿ ಎಕ್ಸ್‌ಪ್ರೆಸ್‌ವೇ ಪ್ರೈವೇಟ್ ಲಿಮಿಟೆಡ್
ಟೋಲ್ ಪ್ಲಾಜಾ ನಿರ್ವಾಹಕ ಕಟ್ಟಡ, ದೊಡ್ಡಕರೇನಹಳ್ಳಿ ಗ್ರಾಮ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಕರ್ನಾಟಕ–562123

ಸಾರ್ವಜನಿಕ ಸೂಚನೆ
ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ರಾಷ್ಟ್ರೀಯ ಹೆದ್ದಾರಿ (NH)-75 (ಹಳೆಯ NH-48) ಎರಡು ಬದಿಯ ಮುಖ್ಯರಸ್ತೆಯಲ್ಲಿ Km. 28+200 ರಿಂದ Km.108+462 (ದೇವಿಹಳ್ಳಿ) ವರೆಗೆ ಪ್ರಮುಖ ರಸ್ತೆ ದುರಸ್ತಿ ಕಾರ್ಯ ಪ್ರಗತಿಯಲ್ಲಿರುತ್ತದೆ. ಅನಾನುಕೂಲತೆಗಾಗಿ ವಿಷಾದಿಸುತ್ತೇವೆ. ದಯವಿಟ್ಟು ರಸ್ತೆ ಸಂಚಾರಿಗಳು ಜಾಗ್ರತೆಯಿಂದ ವಾಹನ ಚಾಲನೆ ಮಾಡಬೇಕೆಂದು ವಿನಂತಿ ಮತ್ತು ದುರಸ್ತಿ ಕಾರ್ಯವನ್ನು ಸರಾಗವಾಗಿ ಮುಗಿಸಲು ಸಹಾಯ ಮಾಡಿ.
ಧನ್ಯವಾದಗಳು
ನೆಲಮಂಗಲ ದೇವಿಹಳ್ಳಿ ಎಕ್ಸ್‌ಪ್ರೆಸ್‌ವೇ ಪ್ರೈವೇಟ್ ಲಿಮಿಟೆಡ್

IN THE COURT OF THE ADDITIONAL CITY CIVIL AND SESSIONS JUDGE AT BENGALURU (CCH 92)
MISC NO.225/2019
BETWEEN
....Petitioner
The State of Karnataka
Represented by Competent Authority
Assistant Commissioner,
Bengaluru North Sub Division, 2nd Floor
Kandaya Bhavana, K.G.Road,
Bengaluru - 560009
AND
1. M/S Ambidant Marketing Pvt Ltd.
Having its Office at
No.9/A KHB Main Road Kanakanagar,
RT Nagar Post, Bengaluru-560032
....Respondents
Notice to Respondents No. 5 & 6
Respondent No.5
Syed Afaq Ahmed
W/O Syed Afaq Ahmed
No.301 3rd Floor Cresent Heights
1st Main Ambedkar Layout
RT Nagar, Bengaluru-560032
Respondent No.6
Mohammed Rafi
No.301 3rd Floor Cresent Heights
1st Main Ambedkar Layout
RT Nagar, Bengaluru-560032

Whereas the Petitioner has filed the Misc. Petition No 225/2019 under Section 5(2) of the Karnataka Protection of Interest of Depositors in Financial Establishments Act 2004 against respondents.
The Respondent No.5 and 6 are hereby summoned to appear in the Court of the Additional City Civil & Sessions Judge at Bengaluru (CCH No.92), in person or by a pleader duly instructed and able to answer all material questions relating to Misc. Petition No.225/2019 on 18-01-2022 at 11-00 'O' Clock in the forenoon to answer the claim.
Take notice that in default of your appearance on the date above mentioned the Misc. Petition will be heard and determined in your absence.
Given under my hand and seal of the court this day on 03-01-2022.
By order of the Court
Assistant Registrar
City Civil Court
Bengaluru
Shantha B Mullur
Special Public Prosecutor,
City Civil Court Bangalore.
DIPR/DDU/Sreshta/2669/2021-22

IN THE COURT OF THE ADDITIONAL CITY CIVIL AND SESSIONS JUDGE AT BENGALURU (CCH 92)
MISC NO.1110/2019
BETWEEN
....Petitioner
The State of Karnataka
Represented by Competent Authority
Assistant Commissioner,
Bengaluru North Sub Division, 2nd Floor
Kandaya Bhavana, K.G.Road,
Bengaluru - 560009
AND
M/S Nafiya Tours and Travels
No. 45/3, Dinnur Main Road,
R.T. Nagar Post,
Bengaluru-560032 & Others
....Respondents
Notice to Respondents No. 1 to 4
Respondent No.1
M/S Nafiya Tours & Travels,
No. 45/3, Dinnur Main Road,
R.T.Nagar Post,
Bengaluru-560032
Respondent No.2
Mohammed Shohaib
S/O Sardar,
No.45/3, Dinnur Main Road,
R.T.Nagar Post,
Bengaluru-560032
Respondent No.3
Syed Tanveer,
S/O Syed Vajeed,
No.45/3, Dinnur Main Road,
R.T.Nagar Post,
Bengaluru-560032
Respondent No.4
Syed Kaleed Pasha
No.45/3, Dinnur Main Road,
R.T.Nagar Post,
Bengaluru-560032

Whereas the Petitioner has filed the Misc. Petition No.1110/2019 under Section 5(2) of the Karnataka Protection of Interest of Depositors in Financial Establishments Act 2004 against respondents.
The Respondent No. 1 and 4 are hereby summoned to appear in the Court of the Additional City Civil & Sessions Judge at Bengaluru (CCH No.92), in person or by a pleader duly instructed and able to answer all material questions relating to Misc. Petition No.1110/2019 on 21-01-2022 at 11-00 'O' Clock in the forenoon to answer the claim.
Take notice that in default of your appearance on the date above mentioned the Misc. Petition will be heard and determined in your absence.
Given under my hand and seal of the court this day on 03-01-2022.
By order of the Court
Assistant Registrar
City Civil Court
Bengaluru
Shantha B Mullur
Special Public Prosecutor,
City Civil Court Bangalore.
DIPR/DDU/Sreshta/2677/2021-22

ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್.
ನೊಂದಾಯಿತ ಕಛೇರಿ: 1ನೇ ಮಹಡಿ, ಪಾಲಿಕೆ ಕಟ್ಟಡ ಬ್ಲಾಕ್, ಎಸ್.ಎನ್ ಮಾರ್ಕೆಟ್, ನೆಹರು ರಸ್ತೆ, ಶಿವಮೊಗ್ಗ – 577201.
CIN:U74999KA2017PLC100268,
GSTIN:29AAYCS3808B1Z0, PAN:AAYCS3808B,
TAN:BLRS63059D.
Web: http://shivamoggasmartcity.co.in/
E-mail: shimogasmartcity@gmail.com
PH.No: 08182-279951.
ಕ್ರಸಂ: SSCL/Tec/42/DDb/2018-19 Date: 01.01.2022
ಶಿವಮೊಗ್ಗ ಜನತೆಗೆ ವಿಶೇಷ ಸೂಚನೆ:
ಶಿವಮೊಗ್ಗ ಸ್ಮಾರ್ಟ ಸಿಟಿ ಲಿಮಿಟೆಡ್ ರವರ ವತಿಯಿಂದ ಅಳವಡಿಸಲ್ಪಟ್ಟಿರುವ Digital Display board ಮತ್ತು PIS Display (40 numbers)at smart Bus Shelter ಅನ್ನು ಸಾರ್ವಜನಿಕರು ಜಾಹೀರಾತಿಗಾಗಿ ಬಳಸಿಕೊಳ್ಳಬಹುದಾಗಿ ಸೂಚಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: Phone:9353602043
ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–22/01/ಎಂಸಿಎ/21–22/997

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No : 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಃಲೋಇ:ಪಿಬಿ–2:ವಿವಿಧಃ2021–22/4187 ದಿನಾಂಕ : 05–01–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿಯ ಒಟ್ಟು **890.00** ಲಕ್ಷ ಮೊತ್ತದಲ್ಲಿ ಒಟ್ಟು 03 ಕಾಮಗಾರಿಗೆ (ಕನಿಷ್ಟ ಮೊತ್ತ ರೂ: **90.00** ಲಕ್ಷ ಗರಿಷ್ಠ ಮೊತ್ತ ರೂ: **500.00** ಲಕ್ಷ) ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ– ಪ್ರೊಕ್ಯೂರ್‌ಮೆಂಟ್ (E- Procurement) ಸ್ಟ್ಯಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ– 3 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.eproc.karnataka.gov.in/ ದಲ್ಲಿ ನೋಡಿಕೊಳ್ಳಬಹುದು.
ವರ್ಕ ಇಂಡೆಂಟ್ ನಂ ಈ ಕೆಳಗಿನಂತಿವೆ : 145737, 146263 and 143494
ಮೇಲಿನ ಕಾಮಗಾರಿಗೆ ಟೆಂಡರ ವಿವರ ಪಶ್ನೋತ್ತರ ದಿನಾಂಕ : **13–01–2022,** ಟೆಂಡರ್ ಸಲ್ಲಿಸುವ ದಿನಾಂಕ : **17–01–2022** ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ : **18–01–2022** ಆರ್ಥಿಕ ಬಿಡ್ ತೆರೆಯುವ ದಿನಾಂಕ : **19–01–2022**
GST of 12% shall be added separately in the estimate as per Govt. Letter No PWD 65 RDF 2017, dated 11-10-2018. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.
ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ,
ವಾಸಾಸಂಇ/ಗದಗ/ಎಂ.ಸಿ.ಎ/451/2021–22 ಗದಗ ವಿಭಾಗ, ಗದಗ

ರಾಮನಗರ ಜಿಲ್ಲಾ ಪಂಚಾಯತ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ
ಪಂಚಾಯತ್ ಭವನ, ಬಿ.ಎಂ. ರಸ್ತೆ, ರಾಮನಗರ–562159
ಸಂಖ್ಯೆ: ರಾಜಿಪಂ/DRDA/SBM/MRF/ಸಿಆರ್–158–1/2021–22 ದಿನಾಂಕ: 31.12.2021
ಸಂಖ್ಯೆ: ರಾಜಿಪಂ/DRDA/SBM/MRF/ಸಿಆರ್–158–2/2021–22 ದಿನಾಂಕ: 31.12.2021
ಸಂಖ್ಯೆ: ರಾಜಿಪಂ/DRDA/SBM/MRF/ಸಿಆರ್–158–3/2021–22 ದಿನಾಂಕ: 31.12.2021
ಸಂಖ್ಯೆ: ರಾಜಿಪಂ/DRDA/SBM/MRF/ಸಿಆರ್–158–4/2021–22 ದಿನಾಂಕ: 31.12.2021
ಸಂಖ್ಯೆ: ರಾಜಿಪಂ/DRDA/SBM/MRF/ಸಿಆರ್–158–5/2021–22 ದಿನಾಂಕ: 31.12.2021
ಸಂಖ್ಯೆ: ರಾಜಿಪಂ/DRDA/SBM/MRF/ಸಿಆರ್–158–6/2021–22 ದಿನಾಂಕ: 31.12.2021
ಇ–ಟೆಂಡರ್ ಪ್ರಕಟಣೆ
ಮೇಲಿನ 1 ರಿಂದ 6 ಟೆಂಡರ್ ಸಂಖ್ಯೆಗಳಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕು **ವಂದಾರಗುಪ್ಪೆ ಗ್ರಾಮ ಪಂಚಾಯತ್** ವ್ಯಾಪ್ತಿಯಲ್ಲಿರುವ **Material Recovery Facility (MRF) ಘಟಕಕ್ಕೆ ಯಂತ್ರೋಪಕರಣಗಳನ್ನು ಖರೀದಿಸಲು** ಇ–ಸಂಗ್ರಹಣಾ ವೇದಿಕೆಯಲ್ಲಿ ಆಸಕ್ತ ನೋಂದಾಯಿತ ಅಧಿಕೃತ ಸಂಸ್ಥೆಗಳಿಂದ ಷರತ್ತಿಗೊಳಪಟ್ಟು ಇ–ಸಂಗ್ರಹಣಾ ವೇದಿಕೆಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಬಿಡ್‌ದಾರರು ಇ–ಸಂಗ್ರಹಣಾ ವೇದಿಕೆ ವೆಬ್‌ಸೈಟ್ **(Online) https://eproc.karnataka.gov.in** ನಲ್ಲಿ ಟೆಂಡರ್ ವಿವರಗಳನ್ನು ಪಡೆಯಬಹುದಾಗಿದೆ. ಇ–ಸಂಗ್ರಹಣಾ ವೇದಿಕೆಯ ಮೂಲಕ ಪ್ರಸ್ತಾವನೆ ಸಲ್ಲಿಸಲು ಕೊನೆಯ **ದಿನಾಂಕ: 15.01.2022ರ ಸಂಜೆ 5:00 ಗಂಟೆಗೆ.**
Helpline: **080-27276715.**
ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ರಾಮನಗರ
ವಾಸಾಸಂಇ/ರಾನ/ಬ್ರಾಂಚ್/398/2021–22

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಪೂರ್ವ ವಿಭಾಗ, 4ನೇ ಮತ್ತು 5ನೇ ಮಹಡಿ,
ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ಫೋನ್: 080–22265383 ವೆಬ್‌ಸೈಟ್: www.kiadb.in
ನಂ.: ಐಎಡಿಬಿ/ಇಎನ್‌ಜಿ/ಇಟಿಎನ್‌ಡಿ–ಇಪಿ–32/13020/2021–22 ದಿನಾಂಕ: 03.01.2022
ಟೆಂಡರ್ ಆಹ್ವಾನ ಪ್ರಕಟಣೆ
(ಜಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹೊಂದಿರುವ, ಕಲಾ ನೈಪುಣ್ಯತೆಯ ಅನುಭವ, ಸೂಕ್ತವಾದ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹಾಗೂ ಸಾಕಷ್ಟು ಹಿಂದಿನ ಅನುಭವವುಳ್ಳ ಕರ್ನಾಟಕ ಸರ್ಕಾರದ ಕೆಸಿಇಐನಲ್ಲಿ ನೋಂದಾಯಿತ ದರ್ಜೆ–II (ಎಲೆಕ್ಟ್ರಿಕಲ್) ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಗಳು 2000 ರನ್ವಯ ವಿದ್ಯುನ್ಮಾನ ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಕಾಮಗಾರಿ ಹೆಸರು:** (1) ರಾಮನಗರ ಜಿಲ್ಲೆ, ಹಾರೋಹಳ್ಳಿ ಕೈಗಾರಿಕಾ ಪ್ರದೇಶದ 1ನೇ ಮತ್ತು 2ನೇ ಹಂತದಲ್ಲಿರುವ HPSV ಮತ್ತು LED ಬೀದಿ ದೀಪಗಳ ದುರಸ್ತಿ, ರೀಕಂಡಿಷನಿಂಗ್ ಮತ್ತು ವಾರ್ಷಿಕ ನಿರ್ವಹಣೆ. (2) ಕೋಲಾರ ಜಿಲ್ಲೆ, ಮಾಲೂರು ಕೈಗಾರಿಕಾ ಪ್ರದೇಶದ 1ನೇ, 2ನೇ, 3ನೇ ಮತ್ತು 4ನೇ ಹಂತದಲ್ಲಿರುವ ಬೀದಿ ದೀಪಗಳ ದುರಸ್ತಿ, ರೀಕಂಡಿಷನಿಂಗ್ ಮತ್ತು ವಾರ್ಷಿಕ ನಿರ್ವಹಣೆ. (3) ತುಮಕೂರು ಜಿಲ್ಲೆಯ ಅಂತ್ರಸನಹಳ್ಳಿ 1ನೇ ಮತ್ತು 2ನೇ ಹಂತ, ಹಿರೇಹಳ್ಳಿ, ಕುಣಿಗಲ್ 1ನೇ ಮತ್ತು 2ನೇ ಹಂತ, ಸತ್ಯಮಂಗಲ ಕೈಗಾರಿಕಾ ಪ್ರದೇಶದಲ್ಲಿರುವ ಬೀದಿ ದೀಪಗಳ ದುರಸ್ತಿ, ರೀಕಂಡಿಷನಿಂಗ್ ಮತ್ತು ವಾರ್ಷಿಕ ನಿರ್ವಹಣೆ. (4) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದಾಬಸ್‌ಪೇಟೆ 1ನೇ ಮತ್ತು 2ನೇ ಹಂತ, ಸೋಂಪುರ 1ನೇ ಮತ್ತು 2ನೇ ಸ್ಟೇಜ್, ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ HPSV ಮತ್ತು LED ಬೀದಿ ದೀಪಗಳ ದುರಸ್ತಿ, ರೀಕಂಡಿಷನಿಂಗ್ ಮತ್ತು ವಾರ್ಷಿಕ ನಿರ್ವಹಣೆ. (5) ತುಮಕೂರು ಜಿಲ್ಲೆಯ ವಸಂತನರಸಾಪುರ ಕೈಗಾರಿಕಾ ಪ್ರದೇಶದ 1ನೇ ಮತ್ತು 2ನೇ ಹಂತದ HPSV ಮತ್ತು LED ಬೀದಿ ದೀಪಗಳ ದುರಸ್ತಿ, ರೀಕಂಡಿಷನಿಂಗ್ ಮತ್ತು ವಾರ್ಷಿಕ ನಿರ್ವಹಣೆ.
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **20.01.2022ರ ಸಂಜೆ 04:00ರ** ವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1
ವಾಸಾಸಂಇ/ಉನಿನ/ಎಲ್‌ಸಿ/2684/2021–22 ಕೆ.ಐ.ಎ.ಡಿ.ಬಿ, ಬೆಂಗಳೂರು
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ
ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ ತಾ:: ಹುಬ್ಬಳ್ಳಿ, ಜಿ: ಧಾರವಾಡ 580023
Phone:-080-22283074-78 Fax:-080-22386015, ಫೋನ್ : 0836–2315225 ಫ್ಯಾಕ್ಸ್ :2315226.
e-mail :- knnl@knnlindia.com e-mail :-eemrbcc3byt@gmail.com
CIN:- U85110KA1998SGC024503. Website:- www.knnlindia.com
ಸಂ.ಕನೀನಿನಿ/ಮಬದವಿ–3/ಎ.ಇ–1/ಇ–ಟೆಂಡರ/2021–22/1571 ದಿನಾಂಕ:–05/01/2022
ತಿದ್ದುಪಡಿ ಪ್ರಕಟಣೆ (ಇ-ಪೋರ್ಟಲ್ ಮುಖಾಂತರ ಮಾತ್ರ)
ಈ ಕಚೇರಿ ಟೆಂಡರ ಪ್ರಕಟಣೆ ಸಂ.1543 ದಿನಾಂಕ: 03/01/2022 ರಲ್ಲಿ ಕರೆಯಲಾದ ಟೆಂಡರನ ದಿನಾಂಕವನ್ನು ತಿದ್ದುಪಡೆ ಮಾಡಿ ಟೆಂಡರಗಳನ್ನು ದಿನಾಂಕ: 19/01/2022 ರ 4.00 pm ತನಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21/01/2022 ರಂದು ಮುಂಜಾನೆ: 11.00 am ರಿಂದ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬಸೈಟ್ ಮುಖೇನ http://eproc.karnataka.gov.in ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 0836–2315225 ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು
ವಾ.ಸಾ.ಇ/ಧಾ/853/2021–22/ದೇಶಪಾಂಡೆಪಬ್ಲಿಸಿಟಿ ಕನೀನಿನಿ, ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ.49, ಈಸ್ಟ್ ವಿಂಗ್, 4 ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು - 560 001. ದೂರವಾಣಿ: 080-22265383,
ವೆಬ್‌ಸೈಟ್: www.kiadb.in
ಸಂ: ಐಎಡಿಬಿ/ಇಎನ್‌ಜಿ/ಇಟಿಎನ್‌ಡಿ–ಇಪಿ–33/13021/2021–22 ದಿನಾಂಕ: 03.01.2022
ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆಐಎಡಿಬಿಯು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮಗಳು 2000 ರನ್ವಯ ಸಾಕಷ್ಟು ಹಣಕಾಸು ಸಂಪನ್ಮೂಲಗಳು, ಈ ಹಿಂದೆ ಸಾಕಷ್ಟು ಅನುಭವ ಹೊಂದಿರುವ ಕರ್ನಾಟಕ ಸರ್ಕಾರದ ಕೆಸಿಇಐ ನಲ್ಲಿ ನೋಂದಾಯಿತ ಅರ್ಹ ಪ್ರಥಮ ದರ್ಜೆ (ವಿದ್ಯುತ್) ಮತ್ತು ಮೇಲ್ವರ್ಗದ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. **(1) ಇಂಟರ್ ಮೀಡಿಯಟ್ ಪಂಪಿಂಗ್ ಸ್ಟೇಷನ್, ಮಿಟ್ಟಕೋಡಿ ಇಲ್ಲಿ 200 ಹೆಚ್‌ಪಿ ಕಂಟ್ರೋಲ್ ಪ್ಯಾನಲ್ ಬೋರ್ಡ್, ಸ್ಟಾರ್ಟರ್ ಬದಲಾಯಿಸುವುದು, ಬೀದಿ ದೀಪಗಳ ವ್ಯವಸ್ಥೆ ಮತ್ತು ವಿದ್ಯುತ್ ಕಾಮಗಾರಿಗಳ ಸಂಪರ್ಕವನ್ನು ಒದಗಿಸುವುದು ಮತ್ತು ಕೆಐಎಡಿಬಿ ಜಾಕ್‌ವೆಲ್ ಪಂಪ್‌ಹೌಸ್ ಕಂದೂರು, ಮಂಗಳೂರು ವಲಯ ಇಲ್ಲಿ 125 ಹೆಚ್‌ಪಿ ಕಂಟ್ರೋಲ್ ಪ್ಯಾನಲ್ ಬೋರ್ಡ್, ಸ್ಟಾರ್ಟರ್ ಬದಲಾಯಿಸುವುದು, ಬೀದಿ ದೀಪಗಳ ವ್ಯವಸ್ಥೆ ಮತ್ತು ವಿದ್ಯುತ್ ಕಾಮಗಾರಿಗಳ ಸಂಪರ್ಕವನ್ನು ಒದಗಿಸುವುದು. (2) ಡಬ್ಲ್ಯುಟಿಪಿ ಪಂಪ್‌ಹೌಸ್, ಗೋರೂರು ಇಲ್ಲಿ 240 ಹೆಚ್‌ಪಿ ಪಂಪ್‌ಸೆಟ್, ಸ್ಟಾರ್ಟರ್, ಕಂಟ್ರೋಲ್ ಪ್ಯಾನಲ್ ಬೋರ್ಡ್ ಬದಲಾಯಿಸುವುದು, ಬೀದಿ ದೀಪಗಳ ವ್ಯವಸ್ಥೆ ಮತ್ತು ವಿದ್ಯುತ್ ಕಾಮಗಾರಿಗಳ ಸಂಪರ್ಕವನ್ನು ಒದಗಿಸುವುದು ಹಾಗೂ ಜಾಕ್‌ವೆಲ್ ಪಂಪ್‌ಹೌಸ್, ಗೋರೂರು ಹಾಸನ ವಲಯ ಇಲ್ಲಿ 100 ಹೆಚ್‌ಪಿ ಪಂಪ್‌ಸೆಟ್, ಸ್ಟಾರ್ಟರ್, ಕಂಟ್ರೋಲ್ ಪ್ಯಾನಲ್ ಬೋರ್ಡ್ ಬದಲಾಯಿಸುವುದು, ಬೀದಿದೀಪಗಳ ವ್ಯವಸ್ಥೆ ಮತ್ತು ವಿದ್ಯುತ್ ಕಾಮಗಾರಿಗಳ ಸಂಪರ್ಕವನ್ನು ಒದಗಿಸುವುದು. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 07.02.2022 ಸಂಜೆ 4.00 ಗಂಟೆಯ ವರೆಗೆ.**
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/- ಮುಖ್ಯ ಅಭಿಯಂತರರು-1, ಕೆಐಎಡಿಬಿ

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ– 571401
(Autonomous Medical Institution, Government of Karnataka)
Phone: 08232-231003, 222086, 231197, 224040,
Fax: 08232-231001
E-Mail Address:mimsmandyaoffice@gmail.com,
mimsmandya@gmail.com
ಮರು ಇ–ಟೆಂಡರ್ ಪ್ರಕಟಣೆ – (ದ್ವಿಲಕೋಟೆ ಪದ್ಧತಿ)
ಸಂಖ್ಯೆ: ಮಿಮ್ಸ್/ಬೋ.ಆ/ಸರಬ(2)/Inj.Drug.Kit/ರಿ.ಇ–ಟೆಂ(ಎ)/10/2021–22, ದಿನಾಂಕ:03.01.2022
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳ ಚಿಕಿತ್ಸೆಗಾಗಿ ಅವಶ್ಯಕವಿರುವ **Injection, Drugs & Kits** ಗಳ ಸರಬರಾಜಿಗಾಗಿ ನೊಂದಾಯಿಸಲ್ಪಟ್ಟ ಅರ್ಹ ತಯಾರಕರು/ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ.55.00 ಲಕ್ಷಗಳು (ಎಲ್ಲಾ ತೆರಿಗೆ ಇತ್ಯಾದಿಗಳು ಸೇರಿ)**. ಇ–ಪೋರ್ಟಲ್‌ನಲ್ಲಿ ಪಾವತಿಸಬೇಕಾದ ಇ.ಎಂ.ಡಿ ಮೊಬಲಗು ರೂ.1,10,000/– ಇ–ಟೆಂಡರ್ ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕ : **04.01.2022** ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: **19.01.2022 ರ ಸಂಜೆ 5.30 ಗಂಟೆ.** ಟೆಂಡರ್ ಪ್ರಕ್ರಿಯೆ ದಿನಾಂಕ ಮತ್ತಿತ್ತರ ವಿವರಗಳನ್ನು ಜಿಕೆ ಇ–ಪ್ರ್ಯೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ **www.eproc.karnataka.gov.in** ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು. ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿ ಅಥವಾ ಸ್ಪಷ್ಟೀಕರಣಕ್ಕಾಗಿ ಕೆಲಸದ ವೇಳೆಯಲ್ಲಿ **(ರಜಾ ದಿನಗಳನ್ನು ಹೊರತುಪಡಿಸಿ)** ನಿರ್ದೇಶಕರವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/–ಮುಖ್ಯ ಆಡಳಿತಾಧಿಕಾರಿಗಳು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
ವಾಸಾಸಂಇ/ಸನಿ–ಮಂಡ್ಯ/ಎಂಸಿಎ/502/2021–22

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)
ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ
ನಂ.ಎಚ್‌ಡಿಎಂಸಿ/63/04/2021–22 ದಿ:05–01–2022
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ PWD/ CPWD/ HDMC/ ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಸನ್ 2020–21ನೇ ಸಾಲಿನ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ ಇಂಡೆಂಟ್ ನಂ.**121080** / ರೂ. **12.00** ಲಕ್ಷ / 6ತಿಂಗಳು/2ನೇಕರೆ/ಸಾಮಾನ್ಯ, ಸನ್ **2019–20**ನೇ ಸಾಲಿನ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ ಇಂಡೆಂಟ್ ನಂ.**122173** / ರೂ. **9.00** ಲಕ್ಷ/ 3ತಿಂಗಳು/ ಸಾಮಾನ್ಯ, ಸನ್ **2019–20**ನೇ ಸಾಲಿನ **50%** ಅನುಪಾತದಲ್ಲಿ ಪಾಲಿಕೆ ಹಾಗೂ ಮಾನ್ಯ ಶಾಸಕರ ಸ್ಥಳಿಯ ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ ಇಂಡೆಂಟ್ ನಂ.**121444** / ರೂ. **10.00** ಲಕ್ಷ/6ತಿಂಗಳು/ಸಾಮಾನ್ಯ, ಸನ್ 2014–15ನೇ ಸಾಲಿನ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ ಇಂಡೆಂಟ್ ನಂ. **122154** / ರೂ. **3.00** ಲಕ್ಷ/3ತಿಂಗಳು/ಸಾಮಾನ್ಯ, ಸನ್ **2020–21**ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ ಇಂಡೆಂಟ್ ನಂ.**116890** /ರೂ. **10.00** ಲಕ್ಷ/3ತಿಂಗಳು/3ನೇಕರೆ/ಸಾಮಾನ್ಯ, ಇಂಡೆಂಟ್ ನಂ.**81898** / ರೂ.**66.46** ಲಕ್ಷ/6ತಿಂಗಳು/2ನೇಕರೆ/ಸಾಮಾನ್ಯ ಕಾಮಗಾರಿಗಳಿಗೆ ಇ–ಪ್ರೋಕ್ಯೂರಮೆಂಟ್‌ನಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕಾಮಗಾರಿಗೆ ಸಂಬಂಧಿಸಿದ ಹೆಸರು ಇ.ಎಂ.ಡಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು http:/ www.eproc.karnataka.gov.in ರಲ್ಲಿ ಪಡೆಯಬಹುದು. ಸದರ ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ : **07–01–2022** ರಿಂದ ಪಡೆಯಬಹುದಾಗಿದೆ. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಕ್ರ..ಸಂ 1) ರಿಂದ 5) ರ ಕಾಮಗಾರಿಗಳಿಗೆ ಟೆಂಡರ್ ಸಲ್ಲಸಲು ಕೊನೆಯ ದಿನಾಂಕ **18/01/2022** ಸಂಜೆ: 4.00 ಘಂಟೆ ವರೆಗೆ ಹಾಗೂ ಟೆಂಡರ್ ತೆರೆಯುವ ದಿನಾಂಕ **19/01/2022** ಸಂಜೆ: 4.30 ಘಂಟೆ ನಂತರ
ಕ್ರ..ಸಂ 6) ರ ಕಾಮಗಾರಿಗೆ (1) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **18/01/2022** ಸಂಜೆ: 4.00 ಘಂಟೆ ವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **19/01/2022** ಸಂಜೆ: 4.30 ಘಂಟೆ ನಂತರ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **24/01/2022** ಬೆಳಿಗ್ಗೆ:11.00 ಘಂಟೆ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ)
ವಾಸಾಸಂಇ/ಧಾ/ಎಂಸಿಎ/845/2021–22 ಹು.ಧಾ.ಮ.ಪಾಲಿಕೆ, ಹುಬ್ಬಳ್ಳಿ.

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ,
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಕ್ಯಾಂಪಸ್, ಬೆಂಗಳೂರು.
ದೂರವಾಣಿ: 080–22255210
(ಐ.ಎಸ್.ಓ.9001–2008 ಮಾನ್ಯತೆ ಪಡೆದಿರುವ ವಿಭಾಗ)
ಸಂ: ಕಾಅ:ಕವಿ1:ಎಇ–1:50:2021–22 ದಿನಾಂಕ: 05.01.2022
ಟೆಂಡರ್ ತಿದ್ದುಪಡಿ ಅಧಿಸೂಚನೆ
ಈ ಕಛೇರಿಯಿಂದ ಸಂ. ಕಾಸ:ಕವಿ.1:ಎಇ–1:47:2021–22 ದಿನಾಂಕ: 28.12.2021ರಂದು ಟೆಂಡರ್ ಪ್ರಕಟಣೆಯಲ್ಲಿ ಹೊರಡಿಸಲಾಗಿರುತ್ತದೆ. ಖಾಲಿ ಟೆಂಡರ್ ಫಾರಂಗಳನ್ನು ಪಡೆಯಲು ನಿಗಧಿಪಡಿಸಿರುವ ಅವಧಿ: ದಿನಾಂಕ: **06.01.2022 ಸಂಜೆ 4.30 ಗಂಟೆಯವರೆಗೆ.** ಮೊಹರು ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ಸ್ವೀಕರಿಸಲು ಕೊನೆಯ ದಿನಾಂಕ: **06.01.2022ರ ಸಂಜೆ 4.30 ಗಂಟೆವರೆಗೆ** ನಿಗಧಿಪಡಿಸಲಾಗಿತ್ತು.
ಆದರೆ, ಸದರಿ ಇ–ಪೋರ್ಟಲ್‌ನಲ್ಲಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಮೊಹರು ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **12.01.2022ರ ಸಂಜೆ 4.30 ಗಂಟೆವರೆಗೆ** ಮುಂದೂಡಲಾಗಿದೆ.
ವಾಸಾಸಂಇ/ಉನಿ.ನ/2705/ಎಂಸಿಎ/2021–22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಿಲ್ಲಾಧಿಕಾರಿಯವರ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ
75 ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ
ಜಿಲ್ಲಾ ಸಂಕೀರ್ಣ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು–562110.
ದೂರವಾಣಿ : 080–29787459 ಇ–ಮೇಲ್: dudc_blr@yahoo.co.in, dudc.blrrural@gmail.com
ಸಂಖ್ಯೆ: ಜಿನಾಕೋ(5)/ಸಿಆರ್/10/2017–18 ದಿನಾಂಕ: 24–12–2021
ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)
ಇನ್ನು ಮುಂದೆ ಖರೀದಿದಾರ ಎಂದು ಉಲ್ಲೇಖಿಸಲಾಗುವ ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇವರು ಈ ಕೆಳಗೆ ತಿಳಿಸಿರುವ ಕೋಷ್ಟಕದಲ್ಲಿ ವಿವರಿಸಿರುವಂತೆ ಕರ್ನಾಟಕ ರಾಜ್ಯದಲ್ಲಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿರುವ ಇಂದಿರಾ ಕ್ಯಾಂಟೀನುಗಳಿಗೆ ಕೇಟರಿಂಗ್ ಸೇವೆಗಳನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕೋಷ್ಟಕದಲ್ಲಿ ನೀಡಿರುವ ಎಲ್ಲಾ ಸರಕುಗಳು / ಸೇವೆಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಕೆಟಿಪಿಪಿ ಕಾಯ್ದೆಯ ನಿಯಮ–28 ಅನುಸಾರ ಎರಡು ಲಕೋಟೆ ಟೆಂಡರ್ ಪದ್ಧತಿ ಅನುಸರಿಸಲಾಗುತ್ತದೆ. ಟೆಂಡರ್‌ದಾರರು ಪ್ರತ್ಯೇಕವಾದ ಎರಡು ಲಕೋಟೆಗಳನ್ನು ಸಲ್ಲಿಸಬೇಕಿರುತ್ತದೆ. ಒಂದು ಲಕೋಟೆಯಲ್ಲಿ ಅರ್ನೆಸ್ಟ್ ಹಣ ಠೇವಣಿ ಮತ್ತು ಟೆಂಡರ್ ಕೈಗೊಳ್ಳಲು ಅವರ ಸಾಮರ್ಥ್ಯದ ವಿವರಗಳನ್ನು (ಐಟಿಟಿ ಕಲಂ 2 ಮತ್ತು 3 ರಲ್ಲಿ ವಿವರಿಸಿರುವಂತೆ) ಸಲ್ಲಿಸಬೇಕು ಇದನ್ನು ಮೊದಲು ತೆರೆಯಲಾಗುತ್ತದೆ ಮತ್ತು ಎರಡನೇ ಲಕೋಟೆ ದರ ಟೆಂಡರ್‌ನ್ನು ಒಳಗೊಂಡಿರಬೇಕು. ಟೆಂಡರ್ ಹಾಕಲಾದ ಯೋಜನೆ ನಿರ್ವಹಿಸಲು ಅರ್ಹರೆಂದು ಕಂಡು ಬರುವ ಟೆಂಡರ್‌ದಾರರ ಈ ಲಕೋಟೆಯನ್ನು ಮಾತ್ರ ತೆರೆಯಲಾಗುತ್ತದೆ. ಗುತ್ತಿಗೆ ನೀಡಿಕೆಗೆ ಅರ್ಹವಾಗಲು ಟೆಂಡರ್‌ದಾರರಿಗೆ ಸೂಚನೆಯ ಕಲಂ 3 ರಲ್ಲಿ ತಿಳಿಸಿರುವ ಕನಿಷ್ಠ ಅರ್ಹತಾ ಅಗತ್ಯತೆಯನ್ನು ಟೆಂಡರ್‌ದಾರರು ಗಮನಿಸಲು ತಿಳಿಸಿದೆ.

ಸಂಕ್ಷಿಪ್ತ ವಿವರ	ಪ್ರತಿ ವರ್ಷಕ್ಕೆ ಸರಕುಗಳು/ಸೇವೆಗಳ ಅಂದಾಜು ಮೌಲ್ಯ	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಟ್ಟಿ ಮಾಡಿರುವ ದರ ಷೆಡ್ಯೂಲ್ ಅನುಸಾರ ಕರ್ನಾಟಕ ರಾಜ್ಯದಲ್ಲಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ (ದೊಡ್ಡಬಳ್ಳಾಪುರ, ಹೊಸಕೋಟೆ, ದೇವನಹಳ್ಳಿ ಮತ್ತು ನೆಲಮಂಗಲ ತಾಲ್ಲೂಕುಗಳು) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನುಗಳಿಗೆ ಕೇಟರಿಂಗ್ ಸೇವೆಗಳನ್ನು ಒದಗಿಸುವುದು. **ಇಂಡೆಂಟ್ ಸಂಖ್ಯೆ: ಡಿಎಂಎ/2021–22/ಐಎನ್‌ಡಿ12402/1**	374.50	5.00

ಡೆಲಿವರಿ ಷೆಡ್ಯೂಲ್: ಟೆಂಡರ್ ಡಾಕ್ಯುಮೆಂಟ್‌ನಲ್ಲಿ ನೀಡಿರುವಂತೆ.
1) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **25–01–2022 ರಂದು ಸಂಜೆ 5.30 ಗಂಟೆವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **27–01–2022ರಂದು ಬೆಳಿಗ್ಗೆ 11.00 ಗಂಟೆಗೆ. 3)** ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **10–02–2022ರಂದು ಬೆಳಿಗ್ಗೆ 11.00 ಗಂಟೆಗೆ.**
ಸಹಿ/– ಜಿಲ್ಲಾಧಿಕಾರಿ
ವಾಸಾಸಂಇ/ಉನಿಕ/ಬೆಂಗ್ರಾಜಿ/362/2021–22 ಬೆಂಗಳೂರು ಗ್ರಾಮಾಂತರ ಜಿಲ್ಲೆ
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029
ಫೋನ್: 080–26096832/910/922 ಫ್ಯಾಕ್ಸ್: 080–25536105 E-mail: purchase@kmf.coop
ಸಂ. ಕಹಾಮ/ಖರೀದಿ/ಸಿಪಿಸಿ/ಇ–ಪ್ರೊಕ್./ಟೆಂಡರ್–383/2021 ದಿನಾಂಕ: 03.01.2022
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕರ್ನಾಟಕ ಹಾಲು ಮಹಾ ಮಂಡಳಿ ಬೆಂಗಳೂರು ಈ ಕೆಳಗೆ ತಿಳಿಸಿದ ಸಾಮಗ್ರಿಯ ಸರಬರಾಜಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

Sl. No.	Description	Unit	Approximate Qty	EMD Amount (Rs.)
1.	Supply of 200ml Flavoured Milk Bottles	Nos.	7200000	5,36,000.00
2	Supply of 200ml Flavoured Milk Bottles Label	Nos.	5784722	47,000.00

ಟೆಂಡರ್ ದಾಖಲಾತಿಯನ್ನು E-Proc ವೆಬ್‌ಸೈಟ್ https://eproc.karnataka.gov.in/. ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಹಾಗೂ Helpline No: 080–23010900 / 23010901.

ಟೆಂಡರ್ ಶುರುವಾಗುವ ದಿನಾಂಕ	05.01.2022
ಪೂರ್ವಬಾವಿ ಸಭೆ	07.01.2022 ರಂದು 12.05 ಘಂಟೆಗೆ
ಟೆಂಡರ್ ಅಪ್ ಲೋಡಿಂಗ್ ಮಾಡಲು ಕಡೆಯ ದಿನಾಂಕ	19.01.2022 ರಂದು 05.00 ಘಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	21.01.2022 ರಂದು 03.00 ಘಂಟೆಗೆ
ವಾಣಿಜ್ಯ ಬಿಡ್ ತೆರೆಯುವ ದಿನಾಂಕ	ತಾಂತ್ರಿಕ ಟೆಂಡರ್ ವಿಶ್ಲೇಶಣೆಯ ನಂತರ ತಿಳಿಸಲಾಗುವುದು.

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)



ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶಿ

ಪ್ರಬಂಧ ರಚನೆ ಹೀಗಿರಲಿ...

ಕೆ. ಎಚ್‌. ಮಂಜುನಾಥ್‌

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿಯಿರುವ 70 ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) ಹುದ್ದೆಗಳ ನೇಮಕಾತಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಎರಡು ಪಶ್ನೆ ಪತ್ರಿಕೆಗಳಿರುತ್ತವೆ. ಪತ್ರಿಕೆ-1ರ ಮೊದಲ ಭಾಗದಲ್ಲಿ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಪ್ರಬಂಧ ರಚನೆ ಇರುತ್ತದೆ. ಈ ಹಿನ್ನೆಲೆಯಲ್ಲಿ 'ಪ್ರಬಂಧ ರಚಿಸುವುದು ಹೇಗೆ?' ಎಂಬುದರ ಕುರಿತು ಇಲ್ಲಿ ಮಾಹಿತಿ ನೀಡಲಾಗಿದೆ.

ಪ್ರಬಂಧ ರಚನೆ

ಪ್ರಬಂಧ ರಚನೆ - ಇದೊಂದು ವಿಷಯ ಬಂಧವನ್ನು ಹೊಂದಿರುವ ಸಾಹಿತ್ಯವಾಗಿದೆ. ವಸ್ತು, ಶೈಲಿ, ನಿರೂಪಣೆಗಳಲ್ಲಿ ಯಾವುದೇ ಕಟ್ಟಳೆಗಳಿರದ ಕ್ರಿಯಾತ್ಮಕವಾಗಿ ಸೃಷ್ಟಿಸುವ ಸಾಹಿತ್ಯವೇ ಪ್ರಬಂಧವಾಗಿದೆ.

ಅರ್ಥಪೂರ್ಣ ವಾಕ್ಯಗಳ ಮೂಲಕ ತನ್ನೊಳಗಿನ ಆಲೋಚನೆಗಳನ್ನು ಲಿಖಿತವಾಗಿ ಅಭಿವ್ಯಕ್ತಪಡಿಸುವ ಹಾಗೂ ನಿರ್ದಿಷ್ಟ ವಿಷಯಗಳನ್ನು ಸಮರ್ಪಕವಾಗಿ ನಿರೂಪಿಸುವ ವಿಧಾನ ಪ್ರಬಂಧ ರಚನೆ.

ಪ್ರಬಂಧ ಎಂದರೆ ಹೀಗೆ ಇರಬೇಕು ಎಂಬ ನಿಯಮವಿಲ್ಲ. ಪ್ರಬಂಧ ರಚನೆಯಲ್ಲಿ ಮೂರು ಮುಖ್ಯ ಅಂಗಗಳಿವೆ. ಅವುಗಳೆಂದರೆ; ಪೀಠಿಕೆ/ ಪ್ರಸ್ತಾವನೆ, ವಿಷಯ ನಿರೂಪಣೆ ಹಾಗೂ ಉಪಸಂಹಾರ (ಸಮಾರೋಪ/ ವಿಷಯದ ಸಮಾಪ್ತಿ).

ಪ್ರಬಂಧಕ್ಕೆ ಆಕರ್ಷಕ ಪೀಠಿಕೆ ಅಗತ್ಯ. ಅದು ಗಾದೆ, ಶ್ಲೋಕ, ಮಹಾನ್ ವ್ಯಕ್ತಿಗಳ ಹೇಳಿಕೆಯ ಉಲ್ಲೇಖದಿಂದ ಆರಂಭವಾಗುವಂತಿದ್ದರೆ ಉತ್ತಮ. ನಂತರ ವಿಷಯದ ಪ್ರತಿಪಾದನೆ ಅಥವಾ ನಿರೂಪಣೆ. ಇದು ಪ್ರಬಂಧದ ಜೀವಾಳ. ಆಯ್ಕೆ ಮಾಡಿಕೊಂಡ ವಿಷಯವನ್ನು ಸಮರ್ಪಕವಾಗಿ ಮಂಡಿಸಬೇಕು. ಚಿಕ್ಕಚಿಕ್ಕ ವಾಕ್ಯಗಳ ಮೂಲಕ ಪ್ರಸ್ತುತಪಡಿಸಬೇಕು.

ಪ್ರಬಂಧ ಉಪಸಂಹಾರದೊಂದಿಗೆ ಅಂತ್ಯಗೊಳ್ಳಬೇಕು. ಆ ಉಪಸಂಹಾರವೂ ಸಕಾರಾತ್ಮಕವಾಗಿ ಇರಬೇಕು. ಹಾಗೆಯೇ ಪ್ರಬಂಧದ ಕೊನೆಯ ವಾಕ್ಯವೂ ಪ್ರಬಂಧದಲ್ಲಿ ಚರ್ಚೆಯಾಗಿರುವ ವಿಷಯಗಳ ಮುಕ್ತಾಯವನ್ನೂ ಸೂಚಿಸುವಂತಿರಬೇಕು. ಓದುಗನ ಆಸಕ್ತಿಯನ್ನು ಉದ್ದೀಪಿಸುವಂತಿರಬೇಕು.

ಈ ಪರೀಕ್ಷೆಯಲ್ಲಿ...

ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ ಪರೀಕ್ಷೆಯಲ್ಲಿ ಪ್ರಥಮ ಪತ್ರಿಕೆಯಲ್ಲಿ 20 ಅಂಕಗಳಿಗೆ ಪ್ರಬಂಧ ರಚನೆ ಇರುತ್ತದೆ. 600 ಶಬ್ದಗಳ ಮಿತಿಯಲ್ಲಿ ಪ್ರಬಂಧ ರಚಿಸಬೇಕು. ಸಾಮಾನ್ಯವಾಗಿ ಪ್ರಚಲಿತ ಘಟನೆಗಳನ್ನು ಆಧರಿಸಿ ಪ್ರಬಂಧ ಬರೆಯುವಂತೆ ಕೇಳಲಾಗಿರುತ್ತದೆ. ಹಾಗೆಂದು ಪ್ರಬಂಧವೆಂದರೆ ಪ್ರಚಲಿತ ಘಟನೆಗಳನ್ನೇ ಒಳಗೊಂಡಿರಬೇಕು ಎಂದೇನೂ ಇಲ್ಲ. ಸಾಂಪ್ರದಾಯಿಕ ವಿಷಯಗಳನ್ನು ಒಳಗೊಂಡಿರಬಹುದು. ಉದಾ: ಮಹಿಳಾ ಶಿಕ್ಷಣದ ಮಹತ್ವ, ಮರಣ ದಂಡನೆ, ಕೈ ಕೆಸರಾದರೆ ಬಾಯಿ ಮೊಸರು.. ಇತ್ಯಾದಿ.

ಪ್ರತಿ ಅಭ್ಯರ್ಥಿಗೆ 10 ಪುಟಗಳ ಉತ್ತರ ಪತ್ರಿಕೆ ನೀಡಲಾಗಿರುತ್ತದೆ.

ಅದರಲ್ಲಿ ಅಭ್ಯರ್ಥಿಯು 5 ರಿಂದ 6 ಪುಟಗಳಲ್ಲಿ ಪ್ರಬಂಧ ಬರೆಯಬಹುದು. ಉಳಿದ ಪುಟಗಳನ್ನು ಭಾಷಾಂತರ ಹಾಗೂ ಸಾರಾಂಶ ಬರಹಕ್ಕೆ ಉಪಯೋಗಿಸಿಕೊಳ್ಳಬಹುದು.

ಪ್ರಬಂಧ ಬರೆಯುವ ಮುನ್ನ..

- ಪರೀಕ್ಷೆಯಲ್ಲಿ 5 ವಿಷಯಗಳನ್ನು ನೀಡಿರುತ್ತಾರೆ. ಅದರಲ್ಲಿ ನೀವು ಯಾವ ವಿಷಯ ಆರಿಸಿಕೊಳ್ಳಬೇಕು ಎಂಬುದೇ ಮಹತ್ವದ್ದು. ಹೀಗಾಗಿ ನಿಮ್ಮ ಆಯ್ಕೆ ಸರಿಯಾಗಿರಲಿ.
- ಮೊದಲು ಒಂದು ವಿಷಯ ಆಯ್ಕೆ ಮಾಡಿಕೊಂಡು ಒಂದು ಪುಟ ಬರೆದು ನಂತರ ಅದು ಸರಿ ಕಾಣಲಿಲ್ಲ ಎಂದು ವಿಷಯ ಬದಲಿಸಬೇಡಿ. ಕೊಟ್ಟಿರುವ ಸಮಯದಲ್ಲಿ ಮೊದಲ 30 ನಿಮಿಷದಲ್ಲಿ 2 ನಿಮಿಷವನ್ನು ವಿಷಯ ಆಯ್ಕೆಗೆ ಮೀಸಲಿಡಿ. ಒಂದು ವಿಷಯವನ್ನು ಆರಿಸಿಕೊಳ್ಳಿ. ಬಳಿಕ 3 ರಿಂದ 4 ನಿಮಿಷದಲ್ಲಿ, ಆ ವಿಷಯಕ್ಕೆ ಏನು ಪೀಠಿಕೆ ಬರೆಯಬೇಕು? ಯಾವ ರೀತಿ ವಿಷಯವನ್ನು ಮಂಡಿಸಬೇಕು? ಗಾದೆ, ಶ್ಲೋಕ, ಉಕ್ತಿ, ಗೀತೆ ಹಾಗೂ ಹಿರಿಯರ ಅನುಭವದ ನುಡಿಗಳನ್ನು ಎಲ್ಲೆಲ್ಲಿ ಬಳಸಬೇಕು? ಎಂಬ ಬಗ್ಗೆ ಮನಸ್ಸಿನಲ್ಲೇ ಒಂದು ಚಿತ್ರಣವನ್ನು ರಚಿಸಿಕೊಳ್ಳಿ. ಒಂದು ಹಾಳೆಯಲ್ಲಿ ಮನಸ್ಸಿನಲ್ಲಿ ಮೂಡಿದ ಈ ಎಲ್ಲ ಚಿತ್ರಣಗಳನ್ನೂ ಬರೆದಿಟ್ಟುಕೊಳ್ಳಿ. ಉಪಸಂಹಾರವನ್ನು ಹೇಗೆ ಸುಂದರವಾಗಿಸಿ, ಪ್ರಬಂಧ ಪೂರ್ಣಗೊಳಿಸಬಹುದು ಎಂಬುದನ್ನು ಸಿದ್ಧಮಾಡಿಟ್ಟುಕೊಳ್ಳಿ.

ಉಳಿದ 20 ರಿಂದ 25 ನಿಮಿಷಗಳ ಅವಧಿಯಲ್ಲಿ ಉತ್ತಮವಾಗಿ ಪ್ರಬಂಧ ರಚಿಸಲು ಪ್ರಯತ್ನಿಸಿ. ಕೆಲವೊಮ್ಮೆ ಇದು 40 ರಿಂದ 45 ನಿಮಿಷ ತೆಗೆದುಕೊಳ್ಳುವುದು ಇದೆ. ನೆನಪಿರಲಿ ಶಬ್ದಗಳ ಮಿತಿ ಮೀರಬೇಡಿ. ನಿಗದಿತಕ್ಕಿಂತ ಹೆಚ್ಚು ಸಮಯ ತೆಗದುಕೊಳ್ಳಬೇಡಿ. ಏಕೆಂದರೆ ಭಾಷಾಂತರ ಹಾಗೂ ಸಾರಾಂಶ ಬರಹಕ್ಕೂ ಸಮಯ ಬೇಕಾಗುತ್ತದೆ.

(ನಿರ್ದೇಶಕರು: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ ಬೆಂಗಳೂರು)

ಹೀಗೆ ಮಾಡಿ...

- ಪ್ರಬಂಧದ ಆರಂಭದಲ್ಲಿರುವ 5 ರಿಂದ 6 ಸಾಲುಗಳೇ ಪೀಠಿಕೆ ಆಗಿರಲಿ. ಆ ಪೀಠಿಕೆ ಆಕರ್ಷಕವಾಗಿರಲಿ. ನಂತರ ವಿಷಯವನ್ನು ಬರೆಯಲು ಆರಂಭಿಸಿ. ಸಣ್ಣ ಪ್ಯಾರಾಗಳ ಮೂಲಕ ವಿಷಯವನ್ನು ವಿವರಿಸಿ.
- ವಿಷಯ ನಿರೂಪಣೆ ಎಂಬುದು ಪ್ರಬಂಧದ ಹೃದಯ ಭಾಗ. ಹಾಗಾಗಿ ವಿಷಯ ಮಂಡನೆ ಸಮರ್ಪಕವಾಗಿರಲಿ. ಅಗತ್ಯವಿದ್ದರೆ ಮಾತ್ರ ಪರ ಹಾಗೂ ವಿರೋಧದ ವಾದಗಳನ್ನು ಮಂಡಿಸಿ, ಇಲ್ಲದಿದ್ದರೆ ಬೇಡ.
- ವಿಷಯದ ಸೌಂದರ್ಯ ಹೆಚ್ಚಿಸಲು ಒಂದು ಅಥವಾ ಎರಡು ಚಿತ್ರಗಳು /ರೇಖಾ ಚಿತ್ರಗಳನ್ನು ಬಳಸಿ.
- ಪ್ರಬಂಧದಲ್ಲಿ ಕೇಂದ್ರ/ರಾಜ್ಯ ಸರ್ಕಾರಗಳು ತಂದಿರುವ ಕಾನೂನುಗಳು ಅಥವಾ ಯೋಜನೆಯ ವಿವರಣೆಯ ಅಗತ್ಯವಿದೆ ಎಂದಾದರೆ ಅವುಗಳನ್ನು ಉಲ್ಲೇಖಿಸಿ. ಯಾವುದೇ ರಾಜಕೀಯ ವ್ಯಕ್ತಿಯ ಹೆಸರು ಉಲ್ಲೇಖಿಸುವುದನ್ನು ಆದಷ್ಟು ತಪ್ಪಿಸಿ. ಯಾವುದೇ ಪಕ್ಷವನ್ನು ಟೀಕಿಸುವುದು, ಅತಿಯಾಗಿ ಹೊಗಳುವುದು ಮಾಡಬೇಡಿ.
- ಪ್ರಬಂಧ ಬರೆಯುವುದನ್ನು ಮನೆಯಲ್ಲಿ ಚೆನ್ನಾಗಿ ಅಭ್ಯಾಸ ಮಾಡಿ. ಇದರಿಂದ ಪರೀಕ್ಷೆಯಲ್ಲಿ ಪ್ರಬಂಧ ರಚನೆ ಸುಲಭವಾಗುತ್ತದೆ.
- ತಪ್ಪಿಲ್ಲದ, ವ್ಯಾಕರಣ ಪೂರ್ಣ ವಾಕ್ಯ, ಸರಳ ಶಬ್ದಗಳು, ಚಿಂತನೆಗೆ ಹಚ್ಚುವ ವಿಚಾರಗಳು ಪ್ರಬಂಧದಲ್ಲಿ ಇರಲಿ.

ಹೀಗೆ ಮಾಡಬೇಡಿ...

- ಪ್ರಬಂಧ ಬರೆಯುವಾಗ ಪ್ರತ್ಯೇಕವಾಗಿ ಪೀಠಿಕೆ, ವಿಷಯ ಮತ್ತು ಉಪಸಂಹಾರ ಎಂದು ಬರೆಯಬೇಡಿ. ಎಲ್ಲಾ ವಾಕ್ಯಗಳಿಗೂ ಅಡಿಗೆರೆ (ಅಂಡರ್ ಲೈನ್) ಹಾಕಬೇಡಿ. ಅತಿ ಮುಖ್ಯ ಎನಿಸುವ ಒಂದೆರಡು ಸಾಲುಗಳಿಗೆ ಅಡಿಗೆರೆ ಹಾಕಬಹುದು. ಅಗತ್ಯವಿರುವ ಕಡೆ ಅಲ್ಪವಿರಾಮ, ಪೂರ್ಣವಿರಾಮ, ಭಾವಸೂಚಕ ಚಿಹ್ನೆ, ಪ್ರಶ್ನಾರ್ಥಕ ಚಿಹ್ನೆ ಬಳಸುವುದನ್ನು ಮರೆಯಬೇಡಿ.
- ನಿಗದಿಪಡಿಸಿದ ಪದ ಮಿತಿ ದಾಟಬೇಡಿ. ಬರವಣಿಗೆ ಸುಂದರವಾಗಿರಲಿ.
- ಪ್ರಬಂಧಕ್ಕೆಂದೇ ಪುಸ್ತಕಗಳನ್ನು ಹುಡುಕುವುದು ಬೇಡ. (ಪ್ರಬಂಧ ರಚನೆಗೆ ಸಾಮಾನ್ಯವಾಗಿ ಬಡತನ, ಮಹಿಳೆ, ಶಿಕ್ಷಣ, ನಿರುದ್ಯೋಗ, ಭಯೋತ್ಪಾದನೆಯಂತಹ ವಿಷಯಗಳನ್ನು ನೀಡುತ್ತಾರೆ. ಈ ಬಾರಿ ಸಾಂಕ್ರಾಮಿಕ ರೋಗ/ಕೋವಿಡ್ ವಿಷಯಗಳ ಮೇಲೆ ಪ್ರಬಂಧಗಳು ಬರಬಹುದು).
- ಇದಲ್ಲದೇ ಪ್ರಚಲಿತ ವಿದ್ಯಮಾನಗಳ ಮೇಲೆಯೇ ಒಂದು ಪ್ರಬಂಧ ಇರುತ್ತದೆ. ಹೀಗಾಗಿ ಪ್ರಚಲಿತ ವಿದ್ಯಮಾನಗಳ ಅಧ್ಯಯನದ ನಿರ್ಲಕ್ಷ್ಯ ಸಲ್ಲದು.



ಎಸ್‌ಎಸ್‌ಸಿ ಪರೀಕ್ಷೆ; ಹಂತ-1ರ ಪರೀಕ್ಷಾ ಪೂರ್ವ ಸಿದ್ಧತೆ

ಸಾಮಾನ್ಯ ಅಧ್ಯಯನಕ್ಕೆ ಒತ್ತು ನೀಡಿ

ಮಹೇಶ್ ಎಚ್. ನಾಯಕ್

ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಪ್ರಾಧಿಕಾರದ (ಸ್ಟಾಫ್ ಸಲೆಕ್ಷನ್ ಕಮಿಷನ್- ಎಸ್‌ಎಸ್‌ಸಿ) 36 ವಿವಿಧ ವೃಂದಗಳಲ್ಲಿ(ಇಲಾಖೆಗಳಲ್ಲಿ) ಖಾಲಿ ಇರುವ ಗ್ರೂಪ್ ಬಿ ಮತ್ತು ಸಿ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತಿದೆ.

ವಿವಿಧ ಹುದ್ದೆಗಳ ವರ್ಗೀಕರಣಕ್ಕೆ ಅನುಸಾರವಾಗಿ ಒಟ್ಟು ನಾಲ್ಕು ಹಂತದ ಪರೀಕ್ಷೆಗಳಿರುತ್ತವೆ. ಮೊದಲ ಹಂತದ(ಹಂತ-1) ಪರೀಕ್ಷೆ ಎಲ್ಲರಿಗೂ ಕಡ್ಡಾಯವಾಗಿದ್ದು, ವರ್ಗವಾರು ನಿಗದಿಪಡಿಸಿದ ಅಂಕವನ್ನು ಪಡೆದವರು ಎರಡನೇ ಹಂತ (ಹಂತ- 2)ದ ಪರೀಕ್ಷೆಗೆ ಅರ್ಹರಾಗುತ್ತಾರೆ.

ಹಂತ-1ರ ಸಿದ್ಧತೆ ಹೀಗಿರಲಿ: ಮೊದಲ ಹಂತದ ಪರೀಕ್ಷೆ ಇದೇ ಏಪ್ರಿಲ್ 22ರಲ್ಲಿ ನಡೆಯುವ ಸಾಧ್ಯತೆಯಿದೆ. ಅಂದರೆ ಇನ್ನೂ 100 ರಿಂದ 120 ದಿನಗಳು ಬಾಕಿ ಇವೆ. ಪೂರ್ವ ಸಿದ್ಧತೆಗೆ ಅವಕಾಶವಿದೆ. ಸಮಯ ವ್ಯರ್ಥ ಮಾಡದೆ ಪ್ರತಿ ದಿನ ಕನಿಷ್ಠ 8 ರಿಂದ 10 ಗಂಟೆ ಅಭ್ಯಾಸ ಮಾಡಿದರೆ, ಪೂರ್ಣ ಸಿದ್ಧತೆಗೆ ಕನಿಷ್ಠ 100 ರಿಂದ 120 ಗಂಟೆ ಅವಕಾಶ ದೊರೆಯುತ್ತದೆ. ಅಧ್ಯಯನ ಸುಗಮವಾಗಿ ಸಾಗುತ್ತದೆ. ಆತ್ಮವಿಶ್ವಾಸವೂ ಹೆಚ್ಚುತ್ತದೆ.

ಹಂತ - 1 ರ ಪರೀಕ್ಷೆಯ ಪ್ರಶ್ನೆಪತ್ರಿಕೆಯು ಬಹುಆಯ್ಕೆ ಮಾದರಿಯಲ್ಲಿರುತ್ತದೆ. ಅದು 60 ನಿಮಿಷದ ಕಂಪ್ಯೂಟರ್ ಆಧಾರಿತ ಪರೀಕ್ಷೆ. 100 ಅಂಕದ ಪ್ರಶ್ನೆಪತ್ರಿಕೆಯಿರುತ್ತದೆ. ಪ್ರತಿ ಪ್ರಶ್ನೆಗೆ 2 ಅಂಕದಂತೆ 200 ಅಂಕಗಳು ನಿಗದಿಯಾಗಿರುತ್ತದೆ. ಪ್ರಶ್ನೆಪತ್ರಿಕೆಯು ಹಿಂದಿ ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿರುತ್ತದೆ. ಪ್ರತಿ ತಪ್ಪು ಉತ್ತರಕ್ಕೆ 0.5 ಋಣಾತ್ಮಕ(ನೆಗೆಟಿವ್) ಅಂಕವಿರುತ್ತದೆ.

ಈ ಹಂತ ಪರೀಕ್ಷೆಯಲ್ಲಿ ನಾಲ್ಕು ವಿಭಾಗಗಳಿರುತ್ತವೆ. ಮೊದಲ ವಿಭಾಗದಲ್ಲಿ ಸಾಮಾನ್ಯ ಬೌದ್ಧಿಕ ಶಕ್ತಿ ಮತ್ತು ತಾರ್ಕಿಕತೆಗೆ(ಪರ್ಸನಲ್ ಇಂಟೆಲಿಜೆನ್ಸಿ ಅಂಡ್ ರೀಸನಿಂಗ್) ಸಂಬಂಧಿಸಿದ್ದಾಗಿರುತ್ತದೆ. ಈ ವಿಭಾಗದಲ್ಲಿ 25 ಪ್ರಶ್ನೆಗಳಿರುತ್ತವೆ. ಸಾಮಾನ್ಯ ಬೌದ್ಧಿಕ ಶಕ್ತಿ ಮತ್ತು ತಾರ್ಕಿಕತೆಯಲ್ಲಿ ಸಮಸ್ಯೆ ಬಿಡಿಸುವಿಕೆ, ಸಂಬಂಧ ಜೋಡಣೆ, ನಿರ್ಧಾರ ತೆಗೆದುಕೊಳ್ಳುವಿಕೆ, ವಿಭಾಗೀಕರಣ, ಅವಲೋಕನ, ಸ್ಮರಣಾ ಸಾಮರ್ಥ್ಯ, ಅಂಕಿ-ಸಂಖ್ಯೆ ಸಮಯ ನಿರ್ವಹಣೆ ಮತ್ತಿತರ ಬೌದ್ಧಿಕ ಕೃತಿಮತ್ತೆಯನ್ನು ಪರೀಕ್ಷಿಸುತ್ತದೆ. ಇದು ಹೆಚ್ಚಿನ ಅಭ್ಯಾಸವನ್ನು ಕೇಳುತ್ತದೆ. ಈ ಹಿಂದೆ ವಿವರಿಸಿದಂತೆ ಒಟ್ಟು 1000 ರಿಂದ 1200 ಗಂಟೆಯ ಪೂರ್ವ ಸಿದ್ಧತಾ ಸಮಯವಿದ್ದರೆ ಶೇ 30 ರಿಂದ 35 ರಷ್ಟು ಸಮಯವನ್ನು ಬೌದ್ಧಿಕ ಶಕ್ತಿಗೆ ಸಂಬಂಧಿಸಿದ ಪ್ರಶ್ನೆಗಳ ಅಭ್ಯಾಸಕ್ಕಾಗಿ ಮೀಸಲಿಡಬೇಕು.

ಇಂಗ್ಲಿಷ್ ಹಾಗೂ ಸಾಮಾನ್ಯ ಜ್ಞಾನ ವಿಭಾಗದಲ್ಲಿ ಕೆಲವೊಮ್ಮೆ ನಿಖರವಾದ ಉತ್ತರವನ್ನು ನಿರ್ಧರಿಸುವುದು ಕಷ್ಟ. ಆದರೆ ಸಾಮಾನ್ಯ ಬೌದ್ಧಿಕ ಶಕ್ತಿ ಮತ್ತು ತಾರ್ಕಿಕತೆ ವಿಭಾಗದಲ್ಲಿ ಶೇ 100ರಷ್ಟು ನಿಖರವಾದ ಉತ್ತರ ಹುಡುಕಲು ಸಾಧ್ಯವಿರುತ್ತದೆ. ಆದ್ದರಿಂದ ಅಭ್ಯರ್ಥಿಗಳು ಹೆಚ್ಚಿನ ಅಭ್ಯಾಸದಲ್ಲಿ ತೊಡಗಿಕೊಳ್ಳಬೇಕು.

ಇಂಗ್ಲಿಷ್ ಗ್ರಹಿಕೆ ಮುಖ್ಯ

ಇಂಗ್ಲಿಷ್ ಭಾಷಾ ವಿಷಯದ ಸಾಮಾನ್ಯ ಜ್ಞಾನದ ಬಗ್ಗೆ 25 ಪ್ರಶ್ನೆಗಳಿರುತ್ತವೆ. ಸಾಮಾನ್ಯವಾಗಿ ಮಾತನಾಡುವ ಭಾಷೆಗೂ ಆಡಳಿತಾತ್ಮಕ ಭಾಷೆಗೂ ವ್ಯತ್ಯಾಸವಿರುತ್ತದೆ. ಆಡಳಿತಾತ್ಮಕ ಭಾಷೆಯಲ್ಲಿ ಪದ ಹಾಗೂ ವಾಕ್ಯ ರಚನೆಯ ಕ್ರಮ ಬದ್ಧತೆ ಇರುತ್ತದೆ. ಲಿಂಗ, ವಚನ, ವಿಭಕ್ತಿ, ಧಾತುಕಾಲದ ಬಳಕೆ ಸನ್ನಿವೇಶಕ್ಕೆ ಸೂಕ್ತವಾಗಿರುತ್ತದೆ. ಆದ್ದರಿಂದ ನಾಲ್ಕಾರು ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವ ಮೂಲಕ ಭಾಷಾ ಸಾಮರ್ಥ್ಯವನ್ನು ಪರೀಕ್ಷಿಸಿಕೊಳ್ಳಬೇಕು.

ಸಾಮಾನ್ಯ ಜ್ಞಾನ: ಸಾಮಾನ್ಯ ಜ್ಞಾನ ಎಂಬುದು ಬ್ರಹ್ಮಾಂಡದಂತೆ. ಅದು ಎಂದಿಗೂ ಪರಿಪೂರ್ಣಗೊಳಿಸಲಾಗದ ವಸ್ತು ಮತ್ತು ವಿಷಯ. ಹಾಗೆಂದು ಈ ಪರೀಕ್ಷೆಯಲ್ಲಿ ಯುಪಿಎಸ್‌ಸಿಯ ನಾಗರಿಕ ಸೇವಾ ಪರೀಕ್ಷೆಯ ಮಟ್ಟದ ಪ್ರಶ್ನೆಗಳನ್ನು ಕೇಳುವುದಿಲ್ಲ. ಬದಲಿಗೆ ಒಬ್ಬ ಪ್ರತಿಭಾವಂತ ಪದವಿಧರ ಹೊಂದಿರುವ ಸಾಮಾನ್ಯಜ್ಞಾನವನ್ನು ಪರೀಕ್ಷಿಸುವಂತಹ ಪ್ರಶ್ನೆಗಳಿರುತ್ತವೆ.

ಪ್ರಚಲಿತ ವಿದ್ಯಮಾನಗಳ ಕುರಿತು ಹೆಚ್ಚಿನ ಪ್ರಶ್ನೆಗಳನ್ನು ಕೇಳುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ ಪ್ರತಿದಿನ ವೃತ್ತ ಪತ್ರಿಕೆಗಳನ್ನು ಕಡ್ಡಾಯವಾಗಿ ಓದಬೇಕು. ಪತ್ರಿಕೆಗಳಲ್ಲಿ ರಾಷ್ಟ್ರೀಯ- ಅಂತರರಾಷ್ಟ್ರೀಯ ಸುದ್ದಿ, ಕ್ರೀಡೆ, ವ್ಯಾಪಾರ-ವ್ಯವಹಾರದ ಸುದ್ದಿಗಳಿಗೆ ಹೆಚ್ಚಿನ ಗಮನಕೊಡಿ. ನಿತ್ಯ 2 ರಿಂದ 3 ಗಂಟೆ ಸಾಮಾನ್ಯ ಅಧ್ಯಯನಕ್ಕೆ ಮೀಸಲಿಡಬೇಕು. ಅದರಲ್ಲಿ 30 ರಿಂದ 40 ನಿಮಿಷ ಪ್ರಚಲಿತ ಸುದ್ದಿಗಳನ್ನು ಅಧ್ಯಯನ ಮಾಡುತ್ತಾ ಟಿಪ್ಪಣಿ ಮಾಡಿಕೊಳ್ಳಬೇಕು. ಸಿಬಿಎಸ್‌ಸಿ, ಐಸಿಐಸಿಐ, ಐಜಿಸಿಎಸ್ ಪರೀಕ್ಷಾ ಮಂಡಳಿಗಳ 8 ರಿಂದ 10 ನೇ ತರಗತಿ ಪಠ್ಯ ಪುಸ್ತಕಗಳನ್ನು ಓದಬೇಕು.

ನೆನಪಿಡಿ; ಈ ವಿಭಾಗದಲ್ಲಿ ಋಣಾತ್ಮಕ(ನೆಗೆಟಿವ್) ಅಂಕವಿರುವ ಕಾರಣ, ಊಹೆಯ ಆಧಾರದ ಮೇಲೆ ಪ್ರಶ್ನೆಗಳಿಗೆ ಉತ್ತರಿಸದೇ, ಸ್ಪಷ್ಟವಾಗಿ ಮಾಹಿತಿ ಗೊತ್ತಿರುವ ಪ್ರಶ್ನೆಗಳಿಗಷ್ಟೇ ಉತ್ತರಿಸಬೇಕು.

ಪರಿಮಾಣಾತ್ಮಕ ಸಾಮರ್ಥ್ಯ: ಅಂಕಿ-ಸಂಖ್ಯೆಯ ಪರಿಜ್ಞಾನವನ್ನು ಪರೀಕ್ಷಿಸುವ ಉದ್ದೇಶದಿಂದ ಪರಿಮಾಣಾತ್ಮಕ ಸಾಮರ್ಥ್ಯ ವಿಭಾಗದಲ್ಲಿ 25 ಪ್ರಶ್ನೆಗಳನ್ನು ಕೇಳಲಾಗುತ್ತದೆ. 10ನೇ ತರಗತಿ ಮಟ್ಟದ ಪ್ರಶ್ನೆಗಳಿರುತ್ತವೆ. ಅಭ್ಯರ್ಥಿಗಳು ಮೂಲ ಗಣಿತದ ಲಾಭ ಮತ್ತು ನಷ್ಟ, ಬಡ್ಡಿ ಶ್ರೇಣಿಕರಣ ರಿಯಾಯಿತಿ ಮೊದಲಾದ ವಿಷಯಗಳ ಬಗ್ಗೆ ಅಭ್ಯಾಸ ಮಾಡಬೇಕು. ಮೂಲಗಣಿತದ ಬಗ್ಗೆ ಹೆಚ್ಚಿನ ಜ್ಞಾನವಿರುವ ಪ್ರತಿದಿನ ಪಠ್ಯಕ್ರಮಾನುಸಾರವಾಗಿ ಹಳೆಯ ಪ್ರಶ್ನೆ ಪತ್ರಿಕೆಗಳನಿಟ್ಟು ಕೊಂಡು ಅಭ್ಯಾಸ ಮಾಡಬೇಕು.

(ಮುಂದಿನ ವಾರ: ಅಧ್ಯಯನ ಸಾಮಗ್ರಿ, ಎರಡು ಮತ್ತು ಮೂರನೇ ಹಂತದ ಪರೀಕ್ಷೆ ಸಿದ್ಧತೆ)

ಸಾಮಾನ್ಯ ಜ್ಞಾನ – ಮಾದರಿ ಪ್ರಶ್ನೋತ್ತರ

(ಕಳೆದ ಎರಡು ವಾರಗಳಿಂದ ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿಗಾಗಿ ನಡೆಯುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಯ 'ಸಾಮಾನ್ಯ ಜ್ಞಾನ' ವಿಷಯ ಕುರಿತ ಮಾದರಿ ಪ್ರಶ್ನೋತ್ತರಗಳನ್ನು ನೀಡಲಾಗಿದೆ.)

ಭಾಗ- 3

ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ರಾಜ್ಯ ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಪರೀಕ್ಷೆಗೆ ಸಂಬಂಧಿಸಿದ 'ಸಾಮಾನ್ಯ ಜ್ಞಾನ' ವಿಷಯ ಕುರಿತ ಕೆಲವು ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ವಾಟ್ಸ್‌ಆ್ಯಪ್ ತರಹದ ಮತ್ತು ಅದಕ್ಕಿಂತ ಸುರಕ್ಷಿತವಾದ ಎಸಿಗ್ಮಾ(ASIGMA) ಮೊಬೈಲ್ ಅಪ್ಲಿಕೇಷನ್ ಅನ್ನು ಯಾರು ಬಳಕೆಗೆ ತರಲಿದ್ದಾರೆ?

ಎ) ಗೃಹ ಸಚಿವಾಲಯ ಬಿ) ಭಾರತೀಯ ಸೇನೆ
ಸಿ) ರಿಲಯನ್ಸ್ ಜಿಯೊ ಡಿ) ಏರ್‌ಟೆಲ್

ಉತ್ತರ: ಬಿ

(ವಿವರಣೆ: ಭಾರತೀಯ ಸೇನೆಯು ವಾಟ್ಸ್‌ಆ್ಯಪ್‌ನಂತಹ ಅಥವಾ ಅದಕ್ಕಿತಂಲೂ ಸುರಕ್ಷಿತವಾದ ASIGMA (ಆರ್ಮಿ ಸೆಕ್ಯೂರ್ ಇಂಡಿಜೀನಿಯಸ್ ಮೆಸೇಜಿಂಗ್ ಅಪ್ಲಿಕೇಶನ್) ಎಂದು ಕರೆಯಲ್ಪಡುವ ಆಂತರಿಕ ಸಂದೇಶ ಕಳುಹಿಸುವ ಅಪ್ಲಿಕೇಶನ್ ಅನ್ನು ಬಳಕೆಗೆ ತರುತ್ತಿರುವುದಾಗಿ ತಿಳಿಸಿದೆ)

2) ಅಗ್ಗದ ಬೆಲೆಯ ವಸ್ತುಗಳನ್ನು ರಫ್ತು ಮಾಡಿ ಭಾರತೀಯ ಉತ್ಪಾದಕರನ್ನು ಸದ್ದಿಲ್ಲದೇ ಮುಗಿಸಿಹಾಕುತ್ತಿದ್ದ ಚೀನಾ ಸರಕುಗಳ ಮೇಲೆ ಕೇಂದ್ರ ಸರ್ಕಾರ ದುಬಾರಿ ಡಂಪಿಂಗ್ ವಿರೋಧಿ ತೆರಿಗೆಗಳನ್ನು ವಿಧಿಸಿದೆ. ಪ್ರಸ್ತುತ ಎಷ್ಟು ವಸ್ತುಗಳ ಮೇಲೆ ಅಂತಹ ತೆರಿಗೆಯನ್ನು ವಿಧಿಸಲಾಗಿದೆ?

ಎ) 10 ಬಿ) 5 ಸಿ) 15 ಡಿ)3

ಉತ್ತರ: ಬಿ

3) 'ಶ್ರಮಿಕ್ ಸಂಜೀವಿನಿ' ಏನಿದು?

ಎ) ಕಟ್ಟಡ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಬಿತರಿರುವೆಡೆಗೆ ತೆರಳಿ ಅವರ ಆರೋಗ್ಯ ಪರೀಕ್ಷಿಸಿ ಅಗತ್ಯ ಸಲಹೆ ಸೂಚನೆ ನೀಡುವ ಅತ್ಯಾಧುನಿಕ ಸಂಚಾರಿ ಕ್ಲಿನಿಕ್ ಯೋಜನೆ
ಬಿ) ಗ್ರಾಮ-ಗ್ರಾಮಗಳಿಗೆ ಅತ್ಯುತ್ತಮ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಯೋಜನೆ
ಸಿ) ನಗರದ ನಿವಾಸಿಗಳಿಗೆಲ್ಲ ಕೆಲಸಕ್ಕೆ ಯೋಗ್ಯ ವೇತನ ವಿತರಿಸುವ ವ್ಯವಸ್ಥೆ ಮಾಡಲು ಇರುವ ಬ್ಯಾಂಕಿಂಗ್ಸ್ ಸೇವೆ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

4) ಸೂರ್ಯ, ಭೂಮಿ ಹಾಗೂ ಜೇಮ್ಸ್‌ವೆಬ್ ಬಾಹ್ಯಾಕಾಶ ದೂರದರ್ಶಕ ಒಂದೇ ಸರಳ ರೇಖೆಯಲ್ಲಿ ಇರಲಿವೆ. ಅಂದರೆ ಜೇಮ್ಸ್ ವೆಬ್ ಬಾಹ್ಯಾಕಾಶ ದೂರದರ್ಶಕ ಲ್ಯಾಂಗ್ರೆಜ್ ಪಾಯಿಂಟ್‌ನಲ್ಲಿದ್ದು ಸದಾ ಸೂರ್ಯನಿಗೆ ಬೆನ್ನು ಹಾಕಿಕೊಂಡೆ ಭೂಮಿಯ ಜತೆಜತೆಗೆ ಸೂರ್ಯನನ್ನು ಸುತ್ತಲಿದೆ. ಈ ದೂರದರ್ಶಕವು ಭೂಮಿಯಿಂದ ಎಷ್ಟು ಕಿ.ಮೀ ದೂರದಲ್ಲಿರುತ್ತದೆ?

ಎ) 5 ಲಕ್ಷ ಬಿ) 10 ಲಕ್ಷ ಸಿ) 9 ಲಕ್ಷ ಡಿ) 15 ಲಕ್ಷ

ಉತ್ತರ: ಡಿ

5) ಹಾರ್ವರ್ಡ್ ಬ್ಯುಸಿನೆಸ್ ರಿವ್ಯೂವ್ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಪಟ್ಟಿಯಲ್ಲಿ ವಿಶ್ವದ ಅಗ್ರ ಐದು ನಗರಗಳಲ್ಲಿ ಬೆಂಗಳೂರು ಎಷ್ಟನೇ ಸ್ಥಾನ ಪಡೆದಿದೆ?

ಎ) 5 ಬಿ) 4 ಸಿ) 3 ಡಿ) 2

ಉತ್ತರ: ಎ

ಮಾಹಿತಿ: **Spardha Bharati UPSC,** ಯೂಟ್ಯೂಬ್ ಚಾನೆಲ್

ಸಹಾಯಕ ಪ್ರಾಧ್ಯಾಪಕರ ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ

ನಿಮಗಿದು ಗೊತ್ತೆ?

ಶೀಘ್ರಲಿಪಿ

ಸಂಕೇತಗಳು ಅಥವಾ ಚಿಹ್ನೆಗಳನ್ನು ಉಪಯೋಗಿಸಿ ಅತ್ಯಂತ ವೇಗದಲ್ಲಿ ಬರೆಯುವ ವಿಧಾನಕ್ಕೆ 'ಶೀಘ್ರಲಿಪಿ' ಎಂದು ಹೆಸರು. ಈ ವಿಧಾನದಲ್ಲಿ ಅಕ್ಷರಗಳು, ಪದಗಳು ವಾಕ್ಯಗಳನ್ನು ಅತ್ಯಂತ ಶೀಘ್ರದಲ್ಲಿ ಬರೆಯಬಹುದು. ಶೀಘ್ರಲಿಪಿಗೆ ಸ್ಟೆನೊಗ್ರಫಿ, ಟ್ಯಾಕಿಗ್ರಫಿ ಮತ್ತು ಬ್ರ್ಯಾಕಿಗ್ರಫಿ ಎಂಬ ಹೆಸರುಗಳೂ ಇವೆ. ಈ ಲಿಪಿ ಬಹಳ ಉಪಯುಕ್ತವಾಗಿರುವುದರಿಂದ ವಿಶ್ವದ ಹಲವು ಕೈಗಾರಿಕಾ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಬಳಸಲಾಯಿತು.

ಗ್ರೀಕ್ ಇತಿಹಾಸಕಾರ ಜೆನೊಫನ್(Xenophon) ಮೊಟ್ಟ ಮೊದಲು ಈ ಶೀಘ್ರಲಿಪಿಯನ್ನು ಬಳಸಿದರೆಂಬುದು ಅನೇಕ ಇತಿಹಾಸಕಾರರ ಅಭಿಪ್ರಾಯ. ಇವರು ಸಾಕ್ರೆಟಿಸ್‌ನ ಸಂವಾದಗಳನ್ನು ಶೀಘ್ರಲಿಪಿಯಲ್ಲಿ ಬರೆದರು.

ಕ್ರಿ. ಪೂ. 63ರಲ್ಲಿ ರೋಮ್‌ನ ಮಾರ್ಕಸ್ ಟುಲಿಯಸ್ ಟಿರೊ ಲ್ಯಾಟಿನ್ ಭಾಷೆಯನ್ನು ಶೀಘ್ರಲಿಪಿಯಲ್ಲಿ ಬರೆದ. ಆತ ಶೀಘ್ರಲಿಪಿಯ ಒಂದು ನಿಘಂಟನ್ನೂ ಸಿದ್ಧಪಡಿಸಿದ್ದಾನೆ.

17ನೇ ಶತಮಾನದಲ್ಲಿ ಶೀಘ್ರಲಿಪಿಯನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಲಾಯಿತು. ಜಾನ್ ವಿಲ್ಲಿಸ್‌ನನ್ನು ಆಧುನಿಕ ಶೀಘ್ರಲಿಪಿಯ ಪಿತಾಮಹನೆಂದು ಪರಿಗಣಿಸಲಾಗಿದೆ.

ಕೈಗಾರಿಕಾಭಿವೃದ್ಧಿಯಿಂದಾಗಿ ಶೀಘ್ರಲಿಪಿಗಾರರಿಗೆ ಬೇಡಿಕೆ ಹೆಚ್ಚಿತು. 18ನೇ ಶತಮಾನದಲ್ಲಿ ಶೀಘ್ರಲಿಪಿಯನ್ನು ವ್ಯವಸ್ಥಿತವಾಗಿ ರೂಪಿಸಲಾಯಿತು. ಆದರೆ ಬ್ರಿಟಿಷ್ ಶೀಘ್ರಲಿಪಿಕಾರ ಸ್ಯಾಮ್ಯುಯೆಲ್ ಟೇಲರ್ 1786ರಲ್ಲಿ ಅಭಿವೃದ್ಧಿಪಡಿಸಲಾದ ಶೀಘ್ರಲಿಪಿ ಪದ್ಧತಿಯನ್ನು ಫ್ರೆಂಚ್, ಸ್ಪಾನಿಷ್, ಪೋರ್ಚುಗೀಸ್, ಇಟಾಲಿಯನ್, ಸ್ವೀಡಿಷ್, ಜಪಾನಿ, ಡಚ್ ಮತ್ತು ಇತರೆ ಭಾಷೆಗಳಲ್ಲಿ ಅಂಗೀಕರಿಸಲಾಯಿತು. 1837ರಲ್ಲಿ ಟೇಲರ್ ರೂಪಿಸಿದ ಪದ್ಧತಿಯ ಆಧಾರದ ಮೇಲೆ ಸರ್ ಐಸಾಕ್ ಪಿಟ್‌ಮನ್ ಶೀಘ್ರಲಿಪಿಯ ಆಧುನಿಕ ಪದ್ಧತಿಯನ್ನು ಅಭಿವೃದ್ಧಿಪಡಿಸಿದರು.

ಐರ್ಲೆಂಡಿನ ಜಾನ್‌ಗ್ರೆಗ್, 1888ರಲ್ಲಿ ಮತ್ತೊಂದು ಬಗೆಯ ಶೀಘ್ರಲಿಪಿ ಪದ್ಧತಿಯನ್ನು ಕಂಡುಹಿಡಿದರು. ಈ ಪದ್ಧತಿ ವೃತ್ತಗಳು, ಕೊಕ್ಕೆಗಳು ಮತ್ತು ವಂಕಿಗಳ ಆಧಾರದಿಂದ ಈ ಲಿಪಿ ತಯಾರಾಗಿತ್ತು. 1893ರಲ್ಲಿ ಈ ಪದ್ಧತಿಯನ್ನು ಅಮೆರಿಕದಲ್ಲಿ ಬೆಳಕಿಗೆ ತರಲಾಯಿತು.

ಪ್ರಜಾವಾಣಿ ಉದ್ಯೋಗ ವಾರ್ತೆ

ಅಂಗನವಾಡಿ ಕಾರ್ಯಕರ್ತೆಯರ ಹುದ್ದೆ

ದಾವಣಗೆರೆ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.
ಹುದ್ದೆಗಳು: ಕಾರ್ಯಕರ್ತೆಯರು ಹಾಗೂ ಸಹಾಯಕಿರು
ಹುದ್ದೆಗಳ ಸಂಖ್ಯೆ: 37 ಸ್ಥಳ: ದಾವಣಗೆರೆ
ವಿದ್ಯಾರ್ಹತೆ: ಕಾರ್ಯಕರ್ತೆಯರ ಹುದ್ದಗೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು. ಸಹಾಯಕಿಯರ ಹುದ್ದೆಗೆ ಕನಿಷ್ಠ 4ನೇ ತರಗತಿ ಗರಿಷ್ಠ 9ನೇ ತರಗತಿ ತೇರ್ಗಡೆಯಾಗಿರಬೇಕು.
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜನವರಿ 18, 2022
ಹೆಚ್ಚಿನ ಮಾಹಿತಿಗೆ: http://davanagere.nic.in/

ಬೆಂಗಳೂರು ಮೆಟ್ರೊದಲ್ಲಿ ಹುದ್ದೆಗಳು

ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್) 2021ನೇ ಸಾಲಿನ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಅರ್ಜಿ ಸಲ್ಲಿಸಬಹುದು.
ಹುದ್ದೆ: ಮುಖ್ಯ ಎಂಜಿನಿಯರ್, ಸಹಾಯಕ ಮುಖ್ಯ ಎಂಜಿನಿಯರ್, ಕಾರ್ಯಕಾರಿ ಎಂಜಿನಿಯರ್, ಸಹಾಯಕ ಕಾರ್ಯಕಾರಿ ಇಂಜಿನಿಯರ್, ಸಹಾಯಕ ಎಂಜಿನಿಯರ್
ಹುದ್ದೆಗಳ ಸಂಖ್ಯೆ: 145 ಸ್ಥಳ: ಬೆಂಗಳೂರು
ವಿದ್ಯಾರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿಇ, ಬಿಟೆಕ್ ಪದವಿ ಪಡೆದಿರಬೇಕು.
ನೇಮಕಾತಿ ಪ್ರಕ್ರಿಯೆ: ವೈಯಕ್ತಿಕ ಸಂದರ್ಶನ ಹಾಗೂ ಲಿಖಿತ ಪರೀಕ್ಷೆ.
ಅರ್ಜಿ ಸಲ್ಲಿಕೆ ವಿಧಾನ: ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಸೂಕ್ತ ದಾಖಲೆಗಳೊಂದಿಗೆ ಈ ವಿಳಾಸಕ್ಕೆ ಪೋಸ್ಟ್ ಅಥವಾ ನೇರವಾಗಿ ಹೋಗಿ ಸಲ್ಲಿಸಬೇಕು.
ವಿಳಾಸ: ಪ್ರಧಾನ ವ್ಯವಸ್ಥಾಪಕರು, ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್, ಮೂರನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಎಚ್. ರಸ್ತೆ, ಶಾಂತಿನಗರ, ಬೆಂಗಳೂರು – 27
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜನವರಿ 17, 2022
ಹೆಚ್ಚಿನ ಮಾಹಿತಿಗೆ: www.bmrc.co.in

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಏನಾದರೂ ಮಾಡುತಿರು ತಮ್ಮ; ಸುಮ್ಮನೆ ಕೂತು ನೆಲಕೆ ನೀ ಭಾರವಾಗಬೇಡವೋ.

–ಗೋಪಾಲಕೃಷ್ಣ ಅಡಿಗ

ಎನ್‌ಜಿಒಗಳ ವಿರುದ್ಧ ಕ್ರಮ ಒಳಿತನ್ನೇನೂ ಮಾಡುವುದಿಲ್ಲ

ಕೇಂದ್ರ ಸರ್ಕಾರವು ಕೆಲವು ವರ್ಷಗಳಿಂದ ದೇಶದಲ್ಲಿ ಸ್ವಯಂ ಸೇವಾ ಸಂಸ್ಥೆಗಳು (ಎನ್‌ಜಿಒ) ಕೆಲಸ ನಿರ್ವಹಿಸುವುದನ್ನು ಕಷ್ಟಕರ ಆಗಿಸುತ್ತಿದೆ. ಇಂತಹ ಸಂಸ್ಥೆಗಳ ಕಷ್ಟವು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಇದನ್ನು ಕೇಂದ್ರ ಸರ್ಕಾರವು ತನ್ನ ಹೇಳಿಕೆಗಳು, ನೀತಿಗಳು ಮತ್ತು ಕ್ರಿಯೆಗಳ ಮೂಲಕ ಸ್ಪಷ್ಟಪಡಿಸುತ್ತಿದೆ. ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ (ಎಫ್‌ಸಿಆರ್‌ಎ) ಅಡಿಯಲ್ಲಿ ಕೆಲವು ಎನ್‌ಜಿಒಗಳಿಗೆ ನೋಂದಣಿ ನಿರಾಕರಿಸಿರುವುದು ಮತ್ತು ಇನ್ನು ಕೆಲವು ಎನ್‌ಜಿಒಗಳ ನೋಂದಣಿ ನವೀಕರಿಸಲು ಒಪ್ಪದಿರುವುದು ಈ ನೀತಿಯ ಒಂದು ಭಾಗ. ವಿದೇಶಗಳಿಂದ ಹಣ ಸ್ವೀಕರಿಸಲು ಎಫ್‌ಸಿಆರ್‌ಎ ಅಡಿಯಲ್ಲಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯ. ಈ ಕಾಯ್ದೆಯ ಕೆಲವು ಅಂಶಗಳನ್ನು ಈಚೆಗೆ ಇನ್ನಷ್ಟು ಕಠಿಣಗೊಳಿಸಲಾಗಿದೆ. ಕಾಯ್ದೆಯನ್ನು ಬಳಸಿಕೊಂಡು ಎನ್‌ಜಿಒಗಳಿಗೆ ಹಣಕಾಸಿನ ನೆರವು ಸಿಗದಂತೆ ಮಾಡಲಾಗಿದೆ. ದೇಶದಲ್ಲಿ ಎಫ್‌ಸಿಆರ್‌ಎ ಅಡಿಯಲ್ಲಿ ನೋಂದಣಿ ಆಗಿರುವ ಎನ್‌ಜಿಒಗಳ ಸಂಖ್ಯೆಯು 22 ಸಾವಿರಕ್ಕಿಂತಲೂ ಹೆಚ್ಚು. ಈ ಪೈಕಿ ಹಲವು ಸಂಸ್ಥೆಗಳು ನೋಂದಣಿ ನವೀಕರಣಕ್ಕೆ ಅರ್ಜಿ ಸಲ್ಲಿಸಿರಲಿಲ್ಲ ಎಂದು ವರದಿಯಾಗಿದೆ. ನೋಂದಣಿಯ ಅವಧಿಯು ಡಿಸೆಂಬರ್ 31ಕ್ಕೆ ಕೊನೆಗೊಳ್ಳಲಿಕ್ಕಿತ್ತು. ಇದನ್ನು ಮಾರ್ಚ್ 31ರವರೆಗೆ ವಿಸ್ತರಣೆ ಮಾಡಲಾಯಿತು. ಆದರೆ, ದಾಖಲೆಗಳ ಪರಿಶೀಲನೆ ನಂತರ 179 ಎನ್‌ಜಿಒಗಳ ಅರ್ಜಿಯನ್ನು ತಿರಸ್ಕರಿಸಲಾಯಿತು. ಈ ಎನ್‌ಜಿಒಗಳು ಮತ್ತು ನೋಂದಣಿ ನವೀಕರಣಕ್ಕೆ ಅರ್ಜಿಯನ್ನೇ ಸಲ್ಲಿಸದ ಎನ್‌ಜಿಒಗಳ ಚಟುವಟಿಕೆಗಳು ಇನ್ನು ಸ್ಥಗಿತಗೊಳ್ಳಲಿವೆ.

ಎನ್‌ಜಿಒಗಳಿಗೆ ಕೆಲಸ ಮಾಡಲು ಅವಕಾಶ ಕೊಡದಿರುವುದು ದುರದೃಷ್ಟಕರ. ಇಂತಹ ಸಂಸ್ಥೆಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳು ಪೂರ್ವಗ್ರಹಪೀಡಿತವಾಗಿ ಇರುವಂತೆ ಕಾಣುತ್ತಿವೆ

ಮದರ್ ತೆರೇಸಾ ಸ್ಥಾಪಿಸಿದ, ಕೋಲ್ಕತ್ತ ಮೂಲದ ಎನ್‌ಜಿಒ 'ಮಿಷನರೀಸ್ ಆಫ್ ಚಾರಿಟಿ'ಯ ನೋಂದಣಿಯನ್ನು ಕೇಂದ್ರ ಸರ್ಕಾರವು ಈಚೆಗೆ ನವೀಕರಿಸಲು ನಿರಾಕರಿಸಿತು. ಎಫ್‌ಸಿಆರ್‌ಎ ಅಡಿಯಲ್ಲಿ ನೋಂದಣಿ ನವೀಕರಣ ನಿರಾಕರಿಸಲ್ಪಟ್ಟ ಎನ್‌ಜಿಒಗಳ ಪಟ್ಟಿಯಲ್ಲಿ ಆಕ್ಸ್‌ಫ್ಯಾಮ್ ಇಂಡಿಯಾ, ಕಾಮನ್ ಕಾಸ್, ಲೆಪ್ರಸಿ ಮಿಷನ್ ಮತ್ತು ಭಾರತೀಯ ವೈದ್ಯಕೀಯ ಸಂಘ (ಐಎಂಎ) ಕೂಡ ಇವೆ. ಈ ಪಟ್ಟಿಯಲ್ಲಿ ಇರುವ ಹಲವು ಎನ್‌ಜಿಒಗಳು ಬೇರೆ ಬೇರೆ ವಲಯಗಳಲ್ಲಿ ಶ್ಲಾಘನೀಯ ಕೆಲಸ ಮಾಡುತ್ತಿವೆ. ಅವು ಜನರಿಗೆ ಸಹಾಯ ಮಾಡುತ್ತಿವೆ. ಬಡವರಿಗೆ, ದಿಕ್ಕಿಲ್ಲದವರಿಗೆ, ಸಾಮಾಜಿಕವಾಗಿ ಶೋಷಣೆಗೆ ಒಳಗಾದವರಿಗೆ, ದುರ್ಬಲ ವರ್ಗದ ವ್ಯಕ್ತಿಗಳಿಗೆ ಮತ್ತು ಸಮುದಾಯಗಳಿಗೆ ನೆರವು ಒದಗಿಸುತ್ತಿವೆ. ಮಿಷನರೀಸ್ ಆಫ್ ಚಾರಿಟಿ ಸಂಸ್ಥೆಯು ಕೋಲ್ಕತ್ತದಲ್ಲಿ ಮತ್ತು ದೇಶದ ಇತರ ಕಡೆಗಳಲ್ಲಿ ಬಡವರಿಗೆ, ನಿರ್ಗತಿಕರಿಗೆ, ವಿಶೇಷ ಆರೈಕೆಯ ಅಗತ್ಯವಿರುವ ಜನರಿಗೆ, ರೋಗಪೀಡಿತರಿಗೆ ಮತ್ತು ವಯೋವೃದ್ಧರಿಗೆ ಮಾಡಿರುವ ಸಹಾಯವು ಬಹುಶ್ರುತ. ಮದರ್ ತೆರೇಸಾ ಅವರ ಸಾವಿನ ನಂತರವೂ ಈ ಸಂಸ್ಥೆಯು ಶ್ಲಾಘನೀಯ ಕೆಲಸ ಮಾಡಿದೆ. ಭಾರತ ಮಾತ್ರವೇ ಅಲ್ಲದೆ, ಇತರ ದೇಶಗಳಲ್ಲಿಯೂ ಇದು ಒಳ್ಳೆಯ ಕೆಲಸ ಮಾಡುತ್ತಿದೆ.

ಮಿಷನರೀಸ್ ಆಫ್ ಚಾರಿಟಿ ಸಂಸ್ಥೆಯ ನೋಂದಣಿಯನ್ನು ನವೀಕರಿಸಲು ನಿರಾಕರಿಸಿದ್ದು ಏಕೆ ಎಂಬುದನ್ನು ಸರ್ಕಾರ ಸ್ಪಷ್ಟವಾಗಿ ತಿಳಿಸಿಲ್ಲ. ಸಂಸ್ಥೆಯ ಕುರಿತ 'ವ್ಯತಿರಿಕ್ತ ವರದಿ'ಗಳ ಆಧಾರದಲ್ಲಿ ನೋಂದಣಿ ನವೀಕರಣಕ್ಕೆ ನಿರಾಕರಿಸಲಾಯಿತು ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ. ಆದರೆ ಆ ವರದಿಗಳಲ್ಲಿ ಏನಿದ್ದವು ಎಂಬುದನ್ನು ಹೇಳಿಲ್ಲ. ಈ ಸಂಸ್ಥೆಯು ತನ್ನ ಕೆಲಸಗಳಿಗೆ ಸಂಬಂಧಿಸಿದಂತೆ ವ್ಯತಿರಿಕ್ತವಾದ ಹಣಕಾಸಿನ ನೋಟಿಸ್ ಪಡೆದಿಲ್ಲ. ವಿಶ್ವಾಸಾರ್ಹ ಹಾಗೂ ಪ್ರತಿಷ್ಠಿತ ಸ್ವಯಂಸೇವಾ ಸಂಸ್ಥೆಯಾಗಿರುವ ಮಿಷನರೀಸ್ ಆಫ್ ಚಾರಿಟಿ ವಿಶ್ವದ ಹಲವೆಡೆಗಳಿಂದ ಹಣಕಾಸಿನ ಅನುದಾನ ಪಡೆದಿದೆ. ಆದರೆ, ಕ್ರೈಸ್ತ ಧರ್ಮದ ಸಂಸ್ಥೆಯೆಂಬಂತೆ ತೋರುವ ಹೆಸರು ಹೊತ್ತಿರುವ ಕಾರಣಕ್ಕಾಗಿ ಇದು ಕೆಟ್ಟ ಅನುಭವಗಳನ್ನು ಎದುರಿಸಿದ ನಿದರ್ಶನಗಳು ಇವೆ. ಹೀಗಿದ್ದರೂ ಈ ಸಂಸ್ಥೆಯು ತನ್ನ ಕೆಲಸಗಳಲ್ಲಿ ಯಾರಿಗೂ ಧರ್ಮದ ಆಧಾರದಲ್ಲಿ ತಾರತಮ್ಯ ಎಸಗಿಲ್ಲ. ಇಂತಹ ಸಂಸ್ಥೆಗೆ ಹಣಕಾಸಿನ ನೆರವು ಸಿಗದಂತೆ ಮಾಡುವುದು ತಪ್ಪು. ಇತರ ಸಂಸ್ಥೆಗಳ ವಿಚಾರವಾಗಿ ಕೈಗೊಂಡಿರುವ, ಪ್ರತೀಕಾರ ಕೈಗೊಳ್ಳುವ ಬಗೆಯ ಕ್ರಮಗಳೂ ಅಷ್ಟೇ ತಪ್ಪು. ಸರ್ಕಾರಗಳು ಪ್ರವೇಶಿಸಲು ಸಾಧ್ಯವಾಗದ ಕಡೆಗಳಲ್ಲಿ ಎನ್‌ಜಿಒಗಳು ಕೆಲಸ ಮಾಡುತ್ತಿವೆ. ಅವುಗಳಿಗೆ ಕೆಲಸ ಮಾಡಲು ಅವಕಾಶ ಕೊಡದಿರುವುದು ದುರದೃಷ್ಟಕರ. ಇಂತಹ ಸಂಸ್ಥೆಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳು ಪೂರ್ವಗ್ರಹಪೀಡಿತವಾಗಿ ಇರುವಂತೆ ಕಾಣುತ್ತಿವೆ.

ದಿನದ ಟ್ವೀಟ್

ವಾಸ್ತವ ಅರಿಯಬೇಕಿದೆ

ಸಾಂಕ್ರಾಮಿಕ ರೋಗಶಾಸ್ತ್ರಜ್ಞರು 2020ರ ಮಾರ್ಚ್‌ನಲ್ಲಿ ಏನನ್ನು ಅರಿತಿದ್ದರೋ ಅದೀಗ ಎಲ್ಲರಿಗೂ ಸ್ಪಷ್ಟವಾಗಿದೆ. ಕೋವಿಡ್ ಅನ್ನು ನಿಗ್ರಹಿಸಲು ಸಾಧ್ಯವಿಲ್ಲ. ಲಾಕ್‌ಡೌನ್‌ಗಳು ಸೋಂಕು ಹರಡುವಿಕೆಯನ್ನು ಮುಂದೂಡುತ್ತವೆ ಮತ್ತು ಸಾಂಕ್ರಾಮಿಕದ ಅವಧಿಯನ್ನು ವಿಸ್ತರಿಸುತ್ತವೆ. ಅಷ್ಟೇ ಅಲ್ಲದೆ, ಸಾರ್ವಜನಿಕ ಆರೋಗ್ಯ ಮತ್ತು ಶಿಕ್ಷಣಕ್ಕೂ ಹಾನಿಯುಂಟು ಮಾಡುತ್ತವೆ.

ಮಾರ್ಟಿನ್ ಕಲ್‌ಡಾರ್ಫ್, ಸಾಂಕ್ರಾಮಿಕ ರೋಗಶಾಸ್ತ್ರಜ್ಞ

ಕಿಡಿನುಡಿ



ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿಯಾಗಿದ್ದರು. ಅವರೇಕೆ ಆಗ ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳಲಿಲ್ಲ? ಅಧಿಕಾರ ಇದ್ದಾಗ ಮಾಡುವುದನ್ನು ಬಿಟ್ಟು ಈಗ ಪಾದಯಾತ್ರೆ ಹೊರಟರೆ ಹೇಗೆ?

ಎಚ್.ಡಿ.ದೇವೇಗೌಡ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ

25 ವರ್ಷಗಳ ಹಿಂದೆ

ಸೋಮವಾರ, 6-1-1997

• ಕನ್ನಡ ಸಂಸ್ಕೃತಿಗೆ ಅನುದಾನ ಕಡಿತ: ಸಚಿವೆ ಅತೃಪ್ತಿ

ಬೆಂಗಳೂರು, ಜ. 5– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಾರ್ಷಿಕ ಅನುದಾನದಲ್ಲಿ ಎರಡೂವರೆ ಕೋಟಿ ಮೊತ್ತವನ್ನು (ಶೇ ಹತ್ತರಷ್ಟು) ಕಡಿಮೆ ಮಾಡುವ ರಾಜ್ಯ ಸರ್ಕಾರದ ತೀರ್ಮಾನ ಇಲ್ಲಿ ಇಂದು ನಡೆದ ರಾಜ್ಯ ಲಲಿತಕಲಾ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಟು ಟೀಕೆಗೆ ಒಳಗಾಯಿತು.

ಇಲಾಖೆಯ ಅನುದಾನದಲ್ಲಿ ಕಡಿತ ಮಾಡುವುದು ಎಂದರೆ ರಾಜ್ಯದ ಹತ್ತೂ ಅಕಾಡೆಮಿಗಳ ಆರ್ಥಿಕ ಶಕ್ತಿಯನ್ನು ಇನ್ನಷ್ಟು ಉಡುಗಿಸುವುದು ಎಂದೇ ಅರ್ಥ. ಕಲೆ, ಸಾಹಿತ್ಯ, ಸಂಸ್ಕೃತಿಯ ಮೌಲ್ಯ ಗೊತ್ತಿದ್ದವರು ಮಾಡುವ ಕೆಲಸ ಇದಲ್ಲ ಎಂದು ದೂರಲಾಯಿತು.

ಖ್ಯಾತ ಶಿಕ್ಷಣ ತಜ್ಞ ಡಾ. ಎಚ್. ನರಸಿಂಹಯ್ಯ, ಮಾಜಿ ಸಚಿವ, ಶಾಸಕ ಕೆ.ಬಿ. ಶಾಣಪ್ಪ, ಲಲಿತಕಲಾ ಅಕಾಡೆಮಿ ಅಧ್ಯಕ್ಷ ಸಿ. ಚಂದ್ರಶೇಖರ್ ಈ ಸಂಬಂಧ ಮಾಡಿದ ಟೀಕೆಗೆ ಸ್ವತಃ ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರೂ ದನಿಗೂಡಿಸಿದರು.

• ಸಾಹಿತ್ಯಕ್ಕೆ ರಾಜಕಾರಣಿಗಳ ನಂಟು: ಆಮೂರ ಸಮರ್ಥನೆ

ಬೆಂಗಳೂರು, ಜ. 5– ರಾಜಕೀಯ ಮತ್ತು ಸಾಹಿತ್ಯದ ನಡುವೆ ಅನ್ಯೋನ್ಯ ಸಂಬಂಧ ಇದೆ. ಅವೆರಡೂ ಒಂದಕ್ಕೊಂದು ವಿರೋಧವಲ್ಲ. ರಾಜಕೀಯ ಕೆಟ್ಟದ್ದೆಂದು ಭಾವಿಸುವುದು ಸರಿಯಲ್ಲ' ಎಂದು ಖ್ಯಾತ ವಿಮರ್ಶಕ ಡಾ. ಜಿ.ಎಸ್. ಆಮೂರ ಇಂದು ಇಲ್ಲಿ ಅಭಿಪ್ರಾಯಪಟ್ಟರು.

ಇತ್ತೀಚೆಗೆ ರಾಜಕೀಯ–ಸಂಸ್ಕೃತಿ–ಸಾಹಿತ್ಯಗಳ ನಡುವಿನ ಸಂಬಂಧದ ಬಗ್ಗೆ ಎದ್ದಿರುವ ಗೊಂದಲ, 'ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರಾಜಕಾರಣಿಗಳ ಮೇಲುಗೈ' ಮುಂತಾದ ಸಂಗತಿಗಳ ಬಗ್ಗೆ 'ಶಂ.ಬಾ. ವಿಚಾರ ವೇದಿಕೆ' ಹಾಗೂ ಬಿ.ಎಂ.ಶ್ರೀ. ಪ್ರತಿಷ್ಠಾನ ಜಂಟಿಯಾಗಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು 'ಸಾಹಿತ್ಯ ಕೂಡ ರಾಜಕೀಯದಂತೆಯೇ ಒಂದು ಶಕ್ತಿ, ರಾಜಕೀಯ ಕೆಟ್ಟದ್ದೇನಲ್ಲ. ಹಾಗಾಗಿ ಒಟ್ಟಾರೆ ಸ್ಥಿತಿಯಲ್ಲಿ ರಾಜಕಾರಣವನ್ನು ಬೇರೆಯಾಗಿ ನೋಡುವುದು ಸರಿಯಲ್ಲ. ರಾಜಕಾರಣವನ್ನು ಒಟ್ಟಾರೆ ಸಾಂಸ್ಕೃತಿಕ ಬೆಳವಣಿಗೆಗೆ ಬಳಸಿಕೊಳ್ಳಬೇಕು' ಎಂದು ಹೇಳಿದರು.

50 ವರ್ಷಗಳ ಹಿಂದೆ

ಗುರುವಾರ, 6-1-1972

• ಯುದ್ಧ ಇನ್ನೂ ಮುಗಿದಿಲ್ಲ: ಇಂದಿರಾ

ಕೊಲ್ಲಾಪುರ, ಜ. 5– ಯಾವುದೇ ರೀತಿಯ ಕಷ್ಟ ಪರಿಸ್ಥಿತಿ ಎದುರಿಸಲು ಸದಾ ಜಾಗೃತವಾಗಿರಬೇಕೆಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಕರೆ ಇತ್ತರು.

'ಮುಂದಿನ ಕೆಲವು ತಿಂಗಳುಗಳಲ್ಲಿ ಏನು ಆಗುತ್ತದೆ, ಎಂತಹ ಕಷ್ಟದ ಪರಿಸ್ಥಿತಿ ತಲೆ ಹಾಕುತ್ತದೆ ಎನ್ನುವುದನ್ನು ಹೇಳಲಾಗುವುದಿಲ್ಲ. ಮತ್ತೆ ಯುದ್ಧ ಸಂಭವಿಸಿದಲ್ಲಿ ನಾವು ಅದಕ್ಕೆ ಸಿದ್ಧರಾಗಿರಲೇಬೇಕು' ಎಂದು ಅವರು ಘೋಷಿಸಿದರು.

• ನ್ಯಾಯಯುತ ಚುನಾವಣೆ ಸರ್ಕಾರಿ ನೌಕರರ ಹೊಣೆ: ರಾಜ್ಯಪಾಲರ ಕರೆ

ಬೆಂಗಳೂರು, ಜ. 5– ಮುಂಬರುವ ರಾಜ್ಯ ವಿಧಾನಸಭೆಯ ಚುನಾವಣೆಗಳು ಯಾವುದೇ ಬಿಕ್ಕಟ್ಟು ಅಥವಾ ಆಕ್ಷೇಪಣೆಗಳಿಗೆ ಅವಕಾಶ ನೀಡದೆ ನ್ಯಾಯಯುತವಾಗಿ ನಡೆಯುವಂತೆ ನೋಡಿಕೊಳ್ಳುವುದು ಸರ್ಕಾರಿ ನೌಕರರ ಹೊಣೆ ಎಂದು ರಾಜ್ಯಪಾಲ ಧರ್ಮವೀರ ಅವರು ಇಂದು ಇಲ್ಲಿ ಹೇಳಿ, ಎಲ್ಲ ವರ್ಗದ ನೌಕರರು ಪಕ್ಷಾತೀತವಾಗಿ ವರ್ತಿಸಬೇಕೆಂದು ಕರೆ ನೀಡಿದರು.

ನೆಲಮೂಲದ ಅಗಾಧ ಜ್ಞಾನ, ಔಷಧ ಕ್ರಮಗಳನ್ನು ಸಂರಕ್ಷಿಸುವಲ್ಲಿ ಗಂಭೀರ ಪ್ರಯತ್ನಗಳು ನಡೆಯಬೇಕಿದೆ

ತಲೆಗಿಳಿಯಬೇಕಿದೆ ನೆಲಮೂಲದ ಜ್ಞಾನ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಸೂರ್ಯ ಆಗತಾನೆ ಕ್ಷಿತಿಜದಿಂದ ಮೇಲೇರುತ್ತಿದ್ದ. ಭಾನುವಾರದ ಪ್ರಾರ್ಥನೆಗೆ ಚರ್ಚ್‌ಗೆ ತೆರಳುವ ಲಗುಬಗೆಯಲ್ಲಿದ್ದ ನಾಗಾಲ್ಯಾಂಡ್‌ನ ಜುನೆಬೋಟೊ ಜಿಲ್ಲೆಯ ಶಿಯೆಪು ಗ್ರಾಮದ ಜನ ಕೈಯಲ್ಲಿ ಕೊಡೆ ಹಿಡಿದು ನಡೆಯುತ್ತಿದ್ದುದು ಹತ್ತಿರದ ಸಂಶೋಧನಾ ಕೇಂದ್ರದ ವಿದ್ಯಾರ್ಥಿಗಳು ಹಾಗೂ ಪ್ರವಾಸಿಗರಲ್ಲಿ ಅಚ್ಚರಿ ಮೂಡಿಸಿತ್ತು.

'ಹಿತವಾದ ಬಿಸಿಲಿದೆ, ವಾತಾವರಣ ಆಹ್ಲಾದಕರವಾಗಿದೆ, ಇವರೇಕೆ ಛತ್ರಿ ಹಿಡಿದು ಹೊರಟಿದ್ದಾರೆ?' ಎಂಬ ಪ್ರಶ್ನೆಗೆ ಉತ್ತರ ಬಯಸಿದ ವಿದ್ಯಾರ್ಥಿಯೊಬ್ಬ ಹಳ್ಳಿಯ ರೈತ ಅಶಿಲಿ ಅವೋಮಿಯನ್ನು ಕೇಳುತ್ತಿದ್ದಂತೆ ಮಳೆ ಸುರಿಯಲಾರಂಭಿಸಿತು. 'ನನ್ನ ಕೊಡೆಯ ಕೆಳಗೆ ಬನ್ನಿ' ಎಂದು ಕೊಡೆ ಚಾಚಿದ ಅಶಿಲಿ, 'ನೀವೆಲ್ಲ ಟೀವಿ, ಪೇಪರ್, ರೇಡಿಯೊ ಮಾಹಿತಿ ಆಧರಿಸಿ ಪ್ರಕೃತಿಯಲ್ಲಿ ಏನೇನಾಗುತ್ತಿದೆ ಎಂದು ತಿಳಿದುಕೊಳ್ಳುತ್ತೀರಿ. ನಮಗೆ ಪರಿಸರವೇ ಸಿಗ್ನಲ್ ಕೊಡುತ್ತದೆ. ಇವತ್ತು ಮಳೆ ಬರುತ್ತದೆ ಎಂದು ನಮಗೆ ಬೆಳಗ್ಗೆಯೇ ಗೊತ್ತಾಗಿತ್ತು' ಎಂದ.

ಅವನ ಮಾತಿನಿಂದ ಮತ್ತಷ್ಟು ಅಚ್ಚರಿಗೆ ಬಿದ್ದ ವಿದ್ಯಾರ್ಥಿ, 'ಅದ್ಯಾವ ಸಿಗ್ನಲ್? ಎಲ್ಲಿಂದ ಬಂತು?' ಎಂದು ಮೊಬೈಲ್ ಫೋನ್ ನೋಡತೊಡಗಿದ. ವಿದ್ಯಾರ್ಥಿಯ ಗಮನವನ್ನು ಹಲಸಿನ ಮರದ ಕಡೆಗೆ ಸೆಳೆದ ಅಶಿಲಿ, 'ಅಲ್ಲಿ ನೋಡಿ, ಜೇನುಗೂಡು ಕಾಣ್ತಿದೆಯಾ ನಿಮಗೆ? ಸಾಮಾನ್ಯವಾಗಿ ಬೆಳಗಿನ ಹೊತ್ತು ಜೇನ್ನೊಣಗಳು ಮಕರಂದ ಹುಡುಕಿ ಗೂಡಿನಿಂದ ತೆರಳುತ್ತವೆ. ಇವತ್ತು ಅವು ಅಲ್ಲಿಂದ ಕದಲೇ ಇಲ್ಲ. ಮಳೆ ಬರೋ ಸೂಚನೆ ಇದ್ದರೆ ಮಾತ್ರ ಅವು ಹಾಗೆ ಮಾಡ್ತವೆ. ಅದನ್ನು ನಮ್ಮ ಹಿರಿಯರು ಮತ್ತು ನಾವು ಶತಮಾನಗಳಿಂದ ಗಮನಿಸ್ತಾ ಇದ್ದೇವೆ, ಅದೇ ಸಿಗ್ನಲ್ ನಮಗೆ ಸಿಕ್ಕಿದ್ದು. ಈಗ ಮಳೆ ಬರ್ತಾ ಇದೆಯಲ್ಲ, ಅದಕ್ಕೇ ಕೊಡೆ ಹಿಡಿದುಕೊಂಡು ಚರ್ಚ್‌ಗೆ ಹೋಗ್ತಾ ಇದ್ದೀನಿ, ನಾ ಬರ್ಲಾ?' ಎಂದು ಉತ್ತರಕ್ಕೆ ಕಾಯದೆ ಹೊರಟೇಬಿಟ್ಟ.

ಅರೆ, ಆರು ತಿಂಗಳಿನಿಂದ ಇಲ್ಲಿ ರಿಸರ್ಚ್ ಮಾಡ್ತಾ ಇದ್ದೀನಿ, ಗೊತ್ತೇ ಆಗಲಿಲ್ಲವಲ್ಲ, ಇವರಿಗೆ ಇನ್ನೇನೇನು ಗೊತ್ತಿರಬಹುದು ಎಂದು ಹಲುಬಿದ ವಿದ್ಯಾರ್ಥಿ, ಅಶಿಲಿಯ ನೆಲಮೂಲದ ಜ್ಞಾನದ ಬಗ್ಗೆ ಪ್ರೊಫೆಸರ್‌ಗೆ ಹೇಳಲೇಬೇಕೆಂದು ಸಂಶೋಧನಾ ಕೇಂದ್ರದ ಕಡೆ ನಡೆದ.

ಹೌದು, ನಾಗಾಲ್ಯಾಂಡ್‌ನ 'ಸುಮಿನಾಗ' ಎಂಬ ಬುಡಕಟ್ಟಿನ ಜನ ನಮ್ಮ ಹವಾಮಾನ ತಜ್ಞರಿಗಿಂತ ಹತ್ತು ಹೆಜ್ಜೆ ಮುಂದಿದ್ದಾರೆ. ಅಶಿಲಿ ಹೇಳಿದ್ದು ತಮ್ಮ ಬುಡಕಟ್ಟಿಗೆ ಗೊತ್ತಿರುವ ಅಗಾಧ ತಿಳಿವಳಿಕೆಯ ಒಂದಂಶವನ್ನಷ್ಟೇ. ಇಂತಹುದೇ ನೂರಾರು ನೈಸರ್ಗಿಕ ಕುರುಹುಗಳ ಬಗ್ಗೆ ತಿಳಿವಳಿಕೆ ಇರುವ ನೂರಾರು ಬುಡಕಟ್ಟುಗಳು ದೇಶದ ಮೂಲೆಮೂಲೆಯ ಕಾಡುಗಳಲ್ಲಿವೆ. ಆದರೆ ಅವರ ಜ್ಞಾನ, ಜೀವನಕ್ರಮ ಮತ್ತು ನಡವಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳದ ನಾವು, ನಿಸರ್ಗಸಹಜ ವಿದ್ಯಮಾನಗಳ ಬಗ್ಗೆ ಅವೈಜ್ಞಾನಿಕ ವಿಶ್ಲೇಷಣೆ ನೀಡುತ್ತ ಕಾಲ ಕಳೆಯುತ್ತೇವೆ.

'ಬಿದಿರು ಹೂ ಬಿಟ್ಟಾಗ ಬರ ಬರುತ್ತದೆ' ಎಂಬುದೂ ಅದರಲ್ಲೊಂದು. ವಾಸ್ತವವಾಗಿ ಬಿದಿರು ಹೂವು ಬಿಡುವುದು 60 ವರ್ಷಗಳಿಗೊಮ್ಮೆ. ಆಗ ಬಿದಿರು ಸಾಯುತ್ತಿದೆ ಎಂದರ್ಥ. ದಕ್ಷಿಣ ಭಾರತದಲ್ಲಿ ಬಂಬೂಸ ಆರುಂಡಿನೇಸಿಯ ಮತ್ತು ಡೆಂಡ್ರೊಕೆಲಾಮಸ್ ಸ್ಟ್ರಿಕ್ಟಸ್ ಎಂಬ ಎರಡು ಬಿದಿರಿನ ತಳಿಗಳು ತಮ್ಮ ಜೀವಿತಾವಧಿಯ ಅರವತ್ತು ವರ್ಷ ಪೂರೈಸಿ ಹೂವು ಬಿಟ್ಟು ಅಕ್ಕಿಯನ್ನು ನೆಲಕ್ಕುದುರಿಸಿ ಸಾಯುತ್ತವೆ. ಅವನ್ನು ಭಕ್ಷಿಸಲು ಇಲಿಗಳ ದಂಡೇ ಹರಿದು ಬರುತ್ತದೆ. ಬಿದಿರಕ್ಕಿ ಹೆಚ್ಚಾದಂತೆ, ಅಕ್ಕಿ ತಿನ್ನಲು ಅಗಾಧ ಪ್ರಮಾಣದ ವಂಶ ವೃದ್ಧಿಸಿಕೊಳ್ಳುವ ಇಲಿ-ಹೆಗ್ಗಣಗಳು ಒಂದು ಕಾಳನ್ನೂ ಬಿಡದೆ ಭಕ್ಷಿಸುತ್ತವೆ. ಅಕ್ಕಿ ಖಾಲಿಯಾಗಿ ಬಿದಿರು ಒಣಗಿದ ಕಸಬರಿಗೆಯಂತಾಗುತ್ತದೆ. ಲಕ್ಷಾಂತರ ಇಲಿಗಳಿಗೆ ತಿನ್ನಲು ಆಹಾರ ಬೇಡವೇ? ಆಗ ಆಹಾರ ಸಿಗದ ಇಲಿಗಳು ಕಾಡಿನ ಬದಿಯ ಹೊಲಗಳಿಗೆ ನುಗ್ಗಿ ಬೆಳೆದು ನಿಂತ ಬೆಳೆಗೆ ಮುಗಿಬೀಳುತ್ತವೆ. ರೈತನ ಬೆಳೆ ಖಾಲಿಯಾಗಿ ಧಾನ್ಯದ ಇಳುವರಿ ಕಡಿಮೆಯಾಗಿ ನಾಡಿನಲ್ಲಿ ಆಹಾರ ಕ್ಷಾಮ ತಲೆದೋರುತ್ತದೆ. ಇದು ವೈಜ್ಞಾನಿಕ ಆಧಾರವಿರುವ ನೈಸರ್ಗಿಕ ವಿದ್ಯಮಾನ. ಇದನ್ನೇ ತಪ್ಪಾಗಿ ಅರ್ಥೈಸುವ ಬಹುಸಂಖ್ಯಾತರು ನಾಡಿನಾದ್ಯಂತ ಇದ್ದಾರೆ.

ರೈತರಿಗೆ, ಬುಡಕಟ್ಟು ಜನರಿಗೆ ಕ್ಲೈಮೇಟ್ ಸೈಂಟಿಸ್ಟ್‌ಗಳಿಗಿಂತ ಹೆಚ್ಚು ಜ್ಞಾನವಿದೆ ಎನ್ನುವ ಶಿಲ್ಲಾಂಗ್‌ನ ಮಾರ್ಟಿನ್ ಲೂಥರ್ ಕ್ರಿಶ್ಚಿಯನ್ ಯೂನಿವರ್ಸಿಟಿಯ ಸಂಶೋಧನಾ ವಿದ್ಯಾರ್ಥಿಗಳು ಬುಡಕಟ್ಟು ಜನರನ್ನು ಮಾತನಾಡಿಸಿ, ಅವರೊಟ್ಟಿಗೆ ಕಾಡು ಮೇಡು ಅಲೆದು ಸುಮಾರು 79 ನೈಸರ್ಗಿಕ ಸೂಚಕಗಳನ್ನು ಪಟ್ಟಿ ಮಾಡಿರುವುದಾಗಿ ಹೇಳಿದ್ದಾರೆ.

ಫೈಲೋಸ್ಟಾಚಿಸ್ ಎಂಬ ಬಿದಿರಿನ ಸಸ್ಯವು ತಾಯಿ ಗಿಡಕ್ಕಿಂತ ಎತ್ತರ ಬೆಳೆದಾಗ ಮಾನ್ಸೂನ್ ಮಳೆ ಮಾರುತದಲ್ಲಿ ಹೆಚ್ಚಿನ ಮಳೆ ಬರುತ್ತದೆ, ಚಿಕ್ಕದಿದ್ದರೆ ಮಳೆ ಕುಂಠಿತವಾಗುತ್ತದೆ ಎಂಬುದು ಹಲವು ಸಲ ಖುಜುವಾತಾಗಿದೆ ಎನ್ನುವ ಪಿಎಚ್.ಡಿ ವಿದ್ಯಾರ್ಥಿಯೊಬ್ಬ, 2020ರಲ್ಲಿ ನಾಗಾಲ್ಯಾಂಡ್‌ನಲ್ಲಿ ಶಕ್ತಿಶಾಲಿ ಭೂಕಂಪ ಸಂಭವಿಸುವಾಗ ನೆಲದ ಬಿಲಗಳಿಂದ ಅಸಂಖ್ಯ ಇಲಿ-ಹೆಗ್ಗಣಗಳು ಹೊರಬಂದಿದ್ದವು ಮತ್ತು ನಾಯಿಗಳು ನಿರಂತರವಾಗಿ ಬೊಗಳಿದ್ದವು ಎಂದು ವರದಿ ದಾಖಲಿಸಿದ್ದಾರೆ. ಸ್ಥಳೀಯ ಹೊಂಡ- ನದಿಗಳಲ್ಲಿ ಸಿಗುವ ಕ್ಯಾಟ್‌ಫಿಶ್‌ಗಳ (ಸಿಲುರಿಫಾರ್ಮ್ಸ್) ಹೊಟ್ಟೆಯ ಚರ್ಮ ದಪ್ಪವಾಗಿ ಬೆಳೆದಿದ್ದರೆ ಆ ವರ್ಷ ಚಳಿ ಹೆಚ್ಚು, ದಟ್ಟ ಬಿಸಿಲಿನ ದಿನ ಹೂಲಾಕ್ ಗಿಬ್ಬನ್ (ಒಂದು ಬಗೆಯ ಮಂಗ) ಕರ್ಕಶವಾಗಿ ಕೂಗಿದ ಒಂದೆರಡು ಗಂಟೆಗಳಲ್ಲಿ ಭಾರೀ ಮಳೆ ಬರುತ್ತದೆ, ಕೊಳದ ಮೀನುಗಳು ನೀರಿನ ಮೇಲೆ ತೇಲಲು ಶುರು ಮಾಡಿದರೆ ಆ ದಿನ ಮಳೆ ಬರುತ್ತದೆ, ಅಡುಗೆ ಒಲೆ ಹಚ್ಚಿದಾಗ ಹೊಗೆ ನೇರವಾಗಿ ಮೇಲೆದ್ದರೆ ಆ ದಿನ ವಾತಾವರಣ ತಿಳಿಯಾಗಿರುತ್ತದೆ, ಕೆಂಪು ಇರುವೆಗಳು ತಮ್ಮ ಗೂಡನ್ನು ಮೇಲ್ಮುಖವಾಗಿ ತೆರೆದಿಟ್ಟರೆ ಇಡೀ ದಿನ ಬಿಸಿಲಿರುತ್ತದೆ, ಪೂರ್ವ ಏಷ್ಯಾ ಭಾಗಗಳಿಂದ ಕುಂಡೆಕುಸ್ಕ (Wag Tail) ಹಕ್ಕಿಗಳು ವಲಸೆ ಬಂದರೆ ದೀರ್ಘ ಚಳಿಗಾಲವಿರುತ್ತದೆ, ಹೀಗೆ ನಿಸರ್ಗದ ಹತ್ತು ಹಲವು ಸೂಚನೆಗಳನ್ನು ಗ್ರಹಿಸುವ ಬುಡಕಟ್ಟು ಜನ ಆಯಾ ಪರಿಸ್ಥಿತಿಗೆ ತಕ್ಕಂತೆ ಜೀವಿಸುವುದನ್ನು ಕಲಿತಿದ್ದಾರೆ.

ಆದರೆ ಈ ನೆಲಮೂಲದ ಜ್ಞಾನವನ್ನು ಒಂದೆಡೆ ಸುರಕ್ಷಿತವಾಗಿಡುವ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ ಎಂಬುದು ಸಂರಕ್ಷಣಾ ತಜ್ಞರ ಅಭಿಪ್ರಾಯ. ಎಲ್ಲೆಲ್ಲಿ ಬುಡಕಟ್ಟುಗಳಿವೆಯೋ ಅಲ್ಲೆಲ್ಲ ಅಗಾಧ ಜ್ಞಾನವಿದೆ, ಔಷಧ ಕ್ರಮಗಳಿವೆ. ಇಪ್ಪತ್ತು ವರ್ಷಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಜನತಾ ಜೀವವೈವಿಧ್ಯ ದಾಖಲಾತಿ ನಡೆದು, ಅದುವರೆಗೂ ಗೊತ್ತೇ ಇರದಿದ್ದ ಅಪರೂಪದ ಮಾಹಿತಿ ಸಿಕ್ಕಿತ್ತು. ಬೇಟೆಯಿಂದಾಗಿ ಗಿಬ್ಬನ್‌ಗಳ ಸಂಖ್ಯೆ ಕ್ಷೀಣಿಸುತ್ತಿದೆ, ಹಲವು ಕಾಯಿಲೆಗಳಿಗೆ ಗಿಡಮೂಲಿಕೆ ಔಷಧಿ ಗೊತ್ತಿರುವ ಹಿರಿಯರು ವಯೋಸಹಜವಾಗಿ ಸಾವನ್ನಪ್ಪುತ್ತಿದ್ದಾರೆ. ಅವರ ಸಾಂಪ್ರದಾಯಿಕ ತಿಳಿವಳಿಕೆಯನ್ನು ದಾಖಲು ಮಾಡಲೇಬೇಕಿದೆ. ಈಗ ಬರುತ್ತಿರುವ ಅನಿಯಂತ್ರಿತ ಅಕಾಲಿಕ ಮಳೆ, ಮಿತಿಮೀರಿದ ಚಳಿ, ಬರ, ನೈಸರ್ಗಿಕ ವಿಕೋಪಗಳ ಮುನ್ಸೂಚನೆ ಅರಿಯಲು, ನೆಲಮೂಲದ ಜ್ಞಾನ ಹೊಂದಿರುವ ಸ್ಥಳೀಯರ ನೆರವು ಪಡೆಯಬೇಕು.

ಬೆಂಗಳೂರಿನ ಟ್ರಾನ್ಸ್ ಡಿಸಿಪ್ಲಿನರಿ ಹೆಲ್ತ್ ಸೈನ್ಸಸ್ ಆ್ಯಂಡ್ ಟೆಕ್ನಾಲಜಿ ವಿಶ್ವವಿದ್ಯಾಲಯವು ಪಾರಂಪರಿಕ ಜ್ಞಾನ, ಶಿಕ್ಷಣದಲ್ಲಿ ಆಯುರ್ವೇದ ವೈದ್ಯ ಪದ್ಧತಿಯ ಚಿಕಿತ್ಸೆ, ಪ್ರಾಮುಖ್ಯತೆಗಳ ಬಗ್ಗೆ ವಿಶೇಷ ಕೆಲಸ ಮಾಡುತ್ತಿದೆ. ಕೌನ್ಸಿಲ್ ಆಫ್ ಸೈಂಟಿಫಿಕ್ ಆ್ಯಂಡ್ ಇಂಡಸ್ಟ್ರಿಯಲ್ ರಿಸರ್ಚ್‌ನ (ಸಿಎಸ್ಐಆರ್) ಟ್ರೆಡಿಶನಲ್ ನಾಲೆಡ್ಜ್ ಡಿಜಿಟಲ್ ಲೈಬ್ರರಿಯು (ಟಿಕೆಡಿಎಲ್) ನಮ್ಮ ದೇಶದ ಪಾರಂಪರಿಕ ಜ್ಞಾನವನ್ನು ಡಿಜಿಟೈಸ್ ಮಾಡಿಡುವಲ್ಲಿ ಪ್ರಮುಖ ಕೆಲಸ ಮಾಡುತ್ತಿದೆ.

ಚುರುಮುರಿ

ಮಾತು ವಾಪ್ಸಿ!

• ಆನಂದ

'ಘರ್ ವಾಪ್ಸಿ ತರಹ ಮಾತು ವಾಪ್ಸಿ ಕಾರ್ಯಕ್ರಮ ಏನಾದರೂ ಇದೆಯೇ?' ಎಂದು ಚಂದ್ರಿ ಕೇಳಿದ.

'ಘರ್ ವಾಪ್ಸಿ ಚಾಲ್ತಿಯಲ್ಲಿದೆ. ಮಾತು ವಾಪ್ಸಿ? ಅದೇನಪಾ, ಏನೇನೋ ಹೇಳೋದು. ಅದು ಕಾಂಟ್ರವರ್ಸಿ ಆಗುತ್ತೆ. ಆಗ... ವಿಷಾದ ವ್ಯಕ್ತಪಡಿಸೋದು. ಅದೂ ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಎಂಬ ಕಂಡೀಷನ್ ಮೇಲೆ. ಅದೇ ತಾನೆ?'

'ಅದಲ್ಲಪಾ...'

'ಮತ್ತೆ ಕ್ಷಮೆ ಕೇಳೋದು. ಒಂದು ಮಾಮೂಲಿ ಕ್ಷಮೆ, ಇನ್ನೊಂದು ಬೇಷರತ್ ಕ್ಷಮೆ. ಅದು ವಾಪ್ಸಿ ಹೇಗಾಗುತ್ತೆ?'

'ವಿಷಾದಾನೂ ಅಲ್ಲ, ಕ್ಷಮೆಗಳೂ ಅಲ್ಲ. ಹೇಳಿದ್ದ ಮಾತನ್ನು ವಾಪಸ್ ಪಡೆಯೋದು. ಅದೇ ಮಾತು ವಾಪ್ಸಿ'.

'ಹೇಗೆ ಸಾಧ್ಯ? ಮಾತು ವಾಪಸ್ ಪಡೆಯೋದು ಅಂದರೆ?'

'ಯಾಕೆ ಸಾಧ್ಯವಿಲ್ಲ? ಮೊನ್ನೆ ತೇಜಸ್ವಿ ಅವರು ಏನೋ ಹೇಳಿ, ಅದರ ಬಗ್ಗೆ ವಿವಾದ ಹುಟ್ಟಿ(ಸಿ)ದಾಗ, ಅವರು 'ನಾನು ಆ ಮಾತನ್ನು ವಾಪಸ್ ಪಡೀತೀನಿ' ಎಂದರು. ಅದೇ ಮಾತು ವಾಪ್ಸಿ. ಪ್ರಶಸ್ತಿಗಳನ್ನು ವಾಪಸ್ ಮಾಡೊಲ್ಲವೇ, ಹಾಗೇ ಇದೂ ಅಂತಿಟ್ಕೊ. ಆದರೆ ಮಾತನ್ನು ಹೇಗೆ ಹಿಂತಿರುಗಿಸೋದು?'

'ಆ ಮಾತನ್ನು ನಾನು ವಾಪಸ್ ಪಡೆದಿದ್ದೇನೆ ಎಂದು ಒಂದು ಹೇಳಿಕೆ ನೀಡುವುದು'.

'ಆಗ ಆಡಿದ್ದ ಮಾತು ಕ್ಯಾನ್ಸಲ್ ಆಗುತ್ತೇನು?'

'ಆಯಿತು ಅಂತ ಭಾವಿಸಬೇಕು. ಬೇರೆ ಇನ್ನೇನು ದಾರಿ ಇದೆ?'

'ಮಾತನ್ನು ಸುಮ್ಮನೆ ವಾಪಸ್ ಪಡೆಯೋದೋ ಅಥವಾ ಬೇಷರತ್ ವಾಪಸ್ ಪಡೆಯೋದೋ? ಬೇಷರತ್ ಕ್ಷಮೆ ಕೇಳೋ ಹಾಗೆ?'

'ಇಟ್ ಡಿಪೆಂಡ್ಸ್'.

'ಹಾಗಿದ್ದರೆ ಈಗೀಗ ಶಾಸಕರ, ಮಂತ್ರಿಗಳ ಮಟ್ಟದಲ್ಲಿ ಕೈಕೈ ಮಿಲಾಯಿಸುವ ಕಾರ್ಯಕ್ರಮ ಶುರುವಾಗಿರುವುದರಿಂದ, ಒಂದು ಏಟು ಬಾರಿಸಿ, ಆಮೇಲೆ ನಾನು ಆ ಏಟನ್ನು ವಾಪಸ್ ಪಡೆದಿದ್ದೇನೆ ಎಂದರೆ ಹೇಗೆ?'

'ಅದು ಶುರುವಾಗಲಿ ನೋಡೋಣ'.

ಸಂಗತ

ಹಲ್ಲಿ: ಏಕೀ ಸಮೂಹ ಸನ್ನಿ?

ಅಪಾಯಕಾರಿ ಅಲ್ಲದ ಈ ಜೀವಿಗಳ ಬಗ್ಗೆ ವಿದ್ಯಾವಂತರಲ್ಲೇ ಮೂಢನಂಬಿಕೆ ಹೆಚ್ಚು!

• ಡಾ. ಮುರಳೀಧರ ಕಿರಣಕೆರೆ

ಹಳ್ಳಿಯ ಒಬ್ಬ ಮಹಿಳೆ ಗಾಬರಿಯಿಂದ ಕರೆ ಮಾಡಿದ್ದಳು. 'ಜಾನುವಾರು ಮುರದ ಡಬ್ರಿಲಿ ಸತ್ತ ಹಲ್ಲಿ ಸಿಕ್ತು ಸ್ಸಾರ್. ದನ, ಕರುಗೆಲ್ಲಾ ತಿನ್ನಕ್ಕೆ ಕೊಟ್ಟಾಗಿತ್ತು. ಏನಾದ್ರೂ ತೊಂದ್ರೆ ಆಗುತ್ತೇನೋ ಅಂತ ತುಂಬಾ ಹೆದ್ರಿಕೆ ಆಗ್ತಿದೆ. ಇಂಜಕ್ಷನ್ ಮಾಡ್ತೀರಾ ಅಂತ ಕೇಳಕ್ಕೆ ಫೋನು ಮಾಡ್ದೆ' ತುಸು ನಡುಕದಿಂದಲೇ ವಿಷಯ ಅರುಹಿದ್ದಳು.

'ಇಲ್ಲಮ್ಮ ಏನೂ ಆಗಲ್ಲ. ಹಲ್ಲಿ ವಿಷ ಅಲ್ಲ. ಮಂಡೆ ಕೆಡಿಸ್ಕೋಬೇಡಿ' ಎನ್ನುತ್ತಾ ಧೈರ್ಯ ಹೇಳಿದರೂ ಆಕೆಗೆ ನಂಬಿಕೆ ಬಂದಿರಲಿಲ್ಲ.

'ಆಹಾರಕ್ಕೆ ಹಲ್ಲಿ ಬಿದ್ರೆ ಕೆಟ್ಟ ವಿಷ ಆಗುತ್ತೆ ಅಂತಾರೆ ಎಲ್ರೂ. ಒಂದು ದನ ಬಾಣಂತಿ ಬೇರೆ. ನಾವೂ ಹಾಲು ಕುಡಿತೀವಿ. ಅದಕ್ಕೆ ಒಂಥರಾ ಹೆದ್ರಿಕೆ'. ಹಲ್ಲಿ ವಿಷವೆಂದು ಮತ್ತೆ ಮತ್ತೆ ಒತ್ತಿ ಹೇಳುತ್ತಿದ್ದವಳಿಗೆ ಮನವರಿಕೆ ಮಾಡಿಸಲು ನಾನೂ ಹೆಣಗಾಡಬೇಕಾಯಿತು. 'ನಿಮ್ಮನೆ ಬೆಕ್ಕು ಹಲ್ಲಿ ತಿನ್ನಲ್ವಾ? ಅದು ವಿಷಕಾರಿಯಾಗಿದ್ದರೆ ಬೆಕ್ಕಿಗೂ ಅಪಾಯ ಆಗ್ಲೇಬೇಕಿತ್ತಲ್ವಾ? ಇದೆಲ್ಲಾ ತಪ್ಪುಗ್ರಹಿಕೆ ಅಷ್ಟೆ' ಅವಳಿಗೆ ತಿಳಿಸಿ ಹೇಳಲು ನಾನೂ ಬಹಳಷ್ಟು ಸಮಯ ವ್ಯಯಿಸಬೇಕಾಯಿತು.

ಹೌದು, ಹಲ್ಲಿ ವಿಷಪೂರಿತ ಜಂತು ಎಂಬುದೊಂದು ಸಾರ್ವತ್ರಿಕ ನಂಬಿಕೆ. ಅದರಲ್ಲೂ ಆಹಾರ ಪದಾರ್ಥಗಳಿಗೆ ಹಲ್ಲಿ ಬಿದ್ದರೆ ವಿಷ ಎಂಬ ಭಾವನೆಯಂತೂ ವ್ಯಾಪಕವಾಗಿದೆ. ಇದು ಕೇವಲ ಮಿಥ್ಯೆಯಷ್ಟೆ. ಮನೆಯ ಗೋಡೆ, ಮಾಳಿಗೆಯ ಸಂದಿ ಮೂಲೆಗಳಲ್ಲಿ ಹರಿದಾಡುವ ಈ ಪುಟ್ಟ ಜಂತುಗಳು ಖಂಡಿತಾ ವಿಷಕಾರಿಗಳಲ್ಲ. ಸರೀಸೃಪಗಳ ಸಮೂಹಕ್ಕೆ ಸೇರಿದ ಈ ನಿರುಪದ್ರವಿಗಳಿಂದ ಜನ, ಜಾನುವಾರುಗಳಿಗೆ ಯಾವುದೇ ಅಪಾಯವಿಲ್ಲ.

ಅದ್ಯಾಕೊ ಮೊದಲಿನಿಂದಲೂ ಮಾನವರಿಗೆ ಹಲ್ಲಿಗಳ ಬಗ್ಗೆ ಒಂಥರಾ ಅಸಹ್ಯಮಿಶ್ರಿತ ಭಯ. ಚಿಕ್ಕ ಮಕ್ಕಳು ಹೋಗಲಿ ದೊಡ್ಡವರೂ ಇದಕ್ಕೆ ಹೊರತಲ್ಲ. ಹಾವು, ಹರಣೆ, ಹಲ್ಲಿಗಳಂತಹ ಸರೀಸೃಪಗಳ ಕುರಿತಾದ ಈ ಭಯವೇ ಹರ್ಪಿಟೊಫೋಬಿಯ. ಎಂಬಿಎ ಮಾಡುತ್ತಿರುವ ನನ್ನ ಮಗ ಕೋಣೆಯೊಳಗೆ ಅಕಸ್ಮಾತ್ ಹಲ್ಲಿ ಕಂಡರೆ ಹೊರ ಓಡಿಸುವಂತೆ ದುಂಬಾಲು ಬೀಳುವುದೂ ಇದೇ ಫೋಬಿಯಾದಿಂದ!

ಶಾಲಾ ಮಕ್ಕಳ ಬಿಸಿಯೂಟ, ಹಾಸ್ಟೆಲ್ ಅಡುಗೆಯಲ್ಲಿ ಹಲ್ಲಿ ಸಿಗುವುದು, ಮಕ್ಕಳು ಅಸ್ವಸ್ಥಗೊಂಡು ಆಸ್ಪತ್ರೆ ಸೇರುವುದು ಈಗೊಂಥರಾ ಸಾಮಾನ್ಯ ಸಂಗತಿ. ಹಲ್ಲಿ ಬಿದ್ದ ಆಹಾರ ತಿಂದ ಮಕ್ಕಳಲ್ಲಿ ವಾಂತಿ, ಭೇದಿ ಕಾಣಿಸಿಕೊಂಡು ಒಮ್ಮೆಲೇ ನಿತ್ರಾಣರಾದಾಗ ತುರ್ತು ಚಿಕಿತ್ಸೆಯ ಅಗತ್ಯ ಬೀಳುತ್ತದೆ. ಹಾಗಂತ ಈ ಅನಾರೋಗ್ಯಕ್ಕೆ ಹಲ್ಲಿ ನೇರವಾಗಿ ಕಾರಣವಲ್ಲ. ಆದರೆ ಹಲ್ಲಿ ಬಿದ್ದ ಆಹಾರ ತಿಂದ ವಿಷಯ ಗೊತ್ತಾಗುತ್ತಿದ್ದಂತೆ ಸೇವಿಸಿದವರಲ್ಲಿ ಮಾನಸಿಕ ಅಸ್ವಸ್ಥತೆ ಕಾಣಿಸುತ್ತದೆ. ಈ ಜಂತು ಬಗೆಗಿನ ಅಸಹ್ಯ ಭಾವನೆ, ಭಯ, ವಿಷಮಯವೆಂಬ ಭೀತಿಯ ಕಾರಣದಿಂದಲೇ ಹೊಟ್ಟೆ ತೊಳೆಸುವುದು, ವಾಕರಿಕೆ, ವಾಂತಿ, ಭೇದಿಯಾಗುವುದು. ಇದು ಒಮ್ಮೆಲೇ ಸಮೂಹ ಸನ್ನಿಯ ರೂಪ ಪಡೆದು ದೊಡ್ಡ ಸಂಖ್ಯೆಯ ಮಕ್ಕಳು ಪೀಡಿತರಾಗುವರು. ಒಂದು ವೇಳೆ ಆಹಾರಕ್ಕೆ ಹಲ್ಲಿ ಬಿದ್ದದ್ದು ಗೊತ್ತಾಗದಿದ್ದರೆ ಇಂತಹ ಲಕ್ಷಣಗಳು ಕಾಣಿಸುವ ಸಂಭಾವ್ಯತೆ ತುಂಬಾ ಕಮ್ಮಿ.

ವಾಸ್ತವವಾಗಿ ಕೆಲವು ವನ್ಯವಾಸಿ ಪ್ರಭೇದಗಳನ್ನು ಹೊರತುಪಡಿಸಿದರೆ ಮಾನವ ವಸತಿ ಪ್ರದೇಶದಲ್ಲಿ ಕಾಣಸಿಗುವ ಹಲ್ಲಿಗಳು ನಿರಪಾಯಕಾರಿ ಜಂತುಗಳು. ಮನೆಯಲ್ಲಿನ ನೊಣ, ಸೊಳ್ಳೆ, ಇರುವೆ, ಜೇಡ, ಜಿರಲೆಗಳನ್ನು ತಿಂದು ಬದುಕುವ ಈ ನಿಶಾಚರಿಗಳ ಕೀಟ ನಿಯಂತ್ರಣದಲ್ಲಿನ ಕೊಡುಗೆ ದೊಡ್ಡದು. ಹಲ್ಲಿ ವಿಷಕಾರಿಯಲ್ಲದಿದ್ದರೂ ಅದರ ದೇಹದಲ್ಲಿನ ರೋಗಾಣುಗಳ ಸಂಪರ್ಕದಿಂದ ನಂಜಾಗಬಹುದು. ಹಲ್ಲಿಗಳ ಶರೀರದ ಸಾಮಾನ್ಯ ವಾಸಿಗಳಾದ ಸಾಲ್ಮೊನೆಲ್ಲಾ, ಇ-ಕೋಲೈಯಂತಹ ಬ್ಯಾಕ್ಟೀರಿಯಾಗಳು ಮಾನವನ ದೇಹ ಸೇರಿದಾಗ ಟೈಫಾಯಿಡ್‌ನಂತಹ ಗಂಭೀರ ಕಾಯಿಲೆಗಳಿಗೆ ಕಾರಣವಾಗಬಹುದು. ಆದರೆ ಬಿಸಿ ಆಹಾರದಲ್ಲಿ ರೋಗಾಣುಗಳು ನಾಶವಾಗುವ ಸಂಭವವೇ ಜಾಸ್ತಿ.

ಹಲ್ಲಿಯ ಹಿಕ್ಕೆಯಲ್ಲಿನ ಯೂರಿಕ್ ಆಮ್ಲದ ಹರಳು, ರೋಗಾಣುಗಳು, ತಿನ್ನುವ ಆಹಾರ, ಹಾಲು, ಕುಡಿಯುವ ನೀರಿಗೆ ಸೇರಿ ಕಲುಷಿತಗೊಳಿಸಿದಾಗಲೂ ಅನಾರೋಗ್ಯ ಉಂಟಾಗಬಹುದು. ಹಾಗಾಗಿ ಸ್ವಚ್ಛತೆಯ ಜೊತೆಯಲ್ಲಿ ಆಹಾರ ಪದಾರ್ಥಗಳನ್ನು ಮುಚ್ಚಿಡುವುದು, ಹಲ್ಲಿ ಮೈಮೇಲೆ ಬಿದ್ದರೆ ಆ ಜಾಗವನ್ನು ಚೆನ್ನಾಗಿ ತೊಳೆದುಕೊಳ್ಳುವುದು, ಅಕಸ್ಮಾತ್ ಕಚ್ಚಿದರೆ ಸೂಕ್ತ ಮದ್ದು ತೆಗೆದುಕೊಳ್ಳುವುದು ಖಂಡಿತಾ ಅಗತ್ಯ.

ಹಲ್ಲಿಯ ಬಗ್ಗೆ ಎಷ್ಟೇ ಅಸಹ್ಯ ಭಾವನೆಯಿದ್ದರೂ ನಮ್ಮ ದೇಶ ಸೇರಿದಂತೆ ವಿಶ್ವದ ಹಲವೆಡೆ ಇದು ದೇವರ ಅವತಾರ, ವಾಹನವೆಂಬ ನಂಬಿಕೆಯಿಂದ ಪೂಜೆಯೂ ಸಲ್ಲುತ್ತದೆ! ಹಲ್ಲಿ ಲೊಚಗುಟ್ಟುವ ದಿಕ್ಕು, ಸಮಯ, ಮೈಮೇಲೆ ಬಿದ್ದರೆ ಅದು ಯಾವ ಭಾಗ, ಯಾವ ವೇಳೆ ಎಂಬುದರ ಆಧಾರದ ಮೇಲೆ ಶುಭಾಶುಭಗಳನ್ನು ಹೇಳುವ ಹಲ್ಲಿ ಪಂಚಾಂಗ (ಗೌಳಿಶಾಸ್ತ್ರ) ನಂಬುವವರಲ್ಲಿ ವಿದ್ಯಾವಂತರ ಸಂಖ್ಯೆಯೇ ದೊಡ್ಡದು!

ಈ ಜೀವಿಗಳ ಕುರಿತಾದ ಜನರ ಅಜ್ಞಾನ, ತಪ್ಪು ನಂಬಿಕೆಯನ್ನೇ ಬಂಡವಾಳವಾಗಿಸಿಕೊಂಡು ಅಪಶಕುನ, ದೋಷ ಪರಿಹಾರದ ನೆಪದಲ್ಲಿ ಸುಲಿಗೆ ಮಾಡುವ, ಮತ್ತಷ್ಟು ಮೌಢ್ಯ ಬಿತ್ತುವ ಕಾರ್ಯ ವ್ಯವಸ್ಥಿತವಾಗಿ ನಡೆಯುತ್ತಿರುವುದು ನಿಜಕ್ಕೂ ಆಘಾತಕಾರಿ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ, ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಪ್ರಾದೇಶಿಕ ಅಸಮಾನತೆ ಬಗ್ಗೆ ಅಸೀಮ ನಿರ್ಲಕ್ಷ್ಯ!

ನೀತಿ ಆಯೋಗದ 'ಬಹು ಆಯಾಮದ ಬಡತನ ಸೂಚ್ಯಂಕ ವರದಿ'ಯು (ಪ್ರ.ವಾ., ಜ. 5) ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ, ಮುಖ್ಯವಾಗಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಬಹು ಆಯಾಮದ ಬಡತನ ಅಧಿಕ ಮಟ್ಟದಲ್ಲಿರುವುದನ್ನು ಸಚಿತ್ರವಾಗಿ ದಾಖಲಿಸಿದೆ. 'ಪ್ರಾದೇಶಿಕ ಅಸಮಾನತೆ' ಕುರಿತ ತಾರತಮ್ಯದ ಬಗ್ಗೆಯೂ ವರದಿಯು ಬೊಟ್ಟು ಮಾಡಿ ತೋರಿಸಿದೆ. ಇದರ ಜೊತೆಗೆ 'ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ– 5'ರಲ್ಲಿ (2019- 20) ಮಕ್ಕಳು ಮತ್ತು ಮಹಿಳೆಯರಲ್ಲಿ ಅನೀಮಿಯ (ರಕ್ತಹೀನತೆ/ಅಪೌಷ್ಟಿಕತೆ) ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಅತ್ಯಧಿಕ ಮಟ್ಟದಲ್ಲಿರುವುದನ್ನು ಗಮನಿಸಬೇಕಾಗಿದೆ.

ಬೆಳಗಾವಿಯಲ್ಲಿ ಇತ್ತೀಚೆಗೆ ನಡೆದ ವಿಧಾನಮಂಡಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವಾಗ, ಮಕ್ಕಳು ಮತ್ತು ಮಹಿಳೆಯರಲ್ಲಿನ ತೀವ್ರ ಪ್ರಮಾಣದ ಅನೀಮಿಯ ಮತ್ತು ಅತ್ಯಧಿಕ ಮಟ್ಟದಲ್ಲಿರುವ ಬಹುಆಯಾಮದ ಬಡತನದ ಬಗ್ಗೆ ಸಂಬಂಧಿಸಿದ ಶಾಸಕರು ಮತ್ತು ಮಂತ್ರಿಗಳು ಚಕಾರವೆತ್ತಿಲ್ಲ. ಇದನ್ನು ಚಳವಳಿಯ ಮೂಲಕವೇ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೇನೋ! ಈಗಲಾದರೂ ಸರ್ಕಾರವು ಕಣ್ಣು ತೆರೆದು ಇಂತಹ ಬಹುಜನರ- ಬಹುಆಯಾಮದ ದುಃಸ್ಥಿತಿಯ ಬಗ್ಗೆ ಕ್ರಮ ತೆಗೆದುಕೊಳ್ಳುವ ಪ್ರಯತ್ನ ಮಾಡಲಿ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಬೇಕು ಮಹಿಳಾ ಪ್ರಾತಿನಿಧ್ಯ

ಮಹಿಳೆಯ ವಿವಾಹದ ಕನಿಷ್ಠ ವಯಸ್ಸನ್ನು 18ರಿಂದ 21ಕ್ಕೆ ಹೆಚ್ಚಿಸುವ ಉದ್ದೇಶದ ಮಸೂದೆ ಪರಿಶೀಲಿಸುವ ಸಂಸದೀಯ ಸ್ಥಾಯಿ ಸಮಿತಿಯಲ್ಲಿ ಒಟ್ಟು 31 ಸದಸ್ಯರು ಇದ್ದು, ಇವರಲ್ಲಿ ರಾಜ್ಯಸಭೆಯ ಸದಸ್ಯರಾದ ಸುಶ್ಮಿತಾ ದೇವ್ ಏಕೈಕ ಮಹಿಳಾ ಪ್ರತಿನಿಧಿಯಾಗಿ ಇರುವುದು ಶೋಚನೀಯ. ಮಹಿಳೆಯರಿಗೆ ಸಂಬಂಧಿಸಿದ ಈ ಮಸೂದೆಯನ್ನು ಪರಿಶೀಲಿಸಿ ನಿಷ್ಪಕ್ಷಪಾತವಾದ ನಿರ್ಧಾರ ತೆಗೆದುಕೊಳ್ಳಲು ಅನುವಾಗುವಂತೆ ಸಮಿತಿಯಲ್ಲಿ ಮಹಿಳೆಯರಿಗೆ ಅರ್ಧದಷ್ಟು ಸಂಖ್ಯೆಯ ಪ್ರಾತಿನಿಧ್ಯ ನೀಡಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಗೂಗೆ– ಕಾಗೆ

'ರೈತಸ್ನೇಹಿ ನಿಶಾಚರಿ:
ಮಹತ್ವ ಅರಿಯಿರಿ (ಸಂಗತ, ಡಿ. 31).
ಗರುಡನಿಗೊಂದು ಕಾಲ;
ಗೂಬೆಗೊಂದು ಕಾಲ!
ಯಾರನ್ನೂ ಇನ್ನು ಗೂಬೆ ಎಂದು
ನಿಂದಿಸಲಾಗದು.
ಅಂದಹಾಗೆ, 'ಗೂಬೆ'ಯೊ
'ಗೂಗೆ'ಯೊ? ಇರಲಿ.
ಕಾಗೆಗುಂಟು ಬಸವಣ್ಣನ
ಗೌರವ!
(ಪರಮಪಾಪಿ ಮಾನವ)

ಸಿ.ಪಿ.ಕೆ., ಮೈಸೂರು

ಕಾಣುತ್ತಿಲ್ಲ ಶುದ್ಧವಾದ ಭಕ್ತಿಶ್ರದ್ಧೆ

'ದೇವಾಲಯಗಳಿಗೆ ಸ್ವಾತಂತ್ರ್ಯ ಬೇಕೇ? ಬೇಡವೇ?' ಎಂಬ ಕುರಿತ ಸಂವಾದದಲ್ಲಿ (ಪ್ರ.ವಾ., ಜ. 4) ಪಾಲ್ಗೊಂಡಿದ್ದವರೆಲ್ಲರ ವಾದಗಳಲ್ಲೂ ಹಣ ಬಳಕೆಯ ಬಗ್ಗೆ ಚರ್ಚೆ ನಡೆದಿದೆ. ಅಂದರೆ, ಅಷ್ಟರಮಟ್ಟಿಗೆ ನಮ್ಮ ದೇವಾಲಯಗಳು ಕೂಡ ಭಕ್ತಿಕೇಂದ್ರಿತವಾಗದೆ ಹಣಕೇಂದ್ರಿತ ಆಗುತ್ತಿರುವುದು ಸ್ಪಷ್ಟ. ನನಗೆ ತಕ್ಷಣ ನೆನಪಾದದ್ದು, ನಮ್ಮೂರಿನ ದಲಿತರ ದೇವಾಲಯಗಳು ಹಾಗೂ ಹೊಲಗದ್ದೆಗಳಲ್ಲಿ ಅಜ್ಞಾತವಾಗಿ ಉಳಿದಿರುವ ದೇವಾಲಯಗಳು. ಅಲ್ಲೆಲ್ಲ ಯಾವ ಹಣಕಾಸಿನ ವಹಿವಾಟೂ ಇಲ್ಲದೆ ಶುದ್ಧವಾದ ಭಕ್ತಿಶ್ರದ್ಧೆಯನ್ನು ಕಾಣಬಹುದು. ಅಷ್ಟಕ್ಕೂ ಅಲ್ಲಮಪ್ರಭುವಿನ 'ಭಕ್ತಿ ಎಂಬುದು ತೋರಿ ಉಂಬ ಲಾಭ' ಎಂಬ ವಚನೋಕ್ತಿ ಏನನ್ನು ಹೇಳುತ್ತದೆ? ಯೋಚಿಸಬೇಕಿದೆ!

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಲಾಕ್‌ಡೌನ್ ಕೊನೆಯ ಆಯ್ಕೆಯಾಗಲಿ

'ಹೋದ್ಯಾ ಪಿಶಾಚಿ ಅಂದರೆ ಬಂದೆ ಗವಾಕ್ಷೀಲಿ' ಎನ್ನುವಂತೆ ಕೋವಿಡ್– 19 ಸಾಂಕ್ರಾಮಿಕ ರೋಗದಿಂದ ಹೊರಬಂದು ಚೇತರಿಕೆ ಕಾಣುತ್ತಿದ್ದೇವೆ ಎನ್ನುವಷ್ಟರಲ್ಲಿಯೇ ದೇಶದ ಎಲ್ಲೆಡೆ ಕೊರೊನಾ ಪ್ರಕರಣಗಳು ಹೆಚ್ಚುತ್ತಿವೆ. ಮೊದಲ ಅಲೆಯ ಸಂದರ್ಭದಲ್ಲಿ ದೇಶದಲ್ಲಿ ಹೇರಿದ ಲಾಕ್‌ಡೌನ್‌ನಿಂದ ಜನಸಾಮಾನ್ಯರು ಅದರಲ್ಲೂ ಬಡವರು, ವಲಸೆ ಕಾರ್ಮಿಕರು, ದಿನಗೂಲಿ ನೌಕರರು, ವಿದ್ಯಾರ್ಥಿಗಳ ಸ್ಥಿತಿ ಶೋಚನೀಯವಾಗಿತ್ತು. ನಿರುದ್ಯೋಗ, ಬಡತನ, ಹಸಿವು, ಮಾನಸಿಕ ಹಿಂಸೆಯನ್ನು ಲಾಕ್‌ಡೌನ್ ಸೃಷ್ಟಿಸಿತು. ಹೀಗಾಗಿ, ಲಾಕ್‌ಡೌನ್ ಸರ್ಕಾರದ ಕೊನೆಯ ಆಯ್ಕೆಯಾಗಲಿ.

ನಿರ್ಮಲಾ ದೇವಾಡಿಗ, ಮುರ್ಡೇಶ್ವರ

ಹಾಲಿಗಿಲ್ಲದ ವಿರೋಧ ಮೊಟ್ಟೆಗೇಕೆ?

ಹಸುವಿನ ಹಾಲು ಪ್ರಾಣಿಜನ್ಯ ಆಹಾರವಾದರೂ ಅದು ಪವಿತ್ರವೆಂದೂ ಒಳ್ಳೆಯ ಆಹಾರವೆಂದೂ ನಮ್ಮ ಹಿಂದೂ ಸಮಾಜದ ಪ್ರಭಾವಿ ಜಾತಿಗಳಿಂದ ಘೋಷಿಸಲ್ಪಟ್ಟು, ಅದೇ ಹಾಲನ್ನೇ ಶಿಶುಗಳಿಂದ ವೃದ್ಧರವರೆಗೂ ಉತ್ತಮವಾದ ಆಹಾರವೆಂದು ಸೇವಿಸುತ್ತಿದ್ದೇವೆ. ಹಸುವಿನಿಂದ ಹಾಲನ್ನು ಪ್ರಾಣಿ ಹಿಂಸೆಯಿಂದಾಗಲೀ ಅಥವಾ ರಕ್ತಪಾತದಿಂದಾಗಲೀ ಮಾಂಸವನ್ನು ಪಡೆದಂತೆ ಪಡೆಯುತ್ತಿಲ್ಲ. ಹಸುವಿಗೆ ಒಳ್ಳೆಯ ಹುಲ್ಲು, ಹಿಂಡಿ, ಬೂಸ ತಿನ್ನಿಸಿ, ಅದನ್ನು ತೃಪ್ತಿಪಡಿಸಿ ಹಾಲನ್ನು ಕರೆದುಕೊಳ್ಳುತ್ತೇವೆ. ಅದರಿಂದ ಹಸುವಿಗೆ ಯಾವ ಹಿಂಸೆಯೂ ಆಗುವುದಿಲ್ಲವೆಂಬುದು ಎಲ್ಲರಿಗೂ ಗೊತ್ತು.

ಅದೇ ರೀತಿ ಕೋಳಿಯ ಮೊಟ್ಟೆಯೂ ಪ್ರಾಣಿ(ಪಕ್ಷಿ)ಜನ್ಯ ಆಹಾರ. ಅದನ್ನು ಸಹ ಪ್ರಾಣಿ ಹಿಂಸೆಯಿಂದಾಗಲೀ ರಕ್ತಪಾತದಿಂದಾಗಲೀ ಪಡೆಯುತ್ತಿಲ್ಲ. ಹಿಂಸಾರಹಿತವಾಗಿ ಪಡೆದುಕೊಳ್ಳುತ್ತಿದ್ದೇವೆ. ಹಾಲು ಮತ್ತು ಮೊಟ್ಟೆಯು ಪ್ರಾಣಿ ರಕ್ತದಿಂದ ಉತ್ಪತ್ತಿಯಾಗಿ ನಮಗೆ ದೊರೆಯುತ್ತವೆಯೇ ವಿನಾ ಸಸ್ಯಗಳಿಂದ ಉತ್ಪತ್ತಿಯಾಗಿ ಸಸ್ಯಾಹಾರವಾಗಿಲ್ಲ. ಮೊಟ್ಟೆಯು ಹಾಲಿನಂತೆಯೇ ಸತ್ವವುಳ್ಳ ಪರಿಪೂರ್ಣವಾದ ಆಹಾರ. ರಕ್ತಹೀನತೆಯುಳ್ಳ ಮಕ್ಕಳಿಗೂ ರೋಗಿಗಳಿಗೂ ವೈದ್ಯರು ಮೊಟ್ಟೆಯನ್ನು ಯೋಗ್ಯ ಆಹಾರವೆಂದು ತಿನ್ನಲು ಪ್ರೋತ್ಸಾಹಿಸುತ್ತಾರೆ.

ವೈಜ್ಞಾನಿಕ ಜ್ಞಾನವುಳ್ಳ ಮಂದಿ, ಶಾಲೆಗಳಲ್ಲಿ ಮಕ್ಕಳಿಗೆ ಮೊಟ್ಟೆಯನ್ನು ಕೊಡುವುದರ ಪರವಾಗಿ ವಾದಿಸುತ್ತಿದ್ದಾರೆ. ಆದರೆ, ಸ್ವಾಮೀಜಿಗಳು ಕೆಲವರು ಸರಿಯಾದ ಕಾರಣ ತಿಳಿಸದೆ, ಮಕ್ಕಳಿಗೆ ಮೊಟ್ಟೆಯನ್ನು ಕೊಡಬಾರದೆಂದು ಪಟ್ಟು ಹಿಡಿದಿದ್ದಾರೆ. ಮೊಟ್ಟೆಯನ್ನು ಕೊಡಬಾರದೆಂದು ಹೇಳುವವರಿಗೆ, ಹಸುವಿನ ರಕ್ತದಿಂದ ಉತ್ಪತ್ತಿಯಾಗಿ ಬಂದ ಹಸುವಿನ ಹಾಲನ್ನೂ ಕೊಡಬಾರದೆಂದು ಗಟ್ಟಿಯಾಗಿ ಹೇಳಬೇಕಾಗುತ್ತದೆ.

ಸಿ.ಮುತ್ತುರಾಯಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಿಳೆಯರ ಘನತೆಗೆ ಮಸಿ ಬಳಿಯಲು 'ಬುಲ್ಲಿ ಬಾಯಿ' ಹರಾಜು

ಬುಲ್ಲಿ ಬಾಯಿ, ಮೈಕ್ರೊಸಾಫ್ಟ್ ಕಾರ್ಪೊರೇಷನ್‌ನ ಗಿಟ್‌ಹಬ್ ಪ್ಲಾಟ್‌ಫಾರ್ಮ್‌ನಲ್ಲಿ ಸೃಷ್ಟಿಸಲಾದ ಒಂದು ಅಪ್ಲಿಕೇಷನ್. ಇಲ್ಲಿ ಪ್ರತಿದಿನ ಒಬ್ಬ ಮಹಿಳೆಯ ಚಿತ್ರವನ್ನು ಬಳಸಿಕೊಂಡು ಅವರನ್ನು ಹರಾಜು ಹಾಕಲಾಗತ್ತದೆ. ಹರಾಜಿನಲ್ಲಿ ಆಯ್ಕೆಯಾದ ಮಹಿಳೆಯರ ತಿರುಚಲಾದ ಚಿತ್ರವನ್ನು 'ಬುಲ್ಲಿ ಆಫ್ ದಿ ಡೇ' ಎಂದು ಘೋಷಿಸಲಾಗುತ್ತದೆ. ಹಿಂದಿ ಮಿಶ್ರಿತ ಉರ್ದುವಿನಲ್ಲಿ ಮಹಿಳೆಯನ್ನು ತುಚ್ಛವಾಗಿ ಬೈಯುವ ಪದವಾಗಿ 'ಬುಲ್ಲಿ' ಎಂಬ ಪದ ಬಳಕೆಯಾಗುತ್ತದೆ. ಹೀಗೆ ಒಬ್ಬ ಮಹಿಳೆಯನ್ನು 'ಬುಲ್ಲಿ ಆಫ್ ದಿ ಡೇ' ಎಂದು ಆಯ್ಕೆ ಮಾಡುವ ಮೂಲಕ, ಅವರ ಘನತೆಗೆ ಕುಂದು ತರಲಾಗುತ್ತದೆ. ಮಹಿಳೆಯ ಘನತೆಗೆ ಕುಂದು ತರುವುದೇ ಈ ಚಟುವಟಿಕೆಯ ಹಿಂದಿನ ಪ್ರಧಾನ ಉದ್ದೇಶ.

ಇದೇ ಜನವರಿ 1ರಂದು ಈ ಆ್ಯಪ್ ಸಾರ್ವಜನಿಕರಿಗೆ ಲಭ್ಯವಾಗಿದೆ. ಅದು ಸ್ಥಗಿತವಾಗುವವರೆಗೆ ಸಾವಿರಾರು ಮಂದಿ ಅದನ್ನು ಡೌನ್‌ಲೋಡ್ ಮಾಡಿಕೊಂಡು, ಬಳಸಿದ್ದಾರೆ. ಕೆಲವೇ ದಿನಗಳಲ್ಲಿ ಈ ಅಪ್ಲಿಕೇಷನ್ ಮೂಲಕ ಸಾವಿರಾರು ಮಹಿಳೆಯರನ್ನು ಹರಾಜು ಹಾಕಲಾಗಿದೆ. ಹರಾಜಿನಲ್ಲಿ ಆಯ್ಕೆಯಾದ ಏಳೆಂಟು ಮಹಿಳೆಯರ ಚಿತ್ರಗಳನ್ನು 'ಬುಲ್ಲಿ ಆಫ್ ದಿ ಡೇ' ಎಂದು ಘೋಷಿಸಲಾಗಿದೆ. ಹೀಗೆ ಘೋಷಿಸಲಾದ ಮಹಿಳೆಯರ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿದೆ.

2020ರಲ್ಲಿ ಇದೇ ಗಿಟ್‌ಹಬ್ ಪ್ಲಾಟ್‌ಫಾರ್ಮ್‌ನಲ್ಲಿ ಸೃಷ್ಟಿಸಲಾಗಿದ್ದ 'ಸುಲ್ಲಿ ಡೀಲ್ಸ್' ಎಂಬ ಅಪ್ಲಿಕೇಷನ್ ಮೂಲಕ ಭಾರತ ಸೇರಿದಂತೆ ವಿಶ್ವದ ಹಲವು ದೇಶಗಳ ಗಣ್ಯ ಮಹಿಳೆಯರನ್ನು ಹರಾಜು ಹಾಕಲಾಗುತ್ತಿತ್ತು. ಇದರಲ್ಲಿ ಮುಸ್ಲಿಂ ಮಹಿಳೆಯರನ್ನೇ ಗುರಿ ಮಾಡಿಕೊಳ್ಳಲಾಗಿತ್ತು. 'ಸುಲ್ಲಿ' ಎಂಬ ಪದವೂ, 'ಬುಲ್ಲಿ' ಎಂಬ ಪದದ ಅರ್ಥದಲ್ಲಿಯೇ ಬಳಕೆಯಾಗುತ್ತದೆ. ಈ ಆ್ಯಪ್‌ನ ಬಗ್ಗೆ ದೂರುಗಳು ದಾಖಲಾದ ನಂತರ, ಅದನ್ನು ಸ್ಥಗಿತಗೊಳಿಸುವಂತೆ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯವು ಮೈಕ್ರೊಸಾಫ್ಟ್ ಕಾರ್ಪೊರೇಷನ್‌ಗೆ ಪತ್ರ ಬರೆದಿತ್ತು. ಆನಂತರ ಆ ಅಪ್ಲಿಕೇಷನ್ ಸ್ಥಗಿತವಾಗಿತ್ತು. ಆದರೆ, ಅದರ ಬೆನ್ನಲ್ಲೇ 'ಬುಲ್ಲಿ ಬಾಯಿ' ಎಂಬ ಅಪ್ಲಿಕೇಷನ್ ಅನ್ನು ಸೃಷ್ಟಿಸಲಾಗಿದೆ. ಸುಲ್ಲಿ ಡೀಲ್ಸ್‌ನ ತದ್ರೂಪದಂತೆಯೇ ಬುಲ್ಲಿ ಆ್ಯಪ್ ಇದೆ.

ಪತ್ತೆಯಾಗಿದ್ದು ಹೇಗೆ?

ಮುಸ್ಲಿಂ ಮಹಿಳೆಯರನ್ನು ಗುರಿಯಾಗಿಸಿರುವ 'ಬುಲ್ಲಿ ಬಾಯಿ' ಆ್ಯಪ್ ಬಗ್ಗೆ ಪತ್ರಕರ್ತೆಯೊಬ್ಬರು ಹೊಸ ವರ್ಷದ ಆರಂಭದಲ್ಲಿ ಮೊದಲಿಗೆ ದನಿ ಎತ್ತಿದರು. ಟ್ವೀಟ್ ಮಾಡಿದ್ದ ಅವರು, ತಮ್ಮ ಚಿತ್ರವನ್ನು ಬಳಸಿಕೊಂಡು ಆ್ಯಪ್‌ನಲ್ಲಿ ತಮ್ಮನ್ನು ಮಾರಾಟಕ್ಕೆ ಇಡಲಾಗಿದೆ ಎಂದು ಆರೋಪಿಸಿದ್ದರು. ಕಳೆದ ವಾರ ಅವರು ದೆಹಲಿಯ ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡುವುದರೊಂದಿಗೆ ಈ ಪ್ರಕರಣವು ಬೆಳಕಿಗೆ ಬಂದಿತ್ತು. ಅಪರಿಚಿತ ಜನರ ಗುಂಪು ಈ ಕೆಲಸದಲ್ಲಿ ತೊಡಗಿದ್ದು, ಇದು ಲೈಂಗಿಕ ಕಿರುಕುಳ ಮತ್ತು ಧರ್ಮದ ಆಧಾರದ ಮೇಲೆ ದ್ವೇಷವನ್ನು ಪ್ರಚೋದಿಸುವ ಕೃತ್ಯ ಎಂದು ಆರೋಪಿಸಿದ್ದರು.

'ಇಂತಹ ದ್ವೇಷ ಪ್ರಚೋದಕ ವ್ಯಕ್ತಿಗಳು ಯಾವುದೇ ಶಿಕ್ಷೆಯ ಭಯವಿಲ್ಲದೆ, ಮುಸ್ಲಿಂ ಮಹಿಳೆಯರನ್ನು

ಪ್ರಿಯಾಂಕಾ ಚತುರ್ವೇದಿ

ಗುರಿಯಾಗಿಸಿಕೊಂಡ ನಿರ್ಭೀತ ನಡೆ ನಿಜಕ್ಕೂ ನಿರಾಶಾದಾಯಕ' ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಅವರು ಉಲ್ಲೇಖಿಸಿದ್ದರು. ಟ್ವೀಟ್ ಹಾಗೂ ದೂರು ಆಧರಿಸಿ ದೆಹಲಿ ಪೊಲೀಸರು ಭಾರತೀಯ ದಂಡ ಸಂಹಿತೆಯ 509 ಸೆಕ್ಷನ್ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿದ್ದರು.

ಈ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆಯೇ ಇದು ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನಕ್ಕೆ ಕಾರಣವಾಯಿತು. ಶಿವಸೇನಾ ಸಂಸದೆ ಪ್ರಿಯಾಂಕಾ ಚತುರ್ವೇದಿ ಅವರು ಈ ಬಗ್ಗೆ ಪ್ರಬಲ ದನಿ ಎತ್ತಿದರು. ಇದೇ ಸ್ವರೂಪದ 'ಸುಲ್ಲಿ ಡೀಲ್ಸ್' ಎಂಬ ಆ್ಯಪ್ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಈ ಮೊದಲು ಪದೇ ಪದೇ ಒತ್ತಾಯಿಸಿದ್ದೆ ಎಂದು ತ್ರಿವೇದಿ ನೆನಪಿಸಿದರು. ಮಹಿಳೆಯರನ್ನು ಅತಿರೇಕವಾಗಿ ಚಿತ್ರಿಸುವ ಹಾಗೂ ಕೋಮುವಾದ ಪ್ರಚೋದಿಸುವುದನ್ನೇ ಗುರಿಯಾಗಿಸಿಕೊಂಡಿರುವ ಸುಲ್ಲಿ ಡೀಲ್ಸ್‌ನಂತಹ ವೇದಿಕೆಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಪ್ರಿಯಾಂಕಾ ಆಗ್ರಹಿಸಿದ್ದರು.

ಇಂತಹ ಅತಿರೇಕದ ವರ್ತನೆಗಳನ್ನು ಮುಂದುವರಿಯಲು ಬಿಟ್ಟಿದ್ದು ನಾಚಿಕೆಗೇಡು ಎಂದು ಅವರು ಟ್ವಿಟರ್‌ನಲ್ಲಿ ಖಾರವಾಗಿ ಪ್ರತಿಕ್ರಿಯಿಸಿದರು. 'ಈ ಹಿಂದೆ ಐಟಿ ಸಚಿವರಿಗೆ ದೂರು ನೀಡಿದಾಗ ಆ್ಯಪ್ ಅನ್ನು ಸ್ಥಗಿತಗೊಳಿಸಲಾಗಿತ್ತು. ಆ್ಯಪ್ ಸ್ಥಗಿತಗೊಳಿಸುವುದು ಒಂದು ವಿಧಾನದ ನಿಯಂತ್ರಣ ಕ್ರಮ. ಆದರೆ ಆ್ಯಪ್ ಸೃಷ್ಟಿಕರ್ತರ ವಿರುದ್ಧ ಕಠಿಣ ಕ್ರಮಗಳನ್ನು ಜರುಗಿಸಿದ್ದಿದ್ದರೆ, ಈ ಬಾರಿ ಬುಲ್ಲಿ ಬಾಯಿ ತಲೆ ಎತ್ತುತ್ತಿರಲಿಲ್ಲ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಯಾರ ಕೈವಾಡ?

ಈ ಪ್ರಕರಣದಲ್ಲಿ ಬೆಂಗಳೂರಿನ ಎಂಜಿನಿಯರಿಂಗ್ ವಿದ್ಯಾರ್ಥಿಯನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ. ಆ ವಿದ್ಯಾರ್ಥಿಯು, ಬುಲ್ಲಿ ಬಾಯಿ ಆ್ಯಪ್‌ನ ಬಳಕೆದಾರರಲ್ಲಿ ಒಬ್ಬ ಎಂಬುದು ಪತ್ತೆಯಾಗಿದೆ. ಆದರೆ, ಆ್ಯಪ್‌ನ ಇಡೀ ಚಟುವಟಿಕೆಯನ್ನು ನಿಯಂತ್ರಿಸುತ್ತಿದ್ದ ಆರೋಪ ಎದುರಿಸಿರುವ ಉತ್ತರಾಖಂಡದ ಶ್ವೇತಾ ಸಿಂಗ್ ಎಂಬ 18 ವರ್ಷದ ಯುವತಿಯನ್ನು ಮುಂಬೈ ಪೊಲೀಸರು ಬುಧವಾರವಷ್ಟೇ ಬಂಧಿಸಿದ್ದಾರೆ. ಒಟ್ಟು ಮೂವರನ್ನು ಈ ಪ್ರಕರಣದಲ್ಲಿ ಬಂಧಿಸಲಾಗಿದೆ.

ಬೆಂಗಳೂರಿನ ಎಂಜಿನಿಯರಿಂಗ್ ವಿದ್ಯಾರ್ಥಿ ನೀಡಿದ ಸುಳಿವಿನ ಆಧಾರದಲ್ಲಿ ಶ್ವೇತಾ ಸಿಂಗ್‌ಳನ್ನು ಬಂಧಿಸಲಾಗಿದೆ. ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ಈಕೆ, 2011ರಲ್ಲಿ ಕ್ಯಾನ್ಸರ್‌ನಿಂದ ತನ್ನ ತಾಯಿಯನ್ನು ಕಳೆದುಕೊಂಡಿದ್ದಾಳೆ. ಈಚೆಗೆ ಕೋವಿಡ್‌ಗೆ ಆಕೆಯ ತಂದೆಯೂ ಬಲಿಯಾಗಿದ್ದಾರೆ. ರಾಜ್ಯ ಸರ್ಕಾರ ಪ್ರತಿತಿಂಗಳು ನೀಡುತ್ತಿರುವ ₹3,000 ಮಾಸಾಶನದಲ್ಲಿ ಶ್ವೇತಾ ಸಿಂಗ್ ಮತ್ತು ಆಕೆಯ ಸೋದರಿ ಮತ್ತು ಸೋದರ ಜೀವನ ನಡೆಸುತ್ತಿದ್ದಾರೆ.

ಆಕೆಯ ಈ ಅಸಹಾಯಕತೆಯನ್ನು ಬಳಸಿಕೊಂಡು ಬೇರೆಯವರು ಈ ಕೆಲಸ ಮಾಡಿಸಿದ್ದಾರೆ. ಆ್ಯಪ್‌ನ ಎಲ್ಲಾ ಚಟುವಟಿಕೆಗಳನ್ನು ಶ್ವೇತಾ ಸಿಂಗ್ ನಿರ್ವಹಣೆ ಮಾಡಿದ್ದಾಳೆ. ನೇಪಾಳದ ವ್ಯಕ್ತಿಯೊಬ್ಬನ ನಿರ್ದೇಶನದಂತೆ ಶ್ವೇತಾ ಕೆಲಸ ಮಾಡಿದ್ದಾಳೆ. ಇದಕ್ಕಾಗಿ ಆಕೆ ಆ ವ್ಯಕ್ತಿಯಿಂದ ಹಣ ಪಡೆದಿದ್ದಾಳೆ ಎಂದು ಮುಂಬೈ ಪೊಲೀಸರು ಹೇಳಿದ್ದಾರೆ. ಆದರೆ ನೇಪಾಳದ ವ್ಯಕ್ತಿಯ ಮಾಹಿತಿ ಲಭ್ಯವಾಗಿಲ್ಲ. ಇದರ ಹಿಂದೆ ಬಹುದೊಡ್ಡ ಜಾಲ ಇರುವ ಸಾಧ್ಯತೆ ಇದೆ. ಒಂದು ಸಮುದಾಯದ ಮಹಿಳೆಯರನ್ನೇ ಗುರಿ ಮಾಡಿಕೊಂಡು ಈ ಜಾಲ ಕೆಲಸ ಮಾಡುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ. ತನಿಖೆ ನಡೆಯುತ್ತಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಬಿಬಿಸಿ

'ಪ್ರಭಾವಿ' ಮುಸ್ಲಿಂ ಮಹಿಳೆಯರೇ ಗುರಿ

2022ರ ಹೊಸ ವರ್ಷವು ಮುಸ್ಲಿಂ ಮಹಿಳೆಯರಿಗೆ ಕಹಿ ಆರಂಭ ನೀಡಿದೆ. ಅನುಮತಿ ಪಡೆಯದೇ, ಕೆಲವು ಮಹಿಳೆಯರನ್ನು ಜನವರಿ 1ರಂದು ಆ್ಯಪ್‌ನಲ್ಲಿ ಹರಾಜಿಗೆ ಇಡಲಾಗಿತ್ತು. 2021ರ ಜುಲೈನಲ್ಲಿ ಇಂತಹದ್ದೇ ಸ್ವರೂಪದ ಕಾರ್ಯಾಚರಣೆಯನ್ನು ಸುಲ್ಲಿ ಡೀಲ್ಸ್ ಎಂಬ ಆ್ಯಪ್ ನಡೆಸಿ ಆಕ್ರೋಶಕ್ಕೆ ಕಾರಣವಾಗಿತ್ತು. ಈ ಬಾರಿಯೂ ಬುಲ್ಲಿ ಬಾಯಿನಲ್ಲಿ ಮಹಿಳೆಯರು, ಅದರಲ್ಲೂ ವಿಶೇಷವಾಗಿ ಮುಸ್ಲಿಂ ಮಹಿಳೆಯರನ್ನು ಗುರಿಯಾಗಿಸಲಾಗಿದೆ.

ಸುಮಾರು 100 ಮುಸ್ಲಿಂ ಮಹಿಳೆಯರು ಈ ಆ್ಯಪ್‌ನಲ್ಲಿ ಹರಾಜಿಗೆ ಇದ್ದು, ಬಹುತೇಕರು ಭಾರತೀಯರು ಎನ್ನಲಾಗಿದೆ. ಸಾಮಾಜಿಕ ಕಾರ್ಯಕರ್ತರು, ಪತ್ರಕರ್ತರು, ವಿದ್ಯಾರ್ಥಿಗಳು, ಖ್ಯಾತ ವ್ಯಕ್ತಿಗಳು ಹಾಗೂ ಸರ್ಕಾರದ ವಿರುದ್ಧ ದನಿ ಎತ್ತಿದವರನ್ನೇ ಗುರಿಯಾಗಿಸಿ, ಅವರಿಗೆ ಅಪಮಾನ ಮಾಡುವ ಉದ್ದೇಶದಿಂದ ಹೀಗೆ ಮಾಡಲಾಗುತ್ತಿದೆ ಎಂದು ಆರೋಪಿಸಲಾಗಿದೆ.

ಬುಲ್ಲಿ ಬಾಯಿನಲ್ಲಿ ಸಮಾಜದಲ್ಲಿ 'ಪ್ರಭಾವಿ' ಎನಿಸಿಕೊಂಡಿರುವ ಮುಸ್ಲಿಂ ಮಹಿಳೆಯರನ್ನು ಆಯ್ಕೆ ಮಾಡಲಾಗಿದೆ. ಆನ್‌ಲೈನ್ ವೇದಿಕೆಗಳಲ್ಲಿ ಸಕ್ರಿಯವಾಗಿರುವ ಹಾಗೂ ಬಹಿರಂಗವಾಗಿ ದನಿ ಎತ್ತುತ್ತಿರುವ ಮಹಿಳೆಯರೇ ಈ ಆ್ಯಪ್‌ನ ಗುರಿ. ಸಾಮಾಜಿಕ ಜಾಲತಾಣಗಳಲ್ಲಿ ಸಿಗುವ ಅವರ ಚಿತ್ರಗಳನ್ನು, ಅವರ ಅನುಮತಿ ಪಡೆಯದೇ ಈ ಆ್ಯಪ್‌ನಲ್ಲಿ ಅಶ್ಲೀಲವಾಗಿ ತಿರುಚಿ ಬಳಸಲಾಗುತ್ತಿದೆ ಎಂಬ ಆರೋಪವಿದೆ.

ಕಳೆದ ಭಾನುವಾರ ಆ್ಯಪ್‌ನಲ್ಲಿ ಹರಾಜು ಹಾಕಲಾಗಿದ್ದ ಮಹಿಳೆಯರಲ್ಲಿ ಖ್ಯಾತ ನಟಿ, ವಿರೋಧ ಪಕ್ಷದ ನಾಯಕಿ ಸೇರಿದಂತೆ ಬಹುತೇಕ ಭಾರತೀಯರೇ ಇದ್ದರು. ಕಳೆದ ಬಾರಿ ಸುಲ್ಲಿ ಡೀಲ್ಸ್ ಆ್ಯಪ್‌ನಲ್ಲಿ ಪೈಲಟ್ ವೃತ್ತಿಯಲ್ಲಿರುವ ಮಹಿಳೆಯೊಬ್ಬರ ಚಿತ್ರವನ್ನು ಅನಧಿಕೃತವಾಗಿ ಸಂಗ್ರಹಿಸಿ ಆ್ಯಪ್‌ನಲ್ಲಿ ಹರಾಜಿಗೆ ಇಡಲಾಗಿತ್ತು. ಸ್ನೇಹಿತೆಯೊಬ್ಬರು ಈ ಬಗ್ಗೆ ಮಾಹಿತಿ ನೀಡಿದ ಬಳಿಕವಷ್ಟೇ ಅವರಿಗೆ ಗಮನಕ್ಕೆ ಬಂದಿತ್ತು.

ಮುಸ್ಲಿಂ ಮಹಿಳೆಯರನ್ನು ಅಪಮಾನಿಸಲು 'ಸುಲ್ಲಿ' ಎಂಬ ಅಶ್ಲೀಲ ಪದವನ್ನು ಬಲಪಂಥೀಯ ಸಂಘಟನೆಗಳು ಬಳಸುತ್ತವೆ. ಇಲ್ಲಿ ನೈಜ ಖರೀದಿ ಇರುವುದಿಲ್ಲ. ನಿರ್ದಿಷ್ಟ ಸಮುದಾಯಕ್ಕೆ ಸೇರಿದ ಮಹಿಳೆಯರನ್ನು, ಅದರಲ್ಲೂ ಪ್ರಭಾವಿ ಎನಿಸಿರುವ ಮಹಿಳೆಯರನ್ನು ಅಪಮಾನ ಮಾಡುವುದು ಈ ಆ್ಯಪ್‌ನ ಏಕೈಕ ಉದ್ದೇಶ ಎಂಬ ಆರೋಪಗಳಿವೆ.

ಹರಾಜು ಹೇಗೆ?

ಈ ಆ್ಯಪ್ ಅನ್ನು ಸ್ಮಾರ್ಟ್‌ಫೋನ್‌ಗಳಲ್ಲಿ ಬಳಸಬಹುದಾಗಿದೆ. ಅಪ್ಲಿಕೇಷನ್ ಅನ್ನು ಡೌನ್‌ಲೋಡ್ ಮಾಡಿಕೊಂಡವರು, ತಮ್ಮನ್ನು ಅದರಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಹೀಗೆ ನೋಂದಣಿ ಮಾಡಿಕೊಂಡ ಬಳಕೆದಾರರ ಫೋನ್‌ನಲ್ಲಿ ಪ್ರತಿದಿನ ಬೆಳಿಗ್ಗೆ ಮಹಿಳೆಯರು ಹರಾಜಿಗೆ ಇರುವ ಬಗ್ಗೆ ನೋಟಿಫಿಕೇಷನ್ ಬರುತ್ತದೆ. ನೋಟಿಫಿಕೇಷನ್ ಆಧಾರದಲ್ಲಿ ಬಳಕೆದಾರರು ಹರಾಜಿನಲ್ಲಿ ಭಾಗಿಯಾಗಬಹುದು.

ದಿನವೊಂದರಲ್ಲಿ ಕನಿಷ್ಠ ನೂರು ಮಹಿಳೆಯರನ್ನು ಹರಾಜಿಗೆ ಇಡಲಾಗುತ್ತದೆ. ಬೇರೊಬ್ಬರ ಅರೆನಗ್ನ ಮತ್ತು ಮಾದಕ ಭಂಗಿಯ ಚಿತ್ರಗಳಿಗೆ ಗಣ್ಯ/ಖ್ಯಾತ ಮಹಿಳೆಯರ ಮುಖವನ್ನು ಸೇರಿಸಿ, ಅವರನ್ನು ಹರಾಜು ಹಾಕಲಾಗುತ್ತದೆ. ಹರಾಜಿನಲ್ಲಿ ಭಾಗಿಯಾಗುವವರು ತಮ್ಮಿಷ್ಟದ ಒಬ್ಬ ಮಹಿಳೆಯನ್ನು ಆಯ್ಕೆ ಮಾಡಬೇಕು. ಹೀಗೆ ಹೆಚ್ಚು ಜನರಿಂದ ಆಯ್ಕೆಯಾದ ಮಹಿಳೆಯನ್ನು, ಅಂದಿನ 'ಬುಲ್ಲಿ ಆಫ್ ದಿ ಡೇ' ಎಂದು ಆಯ್ಕೆ ಮಾಡಲಾಗುತ್ತದೆ. ದಿನವಿಡೀ ಈ ಶೀರ್ಷಿಕೆಯಡಿ ಆ ಚಿತ್ರವು ಅಪ್ಲಿಕೇಷನ್‌ನ ಹೋಂಪೇಜ್‌ನಲ್ಲಿ ಬಿತ್ತರವಾಗುತ್ತದೆ. ಈ ಚಿತ್ರಗಳ ಅಡಿಯಲ್ಲಿ ಕಾಮೆಂಟ್ ಮಾಡಲು ಅವಕಾಶವಿದೆ. ಹೀಗೆ ಮಾಡಲಾದ ಕಾಮೆಂಟ್‌ಗಳಲ್ಲಿ ಬಹುತೇಕವು ಅತ್ಯಂತ ತುಚ್ಛವಾಗಿವೆ ಮತ್ತು ಆ ಮಹಿಳೆಯ ಘನತೆಗೆ ಧಕ್ಕೆ ತರುವ ರೀತಿಯಲ್ಲಿರುತ್ತವೆ.

ಹೋಂಪೇಜ್‌ನಲ್ಲಿ ಬಿತ್ತರವಾಗುವ ಈ ಚಿತ್ರ ಮತ್ತು ಅದಕ್ಕೆ ನೀಡಲಾದ ಕಾಮೆಂಟ್‌ಗಳ ಸ್ಕ್ರೀನ್‌ಶಾಟ್‌ಗಳನ್ನು ಫೇಸ್‌ಬುಕ್, ಟ್ವಿಟರ್ ಮತ್ತು ವಾಟ್ಸ್‌ಆ್ಯಪ್ ಸೇರಿದಂತೆ ಹಲವು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲು ಅವಕಾಶವಿದೆ. ತುಚ್ಛ ಕಾಮೆಂಟ್‌ನ ಸರಣಿ ಅಲ್ಲಿಯೂ ಮುಂದುವರಿಯುತ್ತದೆ. ಹೀಗೆ ಇಡೀ ದಿನ ಆ ಮಹಿಳೆಯ ಘನತೆಗೆ ಧಕ್ಕೆ ತರಲಾಗುತ್ತದೆ. ಮರುದಿನ ಮತ್ತೆ ಮಹಿಳೆಯರ ಹರಾಜು ನಡೆಯುತ್ತದೆ. ಆಯ್ಕೆಯಾದ ಮಹಿಳೆಯ ಘನತೆಗೆ ಧಕ್ಕೆ ತರುವ ಸರಣಿ ಮುಂದುವರಿಯುತ್ತದೆ.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 13

ಶಿವದೀಕ್ಷೆ ಪಡೆದು ಕೇಳಬೇಕು

ಸೂತಮುನಿಯಿಂದ ಶಿವಪುರಾಣವನ್ನ ಶ್ರವಣ ಮಾಡುವ ವಿಧಿ-ವಿಧಾನಗಳನ್ನು ಕೇಳಿದ ನಂತರ, ಶೌನಕಮುನಿಯ ಶಿವಪುರಾಣದ ನಿಯಮಗಳನ್ನು ತಿಳಿಸುವಂತೆ ಕೋರುತ್ತಾನೆ. ಆಗ ಸೂತಮುನಿಯು ಶಿವಪುರಾಣದ ನಿಯಮಗಳನ್ನು ಹೀಗೆ ಹೇಳುತ್ತಾನೆ:

ಶಿವಪುರಾಣವನ್ನು ನಿಯಮದಂತೆ ಕೇಳಿದರೆ ಉತ್ತಮವಾದ ಫಲ ಸಿಗುವುದು. ಸರಿಯಾದ ನಿಯಮ ಅನುಸರಿಸದೆ ಕೇಳಿದರೆ ನಿಷ್ಫಲವಾಗುವುದು. ಇದಕ್ಕಾಗಿ ಶಿವಪುರಾಣ ಕೇಳುವ ಮುನ್ನಾ ಶಿವದೀಕ್ಷೆ ತೆಗೆದುಕೊಳ್ಳಬೇಕು. ಶಿವದೀಕ್ಷೆ ಪಡೆಯದೆ ಜನರಿಗೆ ಪುರಾಣ ಕೇಳಲು ಅವಕಾಶವಿಲ್ಲ. ಆದುದರಿಂದ ಪುರಾಣವನ್ನು ಕೇಳ ಬಯಸುವವರು ಕಥೆ ಹೇಳುವ ಪುರಾಣಿಕನಿಂದ ಶಿವದೀಕ್ಷೆ ತೆಗೆದುಕೊಳ್ಳಬೇಕು. ಇದರ ಜೊತೆಗೆ ಪುರಾಣ ಕೇಳಲು ಅನೇಕ ನಿಯಮಗಳನ್ನು ಪಾಲಿಸಬೇಕು. ಅವುಗಳಲ್ಲಿ ಬ್ರಹ್ಮಚರ್ಯಪಾಲನೆಯೂ ಒಂದು. ಶಿವಪುರಾಣವನ್ನು ಸಂಪೂರ್ಣವಾಗಿ ಕೇಳುವವರೆಗೂ ಹಾಸಿಗೆ, ಚಾಪೆ, ಬಟ್ಟೆ ಮೇಲೆ ಮಲಗದೆ ಬರೀ ನೆಲದ ಮೇಲೆ ಮಲಗಬೇಕು. ತಟ್ಟೆಯಲ್ಲಿ ಊಟ ಮಾಡದೆ, ಎಲೆಯಲ್ಲಿ ಊಟ ಮಾಡಬೇಕು. ಹಾಗೆಯೇ, ಕಥೆಯನ್ನು ಕೇಳಿದಮೇಲೆ ಮಾತ್ರ ಊಟಮಾಡಬೇಕು.

ಪುರಾಣವು ಮುಗಿಯುವವರೆಗೂ ಉಪವಾಸವಿರಲು ಶಕ್ತನಾದವನು ಉಪವಾಸವಿದ್ದು, ಶುಚಿಯಾಗಿ ಭಕ್ತಿಯಿಂದ ಶಿವಪುರಾಣವನ್ನು ಕೇಳಬೇಕು. ಉಪವಾಸವಿರಲು ಅಶಕ್ತನಾದವನು ತುಪ್ಪ ತಿಂದೋ ಅಥವಾ ಹಾಲನ್ನು ಕುಡಿದು ಪುರಾಣವನ್ನು ಕೇಳಬಹುದು. ಈ ರೀತಿಯ ಉಪವಾಸ ಮಾಡಲು ಶಕ್ತನಲ್ಲದವನು, ಫಲಾಹಾರವನ್ನಾದರೂ ಸೇವಿಸಿ ಪುರಾಣ ಕೇಳಬಹುದು. ಹಾಗೆ ಮಾಡಲೂ ಅಸಮರ್ಥನಾದವನು ಒಂದು ಹೊತ್ತು ಊಟವನ್ನು ಮಾಡಿ ಶಿವಪುರಾಣವನ್ನು ಕೇಳುವುದನ್ನು ಮುಂದುವರೆಸಬಹುದು. ಶಿವಪುರಾಣವನ್ನು ಕೇಳುವವರು ಒಂದು ಸಾರಿ ಹವಿಷ್ಯಾನ್ನವನ್ನು ತೆಗೆದುಕೊಳ್ಳಬಹುದು. ಸಾವಧಾನವಾಗಿ ಪುರಾಣ ಕೇಳಲು ಸಾಧ್ಯವಾಗುವಷ್ಟು ಮಾತ್ರ ಆಹಾರವನ್ನು ತೆಗೆದುಕೊಳ್ಳಬಹುದು.

ಉಪವಾಸವಿದ್ದು ಪುರಾಣವನ್ನು ಕೇಳಲು ಕಷ್ಟವಾದರೆ, ಊಟಮಾಡಿ ಕೇಳುವುದೇ ಉತ್ತಮ. ಉಪವಾಸದ ಸಂಕಟದಿಂದ ಕೇಳಿದರೆ, ಶಿವಪುರಾಣದ ಸಾರ ಸರಿಯಾಗಿ ಅರ್ಥೈಸಲು ಕಷ್ಟವಾಗುತ್ತದೆ. ಆದರೆ ತಿನ್ನುವ ಆಹಾರದಲ್ಲಿ ಮಾತ್ರ ದ್ವಿದಳಧಾನ್ಯವಾಗಿರುವ ಅವರೆ ಮತ್ತು ಮಸೂರಿಕಾಗಳನ್ನು ಬೇಯಿಸಿ ತಿನ್ನಬಾರದು. ಪುರಾಣವನ್ನು ಕೇಳುವವರ ಮನಸ್ಸಿನ ಭಾವನೆ ವ್ಯತ್ಯಾಸವಾಗುವಂತಹ ಆಹಾರವನ್ನಾಗಲಿ, ತಂಗಳು ಪದಾರ್ಥವನ್ನಾಗಲಿ ತಿನ್ನಬಾರದು. ಬದನೆಕಾಯನ್ನೂ ಕೊಡಶೀಹಣ್ಣನ್ನೂ ಸೋರೇಕಾಯನ್ನೂ ಮೂಲಂಗಿಯನ್ನೂ ಕುಂಬಳಕಾಯನ್ನೂ ತೆಂಗಿನಕಾಯನ್ನೂ ತಿನ್ನುವ ಆಹಾರದಲ್ಲಿ ಉಪಯೋಗಿಬಾರದು. ಹಾಗೇ, ಈರುಳ್ಳಿ, ಬೆಳ್ಳುಳ್ಳಿ, ಇಂಗು, ಗಾಂಜಾ ಮೊದಲಾದ ಮಾದಕಪದಾರ್ಥಗಳನ್ನು ಸಹ ಸೇವಿಸಬಾರದು. ನಿಷಿದ್ಧ ಆಹಾರಗಳನ್ನು ಸೇವಿಸಿ ಶಿವಪುರಾಣ ಕೇಳಬಾರದು.

ಶಿವಪುರಾಣ ಕೇಳುವವರು ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯವೆಂಬ ಆರು ವಿಕಾರಗಳನ್ನು ಬಿಟ್ಟಿರಬೇಕು. ಬ್ರಾಹ್ಮ, ಕ್ಷಾತ್ರ, ವೈಶ್ಯ, ಶೂದ್ರರನ್ನು ನಿಂದಿಸಬಾರದು. ಪತಿವ್ರತೆಯರನ್ನೂ ಸತ್ಪುರುಷರನ್ನೂ ಹೀಯಾಳಿಸಬಾರದು. ಸಜ್ಜನರನ್ನು ದ್ವೇಷಿಸುವವನೊಡನೆ ಮತ್ತು ವೇದಮಾರ್ಗವನ್ನು ಬಿಟ್ಟು ನಡೆಯುತ್ತಿರುವವನೊಡನೆಯೂ ಮಾತನಾಡಬಾರದು. ಶಿವಪುರಾಣವನ್ನು ಕೇಳುವವನು ಸತ್ಯವನ್ನು ನುಡಿಯುವವನಾಗಿರಬೇಕು. ಶುದ್ಧನಾಗಿರಬೇಕು. ದಯಾಶೀಲನಾಗಿರಬೇಕು. ಸಾಧ್ಯವಾದಷ್ಟು ಮೌನವನ್ನವಲಂಬಿಸಬೇಕು. ಮೃದುವಾಗಿಯೂ ನಮ್ರನಾಗಿಯೂ, ಉದಾರ ಮನಸ್ಸಿನವನಾಗಿರಬೇಕು.

ಹೀಗೆ ಶಿವಪುರಾಣದ ನಿಯಮಗಳನ್ನು ಪಾಲಿಸುತ್ತಾ ಯಾರು ಪುರಾಣವನ್ನು ಶ್ರದ್ಧಾ-ಭಕ್ತಿಯಿಂದ ಕೇಳುವರೋ, ಅಂತಹವರ ಫಲಾಪೇಕ್ಷೆಗಳು ಈಡೇರುವುವು. ಯಾವ ಫಲಾಪೇಕ್ಷೆಯಿಲ್ಲದವರಿಗೆ ಸಂಪೂರ್ಣ ಮೋಕ್ಷ ಸಿಗುವುದು. ಶಿವಪುರಾಣವನ್ನು ಶಾಸ್ತ್ರೋಕ್ತವಾಗಿ ನಿಯಮಬದ್ಧವಾಗಿ ಕೇಳಿದವರು ಒಂದು ಕಲ್ಪಕಾಲ ಬ್ರಹ್ಮಸ್ಥಾನವನ್ನು ಪಡೆದು, ಅನಂತರ ಈಶ್ವರನ ಸ್ಥಾನಕ್ಕೆ ಹೋಗುವರು ಎಂದು ಸೂತಮುನಿಯು ಶಿವಪುರಾಣ ಕೇಳುವ ನಿಯಮಗಳನ್ನು ಶೌನಕಮುನಿಗೆ ತಿಳಿಸುತ್ತಾನೆ. ಆಗ ಶೌನಕಮುನಿ ಧನ್ಯತಾಭಾವದಿಂದ 'ಎಲೈ ಮುನಿಶ್ರೇಷ್ಠನೇ, ನಿನ್ನ ದಯೆಯಿಂದ ಶಿವಪುರಾಣ ಕೇಳಿ ನಾನು ಧನ್ಯನಾದೆ. ಪರಮೇಶ್ವರನು ತಮೋಗುಣರಹಿತನಾದ ಅವ್ಯಕ್ತಸ್ವರೂಪನು. ತನ್ನ ಅಸಾಧಾರಣ ಮಹಿಮೆಯಿಂದ ಪ್ರಪಂಚದ ಹೊರಗೂ ಒಳಗೂ ಪ್ರಕಾಶಿಸುತ್ತಿರುವನು. ಭಕ್ತರ ಮನಸ್ಸಿನ ಒಳಗೆ ಸಚ್ಚಿದಾನಂದ ಸ್ವರೂಪನಾಗಿ, ಮನಸ್ಸಿನ ಹೊರಗೆ ವಾಕ್ ಸ್ವರೂಪನಾಗಿ ಇರುವ ಪರಶಿವನನ್ನು ಭಕ್ತಿಯಿಂದ ಧ್ಯಾನ ಮಾಡುವೆನು' ಎನ್ನುತ್ತಾನೆ, ಶೌನಕಮುನಿ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಪಾನಮತ್ತನಂತೆ ಕಂಡುಬರುವ ಯುವಕನೊಬ್ಬ ವಿಮಾನ ನಿಲ್ದಾಣದ ಒಳಗೆ ಸಾರ್ವಜನಿಕವಾಗಿ ಮೂತ್ರ ವಿಸರ್ಜನೆ ಮಾಡುತ್ತಿರುವ ವಿಡಿಯೊ ವೈರಲ್ ಆಗಿದೆ. ಭದ್ರತಾ ಸಿಬ್ಬಂದಿ ಸ್ಥಳಕ್ಕೆ ಬಂದು ಯುವಕನ ಕೈಗೆ ಬೇಡಿ ತೊಡಿಸಿ ಆತನನ್ನು ಎಳೆದುಕೊಂಡು ಹೋಗುವ ದೃಶ್ಯವೂ ವಿಡಿಯೊದಲ್ಲಿ ಇದೆ. ಈ ವಿಡಿಯೋದಲ್ಲಿ ಇರುವ ಯುವಕ ಬಾಲಿವುಡ್ ಸೂಪರ್ ಸ್ಟಾರ್ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್ ಎಂದು ಹೇಳಲಾಗಿದೆ. ಆರ್ಯನ್ ಖಾನ್ ಇತ್ತೀಚೆಗಷ್ಟೇ ಮಾದಕವಸ್ತು ಪ್ರಕರಣದಲ್ಲಿ ಜಾಮೀನು ಪಡೆದಿದ್ದರು. 'ಏರ್‌ಪೋರ್ಟ್‌ನಲ್ಲಿ ಶಾರುಕ್ ಖಾನ್ ಮಗ ಆರ್ಯನ್ ಖಾನ್‌ನ ವರ್ತನೆ ಇದು. ಅವನು ಮುಗ್ಧ ಬಾಲಕ ಎಂದು ರಾಜಕಾರಣಿಗಳು ಈಗಲೂ ಹೇಳುತ್ತಾರೆ' ಎಂದು ವಿಡಿಯೊಗೆ ಅಡಿಬರಹ ನೀಡಲಾಗಿದೆ.

ಈ ವಿಡಿಯೊದಲ್ಲಿರುವ ವ್ಯಕ್ತಿಯು ವಿದೇಶಿ ವ್ಯಕ್ತಿ ಎಂದು ಆಲ್ಟ್‌ನ್ಯೂಸ್ ವರದಿ ಮಾಡಿದೆ. ಈ ಪ್ರಕರಣ ಕುರಿತ ವರದಿಯು 2013ರ ಜ.3ರಂದು ಡೇಲಿ ಮೇಲ್‌ನಲ್ಲಿ ಪ್ರಕಟವಾಗಿತ್ತು. ಈ ಘಟನೆ 2012ರ ಡಿ.17ರಂದೇ ನಡೆದಿದೆ. ಏರ್‌ಪೋರ್ಟ್‌ನಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿರುವ ವ್ಯಕ್ತಿಯನ್ನು 'ಟ್ವಿಲ್ಟ್ ಸಾಗಾ' ಚಿತ್ರದ ನಟ ಬ್ರೋನ್ಸನ್ ಪೆಲ್ಲೆಟಿಯರ್ ಎಂದು ಹೇಳಲಾಗಿದೆ. ಮೊದಲಿಗೆ ಈ ಆರೋಪವನ್ನು ಬ್ರೋನ್ಸನ್ ಅಲ್ಲಗಳೆದಿದ್ದರು. ಬಳಿಕ ಅಭಿಮಾನಿಯೊಬ್ಬರು ತಂದುಕೊಟ್ಟ ಮದ್ಯ ಸೇವಿಸಿದ ಕಾರಣ ಹೀಗೆ ವರ್ತಿಸಿದೆ ಎಂದು ಕೋರ್ಟ್ ಎದುರು ಒಪ್ಪಿಕೊಂಡಿದ್ದರು. ಬಳಿಕ ಶಿಕ್ಷೆಗೂ ಗುರಿಯಾಗಿದ್ದರು ಎಂದು ಆಲ್ಟ್‌ನ್ಯೂಸ್ ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಗುರುವಾರ ಜನವರಿ 6, 2022

ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ – ಹೇಮಂತ ಋತು ಧನುರ್ಮಾಸದ 21 ನೇ ದಿನ
ತಿಥಿ: (ಪೌಷ ಶುಕ್ಲ) ಚತುರ್ಥಿ ಗಂ. 12-30 ನಕ್ಷತ್ರ: ಧನಿಷ್ಠಾ ಗಂ. 07-11, ಶತಭಿಷ ಗಂ. 30-21 ಯೋಗ: ಸಿದ್ಧಿ ಗಂ. 15-24 ಕರಣ: ವಿಷ್ಟಿ ಗಂ. 12-30. ರಾಹುಕಾಲ : ಮಧ್ಯಾಹ್ನ 01:30 – 03:00 ಸೂರ್ಯೋದಯ : 06-59 ಸೂರ್ಯಾಸ್ತ : 06-14 ಮುಸ್ಲಿಂ ದಿನಾಂಕ : 02 ಜುಮಾದುಸ್ಸಾನಿ ದಿನ ವಿಶೇಷ : ಎಪಿಫನಿ (ಕ್ರಿಶ್ಚಿಯನ್) ಅದೃಷ್ಟ ಸಂಖ್ಯೆ: 4, 11

ಮೇಷ: ಹೊಸ ಅನುಭವವನ್ನು ಎದುರು ನೋಡುವಂತಾಗುತ್ತದೆ. ರೈತರಿಗೆ ಸಂತೋಷದ ಸುದ್ದಿ ಬರಲಿದೆ. ವ್ಯಾಪಾರದಲ್ಲಿ ಸಾಲ ವಾಪಾಸಾತಿಯಿಂದ ಸಮಾಧಾನ. ವಿದ್ಯಾರ್ಥಿಗಳಿಗೆ ಹಿನ್ನಡೆ ಉಂಟಾಗಿ ಸ್ವಾಭಿಮಾನಕ್ಕೆ ಧಕ್ಕೆ.

ವೃಷಭ: ನಿಮ್ಮ ತಂದೆಯ ಕನಸಾದ ಒಂದು ಹೊಸ ಯೋಜನೆ ನಿಮ್ಮಿಂದ ಪ್ರಾರಂಭಿಸಲ್ಪಡುವುದು. ದೈವ ಕಾರ್ಯಗಳನ್ನು ನೆರವೇರಿಸುವುದು ಉತ್ತಮ. ರಾಜಕೀಯ ನಡೆಯಲ್ಲಿ ಉತ್ತಮ ಭವಿಷ್ಯವಿದೆ. ವಾಹನದಲ್ಲಿ ಜಾಗ್ರತರಾಗಿರಿ.

ಮಿಥುನ: ನೂತನ ಕೆಲಸ–ಕಾರ್ಯಗಳ ಆರಂಭಕ್ಕೆ ಮತ್ತು ಒಡಂಬಡಿಕೆಗಳಿಗೆ ಇಂದು ಸೂಕ್ತಕಾಲ. ಕಾರ್ಯದೊತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ.

ಕರ್ಕಾಟಕ: ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಹಾಗು ಅನುಭವಸ್ಥರ ಸಲಹೆ ಲಭ್ಯ. ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ. ಔಷಧ ಕಂಪನಿಗಳಿಗೆ ಮತ್ತು ಔಷಧ ಮಾರಾಟ ಪ್ರತಿನಿಧಿಗಳಿಗೆ ಮಾರಾಟದಲ್ಲಿ ಹೆಚ್ಚಳವಾಗುವುದು.

ಸಿಂಹ: ಆಲಸ್ಯಕರವಾದ ದೇಹಸ್ಥಿತಿಯಿಂದ ಕೆಲಸ–ಕಾರ್ಯ ವಿಳಂಬಗತಿಯಲ್ಲಿ ಸಾಗಲಿದೆ. ಆದರೂ ಉದ್ಯೋಗಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಕೆಲಸಗಳನ್ನು ಈ ದಿನದಲ್ಲಿ ಪೂರ್ತಿಗೊಳಿಸುವ ಪ್ರಯತ್ನವನ್ನು ಮಾಡಿ.

ಕನ್ಯಾ: ಮನೆಯವರು ನಿಮ್ಮ ನೆರವಿಗೆ ನಿಲ್ಲಲಿದ್ದಾರೆ. ರಾಜಕೀಯ ವ್ಯಕ್ತಿಗಳೊಂದಿಗೆ ಒಡನಾಟ ಬೆಳೆಸಿಕೊಳ್ಳುವಿರಿ. ಅಧಿಕಾರಿ ವರ್ಗದವರಿಗೆ ರಾಜಕಾರಣಿಗಳ ಕಿರುಕುಳ ಹೆಚ್ಚಾಗುತ್ತದೆ. ದೈವಾನುಗ್ರಹ ಹಿಡಿದ ಕೆಲಸಗಳು ದಡ ಸೇರುವುದು.

ತುಲಾ: ಸಗಟು ವ್ಯಾಪಾರಿಗಳಿಗೆ ಒಳ್ಳೆಯ ಸಮಯ. ಜಮೀನು ವ್ಯಾಜ್ಯಗಳಲ್ಲಿ ನಿಮ್ಮಗೆ ಜಯ ಲಭಿಸಲಿದೆ. ಸಂಸಾರದಲ್ಲಿನ ಉತ್ತಮ ಅಭಿವೃದ್ಧಿಯಿಂದ ಸಂತೋಷ ಹಾಗೂ ನೆಮ್ಮದಿ ಇರುವುದು. ಮಕ್ಕಳ ಏಳಿಗೆಯಿಂದ ನೆಮ್ಮದಿ.

ವೃಶ್ಚಿಕ: ಉನ್ನತ ಹುದ್ದೆಯಿಂದ ಮನಸ್ಸಿಗೆ ಖುಷಿಯಿದ್ದರೂ ಕೆಲಸದ ಒತ್ತಡದಿಂದ ಶಿರೋವೇದನ ಕಾಣಿಸಬಹುದು. ಮನೆಗೆ ಸೋದರಿಯ ಆಗಮನ ಅಥವಾ ಸೋದರಿಯ ಭೇಟಿಯು ಸಂತಸ ತರುವುದು.

ಧನು: ಹೆಚ್ಚು ಆತ್ಮವಿಶ್ವಾಸದಿಂದ ಹೊಸ ಕೆಲಸಗಳನ್ನು ಆರಂಭಿಸುವಿರಿ. ನಿಮ್ಮ ಸಂಕಲ್ಪಿತ ಯೋಜನೆಗಳಿಗೆ ನಿರ್ಧಿಷ್ಟ ರೂಪ ದೊರಕುವುದು. ಮಕ್ಕಳ ಆರೋಗ್ಯದ ಬಗೆಗೆ ಹೆಚ್ಚಿನ ಕಾಳಜಿ ವಹಿಸಿ.

ಮಕರ: ಈ ದಿನ ಆಶಾದಾಯಕವಾಗುವುದು. ವೃತ್ತಿರಂಗದಲ್ಲಿ ನೂತನವಾದ ಸ್ಥಾನಮಾನ ದೊರೆತು ಸಂತಸ. ಗೃಹೋಪಕರಣಗಳ ಮಾರಾಟಗಾರರಿಗೆ ಲಾಭ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಹೆಚ್ಚಿನ ಆಸಕ್ತಿಯಿಂದ ಯಶಸ್ಸು ಪಡೆಯುವಿರಿ.

ಕುಂಭ: ಸಹೋದ್ಯೋಗಿಗಳ ನಡವಳಿಕೆಯು ನಿಮಗೆ ಕೆಲಸದಲ್ಲಿ ಹೆಚ್ಚಿನ ಸ್ಫೂರ್ತಿಯನ್ನು ನೀಡುವುದು. ಮದುವೆಯ ಬಗ್ಗೆ ಮನೆಯಲ್ಲಿ ನಿರ್ಧಾರ ತಿಳಿಸುವಿರಿ. ಕೈತಪ್ಪಿದ ಅವಕಾಶಗಳನ್ನು ಮರಳಿ ಪಡೆಯುವ ಪ್ರಯತ್ನ ಮಾಡಿ.

ಮೀನ: ಕಾನೂನು ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಹೆಚ್ಚಿನ ಪ್ರಗತಿ. ನೀವು ಪಾಲಿಸುತ್ತಿರುವ ತಂತ್ರಗಳು ಶೀಘ್ರದಲ್ಲಿ ಫಲ ಕೊಡಲಿವೆ. ವೃತ್ತಿಗೆ ಸಂಬಂಧಿಸಿದಂತೆ ಕೆಲವೊಂದು ಉಪಯುಕ್ತ ಮಾಹಿತಿಗಳು ಲಭಿಸುವವು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪ್ರವಾಹದ ಬದಿಗಳು

ನೀರ ನೆರೆ ತನ್ನೆದುರಿನಣೆಕಟ್ಟನೊದೆಯುವುದು |
ಊರನದು ಕೊಚ್ಚುವುದು ಬದಿಯ ಕಟ್ಟದಿರೆ ||
ಏರಿಗಳನಿಕ್ಕೆಲದಿ ನಿಲಿಸೆ ಹರಿವುದು ಸಮನೆ |
ಪೌರುಷದ ನದಿಯಂತು – ಮಂಕುತಿಮ್ಮ || 535 ||

ಪದ-ಅರ್ಥ: ನೆರೆ = ಪ್ರವಾಹ, ತನ್ನೆದುರಿನಣೆಕಟ್ಟನೊದೆಯುವುದು = ತನ್ನ + ಎದುರಿನ + ಅಣೆಕಟ್ಟನು (ಆಣೆಕಟ್ಟು) + ಒದೆಯುವುದು, ಏರಿಗಳನಿಕ್ಕೆಲದಿ = ಏರಿಗಳನ್ನು (ಬದಿಗಳನ್ನು) + ಇಕ್ಕೆಲದಿ(ಎರಡು ಬದಿಗೆ)

ವಾಚ್ಯಾರ್ಥ: ನೀರಿನ ಪ್ರವಾಹ ತನ್ನ ಮುಂದಿದ್ದ ಆಣೆಕಟ್ಟನ್ನು ಒದೆಯುತ್ತದೆ. ನದಿಯ ಬದಿಗಳನ್ನು ಭದ್ರವಾಗಿ ಕಟ್ಟದಿದ್ದರೆ ಅದು ಊರನ್ನು ಕೊಚ್ಚುವುದು. ಎರಡು ಬದಿಗೂ ಏರಿಗಳನ್ನು ಕಟ್ಟಿದರೆ ಅದು ಒಂದೇ ಸಮನಾಗಿ ಹರಿಯುತ್ತದೆ. ಪೌರುಷದ ನದಿಯ ಹರಿವೂ ಹೀಗೆಯೇ

ವಿವರಣೆ: ನದಿಗೆ ಮಹಾಪೂರ ಬಂದಾಗ ಅದರ ರಭಸ ಭಯ ಹುಟ್ಟಿಸುತ್ತದೆ. 2013 ರಲ್ಲಿ ಕೇದಾರನಾಥ್‌ದಲ್ಲಿ ಆದ ಪ್ರವಾಹದ ಭಯಂಕರತೆಯನ್ನು ನಾವೆಲ್ಲ ಕೇಳಿದ್ದೇವೆ, ದೂರದರ್ಶನದಲ್ಲಿ ಕಂಡಿದ್ದೇವೆ. ಅದೆಂಥ ಶಕ್ತಿ ಆ ನೀರಿಗೆ! ದೇವಸ್ಥಾನವೊಂದನ್ನುಳಿಸಿ ಸುತ್ತಮುತ್ತಲಿನ ಕಟ್ಟಡಗಳನ್ನು, ಸೇತುವೆಗಳನ್ನು ತರಗೆಲೆಗಳಂತೆ ಕಿತ್ತು ಹಾಕಿತು ಪ್ರವಾಹ. ದೊಡ್ಡ ದೊಡ್ಡ ಬಂಡೆಗಳು ಪರ್ವತಶಿಖರಗಳಿಂದ ಉರುಳುರುಳಿ ಬಿದ್ದದ್ದನ್ನು ನೋಡಿದಾಗ ಆ ನೀರಿನ ಶಕ್ತಿಯ ಅರಿವಾಗಿತ್ತು. ಹೀಗೆ ನೀರಿಗೆ ಪ್ರವಾಹ ಬಂದರೆ ಅದು ತನ್ನೆದುರಿಗೆ ಇದ್ದ ಎಲ್ಲ ಅಡೆತಡೆಗಳನ್ನು ಕಿತ್ತು ಹಾಕುತ್ತ ಮುನ್ನಡೆಯುತ್ತದೆ.

ಜುಲೈ 12, 1961 ರ ಹಿಂದಿನ ದಿನ ಭಯಂಕರ ಮಳೆ ಬಿತ್ತು. ಮರುದಿನ ಪುಣೆ ನಗರದ ಪಕ್ಕದಲ್ಲಿದ್ದ ಪಾನ್‌ಶೇಟ್ ಅಣೆಕಟ್ಟು ಒಡೆಯಿತು. ನೀರು ಪುಣೆ ನಗರಕ್ಕೆ ನುಗ್ಗಿ ಮಾಡಿದ ಅನಾಹುತವನ್ನು ಆ ತಲೆಮಾರಿನ ಜನ ಮರೆಯುವುದು ಸಾಧ್ಯವಿಲ್ಲ. ಸಾವಿರಾರು ಜನ ಸತ್ತು ಪುಣೆ ನಗರದ ಮುಕ್ಕಾಲು ಭಾಗ ನೀರಿನಲ್ಲಿ ನಿಂತು ಕಟ್ಟಡಗಳು ಕುಸಿದುಹೋದವು. ಮರಳಿ ಒಂದು ಹಂತಕ್ಕೆ ಬರಲು ನಗರಕ್ಕೆ ಒಂದು ದಶಕವೇ ಬೇಕಾಯಿತು. ನೀರು ಕಾಲುವೆಯಲ್ಲಿ ಹರಿದಾಗ ಎಲ್ಲಿಗೆ ಹೋಗಬೇಕೋ ಅಲ್ಲಿಗೇ ಹೋಗುತ್ತದೆ. ನೀರಿಗೆ ಕಾಲುವೆಯ ಬದಿಗಳಿರದಿದ್ದರೆ ಎಲ್ಲಿ ಬೇಡವೋ ಅಲ್ಲಿಗೇ ಹೋಗಿ ಅಪಾಯವನ್ನುಂಟು ಮಾಡುತ್ತದೆ. ಬದಿಗಳು ಗಟ್ಟಿಯಾಗಿದ್ದರೆ ಮಾತ್ರ ನೀರು ಒಂದೇ ಸಮನೆ ಹರಿಯುತ್ತ ತನ್ನ ಗಮ್ಯವನ್ನು ಸೇರುತ್ತದೆ.

ಮೊದಲ ಮೂರು ಸಾಲುಗಳಲ್ಲಿ ನೀರಿನ ಪ್ರವಾಹದ ಬಗ್ಗೆ ಹೇಳುತ್ತ ಕೊನೆಯ ಸಾಲಿನಲ್ಲಿ ಕಗ್ಗ ಅದನ್ನು ಪೌರುಷಕ್ಕೆ ಹೋಲಿಸುತ್ತದೆ. ನಿಗ್ರಹವಿಲ್ಲದ ನೀರು ಅನಾಹುತ ಮಾಡುವಂತೆ ಸಂಯಮವಿಲ್ಲದ ಪೌರುಷ ಕೂಡ ಭಯಂಕರ ಪರಿಣಾಮಗಳನ್ನು ಮಾಡುತ್ತದೆ. ಪೌರುಷತ್ವದ ಪ್ರವಾಹಕ್ಕೆ ಎರಡು ದಡಗಳು. ಒಂದು ಧರ್ಮ, ಮತ್ತೊಂದು ಸಂಯಮ. ಈ ಎರಡು ಬದಿಗಳು ಗಟ್ಟಿಯಾಗಿದ್ದರೆ ಪೌರುಷತ್ವ, ಧೀಮಂತಿಕೆಯಾಗುತ್ತದೆ. ಅದಕ್ಕೆ ಶ್ರೀರಾಮ ಒಂದು ಸುಂದರ ಉದಾಹರಣೆ. ಅಸಾಮಾನ್ಯ ಶಕ್ತಿ ಇದ್ದರೂ ಆತ ಎಂದಿಗೂ ಅದನ್ನು ಅಶಕ್ತರ ಮೇಲೆ, ಅನುಚಿತ ಸಂದರ್ಭಗಳಲ್ಲಿ ಬಳಸಲಿಲ್ಲ. ಅದಕ್ಕೇ ಅವನು ಮರ್ಯಾದಾ ಪುರುಷೋತ್ತಮನಾದ. ತನ್ನ ಕೋಪ, ಅಸೂಯೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳದ, ಧರ್ಮ, ಸಂಯಮಗಳ ಕಟ್ಟುಗಳನ್ನು ಮೀರಿದ ಅಶ್ವತ್ಥಾಮ, ಶೌರ್ಯವಿದ್ದೂ, ಆತ್ಮಘಾತಕನಾದ. ಧರ್ಮ, ಸಂಯಮಗಳ ದಂಡೆಗಳಿಲ್ಲದ ಪೌರುಷ, ಕ್ರೌರ್ಯವಾಗುತ್ತದೆ, ಭದ್ರ ಬದಿಗಳಿಲ್ಲದ ಪ್ರವಾಹದಂತೆ ಅಪಾಯಕಾರಿಯಾಗುತ್ತದೆ.

ಪದಬಂಧ 4830 – ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಉಸಿರನ್ನು ಹೊರಗೆ ಬಿಡುವಿಕೆ (3)
2.ನಡುವೆ ಗರ ಬಡಿದರೆ ಈ ಗೊಂದಲ! (4)
4.ಅತಿಯಾದ ಸಿಟ್ಟು (4)
6.ಆನಂದ ಹೀಗೆ ಬಂದಿದೆ (3)
7.ಬಾದಾರಾಯಣ ಕಾಲದ ಶರವಿಲ್ಲಿ ಉಲ್ಟಾ ಆಗಿದೆ (2)
9.ಒಳ್ಳೆಯ ಫಲವನ್ನು ಕೊಡುವುದು (3)
11.ಮದುವೆ ಗಂಡಿಗೆ ದೊರೆತ ದೇವರ ಅನುಗ್ರಹ! (2)
13.ನಾಸಿಕದಿಂದ ಸುರಿವ ಶ್ಲೇಷ್ಮ (3)
14.ಸಕತ್ ರುಚಿಕಟ್ಟಾದ ಅಡುಗೆ! (4)
16.ಮಾನಸಿಕ ಘರ್ಷಣೆ (4)
17.ಬಿರುಕು ಬಿಟ್ಟ ಚರ್ಮದ ಮೇಲೆ ಎದ್ದಿರುವ ಪದರ (3)

ಮೇಲಿಂದ ಕೆಳಕ್ಕೆ
1.ಕರದಲ್ಲಿ ಹಿಡಿದಿರುವ ಸಾಮಾನು (5)
2.ನಾರು ಅಥವಾ ನೂಲನ್ನು ಹೊಸೆದು ತಯಾರಿಸಿದ ಹುರಿ (2)
3.ಬೆಳ್ಳಿ ಹಬ್ಬವಿದು (5)
5.ಕೊಡಲಿ ಅಥವಾ ಕುಠಾರ ಎಂದರೂ ಆದೀತು (3)
8.ಲಾಂಗೂಲ ಹಿಡಿದಿರುವ ಅನುಯಾಯಿ (5)
10.ದನದಲ್ಲಿ ನೋಡುವಿಕೆ! (3)
12.ಯುದ್ಧವನ್ನು ಸಾರುವ ಕಹಳೆ (5)
15.ಹೂದೋಟದಲ್ಲಿ ಪಿತೂರಿಯೇ? (2)

4829ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿದ್ರುಮ 6.ಸೂಕ್ಷ್ಮಪ್ರಕೃತಿ 7.ಕಪ್ತಾನ 10.ಕ್ರಿಯಾವಾಚಕ 15.ವಿರೂಪ 16.ದುಷ್ಟನಿಗ್ರಹ 17.ವಠಾರ
ಮೇಲಿಂದ ಕೆಳಕ್ಕೆ: 1.ವಿಭಾಕರ 2.ಮದನ 3.ಪ್ರಸೂತಿ 4.ಸಂಪ್ರತಿ 5.ಅತಿರೇಕ 8.ಖಯಾಲಿ 9.ಕೀಚಕ 11.ಗಮದುಮ 12.ಅಪಕಾರ 13.ಖನಿಜ 14.ಸಹನೆ 15.ವಿಪ್ಲವ

ಸುಡೊಕು 5216

1				2			8	4
		7			9		5	2
	8			4				
2							6	
		4		3				1
5								3
		5		9			7	6
7			2		6	8		
9	4			7				5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5215 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

ಕುಲಪತಿಗೆ ಮಸಿ; ಎಂಟು ಜನ ಬಂಧನ

ಹುಬ್ಬಳ್ಳಿಯ ಕಾನೂನು ವಿಶ್ವವಿದ್ಯಾಲಯ ಆವರಣದಲ್ಲಿ ಪ್ರತಿಭಟನಾನಿರತ ವಿದ್ಯಾರ್ಥಿಗಳ ಅಹವಾಲು ಆಲಿಸಲು ಬಂದ ಕುಲಪತಿ ಪ್ರೊ. ಈಶ್ವರ ಭಟ್ ಅವರತ್ತ ಮಸಿ ಎರಚಿದರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮೂರು ಮತ್ತು ಐದನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೂ ಮುಂದಿನ ಸೆಮಿಸ್ಟರ್‌ಗೆ ಬಡ್ತಿ ನೀಡಬೇಕು ಎಂದು ಆಗ್ರಹಿಸಿ, ಕಾನೂನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಎನ್‌ಎಸ್‌ಯುಐ ನೇತೃತ್ವದಲ್ಲಿ ಬುಧವಾರ ನಡೆಸಿದ ಇಲ್ಲಿ ಪ್ರತಿಭಟನೆ ಸಂದರ್ಭದಲ್ಲಿ ವಿದ್ಯಾರ್ಥಿಯೊಬ್ಬ ಕುಲಪತಿ ಮೇಲೆ ಮಸಿ ಎರಚಿದ್ದಾನೆ.

ಘಟನೆಗೆ ಸಂಬಂಧಿಸಿದಂತೆ, ಕುಲಪತಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡ ಎಪಿಎಂಸಿ ನವನಗರ ಠಾಣೆ ಪೊಲೀಸರು ಆರು ವಿದ್ಯಾರ್ಥಿನಿಯರು ಸೇರಿದಂತೆ 14 ವಿದ್ಯಾರ್ಥಿಗಳನ್ನು ಬಂಧಿಸಿದರು. ನಂತರ, ವಿದ್ಯಾರ್ಥಿನಿಯರನ್ನು ಬಿಟ್ಟು ಕಳಿಸಿದ್ದಾರೆ. ಉಳಿದವರ ಮೇಲೆ ಎಫ್‌ಐಆರ್ ದಾಖಲಿಸಿ, ರಾತ್ರಿ ಬಿಡುಗಡೆ ಮಾಡಿದ್ದಾರೆ.

ವಿ.ವಿ.ಯ ಪ್ರವೇಶ ದ್ವಾರದ ಬಳಿ ನಡೆಯುತ್ತಿದ್ದ ಪ್ರತಿಭಟನೆಗೆ ಚಿತ್ರದುರ್ಗ, ಬೆಳಗಾವಿ, ಶಿವಮೊಗ್ಗ, ಚಿಕ್ಕೋಡಿ ಸೇರಿದಂತೆ ವಿವಿಧ ಭಾಗಗಳಿಂದ ಬಂದ ವಿದ್ಯಾರ್ಥಿಗಳು ಸೇರಿಕೊಂಡಿದ್ದರು. ಸಂಜೆಯ ಹೊತ್ತಿಗೆ ವಿ.ವಿ.ಯ ಕುಲಪತಿ ಪ್ರೊ. ಈಶ್ವರ ಭಟ್ ಅವರು ವಿದ್ಯಾರ್ಥಿಗಳಿಂದ ಮನವಿ ಸ್ವೀಕರಿಸಲು ಬಂದಾಗ ಘಟನೆ ನಡೆದಿದೆ.

'ನಿಮ್ಮ ಬೇಡಿಕೆಯನ್ನು ಈಡೇರಿಸಲು ಸಾಧ್ಯವಿಲ್ಲ. ಹಾಗಾಗಿ, ಪ್ರತಿಭಟನೆ ಕೈಬಿಡಿ' ಎಂದು ಹೇಳಿ ಸ್ಥಳದಿಂದ ಹೊರಡಲು ಮುಂದಾದರು. ಇದರಿಂದ ಕೆರಳಿದ ವಿದ್ಯಾರ್ಥಿಯೊಬ್ಬ ಕುಲಪತಿಯತ್ತ ಮಸಿ ಎರಚಿದ. ತಕ್ಷಣ ಪೊಲೀಸರು ವಿದ್ಯಾರ್ಥಿಯನ್ನು ತಡೆಯಲು ಮುಂದಾದರು. ಈ ವೇಳೆ, ವಿದ್ಯಾರ್ಥಿಗಳು ಮತ್ತು ಪೊಲೀಸರ ಮಧ್ಯೆ ತಳ್ಳಾಟ ಜರುಗಿತು.

ಹಠಾತ್ ನಡೆದ ಘಟನೆಯಿಂದ ವಿಚಲಿತಗೊಂಡ ಕುಲಪತಿ, ಪೊಲೀಸರ ಬೆಂಗಾವಲಿನಲ್ಲಿ ಸ್ಥಳದಿಂದ ತಮ್ಮ ಕಚೇರಿಯತ್ತ ಹೋದರು. ನಂತರ ಪೊಲೀಸರು ಪ್ರತಿಭಟನೆ ನಿರತ ವಿದ್ಯಾರ್ಥಿಗಳನ್ನು ಚದುರಿಸಿದರು. ಕುಲಪತಿ ನೀಡಿದ ದೂರಿನ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಈಶ್ವರ ಭಟ್, 'ಬೇಡಿಕೆ ತಿಳಿಸುವ ನೆಪದಲ್ಲಿ ವಿದ್ಯಾರ್ಥಿಗಳು ಸಂಚು ರೂಪಿಸಿಯೇ ತಾವಿರುವ ಜಾಗಕ್ಕೆ ನನ್ನನ್ನು ಕರೆಯಿಸಿಕೊಂಡರು. ಬೇಡಿಕೆಗಳನ್ನು ಆಲಿಸಿ ವಾಪಸ್ ಹೋಗುವಾಗ ಮಸಿ ಎರಚಿದರು. ಇದು ಉದ್ದೇಶಪೂರ್ವಕವಾಗಿ ಮಾಡಿದ ಕೃತ್ಯ' ಎಂದು ಆರೋಪಿಸಿದರು.

ಪ್ರಕರಣ ದಾಖಲಿಸದ ಎಸಿಬಿ ಅಧಿಕಾರಿಗಳ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮೊಟ್ಟೆ ಖರೀದಿ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ದಾಖಲೆಗಳ ಸಮೇತ ದೂರು ನೀಡಿದ್ದರೂ ಸಚಿವೆ ಶಶಿಕಲಾ ಜೊಲ್ಲೆ ಅವರ ವಿರುದ್ಧ ಕ್ರಮ ಕೈಗೊಳ್ಳದಿರುವ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ದ ಬೆಳಗಾವಿಯ ಅಧಿಕಾರಿಗಳ ವಿರುದ್ಧ 4ನೇ ಜೆಎಂಎಫ್ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಲಾಗಿದೆ' ಎಂದು ಆರ್‌ಟಿಐ ಕಾರ್ಯಕರ್ತ ಭೀಮಪ್ಪ ಗಡಾದ ತಿಳಿಸಿದ್ದಾರೆ.

'ಹಾಲಿ ಮುಜರಾಯಿ ಸಚಿವೆ ಶಶಿಕಲಾ ಈ ಹಿಂದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ನಿರ್ವಹಿಸುತ್ತಿದ್ದ ವೇಳೆ ಮೊಟ್ಟೆ ಖರೀದಿಯಲ್ಲಿ ಭಾರಿ ಪ್ರಮಾಣದ ಕಮಿಷನ್‌ಗಾಗಿ ಬೇಡಿಕೆ ಇಟ್ಟ ಪ್ರಕರಣಕ್ಕೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರ ಅಡಿಯಲ್ಲಿ ದೂರು ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಳ್ಳುವಂತೆ 2021ರ ಜುಲೈ 26ರಂದು ಎಸಿಬಿಗೆ ದೂರು ನೀಡಲಾಗಿತ್ತು' ಎಂದಿದ್ದಾರೆ.

'ದೂರಿನ ವಿಚಾರಣೆ ಮುಂದುವರಿಸಲು ಸಕ್ಷಮ ಪ್ರಾಧಿಕಾರದಿಂದ ಪ್ರಾಥಮಿಕ ವಿಚಾರಣೆಗೆ ಅನುಮತಿ ಪಡೆಯುವುದು ಅವಶ್ಯವಿದ್ದು, ಕುಟುಕು ಕಾರ್ಯಾಚರಣೆಯ (ವಾಹಿನಿಯೊಂದು ನಡೆಸಿದ್ದ) ಮೂಲ ದೃಶ್ಯವನ್ನು 3 ದಿನಗಳಲ್ಲಿ ಕೊಡುವಂತೆ ಎಸಿಬಿ ಅಧಿಕಾರಿಗಳು ಜುಲೈ 29ರಂದು ನೋಟಿಸ್ ಕೂಡ ನೀಡಿದ್ದರು. ಆ ಪ್ರಕಾರ ಮೂಲ ದೃಶ್ಯ ನೀಡಿದ ನಂತರ ಸೆ.1ರಂದು ನೋಟಿಸ್ ಕೊಟ್ಟು, ವಿವರಣೆ ನೀಡಲು ಮತ್ತು ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ವಿಚಾರಣೆಗೆ ಹಾಜರಾಗುವಂತೆಯೂ ಸೂಚಿಸಿದ್ದರು. ಆದರೆ, ಹಗರಣದಲ್ಲಿ ಭಾಗಿಯಾದ ಆರೋಪಿಗಳಾದ ಶಶಿಕಲಾ ಜೊಲ್ಲೆ ಮತ್ತು ಶಾಸಕ ಪರಣ್ಣ ಮುನವಳ್ಳಿ ಅವರ ಮೇಲೆ ಪ್ರಕರಣ ದಾಖಲಿಸಿಲ್ಲ. ಆರೋಪಿಗಳಿಗೆ ಅನುಕೂಲ ಮಾಡುವ ಉದ್ದೇಶದಿಂದ ಎಫ್‌ಐಆರ್ ದಾಖಲಿಸದೆ ತಪ್ಪು ಎಸಗಿದ್ದಾರೆ. ಹೀಗಾಗಿ, ಕಲಂ 166ರ ಎ ಪ್ರಕಾರ ಎಸಿಬಿ ಅಧಿಕಾರಿಗಳಿಗೆ ಶಿಕ್ಷೆ ವಿಧಿಸುವಂತೆ ನ್ಯಾಯಾಲಯವನ್ನು ಕೋರಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ವಕೀಲ ಜೆ.ಎಂ. ಹತ್ತರಕಿ ಅವರು ವಕಾಲತ್ತು ವಹಿಸಿದ್ದಾರೆ. ಪ್ರಕರಣದ ವಿಚಾರಣೆಯನ್ನು ನ್ಯಾಯಾಲಯವು ಜ.20ಕ್ಕೆ ನಿಗದಿಪಡಿಸಿದೆ' ಎಂದು ತಿಳಿಸಿದ್ದಾರೆ.

ವಂಚನೆ: ತಮಿಳುನಾಡು ಮಾಜಿ ಸಚಿವ ಬಾಲಾಜಿ ಬಂಧನ

ಪ್ರಜಾವಾಣಿ ವಾರ್ತೆ

ಹಾಸನ: ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಐಡಿಎಂಕೆ ಮುಖಂಡ, ಮಾಜಿ ಸಚಿವ ಕೆ.ಟಿ. ರಾಜೇಂದ್ರ ಬಾಲಾಜಿ ಅವರನ್ನು ನಗರದಲ್ಲಿ ಬುಧವಾರ ತಮಿಳುನಾಡಿನ ಪೊಲೀಸ್ ಇನ್‌ಸ್ಪೆಕ್ಟರ್ ಹರೀಶ್ ಬಾಬು ನೇತೃತ್ವದ ತಂಡ ಬಂಧಿಸಿದೆ.

ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ಸುಮಾರು 23 ಮಂದಿಯಿಂದ ₹ 3 ಕೋಟಿ ಹಣ ಪಡೆದು ವಂಚಿಸಿದ್ದಾರೆ ಎಂದು ಸಚಿವ ಹಾಗೂ ಸಹಚರರ ವಿರುದ್ಧ ಪ್ರಕರಣ ದಾಖಲಾಗಿತ್ತು. ಅಲ್ಲಿನ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಜಾಮೀನು ಅರ್ಜಿ ವಜಾಗೊಂಡಿತ್ತು. ನಂತರ ತಲೆ ಮರೆಸಿಕೊಂಡಿದ್ದ ಆರೋಪಿಗಾಗಿ ಪೊಲೀಸರು ಬಲೆ ಬೀಸಿ, ಹಾಸನ ಪೊಲೀಸರಿಗೂ ಮಾಹಿತಿ ನೀಡಿದ್ದರು.

ಖಚಿತ ಮಾಹಿತಿ ಮೇರೆಗೆ ಬೆನ್ನಟ್ಟಿದ ಪೊಲೀಸರು, ನಗರದ ವಾರ್ತಾ ಇಲಾಖೆ ಮುಂಭಾಗದಲ್ಲಿ ಆರೋಪಿ ಪ್ರಯಾಣಿಸುತ್ತಿದ್ದ ಕಾರನ್ನು ಅಡ್ಡಗಟ್ಟಿ ವಶಕ್ಕೆ ಪಡೆದು ಚೆನ್ನೈಗೆ ಕರೆದೊಯ್ದರು. ನಂತರದಲ್ಲಿ ವಶಕ್ಕೆ ಪಡೆದ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ನಟಿ ಶುಭಾ ಪೂಂಜಾ ಸರಳ ವಿವಾಹ

ಶಿರ್ವ: ಸ್ಯಾಂಡಲ್‌ವುಡ್ ನಟಿ ಶುಭಾ ಪೂಂಜಾ, ತನ್ನ ದೀರ್ಘಕಾಲದ ಗೆಳೆಯ ಸುಮಂತ್ ಜೊತೆ ಉಡುಪಿ ಜಿಲ್ಲೆಯ ಶಿರ್ವ ಸಮೀಪದ ಮಜಲುಬೆಟ್ಟು ಬೀಡುವಿನಲ್ಲಿ ಬುಧವಾರ ಹಸಮಣೆ ಏರಿದ್ದಾರೆ.

ಕುಟುಂಬದ ಸದಸ್ಯರು ಹಾಗೂ ಆಪ್ತಮಿತ್ರರ ಸಮ್ಮುಖದಲ್ಲಿ ಅವರು ಸರಳವಾಗಿ ವೈವಾಹಿಕ ಜೀವನಕ್ಕೆ ಕಾಲಿರಿಸಿದ್ದಾರೆ. ಮದುವೆ ಸುದ್ದಿಯನ್ನು ಅವರು ಇನ್‌ಸ್ಟಾಗ್ರಾಂ ಮೂಲಕ ಹಂಚಿಕೊಂಡಿದ್ದಾರೆ.



ನಟಿ ಶುಭಾ ಪೂಂಜಾ ಬುಧವಾರ ಸುಮಂತ್ ಜೊತೆ ವೈವಾಹಿಕ ಜೀವನಕ್ಕೆ ಕಾಲಿರಿಸಿದರು

ಅಭಾಸಾಪ ಅಧಿವೇಶನ ಮುಂದೂಡಿಕೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಲ್ಲಿ ಜ.8 ಮತ್ತು 9ರಂದು ನಡೆಸಲು ಉದ್ದೇಶಿಸಿದ್ದ ಅಖಿಲ ಭಾರತೀಯ ಸಾಹಿತ್ಯ ಪರಿಷದ್ (ಅಭಾಸಾಪ) ರಾಜ್ಯ ಅಧಿವೇಶನವನ್ನು ಮುಂದೂಡಲಾಗಿದೆ.

'ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿದ್ದವು. ಕೋವಿಡ್ ನಿಯಮ ಜಾರಿಗೊಳಿಸಿರುವುದರಿಂದ ಮುಂದೂಡುವುದು ಅನಿವಾರ್ಯವಾಗಿದೆ. ನಿಯಮಗಳನ್ನು ವಾಪಸ್ ಪಡೆದ ಬಳಿಕ ಉಜಿರೆಯಲ್ಲೇ ಸಮ್ಮೇಳನ ನಡೆಯಲಿದೆ' ಎಂದು ಅಭಾಸಾಪ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ ಭಟ್ಟ ತಿಳಿಸಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ | ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ | ಹೊರಗೆ ಹೋಗುವಾಗ ಮುಖಗವಸು ಧರಿಸಿ

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ:ಗುವಿಸಕಂ/ಮುಅ(ಕಾ)/ಕಾ.ನಿ.ಅ(ಆರ್‌ಎ)/ಸ.ಕಾ.ನಿ.ಅ(ಜ)/2021-22/38591-95 ದಿನಾಂಕ: 03-01-2022

ಪ್ರಕಟಣೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ-1, ಮಿಲ್ಲರ್ಸ್‌ಟ್ಯಾಂಕ್ ಬೆಡ್‌ಏರಿಯ, ವಸಂತನಗರ, ಬೆಂಗಳೂರು-560052ರವರ ಸಮ್ಮುಖದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್‌ದರ) ನಿಯಮಾವಳಿ-2000 ರ ಜೊತೆಗೆ ಓದಿಕೊಳ್ಳಲಾಗುವ ಕರ್ನಾಟಕ ವಿದ್ಯುಚ್ಛಕ್ತಿ ಕಾಯಿದೆ 2003ರ ಪರಿಚ್ಛೇದ 61 ಮತ್ತು 62ರ ಅಡಿಯಲ್ಲಿ ಆರ್ಥಿಕ ವರ್ಷ- 20ರ ಟ್ರೂಯಿಂಗ್‌ಅಪ್, 6ನೇ ನಿಯಂತ್ರಿತ ಅವಧಿ (Control period) ಆರ್ಥಿಕ ವರ್ಷ-23ರ ನಿರೀಕ್ಷಿತ ರೆವಿನ್ಯೂ (ಇ.ಆರ್.ಸಿ), ಆರ್ಥಿಕ ವರ್ಷ-23 ಕ್ಕೆ ರೀಟೈಲ್ ವಿದ್ಯುತ್ ಸರಬರಾಜು ವಿದ್ಯುತ್ ದರಗಳ ಅನುಮೋದನೆಯನ್ನು ಕೋರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಕಲಬುರಗಿಯಿಂದ ಅರ್ಜಿ ಸಲ್ಲಿಸಿದೆ. ಗೌರವಾನ್ವಿತ ಆಯೋಗವು ಈ ಮನವಿಯನ್ನು ತಾಳೆ ನೋಡುವುದಕ್ಕೆ ಮತ್ತು ಸಿಂಧುಗೊಳಿಸುವುದಕ್ಕೆ ಒಳಪಟ್ಟು ದರ ನಿಯಮಗಳ ಪ್ರಕಾರ ಇದನ್ನು ಪೆಟಿಷನ್ ಎಂದು ಪರಿಗಣಿಸಿದೆ.

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಗುವಿಸಕಂನಿ) ಕಲಬುರಗಿ- 585102

---- ಅರ್ಜಿದಾರರು

ನೋಟಿಸು

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತವು (ಗುವಿಸಕಂನಿ), ವಿದ್ಯುಚ್ಛಕ್ತಿ ಕಾಯಿದೆ 2003ರ ಪರಿಚ್ಛೇದ 61 ಮತ್ತು 62ರ ಅಡಿಯಲ್ಲಿ ಆರ್ಥಿಕ ವರ್ಷ - 20ರ ಟ್ರೂಯಿಂಗ್ ಅಪ್, 6ನೇ ನಿಯಂತ್ರಿತ ಅವಧಿ (Control period) ಆರ್ಥಿಕ ವರ್ಷ-23ರ ನಿರೀಕ್ಷಿತ ರೆವಿನ್ಯೂ(ಇ.ಆರ್.ಸಿ), ಆರ್ಥಿಕ ವರ್ಷ-23 ಕ್ಕೆ ರೀಟೈಲ್ ವಿದ್ಯುತ್ ಸರಬರಾಜು ವಿದ್ಯುತ್ ದರಗಳ ಅನುಮೋದನೆಯನ್ನು ಕೋರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಮುಂದೆ ಅರ್ಜಿ ಸಲ್ಲಿಸಿದೆ. ಗೌರವಾನ್ವಿತ ಆಯೋಗವು ಈ ಮನವಿಯನ್ನು ತಾಳೆ ನೋಡುವುದಕ್ಕೆ ಮತ್ತು ಸಿಂಧುಗೊಳಿಸುವುದಕ್ಕೆ ಒಳಪಟ್ಟು ದರ ನಿಯಮಗಳ ಪ್ರಕಾರ ಇದನ್ನು ಪೆಟಿಷನ್ ಎಂದು ಪರಿಗಣಿಸಿದೆ.

1. ಪರಿಷ್ಕರಣೆಯ ಅಗತ್ಯತೆ:

ಪ್ರಸಕ್ತ ವಿದ್ಯುತ್ ದರಗಳಿಂದ ಗುವಿಸಕಂನಿ ಗಳಿಸುತ್ತಿರುವ ರೆವಿನ್ಯೂ ಸ್ವೀಕೃತಿ ಹಾಗೂ ವಾರ್ಷಿಕ ರೆವಿನ್ಯೂ ಅಗತ್ಯತೆಯ ನಡುವೆ ಸ್ವಾಮ್ಯತೆ ಇಲ್ಲದ ಪ್ರಯುಕ್ತ ಕೆಳಕಂಡಂತೆ ರೆವಿನ್ಯೂ ಕೊರತೆ ಉಂಟಾಗಿದೆ. (ಕರ್ನಾಟಕ ಸರ್ಕಾರ ಸಬ್ಸಿಡಿ ಮತ್ತು ರೆಗ್ಯೂಲೇಟರಿ ಅಸೆಟ್ಸ್ ಒಳಗೊಂಡಂತೆ).

ಆರ್ಥಿಕ ವರ್ಷ	ರೆವಿನ್ಯೂ ಸ್ವೀಕೃತಿ ರೂ. ಕೋಟಿಗಳಲ್ಲಿ	ರೆವಿನ್ಯೂ ಅಗತ್ಯತೆ ರೂ. ಕೋಟಿಗಳಲ್ಲಿ	ಹೆಚ್ಚಳ/ (ಕೊರತೆ) ರೂ. ಕೋಟಿಗಳಲ್ಲಿ	ಮಾರಾಟ ದಶಲಕ್ಷ ಯುನಿಟಗಳಲ್ಲಿ	ವಿದ್ಯುತ್ ಸರಬರಾಜು ಸರಾಸರಿ ವೆಚ್ಚ (ಪ್ರತಿ ಯೂನಿಟ್‌ಗೆ) ರೂ.ಗಳಲ್ಲಿ
1	2	3	4	5	6=3/5
2020-21	5281.92	5957.15	1169.70	7002.25	8.51
2022-23	6011.88	6418.62	1816.94	7710.16	8.32
ಜಕಾತಿ ಅರ್ಜಿಯಲ್ಲಿ ಸಲ್ಲಿಸಿದ ಒಟ್ಟು ಪ್ರಸ್ತಾತಿತ ಕೊರತೆ			1816.94		

1. ರೆವಿನ್ಯೂ ಸ್ವೀಕೃತಿಗಳನ್ನು (ಆದಾಯ) ಪ್ರಸ್ತುತ ಜಕಾತಿಯ ಪ್ರಕಾರ ಅಂದಾಜಿಸಲಾಗಿದೆ ಮತ್ತು ಪ್ರಸ್ತುತ ಜಕಾತಿಯಿಂದ ಆಗುವ ಕೊರತೆಯನ್ನು ತುಂಬಿಕೊಳ್ಳಲು ಸಾಧ್ಯವಿಲ್ಲವಾದುದರಿಂದ ವಿದ್ಯುತ್ ದರ ಹೆಚ್ಚಳದ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಆರ್ಥಿಕ ವರ್ಷ-21ರ ವಾರ್ಷಿಕ ಕಾರ್ಯಕ್ಷಮತೆ ವರದಿಯಲ್ಲಿನ ಕೊರತೆ ರೂ. 1169.90 ಕೋಟಿ ಸೇರಿ ಆರ್ಥಿಕ ವರ್ಷ-23 ರ ಒಟ್ಟು ಕೊರತೆ ರೂ. 1816.94 ಕೋಟಿಗಳನ್ನು ಎಲ್ಲಾ ಪ್ರವರ್ಗಗಳ ಬಳಕೆದಾರಿಂದ ತುಂಬಿಕೊಳ್ಳಲು ಗು.ವಿ.ಸ.ಕಂ.ನಿ. ಯು ದರ ಹೆಚ್ಚಳ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಪ್ರವರ್ಗವಾರು ಪ್ರಸ್ತಾಪಿತ ದರಗಳ ವಿವರ ಈ ಕೆಳಗಿನಂತೆ ಇರುತ್ತದೆ.

ಜಕಾತಿ ವರ್ಗ	ಪ್ರಸ್ತುತ ದರಕ್ಕೆ ಹೆಚ್ಚಳವಾಗಿ ಪ್ರಸ್ತಾವಿತ ನಿಗದಿತ ದರ ರೂ. ಪ್ರತಿ ಕಿ.ವ್ಯಾಟ್ ಹೆಚ್.ಪಿ/ಕೆ.ವಿ.ಎ	ಪ್ರಸ್ತುತ ದರಕ್ಕೆ ಹೆಚ್ಚಳವಾಗಿ ಪ್ರಸ್ತಾವಿತ ವಿದ್ಯುತ್ ಬಳಕೆ ಶುಲ್ಕ ಪ್ರತಿ ಯೂನಿಟ್
ಎಲ್.ಟಿ-2 & ಎಲ್.ಟಿ-3 (ಗೃಹ & ವಾಣಿಜ್ಯ)	10	95
ಎಲ್.ಟಿ-4 (ನೀರಾವರಿ ಪಂಪ್‌ಸೆಟ್)	100	275
ಎಲ್.ಟಿ-5 (ಕೈಗಾರಿಕ)	130	-50
ಎಲ್.ಟಿ-6 (ನೀರು ಸರಬರಾಜು ಮತ್ತು ಬೀದಿ ದೀಪ)	150	300
ಹೆಚ್.ಟಿ-1, ಹೆಚ್.ಟಿ-3, ಹೆಚ್.ಟಿ-4, ಹೆಚ್.ಟಿ-5	300	200
ಹೆಚ್.ಟಿ-2 ಎ.ಬಿ.ಸಿ (ಕೈಗಾರಿಕೆ)	300	-100

2) ವಿದ್ಯುತ್‌ದರ ಹೆಚ್ಚಳದ ಪ್ರಸ್ತಾವನೆ: ವಿವಿಧ ಪ್ರವರ್ಗದ ಗ್ರಾಹಕರಿಗೆ ವಿಧಿಸಲು ಉದ್ದೇಶಿಸಿರುವ ಪ್ರಸ್ತಾಪಿತ ನಿಗದಿತ ಶುಲ್ಕ ಮತ್ತು ವಿದ್ಯುತ್ ಬಳಕೆ ಶುಲ್ಕ ಹೆಚ್ಚಳದ ವಿವರವನ್ನು ಅನುಬಂಧದಲ್ಲಿ ತೋರಿಸಲಾಗಿದೆ:

3) ಕವಿನಿ ಆಯೋಗ (ವಿದ್ಯುತ್ ದರ) ನಿಬಂಧನೆಗಳು 2000ದ ನಿಯಮಾವಳಿ-5ರ ಅನುಸರಣೆಯಾಗಿ, ಮೇಲಿನ ಅರ್ಜಿದಾರರ ಮನವಿಯ ವಿರುದ್ಧ ಆಕ್ಷೇಪಣೆಯನ್ನು ಸಲ್ಲಿಸಲು ಇಚ್ಛಿಸುವ ವ್ಯಕ್ತಿಗಳು ತಮ್ಮ ಆಕ್ಷೇಪಣೆಯನ್ನು 6(ಆರು) ಪ್ರತಿಗಳಲ್ಲಿ, ಅಫಿಡವಿಟ್‌ನೊಂದಿಗೆ ಈ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಮೊದಲ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳೊಳಗೆ ಸ್ವೀಕರಣಾಧಿಕಾರಿ, ಕಾರ್ಯದರ್ಶಿಯವರ ಕಚೇರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16, ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು-560052 ಇವರಿಗೆ ಸಲ್ಲಿಸತಕ್ಕದ್ದು. ತಮ್ಮ ಆಕ್ಷೇಪಣೆಯಲ್ಲಿ, ಆಲಿಕೆಯಲ್ಲಿ ವೈಯಕ್ತಿಕವಾಗಿ ಭಾಗವಹಿಸುವರೇ ಎಂಬುದನ್ನೂ ತಿಳಿಸತಕ್ಕದ್ದು. ಆಕ್ಷೇಪಣೆಗೆ ಉತ್ತರವನ್ನು ಒದಗಿಸುವುದಕ್ಕಾಗಿ ಆಕ್ಷೇಪಣೆಯ ಪ್ರತಿಯನ್ನು ಕಾರ್ಯ ನಿರ್ವಾಹಕ ಇಂಜಿನೀಯರ್ (ವಿ) (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ - 585102 ರವರಿಗೆ ಸಲ್ಲಿಸಬಹುದಾಗಿದೆ.

4) ಆಸಕ್ತ ವ್ಯಕ್ತಿಗಳಿಗೆ ಪರಾಮರ್ಶೆಗಾಗಿ ಅರ್ಜಿದಾರರ ಮನವಿಯ ಪ್ರತಿಗಳು (Tariff Petition Booklet) ಕಾರ್ಯನಿರ್ವಾಹಕ ಇಂಜಿನೀಯರ್ (ವಿ) (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ - 585102 ರಲ್ಲಿ ಮತ್ತು ಎಲ್ಲಾ ಅಧೀಕ್ಷಕ ಇಂಜಿನಿಯರು(ವಿ) (ಕಾ ಮತ್ತು ಪಾ), ಕಲಬುರಗಿ, ಬೀದರ್, ರಾಯಚೂರ, ಬಳ್ಳಾರಿ, ಕೊಪ್ಪಳ ವೃತ್ತ ಕಚೇರಿಗಳಲ್ಲಿ ದೊರಕುತ್ತವೆ. ಅರ್ಜಿದಾರರ ಮನವಿ ಹಾಗೂ ಸಂಬಂಧಿತ ದಾಖಲೆಗಳ ಪೂರ್ಣ ಪ್ರತಿಯನ್ನು ರೂ. 500/- ಮತ್ತು ಆಯೋಗದ ಅವಲೋಕನಕ್ಕೆ ಗು.ವಿ.ಸ.ಕಂ.ನಿಯು ಒದಗಿಸಿದ ಉತ್ತರ ಇವುಗಳನ್ನು ರೂ. 450/-, ಒಟ್ಟು ರೂ. 950/- ಪಾವತಿಸಿ ಪ್ರತಿಯನ್ನು ಖರೀದಿಸಬಹುದಾಗಿದೆ.

5) ಇ.ಆರ್.ಸಿ., ವಿದ್ಯುತ್ ದರ ಪರಿಷ್ಕರಣೆ ಅರ್ಜಿ, ಈ ಸಂಬಂಧವಾಗಿ ಆಯೋಗದ ಪೂರ್ವಭಾವಿ ಅವಲೋಕನ, ಮತ್ತು ಆಯೋಗದ ಅವಲೋಕನಕ್ಕೆ ಗುವಿಸಕಂನಿಯು ಒದಗಿಸಿದ ಉತ್ತರ ಇವುಗಳನ್ನು ನಮ್ಮ ವೆಬ್‌ಸೈಟ್ (https://gescom.karnataka.gov.in/) ದಿಂದ ಪಡೆಯಬಹುದಾಗಿದೆ. ಅಥಾವ ಕಾರ್ಯನಿರ್ವಾಹಕ ಇಂಜಿನೀಯರ (ವಿ), (ನಿಯಂತ್ರಣ ವ್ಯವಹಾರ) ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ ರವರ ಕಛೇರಿಯಲ್ಲಿ ಸೂಕ್ತ ಶುಲ್ಕ ನೀಡಿ ಅವುಗಳ ಝೆರಾಕ್ಸ್ ಪ್ರತಿಗಳನ್ನು ಪಡೆದುಕೊಳ್ಳಬಹುದಾಗಿದೆ.

ಅನುಬಂಧ : ಪ್ರಸಕ್ತ ದರ FY-22 ಮತ್ತು ಪ್ರಸ್ತಾಪಿತ ದರಗಳ FY-23 ವಿವರಗಳನ್ನು ತೋರಿಸುವ ಪಟ್ಟಿ

ವಿದ್ಯುತ್ ದರ / ಸ್ಲ್ಯಾಬ್	ಪ್ರಸಕ್ತ ದರ FY-22 (ರೂ./ಯುನಿಟ್‌ಗೆ)	ಪ್ರಸ್ತಾಪಿತ ದರ FY-23 (ರೂ./ಯುನಿಟ್‌ಗೆ)
ಎಲ್ ಟಿ-1 ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ		
ವಿದ್ಯುತ್ ಬಳಕೆ ಶುಲ್ಕ : 40 ಯುನಿಟ್ ಗಳ ವರೆಗೆ	7.74	8.69
ಎಲ್‌ಟಿ-2 ನಿವಾಸ ಗೃಹಗಳ ದೀಪ ಬಳಕೆ/ಮಿಶ್ರ ವಿದ್ಯುತ್ ಹೊರೆಗಳನ್ನು ಒಳಗೊಂಡಂತೆ ಹೀಟಿಂಗ್ ಮತ್ತು ಮೋಟಿವ್ ಪವರ್		
ಎಲ್ ಟಿ-2 (ಎ) (1): ಸಿಟಿ ಮುನ್ಸಿಪಲ್ ಕಾರ್ಪೋರೇಶನ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಿಗೆ ಅನ್ವಯಿಸುತ್ತದೆ.		
ನಿಗದಿತ ಶುಲ್ಕ		
ಮೊದಲ ಕಿಲೋ ವ್ಯಾಟ್ ಗೆ	85	95
ಪ್ರತಿ ಹೆಚ್ಚವರಿ ಕಿ.ವ್ಯಾಟ್ ಗೆ 50 ಕಿಲೋ ವ್ಯಾಟ್ ತನಕ	95	105
ಪ್ರತಿ ಹೆಚ್ಚುವರಿ 50 ಕಿಲೋ ವ್ಯಾಟ್ ಗಿಂತ ಹೆಚ್ಚಿನ ಹೊರೆಗೆ	150	160
ವಿದ್ಯುತ್ ಬಳಕೆ ಶುಲ್ಕ		
0-50 ಯೂನಿಟ್ಟುಗಳಿಗೆ (ಜೀವನಾಧಾರ ವಿದ್ಯುತ್ ಬಳಕೆ)	4.05	5.00
51-100 ಯೂನಿಟ್ಟುಗಳು	5.55	6.50
101-200 ಯೂನಿಟ್ಟುಗಳು	7.10	8.05
200 ಯೂನಿಟ್ಟುಗಳನ್ನು ಮೀರಿದ ಬಳಕೆಗೆ	8.15	9.10
ಎಲ್ ಟಿ-2 (ಎ) (2): ಗ್ರಾಮ ಪಂಚಾಯಿತಿ ಪ್ರದೇಶಗಳಿಗೆ ಅನ್ವಯಿಸುತ್ತದೆ		
ನಿಗದಿತ ಶುಲ್ಕ		
ಮೊದಲ ಕಿಲೋ ವ್ಯಾಟ್ ಗೆ	70	80
ಪ್ರತಿ ಹೆಚ್ಚವರಿ ಕಿ.ವ್ಯಾಟ್ ಗೆ 50 ಕಿಲೋ ವ್ಯಾಟ್‌ತನಕ	85	95
ಪ್ರತಿ ಹೆಚ್ಚುವರಿ 50 ಕಿಲೋ ವ್ಯಾಟ್ ಗಿಂತ ಹೆಚ್ಚಿನ ಹೊರೆಗೆ	140	150
ವಿದ್ಯುತ್ ಬಳಕೆ ಶುಲ್ಕ		
0-50 ಯೂನಿಟ್ಟುಗಳಿಗೆ (ಜೀವನಾಧಾರ ವಿದ್ಯುತ್ ಬಳಕೆ)	3.95	4.90
51-100 ಯೂನಿಟ್ಟುಗಳು	5.25	6.20
101-200 ಯೂನಿಟ್ಟುಗಳು	6.80	7.75
200 ಯೂನಿಟ್ಟುಗಳನ್ನು ಮೀರಿದ ಬಳಕೆಗೆ	7.65	8.60
ಎಲ್ ಟಿ-2 (ಬಿ) : ಕೇವಲ ದೀಪ ಅಥವಾ ಸಂಯುಕ್ತ ದೀಪ ಮತ್ತು ಮೋಟಿವ್ ಪವರ್ ಹೊಂದಿರುವ ವಿದ್ಯಾ ಸಂಸ್ಥೆಗಳು ಹಾಗೂ ವೃತ್ತಿಪರ ಶೈಕ್ಷಣಿಕ ಸಂಸ್ಥೆಗಳಿಗೆ, ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಮ್ ಗಳಿಗೆ ಅನ್ವಯಿಸುತ್ತದೆ.		
ಎಲ್ ಟಿ-2 (ಬಿ) (1): ನಗರ ಪಾಲಿಕೆ, ನಗರ ಮುನಿಸಿಪಲ್ ಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.		
ನಿಗದಿತ ಶುಲ್ಕ		
ಮೊದಲ ಕಿಲೋ ವ್ಯಾಟ್ ಗೆ	100	110
50 ಕಿ.ವ್ಯಾ. ಒಳಪಟ್ಟ ವಿದ್ಯುತ್ ಹೊರೆಗೆ ಮಾಸಿಕ ಕನಿಷ್ಠ ರೂ. ಪ್ರತಿ ಕಿಲೋ ವ್ಯಾಟ್‌ಗೆ	125	135
50 ಕಿ.ವ್ಯಾ. ಗಿಂತ ಮೇಲ್ಪಟ್ಟ ವಿದ್ಯುತ್ ಹೊರೆಗೆ ಮಾಸಿಕ/ಕಿ.ವ್ಯಾ ಗೆ	155	165
ವಿದ್ಯುತ್ ಬಳಕೆ ಶುಲ್ಕ		
ಬಳಸಿದ ಮೊದಲ 200 ಯುನಿಟ್‌ಗಳಿಗೆ, ಪ್ರತಿ ಯುನಿಟ್‌ಗೆ	7.25	8.20
200 ಯುನಿಟ್‌ಗಳನ್ನು ಮೀರಿ ಬಳಸಿದ ಪ್ರತಿ ಯುನಿಟ್‌ಗೆ	8.50	9.45
ಎಲ್ ಟಿ-2 (ಬಿ) (2): ಗ್ರಾಮ ಪಂಚಾಯತಗಳಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.		
ನಿಗದಿತ ಶುಲ್ಕ		
ಮೊದಲ ಕಿಲೋ ವ್ಯಾಟ್ ಗೆ	90	100
50 ಕಿ.ವ್ಯಾ. ಒಳಪಟ್ಟ ವಿದ್ಯುತ್ ಹೊರೆಗೆ ಮಾಸಿಕ ಕನಿಷ್ಠ ರೂ. ಪ್ರತಿ ಕಿಲೋ ವ್ಯಾಟ್ ಗೆ	110	120
50 ಕಿ.ವ್ಯಾ. ಗಿಂತ ಮೇಲ್ಪಟ್ಟ ವಿದ್ಯುತ್ ಹೊರೆಗೆ ಮಾಸಿಕ/ಕಿ.ವ್ಯಾ ಗೆ	145	155
ವಿದ್ಯುತ್ ಬಳಕೆ ಶುಲ್ಕ		
ಬಳಸಿದ ಮೊದಲ 200 ಯುನಿಟ್‌ಗಳಿಗೆ, ಪ್ರತಿ ಯುನಿಟ್‌ಗೆ	6.70	7.65
200 ಯುನಿಟ್‌ಗಳನ್ನು ಮೀರಿ ಬಳಸಿದ ಪ್ರತಿ ಯುನಿಟ್‌ಗೆ	7.95	8.90
ಎಲ್ ಟಿ-3 ವಾಣಿಜ್ಯ-ದೀಪ, ಸ್ಥಾಪನ ಮತ್ತು ಮೋಟಿವ್ ಪವರ್ ವಿದ್ಯುತ್‌ನ್ನು ಬಳಸುವ ಸ್ಥಾಪನಗಳು.		
ಎಲ್ ಟಿ-3 (1): ಸಿಟಿ ಮುನ್ಸಿಪಲ್ ಕಾರ್ಪೋರೇಶನ್ ಒಳಗೊಂಡಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.		
ನಿಗದಿತ ಶುಲ್ಕ		
ಪ್ರತಿ ಕಿಲೋ ವ್ಯಾಟ್ ಗೆ 50 ಕಿ.ವ್ಯಾ. ಒಳಪಟ್ಟ ವಿದ್ಯುತ್ ಹೊರೆಗೆ	105	115
50 ಕಿ.ವ್ಯಾ ಗಿಂತ ಮೇಲ್ಪಟ್ಟ ವಿದ್ಯುತ್ ಹೊರೆಗೆ ಮಾಸಿಕ/ಕಿ.ವ್ಯಾ. ಗೆ	205	215
ವಿದ್ಯುತ್ ಬಳಕೆ ಶುಲ್ಕ		
ಬಳಸಿದ ಮೊದಲ 50 ಯುನಿಟ್‌ಗಳಿಗೆ, ಪ್ರತಿ ಯುನಿಟ್‌ಗೆ	8.35	9.30
50 ಯುನಿಟ್‌ಗಳನ್ನು ಮೀರಿ ಬಳಸಿದ ಯುನಿಟ್‌ಗಳಿಗೆ, ಪ್ರತಿ ಯುನಿಟ್‌ಗೆ	9.35	10.30
ಬೇಡಿಕೆ (ಡಿಮ್ಯಾಂಡ್) ಆಧಾರಿತ ದರ (ಐಚ್ಛಿಕ) ಮಂಜೂರಾದ ವಿದ್ಯುತ್ 5 ಕಿ. ವ್ಯಾಟ್‌ಗಿಂತ ಹೆಚ್ಚು, ಆದರೆ 150 ಕಿ. ವ್ಯಾಟ್‌ಗಿಂತ ಕಡಿಮೆ ಇರುವ ಸ್ಥಾಪನಗಳಿಗೆ		
ನಿಗದಿತ ಶುಲ್ಕ		
50 ಕಿ. ವ್ಯಾ. ಒಳಪಟ್ಟ ವಿದ್ಯುತ್ ಹೊರೆಗೆ ಪ್ರತಿ ಕಿ. ವ್ಯಾಟ್, ಗೆ	120	130
50 ಕಿ. ವ್ಯಾ. ಗಿಂತ ಮೇಲ್ಪಟ್ಟ ವಿದ್ಯುತ್ ಹೊರೆಗೆ ಪ್ರತಿ ಕಿ. ವ್ಯಾಟ್, ಗೆ	220	230
ವಿದ್ಯುತ್ ಬಳಕೆ ಶುಲ್ಕ		
ಬಳಸಿದ ಮೊದಲ 50 ಯುನಿಟ್‌ಗಳಿಗೆ, ಪ್ರತಿ ಯುನಿಟ್‌ಗೆ	8.35	9.30
50 ಯುನಿಟ್‌ಗಳನ್ನು ಮೀರಿ ಬಳಸಿದ ಯುನಿಟ್‌ಗಳಿಗೆ, ಪ್ರತಿ ಯುನಿಟ್‌ಗೆ	9.35	10.30
ಎಲ್ ಟಿ-3 (2) : ಗ್ರಾಮ ಪಂಚಾಯತಗಳಿಗೆ ಒಳಪಡುವ ಪ್ರದೇಶಗಳಿಗೆ ಅನ್ವಯಿಸುತ್ತದೆ.		
ನಿಗದಿತ ಶುಲ್ಕ		
50 ಕಿ. ವ್ಯಾ ಒಳಪಟ್ಟ ವಿದ್ಯುತ್ ಹೊರೆಗೆ ಪ್ರತಿ ಕಿ. ವ್ಯಾಟ್, ಗೆ	95	105
50 ಕಿ. ವ್ಯಾ ಗಿಂತ ಮೇಲ್ಪಟ್ಟ ವಿದ್ಯುತ್ ಹೊರೆಗೆ ಪ್ರತಿ ಕಿ. ವ್ಯಾಟ್, ಗೆ	195	205
ವಿದ್ಯುತ್ ಬಳಕೆ ಶುಲ್ಕ		
0-50 ಯೂನಿಟ್ಟುಗಳಿಗೆ	7.85	8.80
50 ಯೂನಿಟ್ಟುಗಳನ್ನು ಮೀರಿದ ಬಳಕೆಗೆ	8.85	9.80
ಬೇಡಿಕೆ (ಡಿಮ್ಯಾಂಡ್) ಆಧಾರಿತ ದರ (ಐಚ್ಛಿಕ), ಮಂಜೂರಾದ ವಿದ್ಯುತ್ 5 ಕಿ. ವ್ಯಾಟ್‌ಗಿಂತ ಹೆಚ್ಚು, ಆದರೆ 150 ಕಿ. ವ್ಯಾಟ್‌ಗಿಂತ ಕಡಿಮೆ ಇರುವ ಸ್ಥಾಪನಗಳಿಗೆ		
ನಿಗದಿತ ಶುಲ್ಕ		
50 ಕಿ. ವ್ಯ ಒಳಪಟ್ಟ ವಿದ್ಯುತ್ ಹೊರೆಗೆ ಪ್ರತಿ ಕಿ. ವ್ಯಾಟ್, ಗೆ	110	120
50 ಕಿ. ವ್ಯಾ ಗಿಂತ ಮೇಲ್ಪಟ್ಟ ವಿದ್ಯುತ್ ಹೊರೆಗೆ ಪ್ರತಿ ಕಿ. ವ್ಯಾಟ್, ಗೆ	210	220
ವಿದ್ಯುತ್ ಬಳಕೆ ಶುಲ್ಕ		
0-50 ಯೂನಿಟ್ಟುಗಳಿಗೆ	7.85	8.80
50 ಯೂನಿಟ್ಟುಗಳನ್ನು ಮೀರಿದ ಬಳಕೆಗೆ	8.85	9.80
ಬೇಡಿಕೆ ಆಧಾರಿತ ದರ(ಐಚ್ಛಿಕ) ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಬಳಕೆಯ ಶುಲ್ಕ ಮೇಲೆ ತಿಳಿಸಿದಂತೆ ಇರುತ್ತದೆ.		
ಎಲ್ ಟಿ-4: ಕೃಷಿ ಪಂಪ ಸೆಟ್ಟುಗಳು, ಸ್ಪ್ರಿಂಕಲರ್‌ಗಳು, ನರ್ಸರಿಗಳು, ಹುಲ್ಲುಗಾವಲುಗಳು, ತೋಟಗಳು ಮತ್ತು ಪ್ಲಾಂಟೇಶನಗಳು. ಎಲ್ ಟಿ-4 (ಎ): 10 ಹೆಚ್ ಪಿ ಸೇರಿದಂತೆ 10 ಹೆಚ್ ಪಿ ವರೆಗಿನ ಸ್ಥಾಪನಗಳು.		
ನಿಗದಿತ ಶುಲ್ಕ : ಪ್ರತಿ ಎಚ್.ಪಿ. ಗೆ	ಸಿ.ಡಿ.ಟಿ	100
ಕರ್ನಾಟಕ ಸರಕಾರವು ಸಹಾಯಧನವನ್ನು ನೀಡುತ್ತಿದ್ದು. ಈ ಪ್ರವರ್ಗದ ಸ್ಥಾಪನಗಳಿಗೆ ಉಚಿತ ವಿದ್ಯುತ್ ಪೂರೈಸಲಾಗುತ್ತದೆ.	6.38	9.13
ಎಲ್ ಟಿ-4 (ಬಿ): 10 ಹೆಚ್ ಪಿ ಗಿಂತ ಅಧಿಕ ಸಾಮರ್ಥ್ಯದ ನೀರಾವರಿ ಪಂಪಸೆಟ್ಟ ಸ್ಥಾಪನಗಳು.		
ನಿಗದಿತ ಶುಲ್ಕ : ಪ್ರತಿ ಎಚ್.ಪಿ. ಗೆ ಪ್ರತಿ ತಿಂಗಳಿಗೆ ರೂ	90	190
ವಿದ್ಯುತ್ ಬಳಕೆ ಶುಲ್ಕ : ಪ್ರತಿ ಯೂನಿಟ್ಟಿಗೆ	3.85	6.60
ಎಲ್ ಟಿ-4 (ಸಿ) : ಖಾಸಗಿ ತೋಟಗಾರಿಕೆ ಮತ್ತು ನರ್ಸರಿಗಳು, ಕಾಫೀ, ಟೀ ಪ್ಲಾಂಟೇಶನ್‌ಗಳು (10ಹೆಚ್. ಪಿ. ಸೇರಿದಂತೆ 10 ಹೆಚ್.ಪಿ. ವರೆಗೆ)		
ನಿಗದಿತ ಶುಲ್ಕ : ಪ್ರತಿ ಎಚ್.ಪಿ. ಗೆ ಪ್ರತಿ ತಿಂಗಳಿಗೆ ರೂ	80	180
ವಿದ್ಯುತ್ ಬಳಕೆ ಶುಲ್ಕ : ಪ್ರತಿ ಯೂನಿಟ್ಟಿಗೆ	3.85	6.60
ಎಲ್ ಟಿ-5(ಎ): ದೀಪ ಬಳಕೆಯು ಸೇರಿದಂತೆ ತಾಪನ ಮತ್ತು ಮೋಟಿವ್ ಪವರ್ ಬಳಸುವ ಕೈಗಾರಿಕೆಗಳು (ನಗರ ಪಾಲಿಕೆ ಒಳಪಡುವ ಸ್ಥಳಗಳು)		
ನಿಗದಿತ ಶುಲ್ಕ		
5 ಎಚ್.ಪಿ. & ಕೆಡಿಮೆ ಸಾಮರ್ಥ್ಯದ ಸ್ಥಾಪನಗಳಿಗೆ ಪ್ರತಿ ಹೆಚ್.ಪಿ ಗೆ	75	205
5 ಎಚ್.ಪಿ. ಗಿಂತ ಅಧಿಕ ಆದರೆ 40 ಎಚ್.ಪಿ ಗಿಂತ ಕಡಿಮೆ ಸಾಮರ್ಥ್ಯದ ಸ್ಥಾಪನಗಳಿಗೆ	85	215
40 ಎಚ್.ಪಿ ಹಾಗೂ ಅದಕ್ಕಿಂತ ಅಧಿಕ ಆದರೆ 67 ಎಚ್.ಪಿ ಗಿಂತ ಕಡಿಮೆ ಸಾಮರ್ಥ್ಯ	105	235
67 ಎಚ್.ಪಿ ಮತ್ತು ಅಧಿಕ 100 ಎಚ್.ಪಿ ಗಿಂತ ಕಡಿಮೆ	170	300
100 ಎಚ್.ಪಿ ಗಿಂತ ಅಧಿಕ	200	330
ವಿದ್ಯುತ್ ಬಳಕೆ ಶುಲ್ಕ		
ಬಳಸಿದ ಮೊದಲ 500 ಯುನಿಟ್‌ಗಳವರೆಗೆ, ಪ್ರತಿ ಯುನಿಟ್‌ಗೆ	5.80	5.30
501 ಯುನಿಟ್‌ಗಳಿಂದ 1000 ಯುನಿಟ್‌ಗಳವರೆಗೆ, ಪ್ರತಿ ಯುನಿಟ್‌ಗೆ	6.80	6.30
1001 ಯುನಿಟ್‌ಗಳನ್ನು ಮೀರಿ ಬಳಸಿದ ಪ್ರತಿ ಯುನಿಟ್‌ಗೆ	7.10	6.60
ಬೇಡಿಕೆ (ಡಿಮ್ಯಾಂಡ್) ಆಧಾರಿತ ದರ (ಐಚ್ಛಿಕ)		
ನಿಗದಿತ ಶುಲ್ಕ		
5. ಎಚ್.ಪಿ ಗಿಂತ ಅಧಿಕ ಆದರೆ 40 ಎಚ್.ಪಿ. ಗಿಂತ ಕಡಿಮೆ ಸಾಮರ್ಥ್ಯದ ಸ್ಥಾಪನಗಳಿಗೆ	100	230
40 ಎಚ್.ಪಿ. ಹಾಗೂ ಅದಕ್ಕಿಂತ ಅಧಿಕ ಆದರೆ 67 ಎಚ್.ಪಿ ಗಿಂತ ಕಡಿಮೆ ಸಾಮರ್ಥ್ಯ	130	260
67 ಎಚ್.ಪಿ ಮತ್ತು ಅಧಿಕ 100 ಎಚ್.ಪಿ ಗಿಂತ ಕಡಿಮೆ	220	350
100 ಎಚ್.ಪಿ ಗಿಂತ ಅಧಿಕ	230	360
ಬೇಡಿಕೆ ಆಧಾರಿತ ದರ(ಐಚ್ಛಿಕ) ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಬಳಕೆಯ ಶುಲ್ಕ ಮೇಲೆ ತಿಳಿಸಿದಂತೆ ಇರುತ್ತದೆ.		
ಎಲ್ ಟಿ-5(ಬಿ): ದೀಪ ಬಳಕೆಯು ಸೇರಿದಂತೆ ತಾಪನ ಮತ್ತು ಮೋಟಿವ ಪವರ್ ಬಳಸುವ ಕೈಗಾರಿಕೆಗಳು (ಎಲ್ ಟಿ-5(ಎ) ದಲ್ಲಿ ಸೇರುವ ಸ್ಥಾವರಗಳನ್ನು ಹೊರತುಪಡಿಸಿ)		
ನಿಗದಿತ ಶುಲ್ಕ		
5 ಎಚ್.ಪಿ. & ಕಡಿಮೆ ಸಾಮರ್ಥ್ಯದ ಸ್ಥಾಪನಗಳಿಗೆ	65	195
5 ಎಚ್.ಪಿ. ಗಿಂತ ಅಧಿಕ ಆದರೆ 40 ಎಚ್.ಪಿ ಗಿಂತ ಕಡಿಮೆ ಸಾಮರ್ಥ್ಯದ ಸ್ಥಾಪನಗಳಿಗೆ	80	210
40 ಎಚ್.ಪಿ ಹಾಗೂ ಅದಕ್ಕಿಂತ ಅಧಿಕ ಆದರೆ 67 ಎಚ್.ಪಿ ಗಿಂತ ಕಡಿಮೆ ಸಾಮರ್ಥ್ಯ	100	230
67 ಎಚ್.ಪಿ ಮತ್ತು ಅಧಿಕ 100 ಎಚ್.ಪಿ ಗಿಂತ ಕಡಿಮೆ	155	285
100 ಎಚ್.ಪಿ ಗಿಂತ ಅಧಿಕ ಸಾಮರ್ಥ್ಯ	185	315
ವಿದ್ಯುತ್ ಬಳಕೆ ಶುಲ್ಕ		
ಬಳಸಿದ ಮೊದಲ 500 ಯುನಿಟ್‌ಗಳವರೆಗೆ, ಪ್ರತಿ ಯುನಿಟ್‌ಗೆ	5.70	5.20
501 ಯುನಿಟ್‌ಗಳಿಂದ 1000 ಯುನಿಟ್‌ಗಳವರೆಗೆ, ಪ್ರತಿ ಯುನಿಟ್‌ಗೆ	6.65	6.15
1001 ಯುನಿಟ್‌ಗಳನ್ನು ಮೀರಿ ಬಳಸಿದ ಪ್ರತಿ ಯುನಿಟ್‌ಗೆ	6.95	6.45
ಬೇಡಿಕೆ (ಡಿಮ್ಯಾಂಡ್) ಆಧಾರಿತ ದರ (ಐಚ್ಛಿಕ)		
5. ಎಚ್.ಪಿ ಗಿಂತ ಅಧಿಕ ಆದರೆ 40 ಎಚ್.ಪಿ. ಗಿಂತ ಕಡಿಮೆ ಸಾಮರ್ಥ್ಯದ ಸ್ಥಾಪನಗಳಿಗೆ	95	225
40 ಎಚ್.ಪಿ. ಹಾಗೂ ಅದಕ್ಕಿಂತ ಅಧಿಕ ಆದರೆ 67 ಎಚ್.ಪಿ ಗಿಂತ ಕಡಿಮೆ ಸಾಮರ್ಥ್ಯ	125	255
67 ಎಚ್.ಪಿ ಮತ್ತು ಅಧಿಕ 100 ಎಚ್.ಪಿ ಗಿಂತ ಕಡಿಮೆ	210	340
100 ಎಚ್.ಪಿ ಗಿಂತ ಅಧಿಕ	220	350
ಬೇಡಿಕೆ ಆಧಾರಿತ ದರ(ಐಚ್ಛಿಕ) ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಬಳಕೆಯ ಶುಲ್ಕ ಮೇಲೆ ತಿಳಿಸಿದಂತೆ ಇರುತ್ತದೆ.		
ಗ್ರಾಹಕರ ಕೋರಿಕೆಯ ಮೇರೆಗೆ ಸಮಯಾಧಾರಿತ ವಿದ್ಯುತ್ ದರ: (ಟಿ.ಒ.ಡಿ ದರ)	**ಅನ್ವಯಿತ ಸಾಮಾನ್ಯ ವಿದ್ಯುತ್ ದರಕ್ಕಿಂತ ಹೆಚ್ಚಿನ ದರ (+) / ಕಡಿಮೆ ದರ (-)**	
06.00 ರಿಂದ 10.00 ರ ವರೆಗೆ	0.00	0.00
10.00 ರಿಂದ 18.00 ರ ವರೆಗೆ	0.00	0.00
18.00 ರಿಂದ 22.00 ರ ವರೆಗೆ	ಜುಲೈನಿಂದ ನವೆಂಬರ್ ವರೆಗೆ ಮಾನಸೂನ್ ಅವಧಿಯಲ್ಲಿ 0 ಪೈಸೆ ಪ್ರತಿ ಯೂನಿಟ್‌ಗೆ. ಡಿಸೆಂಬರ್ ನಿಂದ ಜೂನ್ ಅವಧಿಯಲ್ಲಿ ಪ್ರತಿ ಯುನೀಟ್‌ಗೆ (+) 100 ಪೈಸೆ	ಜುಲೈನಿಂದ ನವೆಂಬರ್ ವರೆಗೆ ಮಾನಸೂನ್ ಅವಧಿಯಲ್ಲಿ 0 ಪೈಸೆ ಪ್ರತಿ ಯೂನಿಟ್‌ಗೆ. ಡಿಸೆಂಬರ್ ನಿಂದ ಜೂನ್ ಅವಧಿಯಲ್ಲಿ ಪ್ರತಿ ಯುನೀಟ್‌ಗೆ (+) 100 ಪೈಸೆ
22.00 ರಿಂದ 06.00 ರ ವರೆಗೆ	ಜುಲೈನಿಂದ ನವೆಂಬರ್ ವರೆಗೆ ಮಾನಸೂನ್ ಅವಧಿಯಲ್ಲಿ 0 ಪೈಸೆ ಪ್ರತಿ ಯೂನಿಟ್‌ಗೆ. ಡಿಸೆಂಬರ ನಿಂದ ಜೂನ್ ಅವಧಿಯಲ್ಲಿ ಪ್ರತಿ ಯುನೀಟ್‌ಗೆ (-) 100 ಪೈಸೆ	ಜುಲೈನಿಂದ ನವೆಂಬರ್ ವರೆಗೆ ಮಾನಸೂನ್ ಅವಧಿಯಲ್ಲಿ 0 ಪೈಸೆ ಪ್ರತಿ ಯೂನಿಟ್‌ಗೆ. ಡಿಸೆಂಬರ ನಿಂದ ಜೂನ್ ಅವಧಿಯಲ್ಲಿ ಪ್ರತಿ ಯುನೀಟ್‌ಗೆ (-) 100 ಪೈಸೆ
ಎಲ್ ಟಿ-6: ನೀರು ಸರಬರಾಜು ಮತ್ತು ಒಳಚರಂಡಿ ಪಂಪಿಂಗ್ ಸ್ಥಾಪನಗಳಿಗೆ ಮತ್ತು ಸಾರ್ವಜನಿಕ ಹಾಗೂ ಉದ್ಯಾನವನ ದೀಪಗಳು.		
ಎಲ್ ಟಿ-6(ಎ): ನೀರು ಸರಬರಾಜು ಮತ್ತು ಒಳಚರಂಡಿ ಪಂಪಿಂಗ್ ಸ್ಥಾಪನಗಳಿಗೆ		
ನಿಗದಿತ ಶುಲ್ಕ		
67 ಎಚ್.ಪಿ ಒಳಗೊಂಡಂತೆ ಪ್ರತಿ ಎಚ್.ಪಿ.ಗೆ ಪ್ರತಿ ತಿಂಗಳಿಗೆ ರೂ.	95	245
67 ಎಚ್.ಪಿ ಗಿಂತ ಮೇಲ್ಪಟ್ಟು ಪ್ರತಿ ಚ್.ಪಿ. ಗೆ ಪ್ರತಿ ತಿಂಗಳಿಗೆ, ರೂ.	195	345
ವಿದ್ಯುತ್ ಬಳಕೆ ಶುಲ್ಕ : ಪ್ರತಿ ಯೂನಿಟ್ಟಿಗೆ	4.95	7.95
ಎಲ್ ಟಿ-6(ಬಿ): ಸಾರ್ವಜನಿಕ ಹಾಗೂ ಉದ್ಯಾನವನ ದೀಪಗಳು.		
ನಿಗದಿತ ಶುಲ್ಕ : ಪ್ರತಿ ಕಿ.ಲೋ ವ್ಯಾಟ್ ಗೆ	110	260
ವಿದ್ಯುತ್ ಬಳಕೆ ಶುಲ್ಕ: ಬಳಸಿದ ವಿದ್ಯುತ್ತಿನ ಪ್ರತಿ ಯುನಿಟ್‌ಗೆ	6.60	9.60
ಎಲ್.ಈ.ಡಿ ಲೈಟಿಂಗ. ವಿದ್ಯುತ್ ಬಳಕೆ ಶುಲ್ಕ:ಬಳಸಿದ ಎಲ್ಲಾ ಯುನಿಟ್‌ಗೆ	5.55	8.55
ಎಲ್.ಟಿ-6 (ಸಿ): ಎಲೆಕ್ಟ್ರಿಕ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್‌ಗಳಿಗೆ ಅನ್ವಯಿಸುತ್ತದೆ		
ನಿಗದಿತ ಶುಲ್ಕ		
ಎಲ್.ಟಿ : 50 ಕಿಲೋ ವ್ಯಾಟ್ ಒಳಗೊಂಡಂತೆ ಪ್ರತಿ ಕಿ.ವ್ಯಾ ಗೆ ಪ್ರತಿ ತಿಂಗಳಿಗೆ	70	220
ಎಲ್.ಟಿ : 50 ಕಿಲೋ ವ್ಯಾಟ್ ಗಿಂತ ಮೇಲ್ಪಟ್ಟ ಪ್ರತಿ ಕಿ.ವ್ಯಾ ಗೆ ಪ್ರತಿ ತಿಂಗಳಿಗೆ	170	320
ಹೆಚ್.ಟಿ ಪೂರೈಕೆ ರೂ/ಕೆ.ವಿ.ಎ. ಗೆ ತಿಂಗಳಿಗೆ	200	350
ವಿದ್ಯುತ್ ಬಳಕೆ ಶುಲ್ಕ (ರೂ. / ಯುನಿಟ್) ಎಲ್.ಟಿ ಮತ್ತು ಹೆಚ್.ಟಿ ಸ್ಥಾವರಗಳಿಗೆ	5.00	8.00
ಗ್ರಾಹಕರ ಕೋರಿಕೆಯ ಮೇರೆಗೆ ಸಮಯಾಧಾರಿತ ವಿದ್ಯುತ್ ದರ (ಟಿ.ಒ.ಡಿ ದರ): ಟಿ.ಒ.ಡಿ ದರವು ಎಲ್.ಟಿ - 5 (ಬಿ) ರಲ್ಲಿ ತಿಳಿಸಿದಂತೆ ಇರುತ್ತದೆ.		

ಶವೋಮಿಗೆ ₹ 653 ಕೋಟಿ ಆಮದು ಸುಂಕ ನೋಟಿಸ್

ನವದೆಹಲಿ (ಪಿಟಿಐ): ಎಲೆಕ್ಟ್ರಾನಿಕ್ ಉಪಕರಣಗಳ ತಯಾರಿಕಾ ಕಂಪನಿ, ಚೀನಾ ಮೂಲದ ಶವೋಮಿಗೆ ₹ 653 ಕೋಟಿ ಆಮದು ಸುಂಕ ಪಾವತಿಸಲು ನೋಟಿಸ್ ಜಾರಿಯಾಗಿದೆ.

ಶವೋಮಿ ಕಂಪನಿಯ ಘಟಕಗಳಲ್ಲಿ ನಡೆದ ಶೋಧ ಕಾರ್ಯಾಚರಣೆ ವೇಳೆ, ಕಂಪನಿಯು ಅಮೆರಿಕ ಮತ್ತು ಚೀನಾದ ಕಂಪನಿಗಳಿಗೆ ರಾಯಧನ ಹಾಗೂ ಪರವಾನಗಿ ಶುಲ್ಕ ಪಾವತಿಸಿದ್ದಕ್ಕೆ ಸಂಬಂಧಿಸಿದ ದಾಖಲೆಗಳು ಲಭ್ಯವಾಗಿವೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಬುಧವಾರ ಹೇಳಿದೆ.

‘ಭಾರತದ ಕಾನೂನುಗಳನ್ನು ಪಾಲಿಸುವುದಕ್ಕೆ ನಾವು ಅತಿಹೆಚ್ಚಿನ ಪ್ರಾಮುಖ್ಯತೆ ನೀಡುತ್ತೇವೆ. ನೋಟಿಸ್‌ಅನ್ನು ವಿಸ್ತೃತವಾಗಿ ಪರಿಶೀಲಿಸುತ್ತಿದ್ದೇವೆ. ಜವಾಬ್ದಾರಿಯುತ ಕಂಪನಿಯಾಗಿ ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಸಹಕಾರ ನೀಡುತ್ತೇವೆ’ ಎಂದು ಶವೋಮಿ ವಕ್ತಾರರು ಹೇಳಿದ್ದಾರೆ.

ಶವೋಮಿ ಇಂಡಿಯಾ ಅಥವಾ ಗುತ್ತಿಗೆ ಆಧಾರದಲ್ಲಿ ಈ ಕಂಪನಿಗೆ ತಯಾರಿಕಾ ಕೆಲಸ ಮಾಡಿಕೊಡುವ ಕಂಪನಿಗಳು ರಾಯಧನದ ಮೊತ್ತವನ್ನು ತಿಳಿಸುತ್ತಿರಲಿಲ್ಲ, ಈ ಮೂಲಕ ಆಮದು ಸುಂಕವನ್ನು ವಂಚಿಸಲಾಗುತ್ತಿತ್ತು ಎಂಬುದನ್ನು ರೆವಿನ್ಯೂ ಗುಪ್ತದಳ ಮಹಾನಿರ್ದೇಶನಾಲಯ (ಡಿಆರ್‌ಐ) ನಡೆಸಿದ ತನಿಖೆಯ ವೇಳೆ ದೊರೆತ ಸಾಕ್ಷ್ಯಗಳು ತೋರಿಸಿಕೊಟ್ಟವು ಎಂದು ಸಚಿವಾಲಯ ಹೇಳಿದೆ.

ಡಿಆರ್‌ಐ ತನಿಖೆ ಪೂರ್ಣಗೊಂಡ ನಂತರದಲ್ಲಿ ಒಟ್ಟು ₹ 653 ಕೋಟಿ ಮೊತ್ತದ ಸುಂಕ ವಸೂಲಿಗೆ ಒಟ್ಟು ಮೂರು ನೋಟಿಸ್‌ಗಳನ್ನು ಶವೋಮಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಶವೋಮಿ ಕಂಪನಿಯು ‘ಮಿ’ ಬ್ರ್ಯಾಂಡ್‌ನ ಮೊಬೈಲ್ ಫೋನ್‌ಗಳನ್ನು ಭಾರತಕ್ಕೆ ಆಮದು ಮಾಡಿಕೊಳ್ಳುತ್ತಿತ್ತು ಅಥವಾ ಅದರ ಬಿಡಿಭಾಗಗಳನ್ನು ಆಮದು ಮಾಡಿಕೊಂಡು, ಭಾರತದಲ್ಲಿ ಅವುಗಳನ್ನು ಗುತ್ತಿಗೆ ತಯಾರಕರ ನೆರವಿನಿಂದ ಜೋಡಿಸಿ ಮೊಬೈಲ್ ಫೋನ್ ಸಿದ್ಧಪಡಿಸುತ್ತಿತ್ತು ಎಂಬುದನ್ನು ಡಿಆರ್‌ಐ ತನಿಖೆ ಕಂಡುಕೊಂಡಿದೆ.

ಶವೋಮಿ ಕಂಪನಿಯು ಆಮದು ಸುಂಕವನ್ನು ವಂಚಿಸುತ್ತಿದೆ ಎಂಬ ಗುಪ್ತಚರ ಮಾಹಿತಿಯು ಡಿಆರ್‌ಐ ಅಧಿಕಾರಿಗಳಿಗೆ ಲಭಿಸಿತ್ತು. ಇದರ ಆಧಾರದಲ್ಲಿ ಅದು ತನಿಖೆ ಆರಂಭಿಸಿತ್ತು.

ಮತ್ತೆ 60 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಸತತ ನಾಲ್ಕನೆಯ ದಿನವೂ ಗಳಿಕೆಯ ಓಟ ಮುಂದುವರಿಸಿದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ಮತ್ತೆ 60 ಸಾವಿರ ಅಂಶಗಳ ಗಡಿ ದಾಟಿದೆ. ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳ ಗಳಿಕೆಯ ಕಾರಣದಿಂದಾಗಿ ಸೂಚ್ಯಂಕ ಏರಿಕೆ ಕಂಡಿತು. ಆದರೆ, ಐ.ಟಿ. ವಲಯದ ಷೇರುಗಳನ್ನು ಹೂಡಿಕೆದಾರರು ಲಾಭಗಳಿಕೆಯ ಉದ್ದೇಶದಿಂದ ಮಾರಾಟ ಮಾಡಿದ ಕಾರಣ, ಏರಿಕೆಗೆ ತುಸು ಕಡಿವಾಣ ಬಿತ್ತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಏರಿಕೆ ಆಗಿದ್ದು ಹಾಗೂ ವಿದೇಶಿ ಹೂಡಿಕೆದಾರರು ಷೇರುಗಳ ಖರೀದಿಯಲ್ಲಿ ತೊಡಗಿದ್ದುದು ಸೂಚ್ಯಂಕಗಳ ಏರಿಕೆಗೆ ನೆರವಾದವು ಎಂದು ವರ್ತಕರು ತಿಳಿಸಿದ್ದಾರೆ. ದಿನದ ಅಂತ್ಯಕ್ಕೆ ಸೆನ್ಸೆಕ್ಸ್ 368 ಅಂಶ ಏರಿಕೆ ಕಂಡು, 60,223 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 120 ಅಂಶ ಏರಿಕೆ ಕಂಡು 17,925 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು.

‘ಕೋವಿಡ್ ಪ್ರಕರಣಗಳು ಜಾಸ್ತಿ ಆಗಿರುವುದು ಮತ್ತು ಕಠಿಣ ನಿರ್ಬಂಧಗಳು ಜಾರಿ ಆಗುತ್ತಿರುವುದು ಮಾರುಕಟ್ಟೆಗಳ ಅಸ್ಥಿರತೆ ಮೇಲೆ ಪರಿಣಾಮ ಉಂಟುಮಾಡಿವೆ. ಡಿಸೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕೆಲವು ಬ್ಯಾಂಕಿಂಗ್ ಕಂಪನಿಗಳು ಎರಡು ಅಂಕಿಗಳ ಬೆಳವಣಿಗೆ ದರ ದಾಖಲಿಸಿರುವ ಕಾರಣ ಬ್ಯಾಂಕಿಂಗ್ ವಲಯದ ಷೇರುಗಳ ಖರೀದಿ ಹೆಚ್ಚಿತ್ತು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 0.01ರಷ್ಟು ಇಳಿಕೆ ಆಗಿದ್ದು ಬ್ಯಾರೆಲ್‌ಗೆ 79.9 ಡಾಲರ್‌ಗೆ ತಲುಪಿದೆ.

ಎಲ್ ಟಿ–7: (ಎ) ಎಲ್ಲಾ ಪ್ರವರ್ಗಗಳ ತಾತ್ಕಾಲಿಕ ವಿದ್ಯುತ್ ಸರಬರಾಜು ಸ್ಥಾಪನಗಳಿಗೆ ಅನ್ವಯಿಸುತ್ತದೆ.		
ನಿಗದಿತ ಶುಲ್ಕ : ಮಂಜೂರಾದ ಹೊರೆಯು 67 ಎಚ್.ಪಿ.ಗಿಂತ ಕಡಿಮೆ ಇದ್ದರೆ, ಮಂಜೂರಾದ ಹೊರೆಯ ಪ್ರತಿ ಕಿ.ವ್ಯಾಟ್‌ಗೆ ಪ್ರತಿ ವಾರಕ್ಕೆ ಕನಿಷ್ಟ ರೂ. – ಮಿತಿಯೊಂದಿಗೆ	250	250
ವಿದ್ಯುತ್ ಬಳಕೆ ಶುಲ್ಕ : ಬಳಸಿದ ವಿದ್ಯುತ್ತಿನ ಪ್ರತಿ ಯುನಿಟ್‌ಗೆ	11.10	11.10
ಎಲ್ ಟಿ–7: (ಬಿ) ತಾತ್ಕಾಲಿಕ ವಿದ್ಯುತ್ ಸರಬರಾಜು ಹೋರ್ಡಿಂಗ್ ,ಜಾಹಿರಾತು ಫಲಕ,ಇತರೆ (ಶಾಶ್ವತ ಸಂಪರ್ಕ ಆಧಾರದಮೇಲೆ) ಗಳಿಗೆ ಅನ್ವಯಿಸುತ್ತದೆ.		
ನಿಗದಿತ ಶುಲ್ಕ: ಮಂಜೂರಾದ ಹೊರೆಯು 67 ಎಚ್.ಪಿ.ಗಿಂತ ಕಡಿಮೆ ಇದ್ದರೆ, ಮಂಜೂರಾದ ಹೊರೆಯ ಪ್ರತಿ ಕಿ.ವಾಟ್‌ಗೆ	125	125
ವಿದ್ಯುತ್ ಬಳಕೆ ಶುಲ್ಕ : ಬಳಸಿದ ವಿದ್ಯುತ್ತಿನ ಪ್ರತಿ ಯುನಿಟ್‌ಗೆ	11.10	11.10
ಹೆಚ್ ಟಿ–1: ನೀರು ಸರಬರಾಜು ಮತ್ತು ಒಳಚರಂಡಿ ಸ್ಥಾಪನಗಳು.		
ಡಿಮ್ಯಾಂಡ ಶುಲ್ಕ : ಪ್ರತಿ ಕೆ.ವಿ.ಎ. ಗೆ	230	530
ವಿದ್ಯುತ್ ಬಳಕೆ ಶುಲ್ಕ : ಬಳಸಿದ ವಿದ್ಯುತ್ತಿನ ಪ್ರತಿ ಯುನಿಟ್‌ಗೆ	5.55	7.55
ಗ್ರಾಹಕರ ಕೋರಿಕೆಯ ಮೇರೆಗೆ ಸಮಯಾಧಾರಿತ ವಿದ್ಯುತ್ ದರ (ಟಿ.ಒ.ಡಿ ದರ): ಟಿ.ಒ.ಡಿ ದರವು ಎಲ್.ಟಿ – 5 (ಬಿ) ರಲ್ಲಿ ತಿಳಿಸಿದಂತೆ ಇರುತ್ತದೆ.		
ಹೆಚ್ ಟಿ–2 (ಎ): ಕೈಗಾರಿಕೆಗಳು, ಕಾರ್ಖಾನೆಗಳು, ವಿಶ್ವವಿದ್ಯಾಲಯಗಳು ಮುಂತಾದವುಗಳು.		
ಡಿಮ್ಯಾಂಡ ಶುಲ್ಕ : ಪ್ರತಿ ಕೆ.ವಿ.ಎ. ಗೆ	240	540
ವಿದ್ಯುತ್ ಬಳಕೆ ಶುಲ್ಕ		
ಮೊದಲ 1 (ಒಂದು) ಲಕ್ಷ ಯುನಿಟ್‌ಗಳವರೆಗೆ	7.30	6.30
1 (ಒಂದು) ಲಕ್ಷ ಯುನಿಟ್‌ಗಳನ್ನು ಮೀರಿ ಬಳಸಿದ ಪ್ರತಿ ಯುನಿಟ್‌ಗೆ	7.55	6.55
ರೈಲ್ವೆ ಟ್ರ್ಯಾಕ್ಷನ್		
ಬೇಡಿಕೆ ಶುಲ್ಕ ರೂ. ಪ್ರತಿ ಕೆ.ವಿ. ಗೆ	250	550
ವಿದ್ಯುತ್ ಬಳಕೆ ಶುಲ್ಕ : ವಿದ್ಯುತ್ ಬಳಕೆಯ ಎಲ್ಲಾ ಯೂನಿಟ್ಟುಗಳಿಗೆ	6.55	5.55
ನೀರು ಶುದ್ಧೀಕರಣ ಸ್ಥಾಪನಗಳು		
ಬೇಡಿಕೆ ಶುಲ್ಕ : ರೂ. ಪ್ರತಿ ಕೆ.ವಿ. ಗೆ	250	550
ವಿದ್ಯುತ್ ಬಳಕೆ ಶುಲ್ಕ : ವಿದ್ಯುತ್ ಬಳಕೆಯ ಎಲ್ಲಾ ಯೂನಿಟ್ಟುಗಳಿಗೆ	6.95	5.95
ಹೆಚ್ ಟಿ–2 (ಬಿ): ವಾಣಿಜ್ಯ ಸಂಕೀರ್ಣಗಳು, ಚಲನಚಿತ್ರ ಮಂದಿರಗಳು, ಹೋಟೇಲಗಳು ಭೋಜನ ಮತ್ತು ವಸತಿ ಗೃಹಗಳು		
ಡಿಮ್ಯಾಂಡ ಶುಲ್ಕ : ಪ್ರತಿ ಕೆ.ವಿ.ಎ. ಗೆ	260	560
ವಿದ್ಯುತ್ ಬಳಕೆ ಶುಲ್ಕ		
ಮೊದಲ 2 (ಎರಡು) ಲಕ್ಷ ಯುನಿಟ್‌ಗಳವರೆಗೆ	9.00	8.00
ಉಳಿದ ಯೂನಿಟ್ಟುಗಳಿಗೆ	9.10	8.10
ಹೆಚ್ ಟಿ–2 (ಸಿ)(1) : ಸರ್ಕಾರಿ ಆಸ್ಪತ್ರೆ, ವಿಶ್ವವಿದ್ಯಾಲಯಗಳು, ಸರ್ಕಾರಿ ಶಿಕ್ಷಣ ಸಂಸ್ಥೆಗಳು		
ಡಿಮ್ಯಾಂಡ ಶುಲ್ಕ : ಪ್ರತಿ ಕೆ.ವಿ.ಎ. ಗೆ	240	540
ವಿದ್ಯುತ್ ಬಳಕೆ ಶುಲ್ಕ		
ಮೊದಲ 1 (ಒಂದು) ಲಕ್ಷ ಯುನಿಟ್‌ಗಳವರೆಗೆ	7.15	6.15
ಉಳಿದ ಯೂನಿಟ್ಟುಗಳಿಗೆ	7.55	6.55
ಹೆಚ್ ಟಿ–2 (ಸಿ)(2) : (ಹೆಚ್ ಟಿ–2 (ಸಿ)(1)) ಸ್ಥಾವರಗಳನ್ನು ಹೊರತು ಪಡಿಸಿ : ಆಸ್ಪತ್ರೆ , ವಿಶ್ವವಿದ್ಯಾಲಯಗಳು, ಶಿಕ್ಷಣ ಸಂಸ್ಥೆಗಳು		
ಡಿಮ್ಯಾಂಡ ಶುಲ್ಕ : ಪ್ರತಿ ಕೆ.ವಿ.ಎ. ಗೆ	240	540
ವಿದ್ಯುತ್ ಬಳಕೆ ಶುಲ್ಕ		
ಮೊದಲ 1 (ಒಂದು) ಲಕ್ಷ ಯುನಿಟ್‌ಗಳವರೆಗೆ	8.15	7.15
ಉಳಿದ ಯೂನಿಟ್ಟುಗಳಿಗೆ	8.55	7.55
ಗ್ರಾಹಕರ ಕೋರಿಕೆಯ ಮೇರೆಗೆ ಸಮಯಾಧಾರಿತ ವಿದ್ಯುತ್ ದರ (ಟಿ.ಒ.ಡಿ ದರ): ಟಿ.ಒ.ಡಿ ದರವು ಎಲ್.ಟಿ – 5 (ಬಿ) ರಲ್ಲಿ ತಿಳಿಸಿದಂತೆ ಇರುತ್ತದೆ.		
ಹೆಚ್ ಟಿ–3 (ಎ): ಏತ ನೀರಾವರಿ ಯೋಜನೆಗಳು/ ಏತ ನೀರಾವರಿ ಸಂಘಗಳು.		
ಹೆಚ್ ಟಿ–3 (ಎ) (1): ಏತ ನೀರಾವರಿ ಯೋಜನೆಗಳು (ಸರಕಾರಿ)		
ವಿದ್ಯುತ್ ಬಳಕೆ ಶುಲ್ಕ	ಮಂಜೂರಾದ ವಿದ್ಯುತ್ತಿನ ಪ್ರತಿ ಅಶ್ವಶಕ್ತಿಗೆ ವಾರ್ಷಿಕ ಕನಿಷ್ಟ ರೂ. 1720/– ಗಳ ಷರತ್ತಿಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯುನಿಟ್ಟಿಗೆ ರೂ. 3.10	ಮಂಜೂರಾದ ವಿದ್ಯುತ್ತಿನ ಪ್ರತಿ ಅಶ್ವಶಕ್ತಿಗೆ ವಾರ್ಷಿಕ ಕನಿಷ್ಟ ರೂ. 2020/– ಗಳ ಷರತ್ತಿಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯುನಿಟ್ಟಿಗೆ ರೂ. 5.10
ಹೆಚ್ ಟಿ–3 (ಎ) (2): ಏತ ನೀರಾವರಿ ಯೋಜನೆಗಳು/ಏತ ನೀರಾವರಿ ಸಂಘಗಳು (ಅರ್ಬನ್ ಮತ್ತು ಏಕ್ಸಪ್ರೆಸ್ ಫೀಡರಗಳು) (ಖಾಸಗಿ)		
ನಿಗದಿತ ಶುಲ್ಕ : ಪ್ರತಿ ಎಚ್.ಪಿ. ಗೆ	95	395
ವಿದ್ಯುತ್ ಬಳಕೆ ಶುಲ್ಕ: ಬಳಸಿದ ವಿದ್ಯುತ್ತಿನ ಪ್ರತಿ ಯುನಿಟ್‌ಗೆ	3.10	5.10
ಹೆಚ್ ಟಿ–3 (ಎ) (3): ಏತ ನೀರಾವರಿ ಯೋಜನೆಗಳು/ ಏತ ನೀರಾವರಿ ಸಂಘಗಳು (ಹೆಚ್. ಟಿ. –3 (ಎ) (2) ಗೆ ಒಳಪಡದಿರವಂತಹವುಗಳು). (ಖಾಸಗಿ)		
ನಿಗದಿತ ಶುಲ್ಕ : ಪ್ರತಿ ಎಚ್.ಪಿ. ಗೆ	75	375
ವಿದ್ಯುತ್ ಬಳಕೆ ಶುಲ್ಕ: ಬಳಸಿದ ವಿದ್ಯುತ್ತಿನ ಪ್ರತಿ ಯುನಿಟ್‌ಗೆ	3.10	5.10
ಹೆಚ್ ಟಿ–3 (ಬಿ): ಕೃಷಿ, ಫಾರಂಗಳು, ನರ್ಸರಿಗಳು ಮತ್ತು ಪ್ಲಾಂಟೇಶನ್‌ಗಳು ಇತ್ಯಾದಿ		
ವಿದ್ಯುತ್ ಬಳಕೆ ಶುಲ್ಕ	ಮಂಜೂರಾದ ವಿದ್ಯುತ್ತಿನ ಪ್ರತಿ ಅಶ್ವಶಕ್ತಿಗೆ ವಾರ್ಷಿಕ ಕನಿಷ್ಟ 1780 ರೂ. ಗಳ ಷರತ್ತಿಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯುನಿಟ್ಟಿಗೆ ರೂ. 5.10	ಮಂಜೂರಾದ ವಿದ್ಯುತ್ತಿನ ಪ್ರತಿ ಅಶ್ವಶಕ್ತಿಗೆ ವಾರ್ಷಿಕ ಕನಿಷ್ಟ 2080 ರೂ. ಗಳ ಷರತ್ತಿಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯುನಿಟ್ಟಿಗೆ ರೂ. 7.10
ಹೆಚ್ ಟಿ–4 : ನಿವಾಸಿ ಅಪಾರ್ಟಮೆಂಟುಗಳು ಹಾಗೂ ಕಾಲೋನಿಗಳು. (ಎಲ್ಲ ಸ್ಥಳಗಳಿಗೆ ಅನ್ವಯಿಸುತ್ತವೆ.)		
ನಿಗದಿತ ಶುಲ್ಕ : ಪ್ರತಿ ಕೆ.ವಿ.ಎ ಗೆ	155	455
ವಿದ್ಯುತ್ ಬಳಕೆ ಶುಲ್ಕ : ಬಳಸಿದ ಎಲ್ಲಾ ಯುನಿಟ್‌ಗಳಿಗೆ,	7.00	9.00
ಹೆಚ್ ಟಿ–5 : ತಾತ್ಕಾಲಿಕ ವಿದ್ಯುತ್ ಸರಬರಾಜು (67 ಹೆಚ್.ಪಿ. ಮೇಲ್ಪಟ್ಟು)		
ನಿಗಧಿತ ಶುಲ್ಕ ಪ್ರತಿ ಎಚ್.ಪಿ. ಗೆ	ಮಂಜೂರಾದ ಎಲ್ಲಾ ಹೊರೆ/ಕಾಂಟ್ರಾಕ್ಟ್ ಡಿಮಾಂಡ್ ಗೆ ಪ್ರತಿ ತಿಂಗಳಿಗೆ, ಪ್ರತಿ ಹೆಚ್.ಪಿ. ಗೆ ರೂ. 300/–	ಮಂಜೂರಾದ ಎಲ್ಲಾ ಹೊರೆ/ಕಾಂಟ್ರಾಕ್ಟ್ ಡಿಮಾಂಡ್ ಗೆ ಪ್ರತಿ ತಿಂಗಳಿಗೆ, ಪ್ರತಿ ಹೆಚ್.ಪಿ. ಗೆ ರೂ. 600/–
ವಿದ್ಯುತ್ ಬಳಕೆ ಶುಲ್ಕ: ಬಳಸಿದ ವಿದ್ಯುತ್ತಿನ ಪ್ರತಿ ಯುನಿಟ್‌ಗೆ.	11.10	13.10
ಟಿಪ್ಪಣಿ: 1) ಮೇಲಿನ ಶುಲ್ಕಗಳ ಜೊತೆಗೆ ಸರ್ಕಾರವು ವಿಧಿಸಿದ / ವಿಧಿಸಬಹುದಾದ ತೆರಿಗೆಗಳು ಅನ್ವಯಿಸುತ್ತವೆ.		

ಸಹಿ/– ಗು.ವಿ.ಸ.ಕಂ.ನಿ ಪರವಾಗಿ
ಕಾರ್ಯನಿರ್ವಾಹಕ ಇಂಜಿನಿಯರ (ವಿದ್ಯುತ್)
ನಿಯಂತ್ರಣ ವ್ಯವಹಾರ ನಿಗಮ ಕಛೇರಿ, ಗು.ವಿ.ಸ.ಕಂ.ನಿ. ಕಲಬುರಗಿ–585102.

ವಾ.ಸಾ.ಸಂ.ಇ/ಕಲಬುರಗಿ/897/ಎಂ.ಸಿ&ಎ/2021–22

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,805
ಇಂದಿನ ಅಂತ್ಯ	17,925
▲	120
ದಿನದ ಗರಿಷ್ಠ	17,944

ವಿನಿಮಯ ದರ

$ ಡಾಲರ್	74.38
£ ಪೌಂಡ್	100.76
€ ಯುರೊ	84.12
¥ ಯೆನ್ (100ಕ್ಕೆ)	64

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1197 (1195)
ಸೂರ್ಯಕಾಂತಿ (ರಿಫೈನ್ಡ್)	₹1245 (1240)
ಪಾಮೋಲಿನ್	₹1165 (1157)

ಅಲ್ಪಪ್ರಮಾಣದಲ್ಲಿ ಕಂಡುಬಂದ ಉದ್ಯೋಗ ಕಡಿತ: ಐಎಚ್‌ಎಸ್ ಮರ್ಕಿಟ್

ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಸೇವಾ ವಲಯದ ಚಟುವಟಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಡಿಸೆಂಬರ್‌ನಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿವೆ ಎಂದು ಐಎಚ್‌ಎಸ್ ಮರ್ಕಿಟ್ ಇಂಡಿಯಾ ಸಂಸ್ಥೆ ಬುಧವಾರ ಹೇಳಿದೆ. ಬೆಲೆ ಏರಿಕೆಯ ಒತ್ತಡ ಮತ್ತು ಓಮೈಕ್ರಾನ್ ಪ್ರಭಾವದಿಂದಾಗಿ ವಹಿವಾಟಿನ ಮೇಲೆ ಪರಿಣಾಮ ಉಂಟಾಗಿದೆ ಎಂದು ಅದು ತಿಳಿಸಿದೆ.

ಸೇವಾ ವಲಯದ ಚಟುವಟಿಕೆ ತಿಳಿಸುವ ಸೂಚ್ಯಂಕವು ನವೆಂಬರ್‌ನಲ್ಲಿ 58.1ರಷ್ಟು ಇತ್ತು. ಡಿಸೆಂಬರ್‌ನಲ್ಲಿ ಇದು 55.5ಕ್ಕೆ ಇಳಿಕೆ ಆಗಿದೆ. ಇದು ಮೂರು ತಿಂಗಳ ಕನಿಷ್ಠ ಮಟ್ಟ. ಬೆಳವಣಿಗೆಯ ದೃಷ್ಟಿಯಿಂದ ಸತತ ಐದನೇ ತಿಂಗಳಿನಲ್ಲಿಯೂ ಸೇವಾ ವಲಯದ ಚಟುವಟಿಕೆಗಳು ಸಕಾರಾತ್ಮಕ ಮಟ್ಟದಲ್ಲಿಯೇ ಇವೆ.

ಸೇವೆಗಳ ಪೂರೈಕೆದಾರರಿಗೆ 2021 ಸಹ ಏರಿಳಿತದ ವರ್ಷವಾಗಿದೆ. ಡಿಸೆಂಬರ್ ತಿಂಗಳ ಬೆಳವಣಿಗೆಯು ತುಸು ಇಳಿಕೆ ಕಂಡಿದೆ. ಹೀಗಿದ್ದರೂ ಸಮೀಕ್ಷೆಯ ಪ್ರಕಾರ ಮಾರಾಟ ಮತ್ತು ವಹಿವಾಟು ಚಟುವಟಿಕೆ ದೃಢ ಹೆಚ್ಚಳವನ್ನು ಕಾಣುತ್ತಿದೆ ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ತಿಳಿಸಿದ್ದಾರೆ.

ಸೇವಾ ವಲಯದಲ್ಲಿ ಮತ್ತೆ ಉದ್ಯೋಗ ಕಡಿತ ಆರಂಭ ಆಗಿದ್ದರೂ ಉದ್ಯೋಗ ಕಡಿತದ ಪ್ರಮಾಣವು ಅಲ್ಪ ಮಟ್ಟದ್ದಾಗಿದೆ. ಸದ್ಯದ ಕೆಲಸದ ಹೊರೆಯನ್ನು ನಿರ್ವಹಿಸಲು ಈಗಿರುವ ಉದ್ಯೋಗಿಗಳ ಸಂಖ್ಯೆಯು ಸಾಕಾಗುತ್ತದೆ ಎಂದು ಕಂಪನಿಗಳು ಹೇಳಿವೆ. ವಹಿವಾಟು ನಡೆಸುವ ವಿಶ್ವಾಸವು ಡಿಸೆಂಬರ್‌ನಲ್ಲಿ ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ. ಹೀಗಿದ್ದರೂ ಹಿಂದಿನ ಅಂಕಿ–ಅಂಶಗಳನ್ನು ಗಮನಿಸಿದರೆ ಮಂದಗತಿಯಲ್ಲಿಯೇ ಇದೆ.

ಬೇಡಿಕೆಯಲ್ಲಿ ಸುಧಾರಣೆ ಕಂಡುಬರಲಿದೆ ಎನ್ನುವುದು ಕೆಲವು ಕಂಪನಿಗಳ ಅಭಿಪ್ರಾಯ. ಬೆಲೆ ಏರಿಕೆಯ ಒತ್ತಡ ಮತ್ತು ಕೋವಿಡ್‌ನ ಹೊಸ ಅಲೆಯ ಕಾರಣದಿಂದಾಗಿ ಚೇತರಿಕೆಯ ಮೇಲೆ ಪರಿಣಾಮ ಉಂಟಾಗಬಹುದು ಎಂದು ಕೆಲವು ಕಂಪನಿಗಳು ಹೇಳುತ್ತಿವೆ.

ತಯಾರಿಕೆ ಮತ್ತು ಸೇವಾ ವಲಯದ ಬೆಳವಣಿಗೆಯನ್ನು ಸೂಚಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ನವೆಂಬರ್‌ನಲ್ಲಿ 59.2ರಷ್ಟು ಇತ್ತು. ಅದು ಡಿಸೆಂಬರ್‌ನಲ್ಲಿ 56.4ಕ್ಕೆ ಇಳಿಕೆ ಆಗಿದೆ. ಹೀಗಿದ್ದರೂ ದೀರ್ಘಾವಧಿಯ ಸರಾಸರಿ 53.9ಕ್ಕಿಂತಲೂ ಮೇಲ್ಮಟ್ಟದಲ್ಲಿಯೇ ಇದೆ. ಎರಡು ವಲಯಗಳಲ್ಲಿ ನಾಲ್ಕು ತಿಂಗಳ ಬಳಿಕ ಇದೇ ಮೊದಲ ಬರಿಗೆ ಉದ್ಯೋಗ ಕಡಿತ ಕಂಡುಬಂದಿದೆ.

ಡಿಸೆಂಬರ್‌ನಲ್ಲಿ ಪ್ರಯಾಣಿಕ ವಾಹನ ರಿಟೇಲ್ ಮಾರಾಟ ಶೇ 11ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ರಿಟೇಲ್ ಮಾರಾಟವು 2020ರ ಡಿಸೆಂಬರ್‌ಗೆ ಹೋಲಿಸಿದರೆ 2021ರ ಡಿಸೆಂಬರ್‌ನಲ್ಲಿ ಶೇಕಡ 11ರಷ್ಟು ಇಳಿಕೆ ಆಗಿದೆ ಎಂದು ಭಾರತೀಯ ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಬುಧವಾರ ತಿಳಿಸಿದೆ.

2020ರ ಡಿಸೆಂಬರ್‌ನಲ್ಲಿ 2.74 ಲಕ್ಷ ಪ್ರಯಾಣಿಕ ವಾಹನಗಳ ರಿಟೇಲ್ ಮಾರಾಟ ಆಗಿತ್ತು. 2021ರ ಡಿಸೆಂಬರ್‌ನಲ್ಲಿ ಮಾರಾಟವು 2.44 ಲಕ್ಷಕ್ಕೆ ಇಳಿಕೆ ಆಗಿದೆ.

ವರ್ಷಾಂತ್ಯದ ಕಾರಣಕ್ಕಾಗಿ ಕಂಪನಿಗಳು ತಮ್ಮ ಬಳಿ ಇರುವ ದಾಸ್ತಾನು ಖಾಲಿ ಮಾಡಿಕೊಳ್ಳಲು ವಿಶೇಷ ರಿಯಾಯಿತಿ ನೀಡುತ್ತವೆ. ಹೀಗಾಗಿ ಡಿಸೆಂಬರ್‌ನಲ್ಲಿ ಮಾರಾಟವು ಸಾಮಾನ್ಯವಾಗಿ ಗರಿಷ್ಠ ಮಟ್ಟದಲ್ಲಿ ಇರುತ್ತದೆ. ಆದರೆ, ಈ ವರ್ಷ ಹಾಗಾಗಲಿಲ್ಲ. ರಿಟೇಲ್ ಮಾರಾಟವು ನಿರಾಶಾದಾಯಕವಾಗಿದೆ ಎಂದು ಎಫ್‌ಎಡಿಎ ಅಧ್ಯಕ್ಷ ವಿಂಕೇಶ್ ಗುಲಾಟಿ ಹೇಳಿದ್ದಾರೆ.

ಡಿಸೆಂಬರ್‌ನಲ್ಲಿ ಪ್ರಯಾಣಿಕ ವಾಹನಗಳಿಗೆ ಹೆಚ್ಚಿನ ಬುಕಿಂಗ್ ಆಗಿದ್ದರೂ ಸೆಮಿಕಂಡಕ್ಟರ್ ಕೊರತೆಯಿಂದಾಗಿ ಮಾರಾಟವು ಕುಸಿತ ಕಾಣುವಂತಾಯಿತು ಎಂದು ಅವರು ತಿಳಿಸಿದ್ದಾರೆ. ದ್ವಿಚಕ್ರ ವಾಹನ ಮಾರಾಟವು 2020ರ ಡಿಸೆಂಬರ್‌ಗೆ ಹೋಲಿಸಿದರೆ ಈ ಬಾರಿ ಶೇ 19.86ರಷ್ಟು ಇಳಿಕೆ ಆಗಿದೆ.

ಆನ್‌ಲೈನ್‌ನಲ್ಲಿ ಸುಳ್ಳು ಮಾಹಿತಿ: ಸಿಬಿಎಸ್‌ಇ ಎಚ್ಚರಿಕೆ

ನವದೆಹಲಿ (ಪಿಟಿಐ): 10 ಹಾಗೂ 12ನೇ ತರಗತಿಯ ಎರಡನೇ ಅವಧಿಯ ಬೋರ್ಡ್ ಪರೀಕ್ಷೆಗಳ ಕುರಿತು ಆನ್‌ಲೈನ್ ವೇದಿಕೆಗಳ ಮೂಲಕ ಸುಳ್ಳು ಮಾಹಿತಿ ಹರಿಬಿಡುತ್ತಿರುವ ಬಗ್ಗೆ ಜನರು ಎಚ್ಚರದಿಂದಿರಬೇಕು ಎಂದು ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಬುಧವಾರ ಹೇಳಿದೆ.

'ಈ ಪರೀಕ್ಷೆಗಳ ಕುರಿತ ಅಧಿಕೃತ ಹಾಗೂ ಇತ್ತೀಚಿನ ಮಾಹಿತಿಯನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿಯೇ ಪಡೆಯಬೇಕು’ ಎಂದು ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

‘10 ಹಾಗೂ 12ನೇ ತರಗತಿಯ ಎರಡನೇ ಅವಧಿಯ ಬೋರ್ಡ್ ಪರೀಕ್ಷೆಗಳ ಮಾದರಿಯಲ್ಲಿ ಭಾರಿ ಬದಲಾವಣೆ ಮಾಡಲಾಗಿದೆ ಎಂಬ ತಪ್ಪು ಮಾಹಿತಿಯನ್ನು ಕೆಲವು ಆನ್‌ಲೈನ್ ವೇದಿಕೆಗಳು ‘ಬ್ರೇಕಿಂಗ್ ನ್ಯೂಸ್’ ನಡಿ ಪ್ರಸಾರ ಮಾಡುತ್ತಿರುವುದು ಕಂಡುಬಂದಿದೆ’ ಎಂದು ಮಂಡಳಿ ತಿಳಿಸಿದೆ.

‘ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಕಳೆದ ವರ್ಷ ಜುಲೈನಲ್ಲಿಯೇ ಪರೀಕ್ಷಾ ಮಾದರಿಯಲ್ಲಿ ಬದಲಾವಣೆಗಳನ್ನು ತರಲಾಗಿದೆ. ಮೊದಲ ಅವಧಿಯ ಬೋರ್ಡ್ ಪರೀಕ್ಷೆಗಳು ಸಹ ಮುಗಿದಿವೆ. ಕಳೆದ ವರ್ಷ ಘೋಷಿಸಿರುವ ಮಾದರಿಯಲ್ಲಿಯೇ ಎರಡನೇ ಅವಧಿಯ ಪರೀಕ್ಷೆಗಳು ನಡೆಯಲಿವೆ’ ಎಂದೂ ಮಂಡಳಿ ತಿಳಿಸಿದೆ.

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದೊಡ್ಡ	₹2400-2800
ಮಧ್ಯಮ	₹1800-2400
ಸಣ್ಣ	₹1000-1800

ಮುಂಬೈ ಧಾರಣೆ

ಶೇಂಗಾ

5-1-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಸೋಯಾ ಕಚ್ಚಾ	1120 (1140)
ಪಾಮ್ ವಾರದ ಡೆಲಿವರಿ	1163 (1155)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,100 (47,850)
ಬೆಳ್ಳಿ ಕೆ.ಜಿ	61,950 (61,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	450-500
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	800-850
ಜರಡಿ	900-950
ಹೆರಕಿದ್ದು	1100-1200
ಹಸಿರು ಸಾಧಾರಣ	750-800
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1450
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಹೊನ್ನಾಳಿ	
ರಾಶಿ	47400-47400
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟಾ	
ಚಿಪ್ಪು	24509-36109
ಕೋಕ	18109-29999
ಫ್ಯಾಕ್ಟರಿ	13509-19169
ಹಳೆಚಾಲಿ	46509-49661
ಹೊಸಚಾಲಿ	37109-42010
ಪುತ್ತೂರು	
ಕೋಕ	11000-26000
ಹೊಸತು	27500-45000
ಶಿವಮೊಗ್ಗ	
ಬೆಟ್ಟೆ	48523-53310
ಗೊರಬಲು	17400-36059
ರಾಶಿ	43599-47269
ಸರಕು	51400-73909
ಸಿದ್ದಾಪುರ	
ಬಿಳಿಗೋಟು	26799-36819
ಚಾಲಿ	47489-48899
ಕೋಕ	24299-32299
ಹೊಸಚಾಲಿ	31599-38099
ಕೆಂಪುಗೋಟು	30099-34099
ರಾಶಿ	45099-48599
ತಟ್ಟಿಬೆಟ್ಟೆ	29099-41869
ಶಿರಸಿ	
ಬೆಟ್ಟೆ	35109-46899
ಬಿಳಿಗೋಟು	22109-42399
ಚಾಲಿ	33069-49299
ರಾಶಿ	32609-48769
ರಾಮನಗರ ರೇಷ್ಮೆ	
ಮಿಶ್ರತಳಿ	290-608
ದ್ವಿತಳಿ	222-792

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15400	15500	15500	231.75 ಸೆಂಟ್ಸ್
ಎಸಿ	7055	6900	6750	
ಆರ್‌ಪಿ	6500	6800	6400	ಲಂಡನ್
ಆರ್‌ಸಿ	3900	4100	3900	2349 ಡಾಲರ್ಸ್

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಸಂಕ್ಷಿಪ್ತ ಸುದ್ದಿ

ಗುಪ್ತಾ ಮಾಲೀಕತ್ವದ ಪತ್ರಿಕೆಗೆ ನೆರವು ನೀಡಿದ್ದ ಜೇಕಬ್!

ಜೋಹಾನ್ಸ್‌ಬರ್ಗ್ (ಪಿಟಿಐ): ಗುಪ್ತಾ ಸೋದರರು ಆರಂಭಿಸಿದ್ದ ಈಗ ಅಸ್ತಿತ್ವದಲ್ಲಿಲ್ಲದ ಟಿಎನ್‌ಎ ಪತ್ರಿಕೆಗೆ ಬೆಂಬಲಿಸಿ ಮಾಜಿ ಅಧ್ಯಕ್ಷ ಜೇಕಬ್ ಜುಮಾ ಪ್ರಭಾವ ಬೀರಿದ್ದರು ಎಂಬುದನ್ನು ದಕ್ಷಿಣ ಆಫ್ರಿಕಾದ ತನಿಖಾ ಆಯೋಗದ ಮೊದಲ ವರದಿ ದೃಢಪಡಿಸಿದೆ.

ಟಿಎನ್‌ಎ ಪತ್ರಿಕೆಯನ್ನು ಗುಪ್ತಾ ಸೋದರರಾದ ಅಜಯ್, ಅತುಲ್ ಮತ್ತು ರಾಜೇಶ್ ಆರಂಭಿಸಿದ್ದರು. ಗುಪ್ತಾ ಸೋದರರು ಮೂಲತಃ ಉತ್ತರಪ್ರದೇಶದ ಸಹರಾನ್‌ಪುರದವರು. ಈಗ ದುಬೈನಲ್ಲಿ ನೆಲೆಸಿದ್ದಾರೆಂದು ಹೇಳಲಾಗಿದೆ.

ದಕ್ಷಿಣ ಆಫ್ರಿಕಾದ ಅಧಿಕಾರಿಗಳು ಅವರ ವಿರುದ್ಧ ಕ್ರಿಮಿನಲ್ ಆರೋಪ ಹೊರಿಸಿದ್ದು ಇದರ ವಿಚಾರಣೆಗೆ ಅವರನ್ನು ಗಡಿಪಾರು ಮಾಡುವಂತೆ ಕೋರಿದ್ದಾರೆ.

ಆಯೋಗದ ಮುಖ್ಯಸ್ಥ, ಹಂಗಾಮಿ ಮುಖ್ಯ ನ್ಯಾಯಮೂರ್ತಿ ರೇಮಂಡ್ ಜೊಂಡೊ ಅವರು ಮಂಗಳವಾರ ಸಂಜೆ ವರದಿಯನ್ನು ಅಧ್ಯಕ್ಷ ಸಿರಿಲ್ ರಾಮ್‌ಪೋಸಾ ಅವರಿಗೆ ಹಸ್ತಾಂತರಿಸಿದ್ದಾರೆ. ಆ ಬಳಿಕ ವರದಿ ಬಹಿರಂಗವಾಗಿದೆ.

ಚೀನಾ: 10 ಪ್ರಾಂತ್ಯಗಳಲ್ಲಿ ಜನನ ಪ್ರಮಾಣ ಶೇ 1 ಇಳಿಕೆ

ಬೀಜಿಂಗ್ (ಪಿಟಿಐ): ದಂಪತಿ ಮೂರು ಮಕ್ಕಳನ್ನು ಹೊಂದುವ ಹೊಸ ನೀತಿಯನ್ನು ದೇಶದಲ್ಲಿ ಪರಿಚಯಿಸಿದ ನಂತರವೂ 2020ರಲ್ಲಿ ಚೀನಾದ 10 ಪ್ರಾಂತ್ಯಗಳ ಮಟ್ಟದಲ್ಲಿ ಜನಸಂಖ್ಯೆಯು ಶೇ 1 ರಷ್ಟು ಇಳಿಕೆಯಾಗಿದೆ.

ದಶಕಗಳ ಹಿಂದಿನ ಒಂದು ಮಗುವಿನ ನೀತಿಯಿಂದ ದೇಶವು ತೀವ್ರ ಜನಸಂಖ್ಯಾ ಬಿಕ್ಕಟ್ಟನ್ನು ಎದುರಿಸಿದ ನಂತರದಲ್ಲಿ ಚೀನಾ ಕಳೆದ ವರ್ಷದ ಆಗಸ್ಟ್‌ನಲ್ಲಿ ಮೂರು ಮಗುವಿನ ನೀತಿಯನ್ನು ಜಾರಿಗೊಳಿಸಿತ್ತು.

ಇಬಾದತ್ ಹುಸೇನ್ ಮಿಂಚು: ನ್ಯೂಜಿಲೆಂಡ್ ನೆಲದಲ್ಲಿ ಮೊದಲ ಗೆಲುವು

ಟೆಸ್ಟ್ ಚಾಂಪಿಯನ್ನರಿಗೆ ಬಾಂಗ್ಲಾ ಆಘಾತ

ಬಾಂಗ್ಲಾದೇಶ ಆಟಗಾರರ ಸಂಭ್ರಮ– ಎಎಫ್‌ಪಿ ಚಿತ್ರ

ಮೌಂಟ್ ಮಾಂಗನೂಯಿ (ಎಪಿ): ವೇಗದ ಬೌಲರ್ ಇಬಾದತ್ ಹುಸೇನ್ ದಾಳಿಗೆ ನಲುಗಿದ ನ್ಯೂಜಿಲೆಂಡ್ ಮೊದಲ ಟೆಸ್ಟ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡಕ್ಕೆ ಮಣಿಯಿತು. ವಿಶ್ವ ಟೆಸ್ಟ್ ಚಾಂಪಿಯನ್ ತಂಡದ ವಿರುದ್ಧ ಬುಧವಾರ ಎಂಟು ವಿಕೆಟ್‌ಗಳಿಂದ ಗೆದ್ದ ಪ್ರವಾಸಿ ಪಡೆ, ನ್ಯೂಜಿಲೆಂಡ್ ನೆಲದಲ್ಲಿ ಮೊದಲ ಜಯದ ಶ್ರೇಯ ತನ್ನದಾಗಿಸಿಕೊಂಡಿತು.

ಮಂಗಳವಾರ ನಾಲ್ಕನೇ ದಿನ ದಾಟದ ಅಂತ್ಯಕ್ಕೆ 39 ರನ್ ನೀಡಿ ನಾಲ್ಕು ವಿಕೆಟ್ ಕಬಳಿಸಿದ್ದ ಇಬಾದತ್ (46ಕ್ಕೆ 6), ತಂಡವನ್ನು ಜಯದ ಅಂಚಿಗೆ ತಂದು ನಿಲ್ಲಿಸಿದ್ದರು. ಬುಧವಾರ ಮತ್ತೆರಡು ವಿಕೆಟ್ ಕಬಳಿಸಿದ ಅವರು ಆತಿಥೇಯ ತಂಡದ ಬ್ಯಾಟಿಂಗ್ ಬೆನ್ನೆಲುಬು ಮುರಿದರು. 169 ರನ್‌ಗಳಿಗೆ ಎಲ್ಲ ವಿಕೆಟ್ ಒಪ್ಪಿಸಿದ ನ್ಯೂಜಿಲೆಂಡ್, ಬಾಂಗ್ಲಾದೇಶ ವಿರುದ್ಧ ಕನಿಷ್ಠ ಸ್ಕೋರ್ ದಾಖಲಿಸಿತು.

ಮೊದಲ ಇನಿಂಗ್ಸ್‌ನಲ್ಲಿ 130 ರನ್‌ಗಳ ಹಿನ್ನಡೆ ಅನುಭವಿಸಿದ್ದ ನ್ಯೂಜಿಲೆಂಡ್ ತಂಡವು ಕೇವಲ 40 ರನ್‌ಗಳ ಗೆಲುವಿನ ಗುರಿ ನೀಡಿತ್ತು. ಬಾಂಗ್ಲಾ ತಂಡವು ಎರಡು ವಿಕೆಟ್ ಕಳೆದುಕೊಂಡು ಜಯದ ಗೆರೆ ದಾಟಿತು. ನಜ್ಮುಲ್ ಹುಸೇನ್ (17) ಹಾಗೂ ನಾಯಕ ಮೋಮಿನುಲ್ ಹಕ್ (ಔಟಾಗದೆ 13) ತಂಡದ ಗೆಲುವನ್ನು ಸುಲಭವಾಗಿಸಿದರು.

ನ್ಯೂಜಿಲೆಂಡ್‌ನ ಮೊದಲ ಇನಿಂಗ್ಸ್‌ನಲ್ಲಿ 75 ರನ್ ನೀಡಿ ಒಂದು ವಿಕೆಟ್ ಗಳಿಸಿದ್ದ ಇಬಾದತ್, ಎರಡನೇ ಇನಿಂಗ್ಸ್‌ನಲ್ಲಿ ಅಬ್ಬರಿಸಿದ್ದರು.

ಐದು ವಿಕೆಟ್‌ಗೆ 145 ರನ್‌ಗಳಿಂದ ನ್ಯೂಜಿಲೆಂಡ್ ಆಟ ಮುಂದುವರಿಸಿತು. ಮಂಗಳವಾರ ಕ್ರೀಸ್‌ನಲ್ಲಿದ್ದ ಅನುಭವಿ ರಾಸ್ ಟೇಲರ್ (40) ಬುಧವಾರ ಮತ್ತೆ ಮೂರು ರನ್ ಸೇರಿಸಿ ಇಬಾದತ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಕೈಲ್ ಜೆಮಿಸನ್ (0) ವಿಕೆಟ್ ಕೂಡ ಇಬಾದತ್ ಪಾಲಾಯಿತು. ರಚಿನ್ ರವೀಂದ್ರ (16) ಮಾತ್ರ ಸ್ವಲ್ಪ ಪ್ರತಿರೋಧ ತೋರಿದರು.

ಬಾಂಗ್ಲಾದೇಶಕ್ಕೆ ತವರಿನ ಹೊರಗೆ ಇದು ಕೇವಲ ಆರನೇ ಹಾಗೂ ಅಗ್ರ ಐದರೊಳಗಿನ ರ‍್ಯಾಂಕಿನ ತಂಡದ ಎದುರು ಮೊದಲ ಗೆಲುವಾಗಿದೆ. ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ನ್ಯೂಜಿಲೆಂಡ್ ಎರಡನೇ ಸ್ಥಾನದಲ್ಲಿದ್ದರೆ, ಬಾಂಗ್ಲಾದೇಶದ ಸ್ಥಾನ ಒಂಬತ್ತು. ಈ ಸೋಲಿನೊಂದಿಗೆ ತವರಿನಲ್ಲಿ ನ್ಯೂಜಿಲೆಂಡ್ ತಂಡದ ಸತತ 17 ಪಂದ್ಯಗಳ ಗೆಲುವಿನ ಸರಪಳಿ ತುಂಡರಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ 328, ಬಾಂಗ್ಲಾದೇಶ: 458, ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 73.4 ಓವರ್‌ಗಳಲ್ಲಿ 169 (ವಿಲ್ ಯಂಗ್ 69, ರಾಸ್ ಟೇಲರ್ 40, ರಚಿನ್ ರವೀಂದ್ರ 16; ತಸ್ಕಿನ್ ಅಹಮದ್ 36ಕ್ಕೆ 3, ಇಬಾದತ್ ಹುಸೇನ್ 46ಕ್ಕೆ 6). ಬಾಂಗ್ಲಾದೇಶ: 16.5 ಓವರ್‌ಗಳಲ್ಲಿ 2 ವಿಕೆಟ್‌ಗೆ 42 (ನಜ್ಮುಲ್ ಹುಸೇನ್ 17, ಮೋಮಿನುಲ್ ಹಕ್ ಔಟಾಗದೆ 13; ಟಿಮ್ ಸೌಥಿ 21ಕ್ಕೆ 1, ಕೈಲ್ ಜೆಮಿಸನ್ 12ಕ್ಕೆ 1). ಫಲಿತಾಂಶ: ಬಾಂಗ್ಲಾದೇಶ ತಂಡಕ್ಕೆ ಎಂಟು ವಿಕೆಟ್‌ಗಳ ಗೆಲುವು, ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ. ಎರಡನೇ ಟೆಸ್ಟ್ ಭಾನುವಾರದಿಂದ ಕ್ರೈಸ್ಟ್‌ಚರ್ಚ್‌ನಲ್ಲಿ ಆರಂಭ.

ಫುಟ್‌ಬಾಲ್: ಥಾಂಕೋಸ್ ಜಯಭೇರಿ

ಬೆಂಗಳೂರು: ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಸೂಪರ್ ಲೀಗ್ ಟೂರ್ನಿಯಲ್ಲಿ ಗೆಲುವು ಸಾಧಿಸಿತು. ಬುಧವಾರ ನಡೆದ ಪಂದ್ಯದಲ್ಲಿ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಥಾಂಕೋಸ್ 2–0ಯಿಂದ ಮಣಿಸಿತು.

ಆ್ಯಂಟೊ ಕ್ಸೇವಿಯರ್ 81ನೇ ನಿಮಿಷದಲ್ಲಿ ಮತ್ತು ಪೆಂಬಾ ರಾಯ್ 87ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರು. ಬುಧವಾರ ನಡೆದ ಮಹಿಳಾ ಲೀಗ್‌ನ ಸ್ಲಾಮ್ಸರ್ಸ್ ಬೆಳಗಾಂ ಮತ್ತು ಬೆಂಗಳೂರು ಸಾಕರ್ ಗ್ಯಾಲಕ್ಸಿ ನಡುವಿನ ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತು.

ಗುರುವಾರ ಬೆಳಿಗ್ಗೆ 9 ಗಂಟೆಗೆ ನಡೆಯಲಿರುವ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಮಹಿಳಾ ಎಫ್ಸಿ ಮತ್ತು ಪರಿಕ್ರಮ ಮಹಿಳಾ ಎಫ್‌ಸಿ ತಂಡಗಳು ಸೆಣಸಲಿವೆ.

ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ಸೂಪರ್ ಲೀಗ್ ಟೂರ್ನಿಯಲ್ಲಿ ಬೆಳಿಗ್ಗೆ 11. 45ಕ್ಕೆ ಎಎಸ್‌ಸಿ–ಸೆಂಟರ್ ಎಫ್‌ಸಿ ಮತ್ತು ಕಿಕ್‌ಸ್ಟಾರ್ಟ್ ಎಫ್‌ಸಿ, ಮಧ್ಯಾಹ್ನ 1.45ಕ್ಕೆ ಬಿಎಫ್‌ಸಿ ಮತ್ತು ಜವಾಹರ್ ಯೂನಿಯನ್ ಎಫ್‌ಸಿ ತಂಡಗಳು ಸೆಣಸಲಿವೆ.

ಎಂಟರ ಘಟ್ಟಕ್ಕೆ ಬೋಪಣ್ಣ–ರಾಮ್‌ಕುಮಾರ್ ಜೋಡಿ

ರೋಹನ್ ಬೋಪಣ್ಣ

ಅಡಿಲೇಡ್(ಪಿಟಿಐ): ಜಿದ್ದಾಜಿದ್ದಿ ಪೈಪೋಟಿಯಲ್ಲಿ ಗೆದ್ದ ಭಾರತದ ರೋಹನ್ ಬೋಪಣ್ಣ ಮತ್ತು ರಾಮ್ ಕುಮಾರ್ ರಾಮನಾಥನ್ ಜೋಡಿಯು ಅಡಿಲೇಡ್ ಇಂಟರ್‌ನ್ಯಾಷನಲ್–1 ಎಟಿಪಿ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಹಂತಕ್ಕೆ ಲಗ್ಗೆಯಿಟ್ಟಿದ್ದಾರೆ.

ಬುಧವಾರ ನಡೆದ ಪ್ರೀಕ್ವಾರ್ಟರ್ ಹಂತದ ಫೈನಲ್‌ನಲ್ಲಿ ರೋಹನ್–ರಾಮ್‌ಕುಮಾರ್ ಜೋಡಿಯು 6-7(4), 7-6(3), 10-4ರಿಂದ ಅಮೆರಿಕದ ನೇಥನಿಯಲ್ ಲ್ಯಾಮೊನ್ಸ್ ಮತ್ತು ಜಾಕ್ಸನ್ ವಿಥ್ರೊ ಅವರಿಗೆ ಆಘಾತ ನೀಡಿದರು.

ಮೊದಲ ಸೆಟ್ ಅನ್ನು ಕೈಚೆಲ್ಲಿದ ಭಾರತದ ಜೋಡಿಯು ಛಲ ಬಿಡದೆ ಎರಡು ಮತ್ತು ಮೂರನೇ ಸೆಟ್‌ಗಳಲ್ಲಿ ಪಾರಮ್ಯ ಮೆರೆದರು.

ಎಂಟರಘಟ್ಟದ ಪಂದ್ಯದಲ್ಲಿ ರೋಹನ್-ರಾಮ್ ಕುಮಾರ್ ಅವರಿಗೆ, ಫ್ರಾನ್ಸ್– ಮೊನಾಕೊ ಜೋಡಿ ಬೆಂಜಮಿನ್ ಬೊಂಜಿ– ಹ್ಯೂಗೊ ನಿಸ್ ಮತ್ತು ಬೆಲ್ಜಿಯಂನ ಸ್ಯಾಂಡರ್ ಗಿಲ್–ಜೊರಾನ್ ಲಿಜೆನ್ ನಡುವಣ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದ ವಿಜೇತರು ಎದುರಾಗಲಿದ್ದಾರೆ.

ಆ್ಯಷಸ್: ಆಸ್ಟ್ರೇಲಿಯಾಗೆ ಇಂಗ್ಲೆಂಡ್ ವೇಗಿಗಳ ಪೆಟ್ಟು

ಸಿಡ್ನಿ ಟೆಸ್ಟ್: ಮೊದಲ ದಿನ ಮಳೆ ಅಡ್ಡಿ

ಸ್ಟುವರ್ಟ್ ಬ್ರಾಡ್

ಸಿಡ್ನಿ: ಆ್ಯಷಸ್ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯದ ಮೊದಲ ದಿನದಾಟಕ್ಕೆ ಮಳೆ ಅಡ್ಡಿಪಡಿಸಿತು. ಉತ್ತಮ ಆರಂಭ ಕಂಡ ಆತಿಥೇಯ ಆಸ್ಟ್ರೇಲಿಯಾ ತಂಡಕ್ಕೆ ಇಂಗ್ಲೆಂಡ್ ವೇಗಿಗಳು ಪೆಟ್ಟು ನೀಡಿದ್ದರಿಂದ ದಿಢೀರ್ ಕುಸಿತ ಕಂಡಿತು.

ಮೊದಲ ಮೂರು ಪಂದ್ಯಗಳನ್ನು ಗೆದ್ದು ಈಗಾಗಲೇ ಸರಣಿ ತನ್ನದಾಗಿಸಿಕೊಂಡಿರುವ ಆಸ್ಟ್ರೇಲಿಯಾ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಮಳೆಯಿಂದಾಗಿ ಆಟ ನಿಂತಾಗ ತಂಡ 46.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 126 ರನ್ ಗಳಿಸಿದೆ.

ಡೇವಿಡ್ ವಾರ್ನರ್ ಮತ್ತು ಮಾರ್ಕಸ್ ಹ್ಯಾರಿಸ್ ಮೊದಲ ವಿಕೆಟ್‌ಗೆ ಅರ್ಧಶತಕದ (51) ಜೊತೆಯಾಟವಾಡಿದರು. ಬ್ರಾಡ್ ಎಸೆತದಲ್ಲಿ ವಾರ್ನರ್ ಔಟಾದರು. ಹ್ಯಾರಿಸ್ ಜೊತೆಗೂಡಿದ ಮಾರ್ನಸ್ ಲಾಬುಶೇನ್ ಇನಿಂಗ್ಸ್ ಮುನ್ನಡೆಸಿದರು. ಎರಡನೇ ವಿಕೆಟ್‌ಗೆ ಇವರಿಬ್ಬರು 60 ರನ್ ಸೇರಿಸಿದರು.

ಈ ಸಂದರ್ಭದಲ್ಲಿ ಹ್ಯಾರಿಸ್ ವಿಕೆಟ್ ಕಬಳಿಸಿ ಜೇಮ್ಸ್ ಆ್ಯಂಡರ್ಸನ್ ತಿರುಗೇಟು ನೀಡಿದರು. ಆರು ರನ್ ಗಳಿಸುವಷ್ಟರಲ್ಲಿ ಅಂತರದಲ್ಲಿ ಲಾಬುಶೇನ್ ಅವರು ಮಾರ್ಕ್‌ವುಡ್‌ಗೆ ಬಲಿಯಾದರು. ದಿನದಾಟದ ಮುಕ್ತಾಯಕ್ಕೆ 6 ರನ್‌ಗಳೊಂದಿಗೆ ಸ್ಟೀವ್ ಸ್ಮಿತ್ ಕ್ರೀಸ್‌ನಲ್ಲಿದ್ದಾರೆ. 2019ರ ನಂತರ ಮೊದಲ ಟೆಸ್ಟ್ ಆಡುತ್ತಿರುವ ಉಸ್ಮಾನ್ ಖ್ವಾಜಾ ಅವರು ಸ್ಮಿತ್ ಜೊತೆಯಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 46.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 126 (ಡೇವಿಡ್ ವಾರ್ನರ್ 30, ಮಾರ್ಕಸ್ ಹ್ಯಾರಿಸ್ 38, ಮಾರ್ನಸ್ ಲಾಬುಶೇನ್ 28, ಸ್ಟೀವ್ ಸ್ಮಿತ್ ಬ್ಯಾಟಿಂಗ್ 6, ಉಸ್ಮಾನ್ ಖ್ವಾಜಾ ಬ್ಯಾಟಿಂಗ್ 4; ಜೇಮ್ಸ್ ಆ್ಯಂಡರ್ಸನ್ 24ಕ್ಕೆ1, ಸ್ಟುವರ್ಟ್ ಬ್ರಾಡ್ 34ಕ್ಕೆ1, ಮಾರ್ಕ್ ವುಡ್ 31ಕ್ಕೆ1).

ಪೂಜಾರ, ರಹಾನೆ ಅರ್ಧಶತಕ; ಶಾರ್ದೂಲ್, ಹನುಮವಿಹಾರಿ ಮಿಂಚು

ಇತಿಹಾಸ ಬರೆಯುವ ಕನಸಿಗೆ ಡೀನ್ ಅಡ್ಡಿ

ಜೋಹಾನ್ಸ್‌ಬರ್ಗ್: ಸರಣಿ ಕೈವಶ ಮಾಡಿಕೊಂಡು ಇತಿಹಾಸ ರಚಿಸುವ ಹುಮ್ಮಸ್ಸಿನಲ್ಲಿರುವ ಭಾರತ ತಂಡಕ್ಕೆ ಡೀನ್ ಎಲ್ಗರ್ ಅಡ್ಡಗೋಡೆಯಾಗಿ ನಿಂತಿದ್ದಾರೆ.

ವಾಂಡರರ್ಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದ ಮೂರನೇ ದಿನ ಚೇತೇಶ್ವರ್ ಪೂಜಾರ (53; 86ಎ, 4X10) ಮತ್ತು ಅಜಿಂಕ್ಯ ರಹಾನೆ (58; 78ಎ, 4X8, 6X1) ಅವರ ಅರ್ಧಶತಕಗಳ ಬಲದಿಂದ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ 60.1 ಓವರ್‌ಗಳಲ್ಲಿ 266 ರನ್ ಗಳಿಸಿತು. ಇದರೊಂದಿಗೆ ಆತಿಥೇಯರ ಗೆಲುವಿಗಾಗಿ 240 ರನ್‌ಗಳ ಗುರಿ ಒಡ್ಡಿತು.

ಈ ಗುರಿಯನ್ನು ಆತಿಥೇಯ ಬ್ಯಾಟರ್‌ಗಳು ಆತ್ಮವಿಶ್ವಾಸದಿಂದ ಬೆನ್ನತ್ತಿದ್ದರು.

ನಾಯಕ ಡೀನ್ ಎಲ್ಗರ್ (ಬ್ಯಾಟಿಂಗ್ 46; 121ಎ) ಮತ್ತು ಏಡನ್ ಮರ್ಕರಂ (31; 38ಎ) ಉತ್ತಮ ಆರಂಭ ನೀಡಿದರು. ಶಾರ್ದೂಲ್ ಠಾಕೂರ್ ಎಸೆತದಲ್ಲಿ ಮರ್ಕರಂ ಔಟಾದ ನಂತರ ಕೀಗನ್ ಪೀಟರ್ಸನ್ (28; 44ಎ) ಇನಿಂಗ್ಸ್‌ಗೆ ಬಲ ತುಂಬಿದರು. ಇದರಿಂದಾಗಿ ದಿನದಾಟದ ಕೊನೆಗೆ ದಕ್ಷಿಣ ಆಫ್ರಿಕಾ 40 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 118 ರನ್ ಗಳಿಸಿದೆ. ಎಲ್ಗರ್ ಮತ್ತು ವ್ಯಾನ್ ಡರ್ ಡಸೆ (ಬ್ಯಾಟಿಂಗ್ 11) ಕ್ರೀಸ್‌ನಲ್ಲಿದ್ದಾರೆ.

ನಾಲ್ಕನೇ ದಿನದಾಟದಲ್ಲಿ ಆತಿಥೇಯ ಬಳಗವು ಇನ್ನೂ 122 ರನ್‌ಗಳನ್ನು ಗಳಿಸಿದರೆ ಜಯ ಸಾಧಿಸುವ ಅವಕಾಶ ಇದೆ. ಅದಕ್ಕೂ ಮುನ್ನವೇ ಎಂಟು ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರೆ ದಕ್ಷಿಣ ಆಫ್ರಿಕಾ ನೆಲದಲ್ಲಿ ಮೊದಲ ಬಾರಿ ಸರಣಿ ಜಯದ ಸಂಭ್ರಮ ಆಚರಿಸುವ ಅವಕಾಶ ಭಾರತಕ್ಕೆ ಸಿಗಲಿದೆ. ಆದರೆ, ಪಿಚ್ ದಿನದಿಂದ ದಿನಕ್ಕೆ ಬ್ಯಾಟಿಂಗ್‌ಗೆ ನೆರವಾಗುತ್ತಿದೆ. ಮೊದಲ ಇನಿಂಗ್ಸ್‌ನಲ್ಲಿ 202, ಎರಡನೇ ಇನಿಂಗ್ಸ್‌ನಲ್ಲಿ 229 ಮತ್ತು ಮೂರನೇ ಇನಿಂಗ್ಸ್‌ನಲ್ಲಿ 266 ರನ್ ಗಳಿಕೆಯಾಗಿರುವುದೇ ಇದಕ್ಕೆ ನಿದರ್ಶನ.

ಲಯಕ್ಕೆ ಮರಳಿದ ರಹಾನೆ, ಪೂಜಾರ: ಕಳೆದ ಹಲವು ಪಂದ್ಯಗಳಲ್ಲಿ ಲಯ ಕಂಡುಕೊಳ್ಳಲು ಪರದಾಡಿದ್ದ ಪೂಜಾರ ಮತ್ತು ರಹಾನೆ ಇಲ್ಲಿ ಸರಿಯಾದ ಸಮಯದಲ್ಲಿ ಉತ್ತಮ ಕಾಣಿಕೆ ನೀಡಿದರು.

ಮಂಗಳವಾರ ಎರಡನೇ ಇನಿಂಗ್ಸ್ ಆರಂಭಿಸಿದ್ದ ಭಾರತ ತಂಡವು ಬೇಗನೆ ಎರಡು ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಹಂತದಲ್ಲಿ ಜೊತೆಗೂಡಿದ ಪೂಜಾರ ಮತ್ತು ರಹಾನೆ ಚೆಂದದ ಜೊತೆಯಾಟವಾಡಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 111 ರನ್ ಸೇರಿಸಿದರು.

ಪೂಜಾರ 62 ಎಸೆತಗಳಲ್ಲಿ ಅರ್ಧಶತಕ ದಾಖಲಿಸಿದರು. ವೈಯಕ್ತಿಕವಾಗಿ ಅವರು ಗಳಿಸಿದ ವೇಗದ ಅರ್ಧಶತಕ ಇದಾಗಿದೆ. ರಹಾನೆ 67 ಎಸೆತಗಳಲ್ಲಿ 50ರ ಗಡಿ ದಾಟಿದರು.

35ನೇ ಓವರ್‌ನಲ್ಲಿ ರಹಾನೆ ವಿಕೆಟ್ ಗಳಿಸಿದ ಕಗಿಸೊ ರಬಾಡ ಜೊತೆಯಾಟ ಮುರಿದರು. ಇದು ಭಾರತ ತಂಡದ ಬ್ಯಾಟಿಂಗ್‌ಗೆ ದೊಡ್ಡ ಪೆಟ್ಟಾಯಿತು. ಮುಂದಿನ ಒಂಬತ್ತು ಓವರ್‌ಗಳಲ್ಲಿ ಮತ್ತೆ ಮೂರು ವಿಕೆಟ್‌ಗಳು ಪತನವಾದವು. ಪೂಜಾರ, ರಿಷಭ್ ಪಂತ್ ವಿಕೆಟ್‌ಗಳು ರಬಾಡ ಪಾಲಾದವು. ಅಶ್ವಿನ್ (16 ರನ್) ಲುಂಗಿ ಗಿಡಿಗೆ ವಿಕೆಟ್ ಒಪ್ಪಿಸಿದರು.

ಹೆಲ್ಮೆಟ್‌ಗೆ ಚೆಂಡು ಬಡಿದ ನಂತರ ದಕ್ಷಿಣ ಆಫ್ರಿಕಾದ ಬ್ಯಾಟರ್ ಡೀನ್ ಎಲ್ಗರ್ ಪ್ರತಿಕ್ರಿಯಿಸಿದ್ದು ಹೀಗೆ –ರಾಯಿಟರ್ಸ್ ಚಿತ್ರ

ಹನುಮ–ಶಾರ್ದೂಲ್ ಮಿಂಚು: ಊಟದ ವಿರಾಮದ ಹೊತ್ತಿಗೆ ಕ್ರೀಸ್‌ನಲ್ಲಿದ್ದ ಹನುಮವಿಹಾರಿ ಮತ್ತು ಶಾರ್ದೂಲ್ ಠಾಕೂರ್ ತಂಡದ ಮೊತ್ತವು ಹೆಚ್ಚಲು ಕಾರಣರಾದರು. ಹನುಮ (ಔಟಾಗದೆ 40; 84ಎ) ತಾಳ್ಮೆಯ ಆಟವಾಡಿದರು. ಆದರೆ, ಶಾರ್ದೂಲ್ ಐದು ಬೌಂಡರಿ ಮತ್ತು ಒಂದು ಸಿಕ್ಸರ್ ಸಹಿತ 28 ರನ್‌ಗಳನ್ನು 24 ಎಸೆತಗಳಲ್ಲಿ ಚಚ್ಚಿದರು. ಭಾರತದ ಹೋರಾಟಕ್ಕೆ ಮಹತ್ವದ ತಿರುವು ನೀಡಿದರು. ಈ ಪಿಚ್‌ನಲ್ಲಿ ಹೋರಾಟ ಮಾಡಬೇಕಾದರೆ 200ಕ್ಕೂ ಹೆಚ್ಚು ರನ್‌ಗಳ ಗುರಿಯನ್ನು ನೀಡುವ ಒತ್ತಡವನ್ನು ಇಬ್ಬರೂ ಸಮರ್ಥವಾಗಿ ನಿಭಾಯಿಸಿದರು. ಮೊದಲ ಇನಿಂಗ್ಸ್‌ನಲ್ಲಿ ಏಳು ವಿಕೆಟ್ ಗಳಿಸಿದ್ದ ಶಾರ್ದೂಲ್ ಬ್ಯಾಟಿಂಗ್‌ನಲ್ಲಿಯೂ ಮಿಂಚಿದರು.

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 202 (63.1 ಓವರ್)

ದಕ್ಷಿಣ ಆಫ್ರಿಕಾ ಮೊದಲ ಇನಿಂಗ್ಸ್ 229 (79.4 ಓವರ್)

ಭಾರತ ಎರಡನೇ ಇನಿಂಗ್ಸ್ 266 (60.1 ಓವರ್)

(ಮಂಗಳವಾರ 20 ಓವರ್‌ಗಳಲ್ಲಿ 2 ವಿಕೆಟ್‌ಗೆ 85)

ಪೂಜಾರ ಎಲ್‌ಬಿಡಬ್ಲ್ಯು ರಬಾಡ 53 (86ಎ, 4X10), ರಹಾನೆ ಸಿ ವೆರೆಯನ್ ಬಿ ರಬಾಡ 58 (78ಎ, 4X8, 6X1), ಹನುಮ ಔಟಾಗದೆ 40 (84ಎ, 4X6), ಪಂತ್ ಸಿ ವೆರೆಯನ್ ಬಿ ರಬಾಡ 0 (3ಎ), ಅಶ್ವಿನ್ ಸಿ ವೆರೆಯನ್ ಬಿ ಗಿಡಿ 16 (14ಎ, 4X2), ಶಾರ್ದೂಲ್ ಸಿ ಮಹಾರಾಜ್ ಬಿ ಜ್ಯಾನ್ಸನ್ 28 (24ಎ, 4X5, 6X1), ಶಮಿ ಸಿ ವೆರೆಯನ್ ಬಿ ಜ್ಯಾನ್ಸನ್ 0 (6ಎ), ಬೂಮ್ರಾ ಸಿ ಜ್ಯಾನ್ಸನ್ ಬಿ ಗಿಡಿ 7 (14ಎ, 6X1), ಸಿರಾಜ್ ಬಿ ಗಿಡಿ 0 (2ಎ)

ಇತರೆ (ಬೈ 16, ಲೆಗ್‌ಬೈ 4, ನೋಬಾಲ್ 8, ವೈಡ್ 5) 33

ವಿಕೆಟ್ ಪತನ: 3-155 (ಅಜಿಂಕ್ಯ, 34.6), 4-163 (ಚೇತೇಶ್ವರ್, 36.6), 5-167 (ರಿಷಭ್ ಪಂತ್, 38.3), 6-184 (ರವಿಚಂದ್ರನ್ ಅಶ್ವಿನ್, 43.3), 7-225 (ಶಾರ್ದೂಲ್, 49.6), 8-228 (ಮೊಹಮ್ಮದ್ ಶಮಿ, 51.5), 9-245 (ಜಸ್‌ಪ್ರೀತ್ ಬೂಮ್ರಾ, 56.2), 10-266 (ಮೊಹಮ್ಮದ್ ಸಿರಾಜ್, 60.1)

ಬೌಲಿಂಗ್: ಕಗಿಸೊ ರಬಾಡ 20–3–77–3, ಡುಯೇನ್ ಒಲಿವಿಯರ್ 12–1–51–1, ಲುಂಗಿ ಗಿಡಿ 10.1–2–43–3, ಮಾರ್ಕೊ ಜ್ಯಾನ್ಸನ್ 17–4–63–3, ಕೇಶವ್ ಮಹಾರಾಜ್ 1–0–8–0

ದಕ್ಷಿಣ ಆಫ್ರಿಕಾ ಎರಡನೇ ಇನಿಂಗ್ಸ್ 2ಕ್ಕೆ 118 (40 ಓವರ್)

ಮರ್ಕರಮ್ ಎಲ್‌ಬಿಡಬ್ಲ್ಯು ಠಾಕೂರ್ 31 (38ಎ, 4X6), ಎಲ್ಗರ್ ಬ್ಯಾಟಿಂಗ್ 46 (121ಎ, 4X2), ಪೀಟರ್ಸನ್ ಎಲ್‌ಬಿಡಬ್ಲ್ಯು ಅಶ್ವಿನ್ 28 (44ಎ, 4X4), ಡಸೆ ಬ್ಯಾಟಿಂಗ್ 11 (37ಎ)

ಇತರೆ (ಲೆಗ್‌ಬೈ 2) 2

ವಿಕೆಟ್ ಪತನ: 1–47 (ಏಡನ್ ಮರ್ಕರಮ್, 9.6), 2–93 (ಕೀಗನ್ ಪೀಟರ್ಸನ್, 27.2)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–1–42–0, ಮೊಹಮ್ಮದ್ ಶಮಿ 9–2–22–0, ಶಾರ್ದೂಲ್ ಠಾಕೂರ್ 9–1–24–1, ಮೊಹಮ್ಮದ್ ಸಿರಾಜ್ 4–0–14–0, ರವಿಚಂದ್ರನ್ ಅಶ್ವಿನ್ 8–1–14–1

ಅಂಪೈರ್ ಅಲಾಹುದೀನ್‌ರ ಭಾರತದ ಮೂಲ

ಮುಂಬೈ (ಪಿಟಿಐ): ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಮೊದಲ ಬಾರಿ ಅಂಪೈರಿಂಗ್ ಮಾಡುತ್ತಿರುವ ದಕ್ಷಿಣ ಆಫ್ರಿಕಾದ ಅಲಾಹುದೀನ್ ಪಾಲೇಕರ್ ಅವರು ಭಾರತದ ಮೂಲದವರು. ಅಲಾಹುದೀನ್ ಅವರ ಪೂರ್ವಜರು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಶಿವ ಗ್ರಾಮದವರು.

‘ನಾನೂ ಪಾಲೇಕರ್. ಅವರು ನಮ್ಮ ಶಿವ ಗ್ರಾಮದ ಮೂಲದವರು. ಅವರ ತಂದೆ ಉದ್ಯೋಗಕ್ಕಾಗಿ ದಕ್ಷಿಣ ಆಫ್ರಿಕಾಕ್ಕೆ ವಲಸೆ ಹೋಗಿ ನೆಲೆಸಿದರು. ಅಲ್ಲಾಹುದೀನ್ ಅಲ್ಲಿಯೇ ಜನಿಸಿದರು‘ ಎಂದು ಶಿವ ಗ್ರಾಮದ ಸರಪಂಚ್ (ಗ್ರಾಮದ ಮುಖ್ಯಸ್ಥ) ದುರ್ವೇಶ್ ಪಾಲೇಕರ್ ಹೇಳಿದ್ದಾರೆ.

ಅಲಾಹುದೀನ್ ಪಾಲೇಕರ್

‘ಅಲಾಹುದೀನ್ ಅವರಿಂದಾಗಿ ನಮ್ಮ ಹಳ್ಳಿಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಾಗಿದೆ. ಹೀಗಾಗಿ ಅವರ ಬಗ್ಗೆ ಹೆಮ್ಮೆಯಿದೆ‘ ಎಂದು ದುರ್ವೇಶ್ ಹೇಳಿದ್ದಾರೆ.

44 ವರ್ಷದ ಪಾಲೇಕರ್ ಅವರು 2014–15ರ ಋತುವಿನಲ್ಲಿ ಮುಂಬೈಯ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಮುಂಬೈ ಮತ್ತು ಮಧ್ಯಪ್ರದೇಶ ತಂಡಗಳ ನಡುವಣ ರಣಜಿ ಟ್ರೋಫಿ ಪಂದ್ಯದಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದ್ದರು.

ಮೋಹಿತ್ ‘ಸೂಪರ್’ ಆಟ

ಪ್ರೊ ಕಬಡ್ಡಿ ಲೀಗ್ ಟೂರ್ನಿ: ಪುಣೇರಿ ಪಲ್ಟನ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೋಹಿತ್ ಗೋಯತ್ ಅವರ ‘ಸೂಪರ್ 10‘ ಆಟದ ಬಲದಿಂದ ಪುಣೇರಿ ಪಲ್ಟನ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಜಯಭೇರಿ ಮೊಳಗಿಸಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಬುಧವಾರ 33–26ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಒಟ್ಟು 18 ರೇಡ್ ಮಾಡಿದ ಮೋಹಿತ್ 10 ಟಚ್ ಪಾಯಿಂಟ್ಸ್ ಗಳಿಸಿದರು. ಅಸ್ಲಂ ಇನಾಂದಾರ್ ಎಂಟು ಪಾಯಿಂಟ್ಸ್ ಕಲೆಹಾಕಿ ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಗುಜರಾತ್‌ನ ಅಜಯ್ ಕುಮಾರ್ ಸೂಪರ್ 10 ಸಾಧಿಸಿದರು. ರಾಕೇಶ್ 8 ಪಾಯಿಂಟ್ಸ್ ಗಳಿಸಿದರು.

ಪಂದ್ಯದಲ್ಲಿ ಉತ್ತಮ ಆರಂಭ ಪಡೆದ ಪುಣೇರಿ ಮೊದಲಾರ್ಧದ ಮುಕ್ತಾಯದ ವೇಳೆಗೆ 19–13ರಿಂದ ಮುಂದಿತ್ತು. ಇದರಲ್ಲಿ 13 ಪಾಯಿಂಟ್ಸ್ ರೇಡಿಂಗ್ ಮೂಲಕವೇ ಬಂದವು. ದ್ವಿತೀಯಾರ್ಧದಲ್ಲಿ ಗುಜರಾತ್ ಹೋರಾಟ ತೋರಿದರೂ ಎದುರಾಳಿಯ ಸವಾಲು ಮೀರಲು ಸಾಧ್ಯವಾಗಲಿಲ್ಲ.

ನವೀನ್ ಮಿಂಚು; ದಬಂಗ್ ಅಜೇಯ ಓಟ: ಇನ್ನೊಂದು ಪಂದ್ಯದಲ್ಲಿ ಯುವ ಆಟಗಾರ ನವೀನ್ ಕುಮಾರ್ (25 ಪಾಯಿಂಟ್ಸ್) ಅಬ್ಬರದ ಆಟದ ನೆರವಿನಿಂದ ದಬಂಗ್ ಡೆಲ್ಲಿ ಅಜೇಯ ಓಟವನ್ನು ಮುಂದುವರಿಸಿತು. 36–35 ರಿಂದ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು. 15 ಟಚ್ ಪಾಯಿಂಟ್ಸ್ ಗಳಿಸಿದ ನವೀನ್, 10 ಬೋನಸ್ ಪಾಯಿಂಟ್ಸ್ ಕಲೆಹಾಕಿದರು. ಟೈಟನ್ಸ್ ಪರ ರಜನೀಶ್ (20 ಪಾಯಿಂಟ್ಸ್) ಮಿನುಗಿದರು.

ಪಾಯಿಂಟ್ ಗಳಿಸಲು ಪ್ರಯತ್ನಿಸಿದ ದಬಂಗ್ ಡೆಲ್ಲಿ ತಂಡದ ನವೀನ್ ಕುಮಾರ್

ಇಂದಿನ ಪಂದ್ಯ (ರಾತ್ರಿ)

ಪಟ್ನಾ ಪೈರೇಟ್ಸ್ Vs ತಮಿಳ್ ತಲೈವಾಸ್ – 7.30

ಬೆಂಗಳೂರು ಬುಲ್ಸ್ Vs ಜೈಪುರ್ ಪಿಂಕ್ ಪ್ಯಾಂಥರ್ಸ್ – 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	6	4	0	2	26
ಬೆಂಗಳೂರು ಬುಲ್ಸ್	6	4	1	1	23
ಪಟ್ನಾ ಪೈರೇಟ್ಸ್	5	4	1	-	21
ಯು ಮುಂಬಾ	6	2	1	3	20
ತಮಿಳ್ ತಲೈವಾಸ್	6	2	1	3	19
ಬೆಂಗಾಲ್ ವಾರಿಯರ್ಸ್	6	3	3	-	16
ಹರಿಯಾಣ ಸ್ಟೀಲರ್ಸ್	6	2	3	1	15
ಗುಜರಾತ್ ಜೈಂಟ್ಸ್	6	1	3	2	14
ಯುಪಿ ಯೋಧಾ	6	1	3	2	14
ಜೈಪುರ್ ಪಿಂಕ್ ಪ್ಯಾಂಥರ್ಸ್	5	2	3	-	12
ತೆಲುಗು ಟೈಟನ್ಸ್	6	-	4	2	10
ಪುಣೇರಿ ಪಲ್ಟನ್	6	2	4	-	10

(ಬುಧವಾರದ ಪಂದ್ಯಗಳ ಅಂತ್ಯಕ್ಕೆ)

ಯಾಂಗ್‌ಮುಡೊ: ಕರ್ನಾಟಕಕ್ಕೆ ಸಮಗ್ರ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ತಂಡವು ಗೋವಾದಲ್ಲಿ ನಡೆದ ರಾಷ್ಟ್ರೀಯ ಯಾಂಗ್‌ಮುಡೊ (ಮಾರ್ಷಲ್ ಆರ್ಟ್ಸ್) ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಜಯಿಸಿದೆ. ಇತ್ತೀಚೆಗೆ ಕೊನೆಗೊಂಡ ಚಾಂಪಿಯನ್‌ಷಿಪ್ ನಲ್ಲಿ ರಾಜ್ಯದ ಪಟುಗಳು 49 ಚಿನ್ನ, 14 ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕ ಗಳಿಸಿದ್ದಾರೆ. ಕರ್ನಾಟಕ ಯಾಂಗ್‌ಮುಡೊ ಸಂಸ್ಥೆಯ ಅಧ್ಯಕ್ಷ ಎನ್.ಜಗದೀಶ್ ಮತ್ತು ಪ್ರಧಾನ ಕಾರ್ಯದರ್ಶಿ ಎಸ್.ಧನಂಜಯ್ ತಂಡದೊಂದಿಗೆ ಇದ್ದರು.

ಗಂಗೂಲಿ ಪುತ್ರಿ ಸನಾಗೆ ಕೋವಿಡ್

ಕೋಲ್ಕತ್ತ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಅವರ ಪುತ್ರಿ ಸನಾ ಸೇರಿದಂತೆ ಕುಟುಂಬದ ಇಬ್ಬರು ಸದಸ್ಯರಿಗೆ ಕೋವಿಡ್ ದೃಢಪಟ್ಟಿದೆ.

‘ಸನಾ ಅವರಲ್ಲಿ ಸೋಂಕಿನ ಯಾವುದೇ ಲಕ್ಷಣಗಳು ಕಂಡುಬಂದಿಲ್ಲ. ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದಾರೆ’ ಎಂದು ಸೌರವ್ ಪತ್ನಿ ಡೋನಾ ಗಂಗೂಲಿ ತಿಳಿಸಿದ್ದಾರೆ. ಡೋನಾ ಅವರ ಕೋವಿಡ್ ಪರೀಕ್ಷೆ ವರದಿ ‘ನೆಗೆಟಿವ್‘ ಬಂದಿದೆ.

ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಗಂಗೂಲಿ ಅವರಿಗೆ ಇತ್ತೀಚೆಗಷ್ಟೇ ಕೋವಿಡ್ ದೃಢಪಟ್ಟಿತ್ತು. ಆಸ್ಪತ್ರೆಗೆ ದಾಖಲಾಗಿದ್ದ ಅವರು ಡಿಸೆಂಬರ್ 31ರಂದು ಮನೆಗೆ ಮರಳಿದ್ದರು. ಅವರು ಕೂಡ ಸದ್ಯ ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿದ್ದಾರೆ. ‘ದಾದಾ (ಸೌರವ್) ಅವರಿಗೆ ಕೋವಿಡ್ ಖಚಿತಪಟ್ಟ ಬಳಿಕ ನಾವು ಪ್ರತಿದಿನ ಪರೀಕ್ಷೆಗೆ ಒಳಗಾಗುತ್ತಿದ್ದೆವು. ಈಗ ಅವರು ಆರೋಗ್ಯವಾಗಿದ್ದಾರೆ’ ಎಂದು ಡೋನಾ ಹೇಳಿದ್ದಾರೆ.

ಶಾಟ್‌ಪಟ್‌ನಲ್ಲಿ ಆಳ್ವಾಸ್ ಕಾಲೇಜಿನ ವನಮ್ ಶರ್ಮಾಗೆ ಚಿನ್ನ

ಶಶಿಕಾಂತ್ ‘ವೇಗದ ರಾಜ’

• ಮಹೇಶ್ ಎಸ್. ಕನ್ನೇಶ್ವರ

ಮೂಡುಬಿದಿರೆ: ಬೆಂಗಳೂರು ವಿಶ್ವವಿದ್ಯಾಲಯದ ಶಶಿಕಾಂತ್ ಅಂಗಡಿ ಇಲ್ಲಿ ನಡೆಯುತ್ತಿರುವ 81 ನೇ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ಅಥ್ಲೆಟಿಕ್ಸ್‌ನಲ್ಲಿ ‘ವೇಗದ ರಾಜ’ನಾಗಿ ಹೊರಹೊಮ್ಮಿದರು.

ಮಂಗಳೂರು ವಿಶ್ವವಿದ್ಯಾಲಯ ಹಾಗೂ ಆಳ್ವಾಸ್ ಕಾಲೇಜು ಸಹಯೋಗದಲ್ಲಿ ಸ್ವರಾಜ್ ಮೈದಾನದಲ್ಲಿ ನಡೆಯುತ್ತಿರುವ ಕೂಟದ ಎರಡನೇ ದಿನವಾದ ಬುಧವಾರ ಶಶಿಕಾಂತ್ 100 ಮೀಟರ್ ಓಟದ ಸ್ಪರ್ಧೆಯಲ್ಲಿ 10.47 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಇದೇ ವಿಭಾಗದಲ್ಲಿ ಅಮ್ಲಾನ್ ಬೋರ್ಗೊಹೈನ್ (ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ ಡೀಮ್ಡ್ ವಿವಿ) ಮತ್ತು ತಮಿಳರಸು ಎಸ್,(ಭಾರತಿಯಾರ್ ವಿವಿ ಕೊಯಮತ್ತೂರು) ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಪಡೆದರು.

ಎರಡನೇ ದಿನದ ಕೂಟದಲ್ಲಿ 2 ನೂತನ ದಾಖಲೆಗಳು ಮೂಡಿಬಂದವು. ಪಟಿಯಾಲದ ಪಂಜಾಬ್ ವಿಶ್ವವಿದ್ಯಾಲಯದ ಅಕ್ಷದೀಪ್ ಸಿಂಗ್ 20 ಕಿ.ಮೀ ನಡಿಗೆಯಲ್ಲಿ (ಕಾಲ: 1 ತಾಸು 26 ನಿಮಿಷ 9.08 ಸೆಕೆಂಡು),

ಗುರುನಾನಕ್ ದೇವ್ ವಿಶ್ವವಿದ್ಯಾಲಯದ ಹರೇಂದ್ರ ಕುಮಾರ್ 1500 ಮೀಟರ್ಸ್ ಓಟದಲ್ಲಿ(ಕಾಲ: 3ನಿಮಿಷ 43.97 ಸೆಕೆಂಡು) ನೂತನ ಕೂಟ ದಾಖಲೆ ಬರೆದರು.

ಫಲಿತಾಂಶಗಳು: 100 ಮೀಟರ್ಸ್ ಓಟ: ಶಶಿಕಾಂತ್ ಅಂಗಡಿ (ಬೆಂಗಳೂರು ವಿವಿ)–1, ಮ್ಲಾನ್ ಬೋರ್ಗೊಹೈನ್ (ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ ಡೀಮ್ಡ್ ವಿವಿ)–2, ತಮಿಳರಸು ಎಸ್,(ಭಾರತಿಯಾರ್ ವಿವಿ ಕೊಯಮತ್ತೂರು) –3. ಕಾಲ: 0.47 ಸೆ.

400 ಮೀಟರ್ ಓಟ: ನಿತಿನ್ ಕುಮಾರ್ (ಚೌಧರಿ ಚರಣ್ ಸಿಂಗ್ ವಿವಿ)–1, ನಿಹಾಲ್ ಜೋಯಲ್ (ಮಂಗಳೂರು ವಿವಿ)–2, ಸುರೇಂದ್ರ ಎಸ್ -(ಭಾರತಿಯಾರ್ ವಿವಿ)–3. ಕಾಲ: 47.28 ಸೆಕೆಂಡು. **1500 ಮೀ:** ಹರೇಂದ್ರ ಕುಮಾರ್ (ಗುರುನಾನಕ್ ದೇವ್ ವಿವಿ) –1, ಪ್ರಿನ್ಸ್ (ಕುರುಕ್ಷೇತ್ರ ವಿವಿ) –2, ಪರ್ವೇಜ್ ಖಾನ್(ಮಂಗಳೂರು ವಿವಿ) –3. ಕಾಲ: ನೂತನ ದಾಖಲೆ: 3 ನಿಮಿಷ 43.97 ಸೆಕಂಡು (ಹಳೆಯದು: ಕೇರಳ ವಿವಿ ಅಭಿನಂದ್ ಸುಂದರೇಶನ್ 3 ನಿಮಿಷ 49.55 ಸೆಕೆಂಡು).

ಶಾಟ್‌ಪಟ್: ವನಮ್ ಶರ್ಮಾ(ಮಂಗಳೂರು ವಿವಿ)–1, ಸಾಹಿಬ್ ಸಿಂಗ್(ಪ್ರೊ. ರಾಜೇಂದ್ರ ಸಿಂಗ್ ವಿವಿ) –2, ಮನಕೀರತ್ ಸಿಂಗ್(ಲವ್ಲಿ ಪ್ರೊಫೆಷನಲ್ ವಿವಿ)– 3, ದೂರ: 18.03 ಮೀ.

20 ಕಿ. ಮೀ ನಡಿಗೆ: ಅಕ್ಷದೀಪ್ ಸಿಂಗ್ (ಪಟಿಯಾಲ ಪಂಜಾಬ್ ವಿವಿ) -1, ಪರಮ್‌ಜೀತ್ ಸಿಂಗ್ (ಮಂಗಳೂರು ವಿವಿ)–2, ಹರ್‌ದೀಪ್ (ಮಂಗಳೂರು ವಿವಿ) –3. ಕಾಲ: ನೂತನ ದಾಖಲೆ: 1 ತಾಸು 26 ನಿಮಿಷ 9.08 ಸೆಕೆಂಡು (ಹಳೆಯದು: ಮಂಗಳೂರು ವಿವಿ ಆಳ್ವಾಸ್ ಕಾಲೇಜಿನ ಜುನೇದ್ ಕೆ.ಟಿ (ಕಾಲ: 1 ತಾಸು 26 ನಿಮಿಷ 39. 78 ಸೆಕೆಂಡು). **ಹೈಜಂಪ್:** ಕೌಸ್ತುಭ ಜೆ. (ಲವ್ಲಿ ಪ್ರೊಫೆಶನಲ್ ವಿವಿ) -1, ಎಸ್. ಪೆದಕಾಮ ರಾಜು (ಆಚಾರ್ಯ ನಾಗಾರ್ಜುನ ವಿವಿ)–2, ಸ್ವಾಧಿನ್ ಕುಮಾರ್ (ಸಂಬಲ್‌ಪುರ್ ವಿವಿ)–3. **ಟ್ರಿಪಲ್ ಜಂಪ್:** ಕೃಷ್ಣ ಸಿಂಗ್(ಮುಂಬೈ ವಿವಿ) –1, ಸೆಲ್ವ ಪ್ರಭು ಟಿ (ಭಾರತಿದಾಸನ್ ವಿವಿ) –2, ಆಕಾಶ್ ಎಂ ವರ್ಗೀಸ್ (ಮಹಾತ್ಮ ಗಾಂಧಿ ವಿವಿ)–3,

ಶಶಿಕಾಂತ್(ಮಧ್ಯದಲ್ಲಿ ಇರುವವರು) ಗುರಿಯತ್ತ ಮುನ್ನುಗ್ಗಿದ ಪರಿ– ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

‘ಕರ್ಫ್ಯೂ ಪಾಲನೆ’

ಸರ್ಕಾರ ಜಾರಿಗೆ ತಂದಿರುವ ನೈಟ್ ಕರ್ಫ್ಯೂ ನಿಯಮಗಳನ್ನು ಕ್ರೀಡಾಕೂಟದಲ್ಲಿ ಪಾಲನೆ ಮಾಡಲಾಗುತ್ತದೆ. ನೈಟ್ ಕರ್ಫ್ಯೂ ಆರಂಭಕ್ಕೂ ಮೊದಲೇ ಎಲ್ಲ ಕಾರ್ಯಕ್ರಮಗಳನ್ನು ಮುಗಿಸಲಾಗುತ್ತದೆ. ಕ್ರೀಡಾಕೂಟ ಯಾವುದೇ ಕಾರಣಕ್ಕೂ ರದ್ದಾಗುವುದಿಲ್ಲ ಎಂದು ಕ್ರೀಡಾಕೂಟ ಆಯೋಜಕರಾದ ಡಾ. ಮೋಹನ್ ಆಳ್ವಾ ತಿಳಿಸಿದರು.

ಪಶುಪತಿಹಾಳದ ಪ್ರತಿಭೆ

ಮೂಡುಬಿದಿರೆ: ಹಿಂದಿನ ದಾಖಲೆ ಮೀರಲು ಸಾಧ್ಯವಾಗಲಿಲ್ಲವೆಂಬ ಬೇಸರ ಇದೆ. ಮುಂದಿನ ದಿನಗಳಲ್ಲಿ 100 ಮೀಟರ್ಸ್ ಓಟದಲ್ಲಿ ಖಚಿತವಾಗಿ ದಾಖಲೆ ಮಾಡುವೆ ಎನ್ನುತ್ತಾರೆ ಬೆಂಗಳೂರಿನ ಕ್ರೀಡಾ ವಸತಿ ನಿಲಯದ ಶಶಿಕಾಂತ್.

ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಪಶುಪತಿಹಾಳದ ಶಶಿಕಾಂತ್ ಕ್ರೀಡೆಯಲ್ಲಿ ಗಟ್ಟಿನೆಲೆ ಕಾಣಬೇಕು ಎಂಬ ಗುರಿಯೊಂದಿಗೆ ಬೆಂಗಳೂರಿನ ವಿದ್ಯಾನಗರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ತಂದೆ ವಿರೂಪಾಕ್ಷಪ್ಪ, ತಾಯಿ ಸುನಂದಾ ಅವರು ಮಗನ ಆಸೆಗೆ ಬೆಂಬಲವಾಗಿ ನಿಂತಿದ್ದಾರೆ. ಕೃಷಿ ಕುಟುಂಬದ ಶಶಿಕಾಂತ್ ಅವರಿಗೆ ತರಬೇತುದಾರ ಅಶೋಕ ಮಂಟೂರ ಅವರು ಆಸರೆಯ ಗಟ್ಟಿನೆಲೆಯಾಗಿ ನಿಂತಿದ್ದಾರೆ.

ಬೆಂಗಳೂರು ವಿವಿಯಲ್ಲಿ ಬಿಎ ಪ್ರಥಮ ವರ್ಷದಲ್ಲಿ ಓದುತ್ತಿರುವ ಶಶಿಕಾಂತ್ ಈ ಹಿಂದೆ ನವದೆಹಲಿಯಲ್ಲಿ ನಡೆದ 18 ವರ್ಷದೊಳಗಿನವರ ಏಷ್ಯನ್ ಯೂತ್ ಚಾಂಪಿಯನ್‌ಷಿಪ್ ಮೆಡ್ಲೆ ರಿಲೇಯಲ್ಲಿ ಚಿನ್ನದ ಪದಕ ಗೆದ್ದಿದ್ದರು. ಸೌತ್ ಏಷ್ಯನ್ ಫೆಡರೇಷನ್(ಎಸ್‌ಎಎಫ್) 200 ಮೀಟರ್ಸ್ ಓಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು.

ಕೆಎಸ್‌ಸಿಎ ಟೂರ್ನಿಗಳು ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಸರಣ ತಡೆಯಲು ರಾಜ್ಯ ಸರ್ಕಾರವು ವಾರಾಂತ್ಯದ ಕರ್ಫ್ಯೂ ವಿಧಿಸಿದೆ. ಅದರಿಂದಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಕೆಲವು ಟೂರ್ನಿಗಳ ಪಂದ್ಯಗಳನ್ನು ಮುಂದೂಡಿದೆ.

ನಾಲ್ಕು ಮತ್ತು ಐದನೇ ಡಿವಿಷನ್‌ನ ಒಂದನೇ ಗುಂಪಿನ ಪಂದ್ಯಗಳು, 14 ವರ್ಷದೊಳಗಿನವರ ಅಂತರ ಕ್ಲಬ್ ಟೂರ್ನಿಯ ಪಂದ್ಯಗಳನ್ನು ಮುಂದೂಡಲಾಗಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ರಣಜಿ ಟ್ರೋಫಿ ಸೇರಿದಂತೆ ದೇಶಿ ಟೂರ್ನಿಗಳನ್ನು ಮುಂದೂಡಿರುವುದಾಗಿ ಮಂಗಳವಾರ ಪ್ರಕಟಿಸಿತ್ತು.

ಅಭಿನವ್‌ಗೆ ಕೋವಿಡ್: ಕರ್ನಾಟಕ ಕ್ರಿಕೆಟ್ ತಂಡದ ಬ್ಯಾಟರ್ ಅಭಿನವ್ ಮನೋಹರ್ ಅವರಿಗೆ ಕೋವಿಡ್ –19 ಖಚಿತವಾಗಿದ್ದರಿಂದ ಮಂಗಳವಾರದ ಅಭ್ಯಾಸವನ್ನು ಮೊಟಕುಗೊಳಿಸಲಾಯಿತು.

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಗಾಗಿ ಆಯ್ಕೆಯಾಗಿದ್ದ 28 ಆಟಗಾರರ ಸಂಭವನೀಯ ತಂಡದಲ್ಲಿ ಮನೋಹರ್ ಕೂಡ ಇದ್ದರು. ಐಎಎಫ್ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆದಿತ್ತು. ಬೆಂಗಳೂರಿನ ಮನೋಹರ್ ಈಚೆಗೆ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಐಪಿಎಲ್ ಫ್ರ್ಯಾಂಚೈಸಿಗಳ ಆಯ್ಕೆ ಪ್ರಕ್ರಿಯೆಗಳಲ್ಲಿಯೂ ಭಾಗವಹಿಸಿದ್ದರು ಎನ್ನಲಾಗಿದೆ.

ಕಳೆದ ಭಾನುವಾರದಿಂದ ಆರಂಭವಾಗಿದ್ದ ರಾಜ್ಯ ತಂಡದ ಕಂಡಿಷನಿಂಗ್ ಶಿಬಿರದಲ್ಲಿ ಅವರು ಭಾಗವಹಿಸಿದ್ದರು. ಮಂಗಳವಾರ ತಡರಾತ್ರಿ ಬಂದ ವರದಿಗಯಲ್ಲಿ ಅವರಿಗೆ ಕೋವಿಡ್ ಇರುವುದು ಖಚಿತವಾಗಿತ್ತು. ಇದೇ ಸಂದರ್ಭದಲ್ಲಿ ತಂಡದ ಮಸಾಜ್ ಪರಿಣತ ಸಿ.ಎಂ. ಸೋಮಸುಂದರ್ ಅವರಿಗೂ ಕೊರೊನಾ ಸೋಂಕು ಇರುವುದು ದೃಢಪಟ್ಟಿದೆ.

‘ಮನೋಹರ್‌ಗೆ ಕೋವಿಡ್ ಖಚಿತವಾಗಿದೆ. ಆದ್ದರಿಂದ ಅಭ್ಯಾಸ ಶಿಬಿರವನ್ನು ಸ್ಥಗಿತಗೊಳಿಸಿ ಎಲ್ಲರನ್ನೂ ಪರೀಕ್ಷೆಗೊಳಪಡಿಸಲಾಯಿತು. ಕೆಎಸ್‌ಸಿಎ ಸಿಬ್ಬಂದಿ, ಅಧಿಕಾರಿಗಳೆಲ್ಲರನ್ನೂ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿದೆ. ಬುಧವಾರ ಫಲಿತಾಂಶಗಳು ಬರಲಿವೆ. ಈ ತಿಂಗಳು 13ರಂದು ಆರಂಭವಾಗಬೇಕಿದ್ದ ರಣಜಿ ಟ್ರೋಫಿ ಟೂರ್ನಿಯನ್ನು ಮುಂದೂಡಿರುವುದರಿಂದ ತರಬೇತಿ ಶಿಬಿರಗಳನ್ನೂ ನಿಲ್ಲಿಸಲಾಗಿದೆ’ ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ‘ಪ್ರಜಾವಾಣಿ’ಗೆ ತಿಳಿಸಿದರು.

ಕಾರ್ಯದರ್ಶಿಗೆ ಕೋವಿಡ್: ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಅವರಿಗೂ ಕೋವಿಡ್ ಖಚಿತವಾಗಿದೆ. ಅವರು ಪ್ರತ್ಯೇಕವಾಸದಲ್ಲಿದ್ದು, ಆರೋಗ್ಯ ಸ್ಥಿರವಾಗಿದೆ ಎಂದು ಮೂಲಗಳು ಖಚಿತಪಡಿಸಿವೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದ ಯಜುವೇಂದ್ರ ಚಾಹಲ್, ಭುವನೇಶ್ವರ್ ಕುಮಾರ್ ಮತ್ತು ವೆಂಕಟೇಶ್ ಅಯ್ಯರ್ –ಪ್ರಜಾವಾಣಿ ಚಿತ್ರ

ಬೆಂಗಳೂರಿನಲ್ಲಿ ಭಾರತ ತಂಡದ ಶಿಬಿರ

ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದ ಆಟಗಾರರಿಗೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪೂರ್ವಸಿದ್ಧತಾ ಶಿಬಿರ ಆರಂಭವಾಯಿತು.

ಶಿಖರ್ ಧವನ್, ಋತುರಾಜ್ ಗಾಯಕವಾಡ್, ಸೂರ್ಯಕುಮಾರ್ ಯಾದವ್, ವೆಂಕಟೇಶ್ ಅಯ್ಯರ್, ಇಶಾನ್ ಕಿಶನ್, ಯಜುವೇಂದ್ರ ಚಾಹಲ್, ವಾಷಿಂಗ್ಟನ್ ಸುಂದರ್, ಭುವನೇಶ್ವರ್ ಕುಮಾರ್, ದೀಪಕ್ ಚಾಹರ್ ಮತ್ತು ಪ್ರಸಿದ್ಧ ಕೃಷ್ಣ ಈ ಶಿಬಿರದಲ್ಲಿದ್ದಾರೆ.

ಕೆ.ಎಲ್. ರಾಹುಲ್, ಮೊಹಮ್ಮದ್ ಸಿರಾಜ್, ವಿರಾಟ್ ಕೊಹ್ಲಿ, ರಿಷಭ್ ಪಂತ್, ಶ್ರೇಯಸ್ ಅಯ್ಯರ್, ಜಸ್‌ಪ್ರೀತ್ ಬೂಮ್ರಾ ಮತ್ತು ಶಾರ್ದೂಲ್ ಠಾಕೂರ್ ಟೆಸ್ಟ್ ಸರಣಿಯಲ್ಲಿ ಆಡುತ್ತಿದ್ದಾರೆ.

ಅಗ್ರಸ್ಥಾನಕ್ಕೆ ಹೈದರಾಬಾದ್

ಫತೋರ್ಡ (ಪಿಟಿಐ): ಎಟಿಕೆ ಮೋಹನ್ ಬಾಗನ್ ಮತ್ತು ಹೈದರಾಬಾದ್ ಎಫ್‌ಸಿ ತಂಡಗಳ ನಡುವಣ ಇಂಡಿಯನ್ ಸೂಪರ್ ಲೀಗ್ ಫುಟ್ ಬಾಲ್ ಪಂದ್ಯ 2–2ರ ಸಮಬಲದಲ್ಲಿ ಅಂತ್ಯವಾಯಿತು.

ಹೈದರಾಬಾದ್ ಪಾಯಿಂಟ್ಸ್ ಪಟ್ಟಿಯಲ್ಲಿ ಮುಂಬೈ ಸಿಟಿ ಎಫ್‌ಸಿಯನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿತು.

ಬುಧವಾರ ನಡೆದ ಹಣಾಹಣಿಯಲ್ಲಿ ಮೊದಲ ನಿಮಿಷದಲ್ಲೇ ಗೋಲು ಗಳಿಸಿದ ಡೇವಿಡ್ ವಿಲಿಯಮ್ಸ್ ಎಟಿಕೆಎಂಬಿ ತಂಡಕ್ಕೆ ಮುನ್ನಡೆ ಒದಗಿಸಿದರು. 18ನೇ ನಿಮಿಷದಲ್ಲಿ ಬಾರ್ತೊಲೊಮಿವ್ ಒಗ್ಬೆಚೆ ಕಾಲ್ಚಳಕ ತೋರುವ ಹೈದರಾಬಾದ್ ಸಮಬಲ ಸಾಧಿಸಿತು. ಆಶಿಶ್ ರಾಯ್ 64ನೇ ನಿಮಿಷದಲ್ಲಿ ಎಟಿಕೆಎಂಬಿ ತಂಡಕ್ಕೆ ಮುನ್ನಡೆಯನ್ನು ಮತ್ತೆ ಗಳಿಸಿಕೊಟ್ಟರು. ಆದರೆ ಪಂದ್ಯದ ಕೊನೆಯ ನಿಮಿಷದಲ್ಲಿ ಜೇವಿಯರ್ ಸಿವೆರಿಯೊ ಗೋಲು ದಾಖಲಿಸಿ ಹೈದರಾಬಾದ್ ತಂಡದ ಸಮಬಲ ಸಾಧಿಸಲು ಕಾರಣರಾದರು.

ಲಯಕ್ಕೆ ಮರಳಲು ಜೆಎಫ್‌ಸಿಗೆ ತವಕ: ಬ್ಯಾಂಬೊಲಿಮ್‌ನಲ್ಲಿ ಗುರುವಾರ ನಡೆಯಲಿರುವ ಪಂದ್ಯದಲ್ಲಿ ಜೆಮ್ಶೆಡ್‌ಪುರ ಫುಟ್‌ಬಾಲ್ ಕ್ಲಬ್ (ಜೆಎಫ್‌ಸಿ) ಮತ್ತು ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ತಂಡಗಳು ಸೆಣಸಲಿವೆ.

ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್